prajavani.net prajavani | ಶುಕ್ರವಾರ, ಮಾರ್ಚ್ 27, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 85 | ಪುಟ 16 | www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಚಿನ್ನ (Std. 10g) ₹1,51,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,46,600 (ಬೆಂಗಳೂರು)

# ಭಾರತಕ್ಕೆ ಹೊರ್ಮುಜ್ ಮುಕ್ತ

## ತೆರಿಗೆ ಸೋರಿಕೆ: ₹243 ಕೋಟಿ ನಷ್ಟ

ಬೆಂಗಳೂರು: ತೆರಿಗೆ ವಿಧಿಸುವಲ್ಲಿ ಆಗಿರುವ ಲೋಪಗಳಿಂದ 2023–24ನೇ ಆರ್ಥಿಕ ವರ್ಷದಲ್ಲಿ ರಾಜ್ಯ ಸರ್ಕಾರಕ್ಕೆ ಒಟ್ಟು ₹243.33 ಕೋಟಿ ಖೋತಾ ಆಗಿದೆ ಎಂದು ಸಿಎಜಿ ವರದಿ ಹೇಳಿದೆ.

ವಿವರ 6

## ಐದು ಮಿತ್ರ ರಾಷ್ಟ್ರಗಳ ಹಡಗುಗಳಿಗೆ ಅವಕಾಶ ನೀಡಿದ ಇರಾನ್

ಟೆಹರಾನ್/ ನವದೆಹಲಿ (ಪಿಟಿಐ): ಭಾರತ ಸೇರಿದಂತೆ ಐದು ಮಿತ್ರ ರಾಷ್ಟ್ರಗಳಿಗೆ ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಿರುವುದಾಗಿ ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಗ್ಚಿ ಹೇಳಿದ್ದಾರೆ.

‘ಚೀನಾ, ರಷ್ಯಾ, ಭಾರತ, ಇರಾಕ್ ಮತ್ತು ಪಾಕಿಸ್ತಾನದತ್ತ ತೆರಳುವ ಸರಕು ಸಾಗಣೆ ಹಡಗುಗಳಿಗೆ ನಾವು ಹೊರ್ಮುಜ್ ದಾಟಲು ಅವಕಾಶ ನೀಡಿದ್ದೇವೆ’ ಎಂದು ಗುರುವಾರ ತಿಳಿಸಿದ್ದಾರೆ.

12

## ಇಂಧನ ದಾಸ್ತಾನು 60 ದಿನಗಳಿಗೆ ಸಾಕು

ನವದೆಹಲಿ (ಪಿಟಿಐ): ಸರಿಸುಮಾರು 60 ದಿನಗಳಿಗೆ ಸಾಕಾಗುವಷ್ಟು ಇಂಧನ ದಾಸ್ತಾನು ದೇಶದಲ್ಲಿ ಇದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಗುರುವಾರ ಸ್ಪಷ್ಟಪಡಿಸಿದೆ. ಪೆಟ್ರೋಲ್, ಡೀಸೆಲ್ ಅಥವಾ ಎಲ್‌ಪಿಜಿ ಕೊರತೆ ಇಲ್ಲ ಎಂದು ಮತ್ತೊಮ್ಮೆ ಹೇಳಿದೆ.

8 ಲಕ್ಷ ಟನ್ ಎಲ್‌ಪಿಜಿ ತರಿಸಿಕೊಳ್ಳಲು ಎಲ್ಲ ವ್ಯವಸ್ಥೆ ಆಗಿದೆ ಎಂದು ಕೂಡ ಸಚಿವಾಲಯವು ತಿಳಿಸಿದೆ. ಪಶ್ಚಿಮ ಏಷ್ಯಾದಲ್ಲಿ ಯುದ್ಧ ಶುರುವಾದ ನಂತರದಲ್ಲಿ ಸಚಿವಾಲಯವು ಕಚ್ಚಾ ತೈಲ, ತೈಲ, ಎಲ್‌ಪಿಜಿ ದಾಸ್ತಾನು ಬಗ್ಗೆ ವಿವರ ಒದಗಿಸಿರುವುದು ಇದೇ ಮೊದಲು.

12

## ‘ಇರಾನ್ ನೌಕಾಪಡೆ ಮುಖ್ಯಸ್ಥನ ಹತ್ಯೆ’

ಜೆರುಸಲೇಂ (ಎಪಿ): ಅಮೆರಿಕ–ಇರಾನ್ ನಡುವೆ ಕದನ ವಿರಾಮ ಒಪ್ಪಂದಕ್ಕೆ ಪರೋಕ್ಷ ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿರುವ ಸಂದರ್ಭದಲ್ಲೇ, ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್‌ನ (ಐಆರ್‌ಜಿಸಿ) ನೌಕಾಪಡೆ ಮುಖ್ಯಸ್ಥ ಅಲಿರೆಜಾ ತಂಕಸೀರಿ ಅವರನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ಹೇಳಿದೆ.

ಹೊರ್ಮುಜ್ ಜಲಸಂಧಿ ಮೂಲಕ ಸಾಗುವ ತೈಲ ಹಡಗುಗಳ ಮೇಲೆ ನಿಗಾ ವಹಿಸುವ ಪ್ರಮುಖ ಅಧಿಕಾರಿಯಾಗಿದ್ದ ಅಲಿರೆಜಾ ಅವರ ಹತ್ಯೆಯನ್ನು ಇರಾನ್ ಇದುವರೆಗೆ ದೃಢಪಡಿಸಿಲ್ಲ. ಅಲಿರೆಜಾ ಸೇರಿ ಇರಾನ್ ನೌಕಾಪಡೆಯ ಇತರೆ ಕೆಲವು ಅಧಿಕಾರಿಗಳನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲಿ ಕಾಟ್ಜ್ ಹೇಳಿದ್ದಾರೆ.

## ಒಪ್ಪದಿದ್ದರೆ ಪರಿಣಾಮ ಘೋರ: ಟ್ರಂಪ್ ಎಚ್ಚರಿಕೆ

ವಾಷಿಂಗ್ಟನ್ (ಎಎಫ್‌ಪಿ): ‘ಅಮೆರಿಕ ಮುಂದಿಟ್ಟಿರುವ ಕದನ ವಿರಾಮ ಒಪ್ಪಂದ ಮಾತುಕತೆ ಪ್ರಸ್ತಾವವನ್ನು ಇರಾನ್ ಗಂಭೀರವಾಗಿ ಪರಿಗಣಿಸಬೇಕು’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ಎಚ್ಚರಿಕೆ ನೀಡಿದ್ದಾರೆ.

‘ಕದನ ವಿರಾಮ ಒಪ್ಪಂದ ಮಾಡಿಕೊಳ್ಳುವಂತೆ ಇರಾನ್, ಅಮೆರಿಕದ ಮುಂದೆ ಭಿಕ್ಷೆ ಬೇಡಿದೆ. ಈಗ ಇರಾನ್ ಅಧಿಕಾರಿಗಳು ಸಾರ್ವಜನಿಕವಾಗಿ ಅಮೆರಿಕದ ಮಾತುಕತೆ ಪ್ರಸ್ತಾವ ಅಲ್ಲಗಳೆಯುವ ಬದಲು, ಸಂಘರ್ಷ ಕೊನೆಗೊಳಿಸಲು ಸಕಾರಾತ್ಮಕ ಹೆಜ್ಜೆ ಇರಿಸಬೇಕು’ ಎಂದು ತಾಕೀತು ಮಾಡಿದ್ದಾರೆ.

ರಿಪಬ್ಲಿಕನ್ ಪಕ್ಷದ ಸಭೆಯಲ್ಲಿ ಮಾತನಾಡಿದ ಟ್ರಂಪ್, ‘ಇರಾನ್ ಪರಮೋಚ್ಚ ನಾಯಕ ಆಗುವಂತೆ ಆ ದೇಶದವರೇ ನನ್ನನ್ನು ಕೇಳಿಕೊಂಡರು, ಆದರೆ, ನಾನು ಅದನ್ನು ನಯವಾಗಿ ತಿರಸ್ಕರಿಸಿದೆ. ಈಗಲಾದರೂ ಇರಾನ್ ಎಚ್ಚೆತ್ತುಕೊಳ್ಳಬೇಕು. ಅಮೆರಿಕ ನಿರ್ಧಾರ ತೆಗೆದುಕೊಂಡರೆ ಮತ್ತೆ ಹಿಂತಿರುಗಿ ನೋಡುವ ಪ್ರಶ್ನೆಯೇ ಇಲ್ಲ, ಅದರ ಪರಿಣಾಮ ಘೋರವಾಗಿರುತ್ತದೆ’ ಎಂದು ಹೇಳಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷದಲ್ಲಿ ಭಾಗಿಯಾಗದ ನ್ಯಾಟೊ ಮಿತ್ರರಾಷ್ಟ್ರಗಳ ವಿರುದ್ಧವೂ ಟ್ರಂಪ್ ತೀವ್ರ ಅಸಮಾಧಾನ ಹೊರಹಾಕಿದ್ದಾರೆ.






## ಚಿನಕುರುಳಿ ಪ್ರಕಾಶ್ ಶೆಟ್ಟಿ

## ಹೊತ್ತಿ ಉರಿದ ಬಸ್: 14 ಮಂದಿ ಸಾವು

ರಾಯವರಂ: ಆಂಧ್ರ ಪ್ರದೇಶದ ಮಾರ್ಕಾಪುರಂ ಜಿಲ್ಲೆಯ ರಾಯವರಂ ಸಮೀಪ ಗುರುವಾರ ಬೆಳಿಗ್ಗೆ ಹರಿಕೃಷ್ಣ ಟ್ರಾವೆಲ್ಸ್‌ಗೆ ಸೇರಿದ ಬಸ್ ಟಿಪ್ಪರ್‌ಗೆ ಡಿಕ್ಕಿ ಹೊಡೆದು ಬೆಂಕಿ ಹೊತ್ತಿಕೊಂಡ ಪರಿಣಾಮ 14 ಪ್ರಯಾಣಿಕರು ಸಜೀವ ದಹನವಾಗಿದ್ದಾರೆ. 28 ಮಂದಿ ಗಾಯಗೊಂಡಿದ್ದಾರೆ. ಸಾವಿಗೀಡಾದವರಲ್ಲಿ ಐದು ತಿಂಗಳ ಶಿಶು ಸೇರಿದೆ.

ವಿವರ 13

## ಟೋಲ್ ದರ ದುಬಾರಿ

ಬೆಂಗಳೂರು: ರಾಜ್ಯದ 62 ಟೋಲ್ ಪ್ಲಾಜಾಗಳಲ್ಲಿ ಏ.1ರಿಂದ ಟೋಲ್ ದರ ಶೇ 3ರಿಂದ 5ರಷ್ಟು ಏರಿಕೆಯಾಗಲಿದೆ.

ಸಗಟು ಬೆಲೆ ಸೂಚ್ಯಂಕಕ್ಕೆ (ಹಣದುಬ್ಬರಕ್ಕೆ) ಅನುಗುಣವಾಗಿ ಶುಲ್ಕ ಹೆಚ್ಚಳ ಮಾಡಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ವಿವರ 10

## ದಾಖಲಾತಿ ನಿಯಮ ಸಡಿಲಿಕೆ

ಬೆಂಗಳೂರು: ಒಂದನೇ ತರಗತಿಗೆ ದಾಖಲಾಗುವ ಮಕ್ಕಳಿಗೆ ಆರು ವರ್ಷ ತುಂಬಿರಲೇಬೇಕು ಎಂಬ ಕಡ್ಡಾಯ ನಿಯಮವನ್ನು 2026–27ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ವಿನಾಯಿತಿ ನೀಡಲಾಗಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ವಿವರ 7

## ‘ಏಪ್ರಿಲ್ 9ರ ಬಳಿಕ ಒಳ ಮೀಸಲು ಚರ್ಚೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಲಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಅಗತ್ಯ ಸಿದ್ಧತೆಗಳು ಮುಂದುವರಿಯಲಿದ್ದು, ಎರಡು ಕ್ಷೇತ್ರಗಳಿಗೆ ಏಪ್ರಿಲ್ 9ರಂದು ನಡೆಯಲಿರುವ ಉಪ ಚುನಾವಣೆಯ ಬಳಿಕ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಕುರಿತು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ರಾಜ್ಯ ಸರ್ಕಾರ ನಿರ್ಧರಿಸಿದೆ.

‘ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರಗಳಿಗೆ ನಡೆಯಲಿರುವ ಉಪ ಚುನಾವಣೆಯ ಕಾರಣಕ್ಕೆ ಜಾರಿಯಲ್ಲಿರುವ ಮಾದರಿ ನೀತಿ ಸಂಹಿತೆ ಕುರಿತು ಗುರುವಾರ ರಾತ್ರಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಯಿತು’ ಎಂದು ಸಭೆಯ ಬಳಿಕ ಕಾನೂನು ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

13

**ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ**

# ಐಪಿಎಲ್: 44 ಮೆಟ್ರೊ ನಿಲ್ದಾಣದಲ್ಲಿ ಪಾರ್ಕಿಂಗ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಾರ್ಚ್ 28ರಿಂದ ನಡೆಯಲಿರುವ ಐಪಿಎಲ್ ಟಿ-20 ಕ್ರಿಕೆಟ್ ವೀಕ್ಷಣೆಗೆ ಬರುವ ಮೆಟ್ರೊ ಪ್ರಯಾಣಿಕರ ಅನುಕೂಲಕ್ಕಾಗಿ ನಮ್ಮ ಮೆಟ್ರೊದ 44 ನಿಲ್ದಾಣಗಳಲ್ಲಿ ಹೆಚ್ಚುವರಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

ಈ ಪಾರ್ಕಿಂಗ್ ಸ್ಥಳಗಳಲ್ಲಿ ವಾಹನಗಳನ್ನು ನಿಲ್ಲಿಸಿ ಕ್ರೀಡಾಂಗಣಕ್ಕೆ ಮೆಟ್ರೊದಲ್ಲಿ ಸಂಚರಿಸಬಹುದು. ಐಪಿಎಲ್ ಕ್ರಿಕೆಟ್ ಇರುವ ದಿನಗಳಲ್ಲಿ ದ್ವಿಚಕ್ರ ವಾಹನಗಳಿಗೆ ₹30 ಹಾಗೂ ಕಾರುಗಳಿಗೆ ₹60 ಶುಲ್ಕ ನಿಗದಿ ಮಾಡಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

**ನಿಲ್ದಾಣಗಳು:** ವೈಟ್‌ಫೀಲ್ಡ್ (ಕಾಡುಗೋಡಿ), ಹೋಪ್ ಫಾರ್ಮ್ ಚನ್ನಸಂದ್ರ, ಕಾಡುಗೋಡಿ ಟ್ರೀ ಪಾರ್ಕ್, ಪಟ್ಟಂದೂರು ಅಗ್ರಹಾರ, ನಲ್ಲೂರಳ್ಳಿ, ಕುಂದಲಹಳ್ಳಿ, ಸೀತಾರಾಮ ಪಾಳ್ಯ, ಹೂಡಿ, ಸಿಂಗಯ್ಯನಪಾಳ್ಯ, ಕೆ.ಆರ್. ಪುರ, ಬೈಯ್ಯಪ್ಪನಹಳ್ಳಿ (ಎಂಟರ್ ಭಾಗ), ಬೈಯ್ಯಪ್ಪನಹಳ್ಳಿ (ಎಕ್ಸಿಟ್ ಭಾಗ), ಎಸ್.ವಿ. ರಸ್ತೆ, ನಾಡಪ್ರಭು ಕೆಂಪೇಗೌಡ ನಿಲ್ದಾಣ (ಮೆಜೆಸ್ಟಿಕ್), ಸಿಟಿ ರೈಲ್ವೆ ನಿಲ್ದಾಣ, ಹೊಸಹಳ್ಳಿ, ಮೈಸೂರು ರಸ್ತೆ, ನಾಯಂಡಹಳ್ಳಿ, ಜ್ಞಾನಭಾರತಿ, ಕೆಂಗೇರಿ ಬಸ್ ಟರ್ಮಿನಲ್, ಚಲ್ಲಘಟ್ಟ, ಮಾದಾವರ, ಚಿಕ್ಕಬಿದರಕಲ್ಲು, ಮಂಜುನಾಥನಗರ, ನಾಗಸಂದ್ರ, ಜಾಲಹಳ್ಳಿ, ಮಹಾಲಕ್ಷ್ಮಿ, ಮಹಾಕವಿ ಕುವೆಂಪು ರಸ್ತೆ, ಶ್ರೀರಾಂಪುರ, ಚಿಕ್ಕಪೇಟೆ, ನ್ಯಾಷನಲ್ ಕಾಲೇಜು, ಲಾಲ್‌ಬಾಗ್, ಜಯನಗರ, ಬನಶಂಕರಿ, ಯಲಚೇನಹಳ್ಳಿ, ದೊಡ್ಡಕಲ್ಲಸಂದ್ರ, ಆರ್.ವಿ. ರಸ್ತೆ, ರಾಗಿಗುಡ್ಡ, ಬಿಟಿಎಂ ಲೇಔಟ್, ಸೆಂಟ್ರಲ್ ಸಿಲ್ಕ್ ಬೋರ್ಡ್, ಕೋನಪ್ಪನ ಅಗ್ರಹಾರ, ಎಲೆಕ್ಟ್ರಾನಿಕ್ ಸಿಟಿ, ಹೆಬ್ಬಗೋಡಿ, ಬೊಮ್ಮಸಂದ್ರ ನಿಲ್ದಾಣಗಳಲ್ಲಿ ಹೆಚ್ಚುವರಿ ಪಾರ್ಕಿಂಗ್ ಇರಲಿದೆ.

**ಐಪಿಎಲ್ ಟಿಕೆಟ್ ಇದ್ದರೆ ಸಂಚಾರ ಉಚಿತ:** ಐಪಿಎಲ್ ಟಿ-20 ಟಿಕೆಟ್ ಇರುವವರು ಅಂದು 'ನಮ್ಮ ಮೆಟ್ರೊ'ದಲ್ಲಿ ಉಚಿತವಾಗಿ ಸಂಚರಿಸಲು ಅವಕಾಶ ಕಲ್ಪಿಸಿಕೊಡಲಾಗಿದೆ.

### ಮೆಟ್ರೊ ಸಂಚಾರ ಅವಧಿ ವಿಸ್ತರಣೆ

ಮಾ.28ರಂದು ವಿವಿಧ ಟರ್ಮಿನಲ್ ನಿಲ್ದಾಣಗಳಿಂದ ಕೊನೆಯ ಮೆಟ್ರೊ ಸಂಚಾರದ ಅವಧಿಯನ್ನು ವಿಸ್ತರಣೆ ಮಾಡಲಾಗಿದೆ.

ವೈಟ್‌ಫೀಲ್ಡ್‌ನಿಂದ (ಕಾಡುಗೋಡಿ) ರಾತ್ರಿ 12.30ಕ್ಕೆ, ಚಲ್ಲಘಟ್ಟ, ರೇಷ್ಮೆ ಸಂಸ್ಥೆ ಹಾಗೂ ಮಾದಾವರ ಟರ್ಮಿನಲ್‌ಗಳಿಂದ ರಾತ್ರಿ 12.45ಕ್ಕೆ, ಬೊಮ್ಮಸಂದ್ರದಿಂದ ರಾತ್ರಿ 1ಕ್ಕೆ, ಆರ್.ವಿ. ರಸ್ತೆ ಯಿಂದ ರಾತ್ರಿ 2ಕ್ಕೆ ಕೊನೆ ರೈಲು ಸಂಚರಿಸಲಿದೆ. ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣ-ಮೆಜೆಸ್ಟಿಕ್‌ನಿಂದ ನಾಲ್ಕು ದಿಕ್ಕುಗಳಿಗೆ ಮಧ್ಯರಾತ್ರಿ 1.30ಕ್ಕೆ ಕೊನೆಯ ರೈಲುಗಳು ಹೊರಡಲಿವೆ.

# ಬೆಂಗಳೂರು ಹಿಂದಿಕ್ಕಿದ ಹೈದರಾಬಾದ್

## 15 ಅಂಶಗಳ ಪ್ರಶ್ನಾವಳಿ: 'ವಿ.ಆರ್.ಸಿಟಿ 2026' ವರದಿ ಪ್ರಕಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದೇಶದ ಅತ್ಯಂತ ವಾಸಯೋಗ್ಯ ನಗರವಾಗಿ ಹೈದರಾಬಾದ್ ಹೊರಹೊಮ್ಮಿದ್ದು, ಬೆಂಗಳೂರು ನಗರವನ್ನು ಹಿಂದಿಕ್ಕಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಈ ಎರಡೂ ನಗರಗಳು ಅತಿ ವೇಗವಾಗಿ ಬೆಳೆಯುತ್ತಿವೆ.

ಸುಮಾರು 15 ಅಂಶಗಳ ಪ್ರಶ್ನಾವಳಿಗಳನ್ನು ಆಧಾರವಾಗಿಟ್ಟುಕೊಂಡು ಬೆಂಗಳೂರು ಮೂಲದ ಅನ್‌ಆರ್ಕಿಟೆಕ್ಟ್ ಬಿಲ್ಡರ್ ಸಂಸ್ಥೆ ನಡೆಸಿರುವ ಸಮೀಕ್ಷೆ- 'ವಿ.ಆರ್. ಸಿಟಿ 2026' ವರದಿಯಲ್ಲಿ ಈ ಅಂಶವನ್ನು ಉಲ್ಲೇಖಿಸಲಾಗಿದೆ.

ಉದ್ಯೋಗ, ಬೆಳವಣಿಗೆ ಮತ್ತು ಸಂಪರ್ಕ ಕ್ಷೇತ್ರದಲ್ಲಿ ಹೊಸ ಸಾಧ್ಯತೆಗಳೊಂದಿಗೆ ದೇಶದ ಭವಿಷ್ಯದ ನಗರಗಳಾಗಿ ರೂಪುಗೊಳ್ಳುತ್ತಿರುವ ಎರಡೂ ನಗರಗಳ ಮೇಲೆ ಈ ವರದಿ ಬೆಳಕು ಚೆಲ್ಲಿದೆ.

159 ಪುಟಗಳ ಈ ವರದಿಯಲ್ಲಿ ವಾಸಕ್ಕೆ ಯೋಗ್ಯವಾದ 8 ನಗರಗಳ ಮಾಹಿತಿ ಇದೆ. ಇದರಲ್ಲಿ ಸಂಪರ್ಕ, ವೈವಿಧ್ಯ, ಪ್ರವಾಸ, ವಸತಿ, ಮೂಲಸೌಕರ್ಯ ಹಾಗೂ ಹವಾಮಾನ ಆಧರಿಸಿ ಮಾಹಿತಿ ಸಂಗ್ರಹಿಸಲಾಗಿದೆ.

ಈ ಪಟ್ಟಿಯಲ್ಲಿ ಹೈದರಾಬಾದ್ ಅಗ್ರಸ್ಥಾನದಲ್ಲಿದ್ದರೆ, ನಂತರದ ಸ್ಥಾನದಲ್ಲಿ ಬೆಂಗಳೂರು ಮತ್ತು ಕೋಲ್ಕತ್ತ ನಗರಗಳು ಇವೆ. ಗುಜರಾತ್‌ನ ಅಹಮದಾಬಾದ್ ಈ ಪಟ್ಟಿಯ ಕೊನೆ ಸ್ಥಾನದಲ್ಲಿದೆ. ಉಳಿದಂತೆ ಚೆನ್ನೈ, ದೆಹಲಿ ಎನ್‌ಸಿಆರ್, ಪುಣೆ, ಗ್ರೇಟರ್ ಮುಂಬೈ ಕ್ರಮವಾಗಿ ನಾಲ್ಕು, ಐದು, ಆರು ಮತ್ತು ಏಳನೇ ಸ್ಥಾನದಲ್ಲಿವೆ.

ಬೆಂಗಳೂರು ಹವಾ ಗುಣ, ವೈವಿಧ್ಯದಲ್ಲಿ ಅಗ್ರ ಸ್ಥಾನದಲ್ಲಿದ್ದರೆ, ಹೈದರಾಬಾದ್ ಸಹ ಈ ಎಲ್ಲಾ ವಿಷಯಗಳಲ್ಲಿ ಸಮಾನ ಪೈಪೋಟಿ ನೀಡಿದೆ. ಜತೆಗೆ ಇಲ್ಲಿನ ವಾಹನ ದಟ್ಟಣೆ ಬೆಂಗಳೂರಿನಷ್ಟಿಲ್ಲ.

ಎರಡೂ ನಗರಗಳಲ್ಲಿ ಒಂದು ದಿಕ್ಕಿನಿಂದ ಮತ್ತೊಂದು ದಿಕ್ಕಿನತ್ತ ಸಾಗಲು ಸಾಮಾನ್ಯವಾಗಿ 22 ಕಿ.ಮೀ. ಕ್ರಮಿಸಲು ಸರಾಸರಿ ಅವಧಿ 58ರಿಂದ 59 ನಿಮಿಷವಿದೆ.

ಪ್ರತಿಷ್ಠಿತ ಬಡಾವಣೆಗಳಲ್ಲಿ ಅತ್ಯಾಧುನಿಕ ಸೌಲಭ್ಯವಿರುವ ಕಚೇರಿ ಸ್ಥಳಾವಕಾಶದ ವಿಷಯದಲ್ಲಿ ಈ ಎರಡೂ ನಗರಗಳು ಶೇಕಡ 53ರಷ್ಟು ಪಾಲು ಹೊಂದಿವೆ. ದಿಲ್ಲಿ-ಎನ್‌ಸಿಆರ್ ಮತ್ತು ಗ್ರೇಟರ್ ಮುಂಬೈಗಿಂತ ಕಡಿಮೆ ಜನಸಂಖ್ಯೆ ಇರುವ ನಗರಗಳಾದರೂ ತಮ್ಮ ಸಾಮರ್ಥ್ಯ ಮೀರಿ ಸಾಧನೆ ಮಾಡುತ್ತಿವೆ.

ಕಳೆದ ಎರಡು ವರ್ಷಗಳಲ್ಲಿ ದೇಶದ ಅಗ್ರ 8 ನಗರಗಳ ನಡುವೆ ಹೊಸ ದೇಶೀಯ ವಿಮಾನ ಸಂಚಾರದಲ್ಲಿ ಬೆಂಗಳೂರು ಮತ್ತು ಹೈದರಾಬಾದ್ ಶೇಕಡ 50ರಷ್ಟು ಕೊಡುಗೆ ನೀಡಿವೆ.

ಎರಡೂ ನಗರಗಳು ತಂತ್ರಜ್ಞಾನ ಆಧರಿತ ಬೆಳವಣಿಗೆ ಸಾಧಿಸಿವೆ. ಆದರೆ, ಕಾರ್ಯನಿರ್ವಹಣಾ ರೀತಿ, ಬೆಳವಣಿಗೆಗಳಲ್ಲಿ ತುಂಬ ಅಂತರಗಳಿವೆ. ನವೋದ್ಯಮ, ಹೂಡಿಕೆ, ನಾವೀನ್ಯ ಮತ್ತು ಹೊಸ ಉದ್ಯೋಗ ಸೃಷ್ಟಿಯಲ್ಲಿ ಬೆಂಗಳೂರು ಮುನ್ನಡೆ ಸಾಧಿಸಿದ್ದು, ದೇಶದ ನವೋದ್ಯಮ ರಾಜಧಾನಿಯಾಗಿದೆ.

ಇಲ್ಲಿ ಬ್ಯಾಂಕ್ ಠೇವಣಿ ಪ್ರಮಾಣ ಹೆಚ್ಚಿದೆ. ಹೈದರಾಬಾದ್ ಜಾಗತಿಕ ಸಾಮರ್ಥ್ಯ ಕೇಂದ್ರದ ಹಬ್ ಆಗಿ ಹೊರಹೊಮ್ಮುತ್ತಿದೆ. ಟೆಕ್ ಜಾಬ್‌ಗಳಲ್ಲಿ ಬೆಂಗಳೂರು ಮತ್ತು ಹೈದರಾಬಾದ್ ನಡುವಣ ಅಂತರ ಕಡಿಮೆಯಾಗುತ್ತಿದೆ.

ಗ್ರಾಹಕರು ಮತ್ತು ಸಣ್ಣ ಉದ್ಯಮಿಗಳಿಗೆ ನೇರವಾಗಿ ನೀಡುವ ಸಾಲ, ಗೃಹ ಸಾಲದಲ್ಲಿ ಹೈದರಾಬಾದ್ ಮುಂದಿದೆ. ಮೂಲಸೌಕರ್ಯ ಅಭಿವೃದ್ಧಿ, ಮಹಿಳೆಯರ ಸುರಕ್ಷತೆಯಲ್ಲಿ ಹೈದರಾಬಾದ್ ಮುಂದಿದೆ. ಐಟಿ, ತಯಾರಿಕಾ ವಲಯ, ಔಷಧ ಮತ್ತು ಬಿಎಫ್‌ಎಸ್‌ಐ ವಲಯಗಳಲ್ಲಿ ಉದ್ಯೋಗಿಗಳ ನೇಮಕದಲ್ಲಿ ಎರಡೂ ನಗರಗಳು ಪ್ರಾಬಲ್ಯ ಸಾಧಿಸಿವೆ.

ವಾಸಯೋಗ್ಯ ನಗರ

**ಮುಖ್ಯಾಂಶಗಳು**
- ಮಹಿಳೆಯರ ಸುರಕ್ಷತೆಯಲ್ಲಿ ಹೈದರಾಬಾದ್ ಮುಂದು
- ಉದ್ಯಮ ಶೀಲತೆಯಲ್ಲಿ ಬೆಂಗಳೂರು ಮುಂಚೂಣಿ
- ಶ್ರೀಮಂತಿಕೆಯಲ್ಲಿ ದೇಶದ 8 ನಗರಗಳಲ್ಲಿ ಬೆಂಗಳೂರು ನಂ.1



**ತಂತ್ರಜ್ಞಾನ ದಿಗ್ಗಜನಗಳ ಸ್ಪರ್ಧೆ**

| | ಬೆಂಗಳೂರು | ಹೈದರಾಬಾದ್ |
|---|---|---|
| ಹೊಸ ಕಂಪನಿಗಳು | 11,261 | 10,813 |
| ಗ್ರೇಡ್ ಎ ಕಚೇರಿಗಳು (2019 ರಿಂದ) | 69 ದಶಲಕ್ಷ ಚದರಡಿ | 66 ದಶಲಕ್ಷ ಚದರಡಿ |
| ಬಾಡಿಗೆ | – | ಶೇಕಡ 10ರಿಂದ 15 ಬೆಂಗಳೂರಿಗಿಂತ ಕಡಿಮೆ |
| ಪ್ರಯಾಣಿಸುವ ಅವಧಿ | ಒಂದು ದಿಕ್ಕಿಗೆ ಚಲಿಸಲು 58-59 ನಿಮಿಷ | ಹೆಚ್ಚು ದೂರ ಕ್ರಮಿಸಲಾಗುತ್ತದೆ |

ತುಮಕೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಬಿ.ಹೆಚ್.ರೋಡ್, ಮಲ್ಲಸಂದ್ರ ,ತುಮಕೂರು-572107
E-mail:tmumpo@gmail.com
ಸಂಖ್ಯೆ/ತುಹಾಒ/ಪ.ಆ.ಮೇ/2025-26 ದಿನಾಂಕ : 26.03.2026

ಇ-ಟೆಂಡರ್ ಪ್ರಕಟಣೆ

ತುಮಕೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವ್ಯಾಪ್ತಿಯ ತಿಪಟೂರು ವಿಭಾಗಕ್ಕೆ ಗುಬ್ಬಿ ಪಶು ಆಹಾರ ಘಟಕದಿಂದ ತಿಪಟೂರು ಉಪವಿಭಾಗದ (ತಿಪಟೂರು, ತುರುವೇಕೆರೆ, ಮತ್ತು ಚಿಕ್ಕನಾಯಕನಹಳ್ಳಿ) ತಾಲ್ಲೂಕಿನ ವ್ಯಾಪ್ತಿಯ ಸಂಘಗಳಿಗೆ ಸರಬರಾಜು ಮಾಡಲು ಪಶು ಆಹಾರ ಸಾಗಾಣಿಕೆಯ ವಾಹನಗಳಿಗೆ 2 ವರ್ಷಗಳ ಅವಧಿಗೆ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ತಿಪಟೂರು ಉಪವಿಭಾಗಕ್ಕೆ 25 MT ಸಾಮರ್ಥ್ಯದ ಕನಿಷ್ಠ 4 ವಾಹನಗಳನ್ನು ಒದಗಿಸುವುದು. ಆಸಕ್ತಿಯುಳ್ಳ ವಾಹನ ಮಾಲೀಕರು ಮೇಲ್ಕಂಡ ಗುತ್ತಿಗೆ ಮಾರ್ಗಗಳಿಗೆ ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ.

| ಕ್ರ.ಸಂ | ವಿವರ | ದಿನಾಂಕ/ವೇಳೆ |
|---|---|---|
| 01 | ಇ- ಟೆಂಡರ್‌ನಲ್ಲಿ ಟೆಂಡರ್ ಪ್ರಕಟಿಸಿರುವ ದಿನಾಂಕ | ದಿನಾಂಕ: 26.03.2026 |
| 02 | ಇ- ಟೆಂಡರ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | ದಿನಾಂಕ:02.04.2026 ರಂದು ಮಧ್ಯಾಹ್ನ 3.30 ಗಂಟೆವರೆಗೆ |
| 03 | ಇ-ಟೆಂಡರ್‌ನಲ್ಲಿ ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ / ವೇಳೆ | ದಿನಾಂಕ: 04.04.2026 ರಂದು ಸಂಜೆ 4.00 ಗಂಟೆಯ ನಂತರ |
| 04 | ಇ-ಟೆಂಡರ್‌ನಲ್ಲಿ ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ / ವೇಳೆ | ದಿನಾಂಕ: 06.04.2026 ರಂದು ಸಂಜೆ 4.00 ಗಂಟೆಯ ನಂತರ. |
| 05 | ಇ-ಟೆಂಡರ್ ಬಗೆಗಿನ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದ ಅಧಿಕಾರಿಗಳು | ವ್ಯವಸ್ಥಾಪಕರು(ಶೇ&ತಾಂ), ತು.ಸ.ಹಾ.ಉ.ಒ |
| 06 | ಇ-ಟೆಂಡರ್ ವೆಬ್ ವಿಳಾಸ | www.kppp.karnataka.gov.in |

ತು.ಸ.ಹಾ.ಉ.ಸಂ.ಒಕ್ಕೂಟದ ಪರವಾಗಿ,
ಸಹಿ/-
ವ್ಯವಸ್ಥಾಪಕ ನಿರ್ದೇಶಕರು

PUBLIC NOTICE

Our client is intending to purchase Schedule Property from its owner **Sri C. Mudde Gowda**, S/o Sri Chikkanarayanappa, This Notice is hereby given for the information of General Public that any person/s, or Banks or Financial Institutions, etc., is having any right, title, interest, claim, or demand on the said property by way of sale, agreement of sale, exchange, gift, mortgage, charge, trust, inheritance, possession, lease, tenancy, easements, attachments, family settlements, Will/bequest, succession rights, development rights, power of attorney, partnership or otherwise whatsoever in nature is hereby required to intimate in writing along with documentary evidence to the office address as mentioned hereunder within 15 days from the date this publication failing which, no claim/objections/disputes will be entertained in future and said sale will be completed.

SCHEDULE PROPERTY

All the piece and Parcel of agricultural land in Sy.No.132/2, [Old Sy. No. 50] measuring 1.00 [One Acres] situated at Kaggalahalli Village, Harohalli Hobli, Harohalli Taluk, Bangalore South District[ Ramanagara] and bounded on: **East by:** Govt. Stream,[lands in La.Sa No.50], **West by:** 25 feet road and remaining lands in Sy. No.132 belongs to Narayanappa, **North by**: lands of Venkatachalaiah [lands in La.Sa No.50], **South by**: Govt. Stream, [lands in La.Sa No.50].

B.H. SHAMANNA & A.S. GIRISH
Advocates
No. 14/3, 4th Floor Annex,
(Opp. YAVANIKA) Sri Aravinda Bhavan,
Nrupatunga Road, Bangalore-01.
Mobile No. 9448670746

# ರಾಮೋತ್ಸವಕ್ಕೆ ವೈಭವದ ಚಾಲನೆ

ಶ್ರೀರಾಮೋತ್ಸವದಲ್ಲಿ ಮಕ್ಕಳು ಸೀತೆ ಮತ್ತು ರಾಮನ ವೇಷಭೂಷಣದೊಂದಿಗೆ ಸಂಭ್ರಮಿಸಿದರು —ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶ್ರೀರಾಮ ಸೇವಾ ಮಂಡಳಿಯು ರಾಜಾಜಿನಗರದ ಶ್ರೀರಾಮ ಮಂದಿರದಲ್ಲಿ ಹಮ್ಮಿಕೊಂಡಿರುವ 70ನೇ ವರ್ಷದ ಶ್ರೀರಾಮೋತ್ಸವಕ್ಕೆ ಗುರುವಾರ ಚಾಲನೆ ದೊರೆಯಿತು.

ಶ್ರೀರಾಮ ಸೇವಾ ಮಂಡಳಿ ಅಧ್ಯಕ್ಷ ಕೆ.ಎಸ್. ಶ್ರೀಧರ್ ಅವರು 74 ಅಡಿ ಎತ್ತರದ ಶ್ರೀರಾಮ ಮೂರ್ತಿಯ ಮುಂಭಾಗ ವಿಶೇಷ ಪೂಜೆ ಸಲ್ಲಿಸುವ ಮೂಲಕ 11 ದಿನಗಳ ಈ ರಾಮೋತ್ಸವಕ್ಕೆ ಚಾಲನೆ ನೀಡಿದರು. ಮಕ್ಕಳು ಶ್ರೀರಾಮ, ಸೀತೆ ಹಾಗೂ ಹನುಮಂತನ ವೇಷಭೂಷಣದೊಂದಿಗೆ ಸಂಭ್ರಮಿಸಿದರು.

'ಬ್ರಹ್ಮರಥೋತ್ಸವ ಹಾಗೂ ಸುವರ್ಣ ವಜ್ರಾಂಗಿ ಅಲಂಕಾರ ಈ ಬಾರಿಯ ಪ್ರಮುಖ ಆಕರ್ಷಣೆ' ಎಂದು ಕೆ.ಎಸ್. ಶ್ರೀಧರ್ ಹೇಳಿದರು.

'27ರಂದು ಶ್ರೀರಾಮಮಂದಿರದಿಂದ ರಾಜಾಜಿನಗರದ ಪ್ರಮುಖ ಬೀದಿಗಳಲ್ಲಿ ಬೆಳಿಗ್ಗೆ 9ರಿಂದ ರಥೋತ್ಸವ ನಡೆಯಲಿದೆ. 28ರಂದು ಶೇಷವಾಹನೋತ್ಸವ, 29ರಂದು ಶ್ರೀರಾಮತಾರಕ ಹೋಮ ಮತ್ತು ಗರುಡವಾಹನೋತ್ಸವ, 30ರಂದು ಸೀತಾರಾಮ ಕಲ್ಯಾಣ, 31ರಂದು ಮುಕ್ತಾಲಂಕಾರ ಸೇವೆ ಹಾಗೂ ಅಶ್ವವಾಹನೋತ್ಸವ ಹಮ್ಮಿಕೊಳ್ಳಲಾಗಿದೆ' ಎಂದರು.

ಬೆಂಗಳೂರು ದಕ್ಷಿಣ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ರಾಮನಗರ ವಿಭಾಗ, ರಾಮನಗರ.
ಸಂ: ಕಾ.ಅ/ಗ್ರಾ.ಕು.ನೀ.&ನೈವಿ/ರಾ/ಟೆಂಡರ್-15/ಸ.ಇಂ.-1&2/JJM/2025-26 ದಿನಾಂಕ: 24.03.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಬೆಂಗಳೂರು ದಕ್ಷಿಣ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ JJM ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ, ರಾಮನಗರ ಮತ್ತು ಕನಕಪುರ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ವಿವರಗಳು ಕಾಮಗಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತಿವೆ.

1) ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ : **ರೂ. 43.81 ಲಕ್ಷಗಳು** ಇ.ಎಂ.ಡಿ ಮೊತ್ತ : **ರೂ. 87,700/- 2)** ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ: **ರೂ. 09.01 ಲಕ್ಷಗಳು** ಇ.ಎಂ.ಡಿ ಮೊತ್ತ : **ರೂ. 11,300/-. 3)** ಕಾಲಾವಧಿ: **06 ತಿಂಗಳು. 4)** ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 09.04.2026 ಸಂಜೆ 5.30 ಗಂಟೆಯವರೆಗೆ 5)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 13.04.2026 ಬೆಳಿಗ್ಗೆ 11.00 ಗಂಟೆಯ ನಂತರ. 6)** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 15.04.2026 ಬೆಳಿಗ್ಗೆ 11.00 ಗಂಟೆಯ ನಂತರ.**

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದು ಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ/ವೆಬ್‌ಸೈಟ್ https://kppp.karnataka.gov.inರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
DIPR/BSD/718/SA/2025-26 ಗ್ರಾ.ಕು.ನೀ ಮತ್ತು ನೈ. ಇಲಾಖೆ, ರಾಮನಗರ ವಿಭಾಗ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
ಸಂ: ಕಾಪಾಅ/ಗ್ರಾ.ಕು.ನೀ. & ನೈರ್ಮಲ್ಯ ವಿಭಾಗ/ಚಿ.ಪುರ/ತಾ.ಶಾ/ಟೆಂಡರ್/2025-26/ಟೆಂ.ಪ್ರ ಸಂಖ್ಯೆ-18 ದಿನಾಂಕ: 24.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 18/2025-26
ದಿನಾಂಕ : 24.03.2026 (ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ರವರು ಹೊಸದಾಗಿ ಬೋರ್‌ವೆಲ್ ಕೊರೆದು ಪಂಪುಮೋಟಾರ್ ಅಳವಡಿಸುವ ಕಾಮಗಾರಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕೆ.ಪಿ.ಪಿ.ಪಿ ಪೋರ್ಟಲ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಸ್ಟ್ಯಾಂಡರ್ ಟೆಂಡರ್ ಡಾಕ್ಯೂಮೆಂಟ್ KW-1 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್‌ನಲ್ಲಿ (Credit Card/Direct Debit/ NEFT & OTC ಮುಖೇನ) ಅಥವ ಚಾಲನ್ ಮೂಲಕ ಭರ್ತಿಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕ ಕ್ಕಿಂತ 2 ದಿನ ಮುಂಚಿತವಾಗಿ ಸಲ್ಲಿಸುವುದು. (1) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: **30.03.2026ರ ಸಂಜೆ 5.30 ಗಂಟೆಯ ವರೆಗೆ.** (2) ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 01.04.2026 ರಂದು ಸಂಜೆ 5.30 ಗಂಟೆವರೆಗೆ.** (3) ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 04.04.2026 ಬೆಳಗ್ಗೆ 11.00 ಗಂಟೆಗೆ**

ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:510/ಕೆಎಸ್‌ಎಂಸಿಎ/2025-26

# 'ನಮ್ಮ ಮೆಟ್ರೊ' ಕಾಮಗಾರಿ: 3 ದಿನ ರಾತ್ರಿ ವೇಳೆ ವಾಹನ ಸಂಚಾರ ನಿರ್ಬಂಧ

**ಬೆಂಗಳೂರು:** ಎಚ್.ಎ.ಎಲ್ ಏರ್‌ಪೋರ್ಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ವರ್ತೂರು ಮುಖ್ಯರಸ್ತೆಯ ಮಾರತ್‌ಹಳ್ಳಿ ಸೇತುವೆಯಲ್ಲಿ ಬಿಎಂಆರ್‌ಸಿಎಲ್ ವತಿಯಿಂದ 'ನಮ್ಮ ಮೆಟ್ರೊ' ಕಾಮಗಾರಿ ಹಮ್ಮಿಕೊಳ್ಳಲಾಗಿದೆ. ಕಾಮಗಾರಿ ಹಿನ್ನೆಲೆಯಲ್ಲಿ ಮಾರ್ಚ್ 27ರಿಂದ ಮೂರು ದಿನ ರಾತ್ರಿ 12ರಿಂದ ನಸುಕಿನ ಜಾವ 3ರವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

**ವಾಹನ ಸಂಚಾರ ನಿರ್ಬಂಧ:** ಎಚ್‌ಎಎಲ್ ಕಡೆಯಿಂದ ವರ್ತೂರು ಮುಖ್ಯರಸ್ತೆ ಮಾರತ್‌ಹಳ್ಳಿ ಸೇತುವೆ ಮೂಲಕ ವರ್ತೂರು ಮತ್ತು ವೈಟ್‌ಫೀಲ್ಡ್ ಕಡೆಗೆ ಹೋಗುವ ಎಲ್ಲ ಮಾದರಿಯ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ವರ್ತೂರು ಮತ್ತು ವೈಟ್‌ಫೀಲ್ಡ್ ಕಡೆಯಿಂದ ವರ್ತೂರು ಮುಖ್ಯರಸ್ತೆ ಮಾರತ್‌ಹಳ್ಳಿ ಸೇತುವೆ ಮೂಲಕ ಎಚ್‌ಎಎಲ್ ಕಡೆಗೆ ಹೋಗುವ ಎಲ್ಲ ಮಾದರಿಯ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

### ಸಂಚಾರಕ್ಕೆ ಪರ್ಯಾಯ ಮಾರ್ಗ

- ಎಚ್.ಎ.ಎಲ್ ಕಡೆಯಿಂದ ವರ್ತೂರು ಮತ್ತು ವೈಟ್‌ಫೀಲ್ಡ್ ಕಡೆಗೆ ಸಂಚರಿಸುವ ವಾಹನಗಳು ವರ್ತೂರು ಮುಖ್ಯರಸ್ತೆಯ ಮೂಲಕ ಸಾಗಿ ದೊಡ್ಡನೆಕ್ಕುಂದಿ ಜಂಕ್ಷನ್ ಬಳಿಯಲ್ಲಿ ಎಡಕ್ಕೆ ತಿರುವು ಪಡೆದುಕೊಳ್ಳಬೇಕು. ಕಾರ್ತಿಕ್‌ನಗರ ಜಂಕ್ಷನ್ ಮೂಲಕ ಹೊರ ವರ್ತುಲ ರಸ್ತೆ ತಲುಪಿ, ನಂತರ ಎಡಕ್ಕೆ ತಿರುವು ಪಡೆದುಕೊಂಡು ಸಂಚರಿಸಿ ದೊಡ್ಡನೆಕ್ಕುಂದಿ ಮೇಲ್ಸೇತುವೆ ಕೆಳಗೆ ಯು-ಟರ್ನ್ ಪಡೆದು ಆಲ್ಫೈನ್ಸ್ ಇಕೊ ರಸ್ತೆಯ ಮೂಲಕ ಆಂಜನೇಯ ಜಂಕ್ಷನ್ ತಲುಪಿ, ಕುಂದಲಹಳ್ಳಿ ಮುಖ್ಯರಸ್ತೆ ಮತ್ತು ಗ್ರಾಫೈಟ್ ರಸ್ತೆಯ ಮೂಲಕ ವೈಟ್ ಫೀಲ್ಡ್ ಮತ್ತು ವರ್ತೂರು ಕಡೆಗೆ ಸಂಚರಿಸಬಹುದು.
- ವರ್ತೂರು, ವೈಟ್‌ಫೀಲ್ಡ್ ಕಡೆಯಿಂದ ಎಚ್‌ಎಎಲ್ ಕಡೆಗೆ ಸಂಚರಿಸುವ ವಾಹನಗಳು ವರ್ತೂರು ಮುಖ್ಯರಸ್ತೆಯ ಮೂಲಕ ಸಂಚರಿಸಿ ಕುಂದಲಹಳ್ಳಿ ಜಂಕ್ಷನ್ ಬಳಿ ಬಲಕ್ಕೆ ತಿರುವು ಪಡೆದುಕೊಳ್ಳಬೇಕು. ಕುಂದಲಹಳ್ಳಿ ಮುಖ್ಯರಸ್ತೆಯ ಮೂಲಕ ಸಂಚರಿಸಿ ಆಂಜನೇಯ ಜಂಕ್ಷನ್ ತಲುಪಿ ಎಡ ತಿರುವು ಪಡೆದುಕೊಂಡು, ಆಲ್ಫೈನ್ಸ್ ಇಕೊ ರಸ್ತೆಯ ಮೂಲಕ ಹೊರವರ್ತುಲ ರಸ್ತೆ ತಲುಪಿ ಕಾರ್ತಿಕ್ ನಗರ ಜಂಕ್ಷನ್ ಬಳಿ ಬಲ ತಿರುವು ಪಡೆದು, ದೊಡ್ಡನೆಕ್ಕುಂದಿ ಮುಖ್ಯ ರಸ್ತೆಯಲ್ಲಿ ಸಂಚರಿಸಿ ದೊಡ್ಡನೆಕ್ಕುಂದಿ ಜಂಕ್ಷನ್ ತಲುಪಿ ಬಲ ತಿರುವು ಪಡೆದುಕೊಂಡು, ವರ್ತೂರು ಮುಖ್ಯರಸ್ತೆಯ ಮೂಲಕ ಎಚ್‌ಎಎಲ್ ಕಡೆಗೆ ಸಂಚರಿಸಬಹುದು ಎಂದು ಸಂಚಾರ ಪೊಲೀಸರು ಸೂಚಿಸಿದ್ದಾರೆ.

ಭಾರತ ಸರಕಾರ
ವಿತ್ತ ಸಚಿವಾಲಯ, ಹಣಕಾಸು ಸೇವೆಗಳ ವಿಭಾಗ
ಸಾಲ ವಸೂಲಾತಿ ನ್ಯಾಯಾಧಿಕರಣ -2, ಬೆಂಗಳೂರು
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು - 560 001.
ಫಾರಂ ನಂ. 14 (ನೋಡಿ ರೆಗ್ಯುಲೇಶನ್ 33(2))

ಟಿಆರ್‌ಸಿ ನಂ. 835/2019

**ಯೂಕೊ ಬ್ಯಾಂಕ್,** ಜಯನಗರ ಶಾಖೆ, 9ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು - 560 011. ... ಸರ್ಟಿಫಿಕೇಟ್ ಹೋಲ್ಡರ್ ಬ್ಯಾಂಕ್
ವಿರುದ್ಧ
ಆಂಜನೇಗೌಡ ಮತ್ತು ಇತರರು ... ಪ್ರತಿವಾದಿಗಳು / ಸರ್ಟಿಫಿಕೇಟ್ ಡೆಟರ್ಸ್

ಡಿಮ್ಯಾಂಡ್ ನೋಟೀಸು

ಇವರಿಗೆ :
1. ಶ್ರೀ ಆಂಜನೇಗೌಡ (ಸಾಲಗಾರರು), ಬಿನ್ ಕಳಸಯ್ಯ, ನಂ. 546, ಅಂಜನಾನಗರ ಪೂರ್ವ, ಹೆರೋಹಳ್ಳಿ, ಬೆಂಗಳೂರು - 560 091.
**ಕಚೇರಿ/ಯುನಿಟ್‌ನ ವಿಳಾಸ :** ಮೆ. ಜೈ ಹನುಮಾನ್ ಇಂಜಿನಿಯರಿಂಗ್ ವರ್ಕ್ಸ್, ನಂ. 597, 10ನೇ ಮುಖ್ಯ ರಸ್ತೆ, 4ನೇ ಬ್ಲಾಕ್, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬಸವೇಶ್ವರ ನಗರ, ಬೆಂಗಳೂರು - 560 079.
2. **ಶ್ರೀಮತಿ ಮೀನಾಕ್ಷಿ ಕಳಸಯ್ಯ ಕೋಂ.** ಶ್ರೀ ಕಳಸಯ್ಯ (ಸಹ-ಅರ್ಜಿದಾರರು), ನಂ. 546, ಅಂಜನಾನಗರ ಪೂರ್ವ, ಹೆರೋಹಳ್ಳಿ, ಬೆಂಗಳೂರು - 560 091.
**ಕಚೇರಿ/ಯುನಿಟ್‌ನ ವಿಳಾಸ :** ಮೆ. ಜೈ ಹನುಮಾನ್ ಇಂಜಿನಿಯರಿಂಗ್ ವರ್ಕ್ಸ್, ನಂ. 597, 10ನೇ ಮುಖ್ಯ ರಸ್ತೆ, 4ನೇ ಬ್ಲಾಕ್, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬಸವೇಶ್ವರ ನಗರ, ಬೆಂಗಳೂರು - 560 079.
3. **ಶ್ರೀಮತಿ ನಂದಾದೀಪ** (ಜಾಮೀನುದಾರರು) **ಕೋಂ.** ಶ್ರೀ ಆಂಜನೇಗೌಡ, ನಂ. 546, ಅಂಜನಾನಗರ ಪೂರ್ವ, ಹೆರೋಹಳ್ಳಿ, ಬೆಂಗಳೂರು - 560 091.
**ಕಚೇರಿ/ಯುನಿಟ್‌ನ ವಿಳಾಸ :** ಮೆ. ಜೈ ಹನುಮಾನ್ ಇಂಜಿನಿಯರಿಂಗ್ ವರ್ಕ್ಸ್, ನಂ. 597, 10ನೇ ಮುಖ್ಯ ರಸ್ತೆ, 4ನೇ ಬ್ಲಾಕ್, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬಸವೇಶ್ವರ ನಗರ, ಬೆಂಗಳೂರು - 560 079.
... ಪ್ರತಿವಾದಿಗಳು / ಸರ್ಟಿಫಿಕೇಟ್ ಡೆಟರ್ಸ್

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ಪ್ರಾಧಿಕಾರ, ಬೆಂಗಳೂರು ಇವರು ದಿನಾಂಕ 29.06.2019 **ರಂದು ಒ.ಎ. ನಂ. 631/2018**ರಲ್ಲಿ ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ **ರೂ.63,77,027/-** (ರೂಪಾಯಿ ಅರವತ್ತ ಮೂರು ಲಕ್ಷದ ಎಪ್ಪತ್ತೇಳು ಸಾವಿರದ ಇಪ್ಪತ್ತೇಳು ಮಾತ್ರ) ಜೊತೆಗೆ ಒ.ಎ ಜಾರಿ ಮಾಡಿದ ದಿನಾಂಕದಿಂದ ಪೂರ್ತಿಪಾವತಿಯ ದಿನಾಂಕದವರೆಗಿನ ರಿಕವರಿ ಸರ್ಟಿಫಿಕೇಟ್‌ನಲ್ಲಿನ ಮೊತ್ತ, ಬಡ್ಡಿ ಮತ್ತು ಇತರ ವೆಚ್ಚ ನಿಮ್ಮಿಂದ ಬಾಕಿ ಇರುತ್ತದೆ.

ಮೇಲೆ ಹೇಳಲ್ಪಟ್ಟ ಮೊತ್ತವಲ್ಲದೆ ನೀವು ಹೆಚ್ಚುವರಿಯಾಗಿ ನೀವು ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನುಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ, ಮತ್ತು ಇತರ ಪ್ರಕ್ರಿಯೆ ಹಾಗೂ ಸಾಲವನ್ನು ವಸೂಲಿ ಮಾಡುವಲ್ಲಿ ತಗಲುವ ಎಲ್ಲ ಖರ್ಚು ಮತ್ತು ವೆಚ್ಚಗಳನ್ನು ಪಾವತಿಸಲು ಬಾಧ್ಯರಾಗುತ್ತೀರಿ :

ನೀವು ಸದರಿ ಮೊತ್ತವನ್ನು ಈ ಪ್ರಕಟಣೆ ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು.

ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ **19.10.2019** ರಂದು ಕೊಡಲ್ಪಟ್ಟಿದೆ.

ಸಹಿ/- ವಸೂಲಾತಿ ಅಧಿಕಾರಿ- 1
ಸಾಲ ವಸೂಲಾತಿ ನ್ಯಾಯಾಧಿಕರಣ -2 , ಬೆಂಗಳೂರು

**ಗಮನಿಸಿ :** ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ: 16 (1)ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧೂವಾಗುತ್ತವೆ. 3) ನೀವು ಕಳೆದ 5 ವರ್ಷಗಳ ಆದಾಯ ತೆರಿಗೆ ಪಾವತಿಯ ದಾಖಲೆಗಳೊಂದಿಗೆ ನಿಮ್ಮ ಸ್ಥಿರ ಮತ್ತು ಚರಾಸ್ತಿಗಳ ವಿವರಗಳನ್ನು ಈ ನ್ಯಾಯಾಧಿಕರಣಕ್ಕೆ ಸಲ್ಲಿಸಬೇಕಾಗಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂ: ಅಇಂ(ವಿ)/ಪ್ರ(ಕಾ)ವೃ-ಉ/ಕಾನಿಇಂ(ವಿ)/ಸಇಂ(ವಿ)/ಸಕಾಇಂ(ವಿ)-1&2/ಕ-T6/25-26/4333 & 4334 ದಿ: 26.03.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಪ್ರಸರಣ(ಕಾರ್ಯಾಚರಣೆ)ವೃತ್ತ-ಉತ್ತರ, ಬೆಂಗಳೂರು ವ್ಯಾಪ್ತಿಯಲ್ಲಿ ಬರುವ ಕೆಳಕಂಡ ಸಾಮಗ್ರಿಗಳ ಸರಬರಾಜು/ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದೆ.

(1) **ಟೆಂಡರ್ ಸಂ: KPTCL/2025-26/IND0277/Call-2** ರ ಅನ್ವಯ ವಿವಿಧ ಉಪಕೇಂದ್ರಗಳಿಗೆ 400-200/1-1-1A **ratio**ನ 66ಕೆವಿ ಪ್ರಸ್ತುತ ವಿದ್ಯುತ್ ಪರಿವರ್ತಕಗಳ 42 ಸಂಖ್ಯೆಗಳ ವಿನ್ಯಾಸ, ತಯಾರಿಕೆ, ಪರೀಕ್ಷೆ ಮತ್ತು ಪೂರೈಕೆ.

(2) **ಟೆಂಡರ್ ಸಂ: KPTCL/2025-26/IND0279/Call-2** ರ ಅನ್ವಯ ವಿವಿಧ ಉಪಕೇಂದ್ರಗಳಿಗೆ 800-400/1-1-1A **ratio** ನ 66ಕೆವಿ ಪ್ರಸ್ತುತ ವಿದ್ಯುತ್ ಪರಿವರ್ತಕಗಳ 42 ಸಂಖ್ಯೆಗಳ ವಿನ್ಯಾಸ, ತಯಾರಿಕೆ, ಪರೀಕ್ಷೆ ಮತ್ತು ಪೂರೈಕೆ.

(3) **ಟೆಂಡರ್ ಸಂ: KPTCL/2025-26/IND0278/Call-2** ರ ಅನ್ವಯ ವಿವಿಧ ಉಪಕೇಂದ್ರಗಳಿಗೆ 1200-800/1-1-1A **ratio** ನ 66ಕೆವಿ ಪ್ರಸ್ತುತ ವಿದ್ಯುತ್ ಪರಿವರ್ತಕಗಳ 30ಸಂಖ್ಯೆಗಳ ವಿನ್ಯಾಸ, ತಯಾರಿಕೆ, ಪರೀಕ್ಷೆ ಮತ್ತು ಪೂರೈಕೆ.

(4) **ಟೆಂಡರ್ ಸಂ: KPTCL/2025-26/IND0275/Call-2** ರ ಅನ್ವಯ ವಿವಿಧ ಉಪಕೇಂದ್ರಗಳು ಹಾಗೂ ಟಿ.ಎಲ್.ಎಂ ಉಪವಿಭಾಗಗಳಿಗೆ ಬೇಕಾಗಿರುವ ಟಿ&ಪಿ ಸಾಮಗ್ರಿಗಳ ಸರಬರಾಜು.

(5) **ಟೆಂಡರ್ ಸಂ: KPTCL/2025-26/SS/WORK_INDENT2903/call-4** ರ ಅನ್ವಯ 220/66/11 ಕೆವಿ ಹೆಬ್ಬಾಳ ಉಪಕೇಂದ್ರದಲ್ಲಿರುವ ಹಳೆಯ 11ಕೆವಿ ಬ್ಯಾಂಕ್-1, ಬ್ಯಾಂಕ್-2, ಬ್ಯಾಂಕ್-3 ಮತ್ತು ಸದರಿ, 11ಕೆವಿ ಫೀಡರ್‌ಗಳ **MCVCB** ಸ್ವಿಚ್‌ಗೇರ್‌ಗಳನ್ನು **MEI** ತಯಾರಿಕೆ ಸ್ವಿಚ್‌ಗೇರ್‌ನಿಂದ ಬದಲಾಯಿಸುವುದು. **(ಭಾಗಶಃ ಟರ್ನ್‌ಕೀ, ದ್ವಿ ಲಕೋಟೆ ಹಾಗೂ ಶೇಕಡಾವಾರು ಆಧಾರದ ಮೇಲೆ)**

(6) **ಟೆಂಡರ್ ಸಂ: KPTCL/2025-26/SS/WORK_INDENT2904/Call-3** ರ ಅನ್ವಯ 220/66/11ಕೆವಿ ಪುಟ್ಟೇನಹಳ್ಳಿ(ಯಲಹಂಕ) ಉಪಕೇಂದ್ರದಲ್ಲಿ **220ಕೆವಿ** ಬಸ್ ಪಿ.ಟಿ. ಗಳಿಗೆ ಮತ್ತು 66ಕೆವಿ ಬಸ್ ಪಿ.ಟಿ. ಗಳಿಗೆ Grounding ಗಾಗಿ ಕಾಸ್ಟ್ ಐರನ್ ಪೈಪ್ ಒದಗಿಸುವುದು. **(ಸಂಪೂರ್ಣ ಟರ್ನ್‌ಕೀ, ದ್ವಿಲಕೋಟೆ ಹಾಗೂ ಶೇಕಡಾವಾರು ಆಧಾರದ ಮೇಲೆ)**

ಬಿಡ್‌ಗಳನ್ನು ಕೆಪಿಪಿಪಿ ಮೂಲಕ ಮಾತ್ರವೇ ಸ್ವೀಕರಿಸಲಾಗುತ್ತದೆ. ಹೆಚ್ಚಿನ ವಿವರಗಳನ್ನು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in**ನ ಹೈಪರ್‌ಲಿಂಕ್ **E Procurement KPTCL** ಗೆ ಅಥವಾ ನೇರವಾಗಿ ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ: 27.03.2026 ರಂದು ಅಥವಾ ತದನಂತರ** ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಅಧೀಕ್ಷಕ ಇಂಜಿನಿಯರ್(ವಿ),
ಪ್ರಸರಣ (ಕಾರ್ಯಾಚರಣೆ)ವೃತ್ತ-ಉತ್ತರ, ಕವಿಪ್ರನಿನಿ,
ಯು.ಎ.ಎಸ್ ಕ್ಯಾಂಪಸ್, ಹೆಬ್ಬಾಳ, ಬೆಂಗಳೂರು-560024.

# ಜಾಗತಿಕ ತಂಬಾಕು ವಲಯದಲ್ಲಿ ಬದಲಾವಣೆ

## ಗ್ರಾಹಕರ ಬೇಡಿಕೆಗೆ ತಕ್ಕಂತೆ ಉತ್ಪಾದನಾ ವಲಯ ಸೃಷ್ಟಿ, ಭಾರತೀಯ ತಂಬಾಕು ರಫ್ತಿನ ಮೇಲೆ ಬೀರುತ್ತಿರುವ ಪರಿಣಾಮಗಳು

**ಬೆಂಗಳೂರು:** ಜಾಗತಿಕ ತಂಬಾಕು ಮೌಲ್ಯ ಸರಪಳಿಯಲ್ಲಿ ಸದ್ದಿಲ್ಲದೆ ನಡೆಯುತ್ತಿರುವ ಒಂದು ರಚನಾತ್ಮಕ ಬದಲಾವಣೆಯು ಭಾರತದ ತಂಬಾಕು ರಫ್ತು ಸಾಮರ್ಥ್ಯದ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತಿದೆ. ಇತ್ತೀಚಿನ ದಿನಗಳಲ್ಲಿ ತಂಬಾಕು ತಯಾರಕರು ತಮ್ಮ ಉತ್ಪಾದನಾ ಘಟಕಗಳನ್ನು ಗ್ರಾಹಕರ ಬೇಡಿಕೆ ಇರುವ ಕೇಂದ್ರಗಳಿಗೆ ಹತ್ತಿರ ವಾಗಿ ಸ್ಥಳಾಂತರಿಸುತ್ತಿದ್ದಾರೆ. ಈ ಬದಲಾವಣೆಯು ಕೇವಲ ಸಾಗಾಣಿಕೆಗೆ ಸಂಬಂಧಿಸಿದ್ದಲ್ಲ, ಬದಲಾಗಿ ಇದು ಬದಲಾಗುತ್ತಿರುವ ನಿಯಮಗಳು, ನಾವೀನ್ಯತೆ ಮತ್ತು ಹೊಗೆಮುಕ್ತ ಉತ್ಪನ್ನಗಳ ಬೆಳವಣಿಗೆಯ ಪ್ರತಿಫಲವಾಗಿದೆ.

**ಬೇಡಿಕೆಯ ಕೇಂದ್ರಗಳತ್ತ ಉತ್ಪಾದನೆ:** ಇಂದಿನ ಕಾಲದಲ್ಲಿ ತಂಬಾಕು ತಯಾರಿಕೆಯು ಅಂತಹ ದೇಶಗಳತ್ತ ಮುಖ ಮಾಡುತ್ತಿದೆ, ಎಲ್ಲಿ ತಂಬಾಕು ಉತ್ಪನ್ನಗಳ ಸೌಲಭ್ಯಗಳಲ್ಲಿ ಹೂಡಿಕೆ ಮಾಡಲು ಅವಕಾಶವಿದೆಯೋ ಮತ್ತು ಕಾಯಿಸಿದ ತಂಬಾಕಿನಂತಹ ನವೀನ ಉತ್ಪನ್ನಗಳ ವಾಣಿಜ್ಯೀಕರಣಕ್ಕೆ ಅನುಮತಿ ಇದೆಯೋ ಅಂತಹ ಕಡೆ ಹೂಡಿಕೆ ಹರಿಯುತ್ತಿದೆ. ಸಮಗ್ರ ಪೂರೈಕೆ ವ್ಯವಸ್ಥೆ ಮತ್ತು ಹಾನಿ ಕಡಿಮೆ ಮಾಡುವ ಪರ್ಯಾಯ ಉತ್ಪನ್ನಗಳಿಗೆ ಹೆಚ್ಚುತ್ತಿರುವ ಬೇಡಿಕೆಯು ಉತ್ಪಾದನಾ ಹಬ್‌ಗಳನ್ನು ಪೂರ್ವ ಯುರೋಪ್, ಲ್ಯಾಟಿನ್ ಅಮೆರಿಕಾ, ಆಫ್ರಿಕಾ ಮತ್ತು ಆಗ್ನೇಯ ಏಷ್ಯಾದ ಭಾಗಗಳಿಗೆ ವಿಸ್ತರಿಸುವಂತೆ ಮಾಡಿದೆ.

ಈ ವಿಕಾಸವು ತಂಬಾಕು ಎಲೆಗಳ ಸಂಗ್ರಹಣೆಯ ಮೇಲೆ ಪ್ರಮುಖ ಪ್ರಭಾವ ಬೀರಿದೆ. ಈಗ ತಂಬಾಕು ಎಲೆಯು ಕೇವಲ ಒಂದು ಸ್ವತಂತ್ರ ಸರಕಾಗಿ ಉಳಿದಿಲ್ಲ. ಬದಲಾಗಿ, ಇದನ್ನು ಸಮಗ್ರ ಉತ್ಪಾದನಾ ವ್ಯವಸ್ಥೆಯ ಭಾಗವಾಗಿ ಮೂಲಗಳಿಂದ ಪಡೆಯಲಾಗುತ್ತಿದೆ. ಉತ್ಪಾದನಾ ಘಟಕಗಳು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಸ್ಥಾಪಿತವಾದಾಗ, ಕಂಪನಿಗಳ ಎಲೆ ಖರೀದಿ ತಂತ್ರಗಳು ಸಹ ಅದರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತವೆ.

**ಸಮಗ್ರ ಪೂರೈಕೆ ವ್ಯವಸ್ಥೆಯ ಲಾಭ :** ತಯಾರಕರು ಸಾಗಾಣಿಕೆ ವೆಚ್ಚವನ್ನು ಕಡಿಮೆ ಮಾಡಲು, ಪೂರೈಕೆಯ ಮುನ್ಸೂಚನೆಯನ್ನು ಸುಧಾರಿಸಲು ಮತ್ತು ಸುಸ್ಥಿರತೆಯ ಅವಶ್ಯಕತೆಗಳನ್ನು ಪೂರೈಸಲು ಉತ್ಪಾದನಾ ಘಟಕಗಳ ಹತ್ತಿರವಿರುವ ಪ್ರದೇಶಗಳಿಂದಲೇ ತಂಬಾಕು ಎಲೆಗಳನ್ನು ಖರೀದಿಸಲು ಆದ್ಯತೆ ನೀಡುತ್ತಿದ್ದಾರೆ. ಬ್ರೆಜಿಲ್, ಜಿಂಬಾಬ್ವೆ ಮತ್ತು ಮೊಜಾಂಬಿಕ್‌ನಂತಹ ದೇಶಗಳು ಈ ಮಾದರಿಯಿಂದ ಹೆಚ್ಚಿನ ಲಾಭ ಪಡೆಯುತ್ತಿವೆ. ಅಲ್ಲಿ ಒಪ್ಪಂದದ ಬೇಸಾಯ, ಸಂಸ್ಕರಣಾ ಮೂಲ ಸೌಕರ್ಯ ಮತ್ತು ಉತ್ಪಾದನಾ ವ್ಯವಸ್ಥೆಗಳು ಪರಸ್ಪರ ಬಿಗಿಯಾಗಿ ಹೆಣೆದುಕೊಂಡಿವೆ. ಈ ಪ್ರದೇಶಗಳಲ್ಲಿ ಹೂಡಿಕೆ ಹೆಚ್ಚಾದಂತೆ, ಎಲೆಗಳ ಸಂಗ್ರಹಣೆಯೂ ಸಹಜವಾಗಿಯೇ ಅಲ್ಲಿಗೆ ವರ್ಗಾವಣೆಯಾಗುತ್ತಿದೆ.

**ಭಾರತ ಎದುರಿಸುತ್ತಿರುವ ಸವಾಲುಗಳು:** ವಿಶ್ವದ ಅತಿದೊಡ್ಡ 'ಫ್ಲೂ-ಕ್ಯೂರ್ಡ್ ವರ್ಜೀನಿಯಾ' ತಂಬಾಕು ಉತ್ಪಾದಕ ಮತ್ತು ರಫ್ತುದಾರರಲ್ಲಿ ಒಂದಾಗಿರುವ ಭಾರತಕ್ಕೆ ಈ ಪ್ರವೃತ್ತಿಯು ಒಂದು ಆಯಕಟ್ಟಿನ ಸವಾಲನ್ನು ಒಡ್ಡಿದೆ. ಭಾರತವು ಇನ್ನೂ ಕೇವಲ ಕಚ್ಚಾ ತಂಬಾಕು ಎಲೆಗಳ ಕೃಷಿ ಮತ್ತು ರಫ್ತಿನ ಮೇಲೆ ಮಾತ್ರ ಗಮನ ಹರಿಸುತ್ತಿದೆ. ಆದರೆ, ಭಾರತದಲ್ಲಿ ತಂಬಾಕು ಉತ್ಪನ್ನಗಳ ತಯಾರಿಕೆಯಲ್ಲಿ ವಿದೇಶಿ ನೇರ ಹೂಡಿಕೆಯನ್ನು ನಿಷೇಧಿಸಲಾಗಿದೆ ಮತ್ತು ಆಧುನಿಕ ನಿಕೋಟಿನ್ ಉತ್ಪನ್ನಗಳಿಗೆ ಅನುಮತಿ ಇಲ್ಲ. ಇದು ಮೌಲ್ಯ ಸರಪಳಿಯಲ್ಲಿ ಒಂದು ರಚನಾತ್ಮಕ ಅಸಮತೋಲನವನ್ನು ಸೃಷ್ಟಿಸಿದೆ: ಭಾರತವು ಕಚ್ಚಾ ಪದಾರ್ಥಗಳನ್ನು ಪೂರೈಸುತ್ತದೆ, ಆದರೆ ಹೆಚ್ಚಿನ ಮೌಲ್ಯದ ಸಂಸ್ಕರಣೆ, ಉತ್ಪಾದನೆ ಮತ್ತು ತಂತ್ರಜ್ಞಾನದ ಅಭಿವೃದ್ಧಿಯು ಬೇರೆ ದೇಶಗಳಲ್ಲಿ ನಡೆಯುತ್ತಿದೆ.

ಜಾಗತಿಕ ಬೇಡಿಕೆಯು ಹೊಗೆ ಮುಕ್ತ ಮತ್ತು ಕಡಿಮೆ ಅಪಾಯದ ಉತ್ಪನ್ನಗಳತ್ತ ಸರಿಯುತ್ತಿರುವಾಗ, ಹೂಡಿಕೆಯು ನಾವೀನ್ಯತೆಗೆ ಅವಕಾಶ ನೀಡುವ ಮಾರುಕಟ್ಟೆಗಳತ್ತ ಹರಿಯುತ್ತಿದೆ. ಮುಂದಿರುವ ಅಪಾಯಗಳು

ಖರೀದಿ ನಿರ್ಧಾರಗಳು ಈಗ ಉತ್ಪಾದನಾ ಸ್ಥಳಗಳಿಗೆ ನೇರವಾಗಿ ಸಂಬಂಧಿಸಿರುವುದರಿಂದ, ಕಾಲ ಕ್ರಮೇಣ ಇದು ಭಾರತೀಯ ತಂಬಾಕು ಎಲೆಗಳ ಬೆಲೆಯ ಮೇಲೆ ತೀವ್ರ ಪೈಪೋಟಿಯನ್ನು ಉಂಟುಮಾಡಬಹುದು.

ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತೀಯ ತಂಬಾಕಿನ ಬದಲಿಗೆ ಬೇರೆ ದೇಶಗಳ ಎಲೆಗಳನ್ನು ಬಳಸುವ ಅಪಾಯ ಹೆಚ್ಚಾಗಬಹುದು, ಇದು ಭಾರತದ ದೀರ್ಘಕಾಲೀನ ರಫ್ತು ಒಪ್ಪಂದಗಳಿಗೆ ಅಡ್ಡಿಯಾಗಬಹುದು.

ನವೀನ ಮತ್ತು ನಿಯಂತ್ರಿತ ಉತ್ಪನ್ನಗಳಿಗೆ ಅವಕಾಶ ನೀಡುವ ದೇಶಗಳು ಕೇವಲ ಬಂಡವಾಳವನ್ನು ಮಾತ್ರವಲ್ಲದೆ, ಸುಧಾರಿತ ಸಂಸ್ಕರಣಾ ಮೂಲಸೌಕರ್ಯಗಳನ್ನು ಸಹ ಆಕರ್ಷಿಸುತ್ತಿವೆ.

ಭಾರತಕ್ಕೆ ಈಗ ತನ್ನ ರಫ್ತು ಸ್ಥಾನಮಾನವನ್ನು ಕೇವಲ ಉಳಿಸಿಕೊಳ್ಳುವುದಲ್ಲದೆ, ಅದನ್ನು ಮತ್ತಷ್ಟು ಬಲಪಡಿಸುವ ಅವಶ್ಯಕತೆಯಿದೆ.

### ಪರಿಹಾರದ ದಾರಿ

ತಂಬಾಕು ಉತ್ಪಾದನೆಯಲ್ಲಿ ನಿಯಂತ್ರಿತ ವಿದೇಶಿ ಹೂಡಿಕೆಗೆ ದಾರಿ ಮಾಡಿಕೊಡುವುದು ಮತ್ತು ಮುಂದಿನ ಪೀಳಿಗೆಯ ಉತ್ಪನ್ನಗಳಿಗೆ ನಿಯಂತ್ರಿತ ಚೌಕಟ್ಟನ್ನು ಒದಗಿಸುವುದು ಭಾರತಕ್ಕೆ ಜಾಗತಿಕ ಮೌಲ್ಯ ಸರಪಳಿಯಲ್ಲಿ ಭದ್ರವಾದ ಸ್ಥಾನವನ್ನು ನೀಡಬಲ್ಲದು. ಇದರಿಂದ ಮೌಲ್ಯವರ್ಧನೆ ಹೆಚ್ಚಾಗುವುದಲ್ಲದೆ, ರಫ್ತು ಸ್ಥಿತಿಸ್ಥಾಪಕತ್ವವನ್ನು ವೃದ್ಧಿಸಬಹುದು ಮತ್ತು ಭಾರತೀಯ ತಂಬಾಕು ಎಲೆಗಳಿಗೆ ನಿರಂತರ ಬೇಡಿಕೆಯನ್ನು ಖಚಿತಪಡಿಸಿಕೊಳ್ಳಬಹುದು.

ಒಂದು ವೇಳೆ ಇಂತಹ ಬದಲಾವಣೆಗಳಿಗೆ ಭಾರತ ತೆರೆದುಕೊಳ್ಳದಿದ್ದರೆ, ಜಾಗತಿಕ ಮೌಲ್ಯ ಸರಪಳಿಯಲ್ಲಿ ಅತ್ಯಂತ ಕಡಿಮೆ ಮೌಲ್ಯದ ವಿಭಾಗಕ್ಕೆ ಭಾರತ ಸೀಮಿತವಾಗಬೇಕಾಗುತ್ತದೆ.

ಜಾಗತಿಕ ಬದಲಾವಣೆಯು ಈಗಾಗಲೇ ಆರಂಭವಾಗಿದ್ದು, ಈ ಹಂತದಲ್ಲಿ ಭಾರತವು ಕೇವಲ ಬೆಲೆ ನಿರ್ಧಾರಕವಾಗಿ ಉಳಿಯುತ್ತದೆಯೇ ಅಥವಾ ಮೌಲ್ಯ ಸೃಷ್ಟಿಕರ್ತನಾಗಿ ಹೊರಹೊಮ್ಮುತ್ತದೆಯೇ ಎಂಬುದು ಈಗ ತೆಗೆದುಕೊಳ್ಳುವ ಆಯಕಟ್ಟಿನ ನಿರ್ಧಾರಗಳ ಮೇಲೆ ಅವಲಂಬಿತವಾಗಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

# ಗುತ್ತಿಗೆದಾರರ ಸಮಸ್ಯೆಗೆ ಪರಿಹಾರ: ಕರೀಗೌಡ

## ಸಿಇಒ ಅಧ್ಯಕ್ಷತೆಯಲ್ಲಿ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ಸಭೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ 12 ವಿಧಾನಸಭೆ ಕ್ಷೇತ್ರದ ಕಸ ಗುತ್ತಿಗೆದಾರರೊಂದಿಗೆ ಗುರುವಾರ ನಡೆದ ಸಭೆ ಫಲಪ್ರದವಾಗಿದ್ದು, ಅವರ ಸಮಸ್ಯೆಗಳಿಗೆ ಪರಿಹಾರ ನೀಡಲಾಗಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಸಿಇಒ ಕರೀಗೌಡ ತಿಳಿಸಿದರು.

ಕಾರ್ಮಿಕರನ್ನು ಶೋಷಿಸಲಾಗುತ್ತಿದೆ, ಆರು ತಿಂಗಳಿಂದ ಬಿಲ್ ಪಾವತಿಸದ ಕಾರಣ ಮಾರ್ಚ್ 23ರಿಂದ ಮನೆಗಳಿಂದ ಕಸ ಸಂಗ್ರಹ, ವಿಲೇವಾರಿಯಲ್ಲಿ ವ್ಯತ್ಯಯವಾಗಿತ್ತು. ಕಾರ್ಮಿಕರು ಕಸ ಆಯುವುದಿಲ್ಲ ಎಂದು ಕೆಲಸದಿಂದ ದೂರ ಉಳಿದಿದ್ದರು. ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಸಿಇಒ ಅಧ್ಯಕ್ಷತೆಯಲ್ಲಿ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ಸಭೆ ನಡೆಸಲಾಯಿತು.

'ಬಿಲ್ ಪಾವತಿಯಾಗಿಲ್ಲ ಎಂಬುದು ನಿಜ. ಅಕ್ಟೋಬರ್‌ನಿಂದ ಬಿಲ್ ಪಾವತಿಯಾಗಿರಲಿಲ್ಲ. ಮೂರು ತಿಂಗಳ ಬಿಲ್ ಬಾಕಿಯನ್ನು ಪಾವತಿಸುವ ಪ್ರಕ್ರಿಯೆ ಆರಂಭವಾಗಿದೆ. ಶುಕ್ರವಾರದ ಸಂಜೆಯೊಳಗೆ ಬಿಲ್ ಪಾವತಿಸಿರುವ ಎಲ್ಲ ಗುತ್ತಿಗೆದಾರರ ಖಾತೆಗೆ ಹಣ ವರ್ಗಾವಣೆಯಾಗಲಿದೆ' ಎಂದು ಕರೀಗೌಡ ಮಾಹಿತಿ ನೀಡಿದರು.

ಕರೀಗೌಡ

'ಕಸವನ್ನು ಮನೆಗಳಿಂದ ವಿಂಗಡಿಸಿಯೇ ಸಂಗ್ರಹಿಸಬೇಕು. ಆ ನಿಯಮಾವಳಿ ಪ್ರಕಾರವೇ ನಾವು ಕಾರ್ಯಾದೇಶ ನೀಡಿರುವುದು. ಕಾರ್ಮಿಕರಿಗೆ ಸೂಕ್ತ ದಿರಿಸುಗಳನ್ನು ನೀಡಿ, ಅದರಂತೆ ಕಾರ್ಯನಿರ್ವಹಿಸಬೇಕು. ಮನೆಯಿಂದ ಒಣ ಹಾಗೂ ಹಸಿ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿದರೆ ತ್ಯಾಜ್ಯವನ್ನು ಮುಟ್ಟುವ ಪ್ರಮೇಯವೇ ಬರುವುದಿಲ್ಲ. ಹೀಗಾಗಿ, ಚಿಂದಿ ಆಯುವ ಕೆಲಸ ಮಾಡಿ ಎಂದು ನಾವು ಹೇಳೇ ಇಲ್ಲ. ಇದನ್ನು ಗುತ್ತಿಗೆದಾರರಿಗೆ ಮನದಟ್ಟು ಮಾಡಿಕೊಡಲಾಗಿದ್ದು, ಅವರೆಲ್ಲ ಒಪ್ಪಿದ್ದಾರೆ. ಅಧಿಕಾರಿಗಳು–ಗುತ್ತಿಗೆದಾರರು ಸಹಯೋಗದಲ್ಲಿ ಕಾರ್ಯನಿರ್ವಹಿಸಿ ನಗರದ ತ್ಯಾಜ್ಯ ಸಮಸ್ಯೆಯನ್ನು ನಿವಾರಿಸಲು ಎಲ್ಲರೂ ಸಮ್ಮತಿಸಿದ್ದೇವೆ. ಶನಿವಾರವೂ ಹಲವು ಗುತ್ತಿಗೆದಾರರೊಂದಿಗೆ ಸಭೆ ನಡೆಸಲಿದ್ದೇವೆ' ಎಂದರು.

'ಡಿಸೆಂಬರ್‌ವರೆಗೆ ಬಿಲ್ ಪಾವತಿಸಲಾಗಿದೆ. ಇನ್ನೂ ಒಂದು ತಿಂಗಳ ಬಿಲ್ ಅನ್ನು ಸದ್ಯದಲ್ಲಿಯೇ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ನಗರದ ಎಲ್ಲೆಡೆ ಎಂದಿನಂತೆ ತ್ಯಾಜ್ಯ ವಿಲೇವಾರಿ ನಡೆಯುತ್ತಿದೆ' ಎಂದು ತಿಳಿಸಿದರು.

### 'ಸಭೆಯಿಂದ ಉಪಯೋಗವಿಲ್ಲ'

'ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ ಅವರು, ತಾವು ಮಾಡುತ್ತಿರುವ, ನೀಡಿರುವ ಆದೇಶವನ್ನು ಸಮರ್ಥಿಸಿಕೊಳ್ಳಲು ಸಭೆ ನಡೆಸಿದ್ದಾರೆ. ಇದರಿಂದ ಯಾವುದೇ ಪ್ರಯೋಜನವಾಗಿಲ್ಲ. ಅವರು ಮಾಡಿರುವ ನಿಯಮಗಳೇ ಸರಿ ಎಂದು ಹೇಳುತ್ತಿದ್ದಾರೆ, ನಮ್ಮ ಮಾತನ್ನು ಆಲಿಸುವ ಸೌಜನ್ಯವೂ ಇಲ್ಲ. ನನ್ನ ಖಾತೆಗೇ ಗುರುವಾರ ರಾತ್ರಿಯವರೆಗೂ ಬಿಲ್ ಹಣ ವರ್ಗಾವಣೆ ಆಗಿಲ್ಲ. ಬಿಲ್ ಪಾವತಿಯಾಗಿದೆ ಎಂದು ಸುಳ್ಳು ಹೇಳುತ್ತಿದ್ದಾರೆ' ಎಂದು ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು–ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ದೂರಿದರು.

## ಅಲೆಮಾರಿ ಸಮುದಾಯಗಳ ಹೋರಾಟ ಸಮಿತಿ ಆಗ್ರಹ

# 'ಎ' ವರ್ಗದಲ್ಲಿ ಶೇ 1ರಷ್ಟು ಮೀಸಲಾತಿ ನೀಡಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಿಶಿಷ್ಟ ಜಾತಿಯ 59 ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾಗಿ ಎ–ವರ್ಗದಲ್ಲಿ ಶೇ 1ರಷ್ಟು ಮೀಸಲಾತಿ ನೀಡುವಂತೆ ಆಗ್ರಹಿಸಿ ಪರಿಶಿಷ್ಟ ಜಾತಿಯ ಸೂಕ್ಷ್ಮ, ಅತಿ ಸೂಕ್ಷ್ಮ ಅಲೆಮಾರಿ ಸಮುದಾಯಗಳ ಒಳ ಮೀಸಲಾತಿ ಹೋರಾಟ ಸಮಿತಿ ಗುರುವಾರ ಪ್ರತಿಭಟನೆ ನಡೆಸಿತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಅಲೆಮಾರಿ ಸಮುದಾಯದ ಸದಸ್ಯರು ತಮ್ಮ ಸಾಂಪ್ರದಾಯಿಕ ಉಡುಪುಗಳನ್ನು ಧರಿಸಿ, ಶಂಖ, ಜಾಗಟೆ, ತಂಬೂರಿ ಬಾರಿಸಿ, ನ್ಯಾಯ ಒದಗಿಸುವಂತೆ ಮನವಿ ಮಾಡಿದರು.

'ಪರಿಶಿಷ್ಟ ಜಾತಿಗಳಲ್ಲಿ ಯಾವ ಸಮುದಾಯಗಳಿಗೆ ಮೀಸಲಾತಿಯು ಸೂಕ್ತವಾಗಿ ದೊರೆತಿಲ್ಲವೋ ಅಂತಹ ಸಮುದಾಯಗಳಿಗೆ ಅವಕಾಶ ಕಲ್ಪಿಸಬೇಕು. ಶಿಕ್ಷಣ, ಉದ್ಯೋಗ ಇತ್ಯಾದಿ ಕ್ಷೇತ್ರಗಳಲ್ಲಿ ಸಮಾನತೆ ಸಾಧಿಸುವಂತೆ ಮೀಸಲಾತಿ ಹಂಚಿಕೆ ಮಾಡಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪರಿಶಿಷ್ಟ ಜಾತಿಯ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಅಲೆಮಾರಿ ಸಮುದಾಯಗಳ ಒಳಮೀಸಲಾತಿ ಹೋರಾಟ ಸಮಿತಿ ನೇತೃತ್ವದಲ್ಲಿ ಗುರುವಾರ ಪ್ರತಿಭಟನೆ ನಡೆಯಿತು —ಪ್ರಜಾವಾಣಿ ಚಿತ್ರ

ಅಖಿಲ ಕರ್ನಾಟಕ ಹಂದಿ ಜೋಗಿ ಸಂಘದ ಅಧ್ಯಕ್ಷ ರಾಜೇಂದ್ರ ಕುಮಾರ್ ಮಾತನಾಡಿ, '2025ರ ಆಗಸ್ಟ್ 25ರಂದು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶದಲ್ಲಿ ಅಲೆಮಾರಿಗಳನ್ನು 'ಸಿ' ವರ್ಗದಲ್ಲೇ ಮುಂದುವರಿಸಿ ಅನ್ಯಾಯ ಮಾಡಿದೆ. ಒಳ ಮೀಸಲಾತಿ ಜಾರಿ ಕುರಿತು ಚರ್ಚಿಸಲು ಮಾರ್ಚ್ 27ರಂದು ವಿಶೇಷ ಸಚಿವ ಸಂಪುಟ ಸಭೆ ಕರೆಯಲಾಗಿದೆ. ಈ ಹಿಂದೆ ಅಲೆಮಾರಿಗಳಿಗೆ ಆಗಿರುವ ಅನ್ಯಾಯ ಸರಿಪಡಿಸಿ 'ಸಿ' ವರ್ಗದಿಂದ ಬೇರ್ಪಡಿಸಿ ಸುಪ್ರೀಂ ಕೋರ್ಟ್ ತೀರ್ಪಿನಂತೆ ಹಾಗೂ ಎಲ್ಲಾ ಆಯೋಗಗಳ ವರದಿಯಂತೆ 'ಎ' ವರ್ಗದಲ್ಲಿ ಪ್ರತ್ಯೇಕವಾಗಿ ಶೇಕಡ 1ರಷ್ಟು ಮೀಸಲಾತಿ ಕಲ್ಪಿಸಲು ಕ್ರಮ ವಹಿಸಬೇಕು' ಎಂದು ಒತ್ತಾಯಿಸಿದರು.

ಸಮಿತಿಯ ರಾಜ್ಯ ಪ್ರಧಾನ ಸಂಚಾಲಕ ವಿರೇಶ್ ಕೆ.ವಿಭೂತಿ ಮಾತನಾಡಿ, 'ಕೊರಮ, ಕೊರಚ ಸಮುದಾಯಗಳಿಗೆ ನಿವೇಶನ ಹಾಗೂ ಮೂಲ ಸೌಕರ್ಯಗಳಿಗೆ ₹500 ಕೋಟಿ ಅನುದಾನ ನೀಡುವ ಮೂಲಕ ಸಾಮಾಜಿಕ ನ್ಯಾಯ ಕಲ್ಪಿಸಬೇಕು' ಎಂದು ಮನವಿ ಮಾಡಿದರು.

ಸಚಿವರಾದ ಕೆ.ಎಚ್.ಮುನಿಯಪ್ಪ ಮತ್ತು ಎಂ.ಸಿ.ಸುಧಾಕರ್ ಸ್ಥಳಕ್ಕೆ ಭೇಟಿ ನೀಡಿ, ಮನವಿ ಸ್ವೀಕರಿಸಿದರು. 'ಅಲೆಮಾರಿ ಸಮುದಾಯಕ್ಕೆ ಶೇಕಡ 1ರಷ್ಟು ಮೀಸಲಾತಿ ನೀಡುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಚರ್ಚಿಸಿ, ನ್ಯಾಯ ಒದಗಿಸಲು ಪ್ರಯತ್ನಿಸಲಾಗುವುದು' ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಮಹಾಂತೇಶ್ ಸಣಕಲ್, ಶಿವಕುಮಾರ್, ಲೋಹಿತ್ ಪಾಲ್ಗೊಂಡಿದ್ದರು.

## ನಗರದಲ್ಲಿ ಇಂದು

**ಕಾಲೇಜು ದಿನದ ಸಮಾರಂಭ:** ಅತಿಥಿಗಳು: ಡಿ.ಕೆ. ಶಿವಕುಮಾರ್, ಪ್ರಿಯಕೃಷ್ಣ, ಆರ್. ಮನೋಹರ್, ಮೊಹಮ್ಮದ್ ಸುಜೀತ, ಅಧ್ಯಕ್ಷತೆ: ಮೇರಿ ಲೂಯಿಸ್ ಎಸ್., ಆಯೋಜನೆ ಹಾಗೂ ಸ್ಥಳ: ಜ್ಯೋತಿ ನಿವಾಸ್ ಕಾಲೇಜು, ಬೆಳಿಗ್ಗೆ 10.30

**ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ 'ಮ್ಯಾಕ್‌ಬತ್ ಮಹಾಭದ್ರನ ಮಹಾಗಾಥೆ' ಮೂಡಲಪಾಯ ಯಕ್ಷಗಾನ ಶೈಲಿಯ ಏಕವ್ಯಕ್ತಿ ಪ್ರದರ್ಶನ:** ಸಂಪಿಗೆ ತೋಂಟದಾರ್ಯ, ಡಿ.ಬಿ. ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಕುರುವ ಬಸವರಾಜ್, ರಜನಿಕಾಂತ್, ಪ್ರಶಾಂತ್, ನಿರ್ಮಲ ನಾದನ್, ಆಯೋಜನೆ: ರಂಗಮಂಡಲ, ಶುಭದ ಟ್ರಸ್ಟ್, ಸ್ಥಳ: ಸಿವಗಂಗಾ ರಂಗಮಂದಿರ, ಮಧ್ಯಾಹ್ನ 3.30

**'ಶ್ರೀ ಸಂತ ಸೇವಾಲಾಲ್ ಪ್ರಶಸ್ತಿ' ಪ್ರದಾನ, ಬಂಜಾರ ಸಾಂಸ್ಕೃತಿಕ ಉತ್ಸವ:** ಉದ್ಘಾಟನೆ: ಸಿದ್ದರಾಮಯ್ಯ, ಪ್ರಶಸ್ತಿ ಪ್ರದಾನ: ಡಿ.ಕೆ. ಶಿವಕುಮಾರ್, ಪ್ರಶಸ್ತಿ ಪುರಸ್ಕೃತರ ಕಿರು ಪುಸ್ತಕ ಬಿಡುಗಡೆ: ಶಿವರಾಜ ಎಸ್. ತಂಗಡಗಿ, ಉಪಸ್ಥಿತಿ: ರುದ್ರಪ್ಪ ಲಮಾಣಿ, ಅಧ್ಯಕ್ಷತೆ: ಉದಯ ಬಿ. ಗರುಡಾಚಾರ್, ಅತಿಥಿಗಳು: ಹಂಪ ನಾಗರಾಜಯ್ಯ, ಬಿ.ಟಿ. ಲಲಿತಾ ನಾಯಕ್, ಪ್ರಾಸ್ತಾವಿಕ ನುಡಿ: ಮೋತಿಲಾಲ ರೂ. ಚವ್ಹಾಣ, ಆಯೋಜನೆ: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4.30

**ಶ್ರೀಪಾದ ಭಟ್ ಅವರ 'ಉನ್ನತ ಶಿಕ್ಷಣ–ಒಳಗೂ ಹೊರಗೂ' ಪುಸ್ತಕ ಬಿಡುಗಡೆ:** ಬರಗೂರು ರಾಮಚಂದ್ರಪ್ಪ, ಪುಸ್ತಕದ ಕುರಿತು: ಎ. ನಾರಾಯಣ, ಅತಿಥಿಗಳು: ಬಿ. ರಮೇಶ್, ಕೆ.ಆರ್. ಜಲಜಾ, ವಿಚಾರ ಮಂಡನೆ: ನೇತ್ರಾವತಿ ಕೆ.ವಿ., ಪ್ರವೀಣ್ ತೆಲ್ಲಪಲ್ಲಿ, ರವಿಕುಮಾರ ಬಾಗಿ, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಆಯೋಜನೆ: ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಸ್ಥಳ: ಜ್ಞಾನಜ್ಯೋತಿ ಸಭಾಂಗಣದ ಸೆಮಿನಾರ್ ಹಾಲ್, ಸೆಂಟ್ರಲ್ ಕಾಲೇಜಿನ ಆವರಣ, ಸಂಜೆ 4.30

ಬರಗೂರು ರಾಮಚಂದ್ರಪ್ಪ

**ವಿಶ್ವ ರಂಗಭೂಮಿ ದಿನಾಚರಣೆ:** ಉದ್ಘಾಟನೆ: ಲಕ್ಷ್ಮೀ ಚಂದ್ರಶೇಖರ್, ಅತಿಥಿಗಳು: ಬಿ.ಎಸ್. ಮಂಜುನಾಥಸ್ವಾಮಿ, ಬಿ. ಸುರೇಶ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ರಂಗ ತಂಡಗಳು, ಸ್ಥಳ: ಸಂಸ ಬಯಲು ರಂಗ ಮಂದಿರ, ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ. ರಸ್ತೆ, ಸಂಜೆ 5

**ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ವಿಮಲಾ ರಂಗಚಾರ್ ಮತ್ತು ರಂಗಚಾರ್ ನಾಟಕೋತ್ಸವ:** ಉದ್ಘಾಟನೆ: ಕೆ. ರಾಮಕೃಷ್ಣಯ್ಯ, ಅಧ್ಯಕ್ಷತೆ: ಎಸ್.ಎಸ್. ರಾಮದಾಸ್, ಅತಿಥಿಗಳು: ರೇವತಿ ಸತ್ಯು, ನುಗ್ಗೆಹಳ್ಳಿ ಎನ್. ಸತ್ಯು, 'ಹುತ್ತದಲ್ಲಿ ಹುತ್ತ' ನಾಟಕ ಪ್ರದರ್ಶನ: ರಚನೆ: ಕೈಲಾಸಂ, ನಿರ್ದೇಶನ: ಅರ್ಚನಾ ಶಾಮ್, ಪ್ರಸ್ತುತಿ: ಅಂತರಂಗ, ಸ್ಥಳ: ಪ್ರೊ.ಬಿ.ಆರ್. ಶೇಷಾದ್ರಿ ಅಯ್ಯಂಗಾರ್ ಸಭಾಂಗಣ, ಎಂಇಎಸ್ ಕಿಶೋರ ಕೇಂದ್ರ, 10ನೇ ಮುಖ್ಯರಸ್ತೆ, ಮಲ್ಲೇಶ್ವರ, ಸಂಜೆ 6.30ರಿಂದ

### ರಾಮನವಮಿ ವಿಶೇಷ

**'ಶ್ರೀಮದ್ ರಾಮಾಯಣ' ಉಪನ್ಯಾಸ:** ಶ್ರೀರಾಮ ದೇವರಿಗೆ ವಿಶೇಷ ಅಭಿಷೇಕ, ಮಹಾಪುಷ್ಪಯಾಗ, ಆಯೋಜನೆ ಹಾಗೂ ಸ್ಥಳ: ಅಭಯ ಲಕ್ಷ್ಮೀ ನರಸಿಂಹ ಚಾರಿಟೇಬಲ್ ಟ್ರಸ್ಟ್, ತ್ಯಾಗರಾಜನಗರ, ಬೆಳಿಗ್ಗೆ 6

**ರಾಮನವಮಿ ಮಹೋತ್ಸವ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳು:** ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 8.30ರಿಂದ

**120ನೇ ವರ್ಷದ ಶ್ರೀರಾಮೋತ್ಸವ:** ಶ್ರೀರಾಮ ದೇವರ ವಿಗ್ರಹದ ಮೆರವಣಿಗೆ, 'ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ' ಪ್ರವಚನ: ಅಯನೂರು ಮಧುಸೂದನಾಚಾರ್, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಉಪ್ಪಳಪು ಶ್ರೀನಿವಾಸು ಮತ್ತು ತಂಡ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಐದನೇ ಅಡ್ಡ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 9ರಿಂದ

**ರಾಮನವಮಿ ಮಹೋತ್ಸವ:** ಅತಿಥಿಗಳು: ಡಿ.ವಿ. ಸದಾನಂದಗೌಡ, ವೈ.ಎ. ನಾರಾಯಣಸ್ವಾಮಿ. ಅಧ್ಯಕ್ಷತೆ: ಮಾಯಣ್ಣ, ಆಯೋಜನೆ ಹಾಗೂ ಸ್ಥಳ: ಗಂಗಾನಗರ ಬಡಾವಣೆಯ ಗೆಳೆಯರ ಬಳಗ, ಬಿನ್ನಿ ಮಿಲ್ ರಸ್ತೆ, ಗಂಗಾನಗರ. ಬೆಳಿಗ್ಗೆ 11ಕ್ಕೆ

**88ನೇ ಶ್ರೀರಾಮನವಮಿ ಸಂಗೀತೋತ್ಸವಕ್ಕೆ ಚಾಲನೆ:** ಜಿ. ಪರಮೇಶ್ವರ, ಅತಿಥಿಗಳು: ತ್ರಿಲೋಕಚಂದ್ರ ಕೆ.ವಿ., ಜೆ. ಮಂಜುನಾಥ್, 'ಚಿದಂಬರ ಗಣಪತಿಗಳ' ಪ್ರಶಸ್ತಿ ಸ್ವೀಕರಿಸುವವರು: ಅಭಿಷೇಕ್ ರಘುರಾಮ್, ಉಪಸ್ಥಿತಿ: ಸಿ.ಎಸ್. ಕೇದಾರ್, ಎನ್. ಶಿವಶೈಲಂ, ಬಿದರಿ ವಿಶಾಲ್, ಈ. ಕೃಷ್ಣನ್, ಲೀಲಾ ಕೃಷ್ಣನ್, ಪಿ. ಬಾಲಸುಬ್ರಮಣಿಯಂ, ಸಂಗೀತ ಕಛೇರಿ: ಅಭಿಷೇಕ್ ರಘುರಾಮ್, ಎಚ್.ಎಂ. ಸ್ಮಿತಾ, ಸುಮೇಶ್ ನಾರಾಯಣನ್, ಸುನಾದ ಆನೂರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 4.30ರಿಂದ

**26ನೇ ಶ್ರೀರಾಮ ನವಮಿ ಸಂಗೀತೋತ್ಸವ:** ಗಾಯನ: ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ ಅವರ ಶಿಷ್ಯವೃಂದ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ದೇವಸ್ಥಾನದ ಆವರಣ, ಎಂಟನೇ ಕ್ರಾಸ್, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

**ಶ್ರೀರಾಮ ನವಮಿ ಉತ್ಸವ:** ಭಜನೆ: ಸ್ತುತಿ ವಾಹಿನಿ ತಂಡ, ಭಗವದ್ಗೀತೆ ಶ್ಲೋಕಗಳ ಪಠಣ: ವೈನವಿ, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30

**33ನೇ ಶ್ರೀರಾಮನವಮಿ ಸಂಗೀತೋತ್ಸವ:** ಗಾಯನ: ಸುನಿಲ್ ಗಾರ್ಗ್ಯನ, ಪಿಟೀಲು: ಕೇಶವ್ ಮೋಹನ್ ಕುಮಾರ್, ಮೃದಂಗ: ಬಿ.ಎಸ್. ಪ್ರಶಾಂತ್, ಖಂಜೀರ: ಎ.ಎಸ್.ಎನ್. ಸ್ವಾಮಿ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30

**ಹರಿದಾಸ ವಾಣಿ:** ಗಾಯನ: ದಿವ್ಯಾ ಗಿರಿಧರ್, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಮಧುಸೂದನ್ ಕೊಪ್ಪ, ಕೊಳಲು: ಬಾಲಸುಬ್ರಹ್ಮಣ್ಯಂ, ಆಯೋಜನೆ ಮತ್ತು ಸ್ಥಳ: ಶ್ರೀರಾಮ ದೇವಸ್ಥಾನ, ಒಂಬತ್ತನೇ ಮುಖ್ಯರಸ್ತೆ, ವಯ್ಯಾಲಿ ಕಾವಲ್, ಸಂಜೆ 6.30

**'ಶ್ರೀ ರಾಮದರ್ಶನ (ಜಾಂಬವತಿ ಕಲ್ಯಾಣ)' ಯಕ್ಷಗಾನ ಪ್ರದರ್ಶನ:** ಆಯೋಜನೆ: ನಿರ್ಮಾಣ್ ಯಕ್ಷ ಬಳಗ, ಸ್ಥಳ: ಬಲಮುರಿ ಗಣಪತಿ ಮತ್ತು ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಡಬಲ್ ರಸ್ತೆ, ಜಿಗಣಿ, ಸಂಜೆ 7.30

**ವಿಶ್ವ ರಂಗಭೂಮಿ ದಿನ:** ಅತಿಥಿಗಳು: ಅಶೋಕ್ ನಿಟ್ಟೂರ್, ರೇಖಾ ಕೌಶಿಕ್ ಪಿ.ಆರ್., ನಟರಾಜ್ ಆರ್., ಅಧ್ಯಕ್ಷತೆ: ಎ.ಜಿ. ನಟರಾಜ್, ಆಯೋಜನೆ ಮತ್ತು ಸ್ಥಳ: ಬಿಇಎಸ್ ಕಲಾ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, ಜಯನಗರ ನಾಲ್ಕನೇ ಬ್ಲಾಕ್, ಸಂಜೆ 6.30

**'ಪರಿಸರದ ಕಥೆ' ನಾಟಕ ಪ್ರದರ್ಶನ:** ರಚನೆ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ನಿರ್ದೇಶನ: ಮನು ರಾಮಚಂದ್ರ, ಆಯೋಜನೆ: ದಾಟು ಥಿಯೇಟರ್, ಸ್ಥಳ: ವಿವೇಕ ಸಭಾಂಗಣ, ಯುವಪಥ, ಜಯನಗರ ನಾಲ್ಕನೇ ಬ್ಲಾಕ್, ಸಂಜೆ 7

**ಮುತ್ಯಾಲಮ್ಮ ದೇವಿ ರಥೋತ್ಸವ:** ಹೂವಿನ ಪಲ್ಲಕ್ಕಿ ಉತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಮುತ್ಯಾಲಮ್ಮ ಕೆ. ಸ್ಟ್ರೀಟ್, ಶಿವಾಜಿನಗರ, ಸಂಜೆ 7

**'ಈ ಕೆಳಗಿನವರು' ನಾಟಕ ಪ್ರದರ್ಶನ:** ನಿರ್ದೇಶನ: ವೀಣಾ ಶರ್ಮ ಭೂಸನೂರಮಠ, ಆಯೋಜನೆ ಮತ್ತು ಸ್ಥಳ: ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರದ ಆವರಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7



**ಕರಗ ಶಕ್ತ್ಯೋತ್ಸವ:** ಮಧ್ಯಾಹ್ನ 12.30ಕ್ಕೆ ಮುನೇಶ್ವರಸ್ವಾಮಿ, ಹೂವಿನ ತೋಟ ಲಾಲ್‌ಬಾಗ್ ರಸ್ತೆ, ವಿಶೇಷ ಪೂಜೆ, ಧರ್ಮರಾಯ ಸ್ವಾಮಿಗೆ ಅರಿಶಿನ ಅಲಂಕಾರ, ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ ಆವರಣ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

# ಅಪಘಾತ: ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಚ್‌ಎಎಲ್ ಬಳಿಯ ಸುರಂಜನ್ ದಾಸ್ ರಸ್ತೆಯಲ್ಲಿ ಬುಧವಾರ ರಾತ್ರಿ ಬೈಕ್ ಮತ್ತು ಸೈಕಲ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟಿದ್ದಾರೆ.

ಬಸವನಗರದ ನಿವಾಸಿ ಸ್ಟೀಫನ್ ಜಾರ್ಜ್ ಬಿನು (22) ಮೃತಪಟ್ಟವರು. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಸ್ಟೀಫನ್ ಅವರು, ಕೆಲಸ ಮುಗಿಸಿ ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದಾಗ ಅಪಘಾತ ಸಂಭವಿಸಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಸುರಂಜನ್ ದಾಸ್ ರಸ್ತೆಯಲ್ಲಿ ಸೈಕಲ್ ಸವಾರ ಏಕಾಏಕಿ ಸ್ಟೀಫನ್ ಬೈಕ್‌ಗೆ ಅಡ್ಡ ಬಂದಿದ್ದ. ಸೈಕಲ್ ಸವಾರನಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಸ್ಟೀಫನ್ ಅವರ ಬೈಕ್ ಪಾದಚಾರಿ ಮಾರ್ಗಕ್ಕೆ ಡಿಕ್ಕಿಯಾಗಿತ್ತು. ಬೈಕ್‌ನಿಂದ ಬಿದ್ದು ಅವರ ತಲೆಗೆ ಗಾಯವಾಗಿತ್ತು. ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಅಧಿಕಾರಿ ಹೇಳಿದರು.

ಘಟನೆಯಲ್ಲಿ ಸೈಕಲ್ ಸವಾರ ಸಹ ಗಾಯಗೊಂಡಿದ್ದಾನೆ. ಸೈಕಲ್ ಸವಾರನ ಅಜಾಗರೂಕತೆಯೇ ಅಪಘಾತಕ್ಕೆ ಕಾರಣ ಎಂದು ಸಂಚಾರ ಪೊಲೀಸರು ಹೇಳಿದರು. ಎಚ್‌ಎಎಲ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಗೌರವಾನ್ವಿತ ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ.**
ಪಿ.ಟಿ.ಸಿ.ಎಲ್. ಮೇಲ್ಮನವಿ ನಂ.: 218/2025
ಮೇಲ್ಮನವಿದಾರರು: ಸೈಯದ್ ಹಿದಾಯತ್ ವುಲ್ಲಾ
ವಿರುದ್ಧ
ಪ್ರತಿವಾದಿಗಳು: ಮಾನ್ಯ ಸಹಾಯಕ ಕಮೀಷನರ್‌ರವರು, ಕೋಲಾರ ಉಪ ವಿಭಾಗ, ಕೋಲಾರ ಮತ್ತು ಇತರರು
5) ವೆಂಕಟೇಶಪ್ಪ, ಬಿನ್ ತಿಮ್ಮರಾಯಪ್ಪ, ಸುಮಾರು 53 ವರ್ಷ ವಯಸ್ಸು, 6) ಕಥಿರಮ್ಮ ಕೋಂ. ವೆಂಕಟೇಶಪ್ಪ, ಸುಮಾರು 46 ವರ್ಷ ವಯಸ್ಸು, ಮೇಲ್ಕಂಡವರ ವಿಳಾಸ: ದೆಬ್ಬನಹಳ್ಳಿ ಗ್ರಾಮ, ಬೂದಿಕೋಟೆ ಅಂಚೆ & ಹೋಬಳಿ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ. 7) ನಸೀರುಲ್ಲಾ ಶರೀಫ್ ಬಿನ್ ಅಮಾನುಲ್ಲಾ ಶರೀಫ್, ಸುಮಾರು 55 ವರ್ಷ ವಯಸ್ಸು, ವಾಸ: ನಂ. 19/1, 'ಎ' ಕಾಕ್ಸ್ ರಸ್ತೆ, ತಿಮ್ಮಯ್ಯ ರಸ್ತೆ ತಿರುವು, ಶಿವಾಜಿನಗರ, ಬೆಂಗಳೂರು–1.

**ಪತ್ರಿಕಾ ಪ್ರಕಟಣೆ**

ಈ ಮೂಲಕ ಮೇಲ್ಕಂಡ 5 ರಿಂದ 7 ರವರೆಗಿನ ಪ್ರತಿವಾದಿಗಳಾದ ನಿಮಗೆ ತಿಳಿಯಪಡಿಸುವುದೇನೆಂದರೆ, ಈ ಮೇಲ್ಮನವಿಯಲ್ಲಿನ ಮೇಲ್ಮನವಿದಾರನಾದ ಸೈಯದ್ ಹಿದಾಯತ್‌ವುಲ್ಲಾರವರು ಈ ಕೇಸಿನ ಪ್ರತಿವಾದಿಗಳಾದ ಮಾನ್ಯ ಸಹಾಯಕ ಕಮೀಷನರ್ ಮತ್ತು ಇತರರ ವಿರುದ್ಧ "ಪಿ.ಟಿ.ಸಿ.ಎಲ್. 05/2016–17ರ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಮೇಲ್ಕಂಡ 5 ರಿಂದ 7ನೇ ಪ್ರತಿವಾದಿಗಳಾದ ನಿಮಗೆ ನ್ಯಾಯಾಲಯದ ಮೂಲಕ ಮತ್ತು ನೋಂದಾಯಿತ ಅಂಚೆಯ ಮೂಲಕ ಸಮನ್ಸ್ ನೀಡಿದ್ದು, ತಾವು ಸದರೀ ವಿಳಾಸಗಳಲ್ಲಿ ವಾಸವಿದ್ದರೂ ಸಹ, ಸಮನ್ಸ್‌ನ್ನು ಸ್ವೀಕರಿಸಿಲ್ಲ. ಆದ್ದರಿಂದ, ಈ ಪ್ರಕಟಣೆಯನ್ನು ನೀಡುತ್ತಿದ್ದು, ಸದರಿ ಪ್ರಕರಣವು ದಿನಾಂಕ 27–04–2026ರಂದು ನಿಮ್ಮ ಹಾಜರಾತಿಗಾಗಿ ಮೇಲ್ಕಂಡ ನ್ಯಾಯಾಲಯದಲ್ಲಿ ಗೊತ್ತುಪಡಿಸಲಾಗಿರುತ್ತದೆ. ಆದ್ದರಿಂದ ಈ ಪ್ರಕರಣಕ್ಕೆ ತಾವು ದಿನಾಂಕ 27–04–2026ರಂದು ಮಧ್ಯಾಹ್ನ 3.00 ಗಂಟೆಗೆ ಸದರೀ ನ್ಯಾಯಾಲಯದಲ್ಲಿ ಖುದ್ದಾಗಿಯಾಗಲೀ ಅಥವಾ ತಮ್ಮ ಪರ ವಕೀಲರ ಮೂಲಕವಾಗಲೀ ಭಾಗವಹಿಸಿ, ಸದರೀ ಪ್ರಕರಣದಲ್ಲಿ ತಕರಾರು ಅಥವಾ ಆಕ್ಷೇಪಣೆ ಏನಾದರೂ ಇದ್ದಲ್ಲಿ ಸಲ್ಲಿಸುವುದು. ತಪ್ಪಿದಲ್ಲಿ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳುವುದಾಗಿ ತಿಳಿಯಪಡಿಸಲಾಗಿದೆ.
ಈ ಪ್ರಕಟಣೆಯನ್ನು ನ್ಯಾಯಾಲಯದ ಆದೇಶದ ಮೇರೆಗೆ, ನನ್ನ ಸಹಿ ಮತ್ತು ಮೊಹರಿನೊಂದಿಗೆ 26–03–2026 ರಂದು ನೀಡಲಾಗಿದೆ.
**ನ್ಯಾಯಾಲಯದ ಆದೇಶದ ಮೇರೆಗೆ**
**ಜಿಲ್ಲಾಧಿಕಾರಿಗಳು, ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ.**
**ವಾದಿಪರ ವಕೀಲರು:ಸೈಯದ್ ರಫಿವುಲ್ಲಾ,** B.Com., LL.B., **ವಕೀಲರು, ಕೋಲಾರ, ಮೊ: 9972348041**

## ₹6 ಕೋಟಿ ಮೌಲ್ಯದ ಹೈಡ್ರೋಪೋನಿಕ್ ಗಾಂಜಾ ವಶ

**ದೇವನಹಳ್ಳಿ:** ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬ್ಯಾಂಕಾಕ್‌ನಿಂದ ಬಂದ ಇಬ್ಬರು ಪ್ರಯಾಣಿಕರಿಂದ ಕಸ್ಟಮ್ಸ್ ಅಧಿಕಾರಿಗಳು ₹5.79 ಕೋಟಿ ಮೌಲ್ಯದ ಹೈಡ್ರೋಪೋನಿಕ್ ಗಾಂಜಾ ಜಪ್ತಿ ಮಾಡಿದ್ದಾರೆ.

ಆರೋಪಿಗಳು ಬ್ಯಾಗ್‌ಗಳಲ್ಲಿ 16.54 ಕೆ.ಜಿ ಗಾಂಜಾ ಮುಚ್ಚಿಟ್ಟು ಕಳ್ಳಸಾಗಣೆಗೆ ಯತ್ನಿಸುತ್ತಿದ್ದರು. ಇಬ್ಬರನ್ನೂ ಬಂಧಿಸಿ, ಮಾದಕ ವಸ್ತುಗಳ ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಅಡಿ ಪ್ರಕರಣ ದಾಖಲಿಸಿ ಬಂಧಿಸಲಾಗಿದೆ.

## ರಾಡ್‌ನಿಂದ ಹೊಡೆದು ಕೊಲೆ

**ಆನೇಕಲ್:** ತಾಲ್ಲೂಕಿನ ಬನ್ನೇರುಘಟ್ಟ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಗುರುವಾರ ಕೌಟುಂಬಿಕ ವಿಚಾರಕ್ಕೆ ವ್ಯಕ್ತಿಯೊಬ್ಬ ತನ್ನ ಬಾಮೈದನನ್ನು ರಾಡ್‌ನಿಂದ ಹೊಡೆದು ಕೊಲೆ ಮಾಡಿ, ಹೆಣವನ್ನು ಕಾರಿನ ಡಿಕ್ಕಿಯಲ್ಲಿ ಹಾಕಿಕೊಂಡು ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದಾನೆ.

ಮರಸೂರು ಮೂಲದ ರಂಜಿತ್ (24) ಕೊಲೆಯಾದ ವ್ಯಕ್ತಿ. ಬೈರಪ್ಪನಹಳ್ಳಿಯ ನಿವಾಸಿ ಶ್ರೀನಿವಾಸ್ ಕೊಲೆ ಆರೋಪಿ. ಶ್ರೀನಿವಾಸ್ ಅವರ ಸಹೋದರಿ ಕೋಮಲ, ರಂಜಿತ್‌ನೊಂದಿಗೆ ಪರಾರಿಯಾಗಿದ್ದರು ಎನ್ನಲಾಗಿದೆ. ಹೀಗಾಗಿ, ಗಲಾಟೆ ನಡೆದಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

# ಜೋಡಿ ಕೊಲೆ: ಆರೋಪಿ ಸೆರೆ

## ಪತಿಯೊಂದಿಗೆ ಸಲುಗೆ ಹೊಂದಿದ್ದ ಮಹಿಳೆ ಪ್ರಶ್ನಿಸಲು ತೆರಳಿದ್ದ ವೇಳೆ ನಡೆದ ಕೃತ್ಯ

ಪ್ರಜಾವಾಣಿ ವಾರ್ತೆ

ಯಮುನಾ

ಸುದೀಪ್

**ಪೀಣ್ಯ ದಾಸರಹಳ್ಳಿ:** ಪತಿಯ ಜತೆಗೆ ಸಲುಗೆ ಹೊಂದಿದ್ದ ಮಹಿಳೆಯನ್ನು ಪ್ರಶ್ನಿಸಲು ಹೋಗಿದ್ದ ಪತ್ನಿ, ಭಾಮೈದುನನ್ನು 16 ವರ್ಷದವನು ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಪೀಣ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಎಚ್‌ಎಂಟಿ ಬಡಾವಣೆಯಲ್ಲಿ ಗುರುವಾರ ಬೆಳಿಗ್ಗೆ ನಡೆದಿದೆ.

ಯಮುನಾ(36) ಮತ್ತು ಅವರ ತಮ್ಮ ಸುದೀಪ್ (34) ಕೊಲೆಯಾದವರು. ತಿಗಳರಪಾಳ್ಯದ ನಿವಾಸಿ ಛಾಯಾ ಅವರ ಪುತ್ರನನ್ನು ಪೀಣ್ಯ ಪೊಲೀಸರು ಬಂಧಿಸಿದ್ದಾರೆ. ಛಾಯಾ ಅವರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

'ಮಲ್ಲೇಗೌಡ– ಯಮುನಾ ದಂಪತಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ. ಆ ಕುಟುಂಬವು ತಿಗಳರಪಾಳ್ಯದಲ್ಲಿ ಮೊದಲು ನೆಲಸಿತ್ತು. ದಂಪತಿ ಮನೆಯ ಎದುರೇ ಛಾಯಾ ಅವರ ಮನೆಯಿತ್ತು. ಆ ಸಂದರ್ಭದಲ್ಲಿ ಮಲ್ಲೇಗೌಡ ಮತ್ತು ಛಾಯಾ ಅವರ ನಡುವೆ ಸಲುಗೆ ಏರ್ಪಟ್ಟಿತ್ತು. ಇದೇ ವಿಚಾರಕ್ಕೆ ದಂಪತಿಯ ನಡುವೆ ಗಲಾಟೆ ನಡೆದಿತ್ತು. ಬ್ಯಾಡರಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಲಾಗಿತ್ತು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮೂವರನ್ನೂ ಕರೆಸಿ ಬುದ್ಧಿಮಾತು ಹೇಳಿದ್ದರು' ಎಂದು ಮೂಲಗಳು ಹೇಳಿವೆ.

'ಎರಡು ತಿಂಗಳ ಹಿಂದೆ ಮಲ್ಲೇಗೌಡ ಕುಟುಂಬವು ಎಚ್‌ಎಂಟಿ ಬಡಾವಣೆಗೆ ಸ್ಥಳಾಂತರ ಗೊಂಡಿತ್ತು. ಮನೆ ಸ್ಥಳಾಂತರ ಗೊಂಡಿದ್ದರೂ ಮಲ್ಲೇಗೌಡ ಅವರು ಛಾಯಾ ಅವರ ಮನೆಗೆ ಹೋಗಿ ಬರುವುದನ್ನು ಬಿಟ್ಟಿರಲಿಲ್ಲ. ಈ ಕಾರಣಕ್ಕೆ ಗಲಾಟೆ ವಿಕೋಪಕ್ಕೆ ಹೋಗಿತ್ತು' ಎಂದು ಮೂಲಗಳು ತಿಳಿಸಿವೆ.

'ಯಮುನಾ ಮತ್ತು ಅವರ ತಮ್ಮ ಸುದೀಪ್, ಈ ಸಂಬಂಧವನ್ನು ಪ್ರಶ್ನಿಸಲು ಛಾಯಾ ಅವರ ಮನೆಗೆ ಗುರುವಾರ ಬೆಳಿಗ್ಗೆ ಹೋಗಿದ್ದರು. ಆಗ ಗಲಾಟೆ ನಡೆದಿತ್ತು. ಯಮುನಾ ಮತ್ತು ಸುದೀಪ್ ಅವರು ಕೈಯಲ್ಲಿ ಚಾಕು ಹಿಡಿದು, ಛಾಯಾ ಅವರ ಮನೆಗೆ ನುಗ್ಗಿದ್ದರು. ಈ ವೇಳೆ ತನ್ನ ತಾಯಿ ಛಾಯಾಳನ್ನು ಕೊಲೆ ಮಾಡಬಹುದೆಂಬ ಭಯದಿಂದ ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಈ ಬಾಲಕ, ಅವರ ಕೈಯಲ್ಲಿದ್ದ ಚಾಕುವನ್ನೇ ಕಸಿದುಕೊಂಡು ಇಬ್ಬರಿಗೂ ಹತ್ತು ಬಾರಿ ಇರಿದು ಕೊಲೆ ಮಾಡಿದ್ದಾನೆ' ಎಂದು ಪೊಲೀಸರು ತಿಳಿಸಿದರು.

**ಅಪರಾಧ ಸುದ್ದಿ**

**ಕೃತ್ಯದ ಬಳಿಕ ಬಾಗಿಲು ಹಾಕಿಕೊಂಡಿದ್ದ:** ಕೊಲೆ ಮಾಡಿದ ನಂತರ ಗಾಬರಿಗೊಂಡಿದ್ದ ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಬಾಲಕ, ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡಿದ್ದ. ಸ್ಥಳಕ್ಕೆ ಪೀಣ್ಯ ಪೊಲೀಸರು ಬಂದರೂ ಬಾಗಿಲು ತೆಗೆದಿರಲಿಲ್ಲ. ನಂತರ, ತನ್ನ ತಂದೆ ಸ್ಥಳಕ್ಕೆ ಬಂದು ಹೇಳಿದ ಮೇಲೆ ಬಾಗಿಲು ತೆರೆದು ಹೊರಬಂದ. ಆಗ ವಶಕ್ಕೆ ಪಡೆದುಕೊಳ್ಳಲಾಯಿತು' ಎಂದು ಮೂಲಗಳು ಹೇಳಿವೆ.

'ನನ್ನ ತಂದೆ ಮತ್ತು ಛಾಯಾ ನಡುವೆ ಸಲುಗೆ ಇತ್ತು. ಪೊಲೀಸರಿಗೂ ದೂರು ನೀಡಿದ್ದೆವು. ಕೃತ್ಯ ಎಸಗಿದವನಿಗೆ ಶಿಕ್ಷೆ ಆಗಬೇಕು' ಎಂದು ಕೊಲೆಯಾದ ಯಮುನಾ ಅವರ ಪುತ್ರ ದೀಕ್ಷಿತ್ ಆಗ್ರಹಿಸಿದರು.

ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಬಂಧಿಸಿ, ವಿಚಾರಣೆ ನಡೆಸಲಾಗಿದೆ. ಕೃತ್ಯಕ್ಕೆ ಬಳಸಿದ ಚಾಕು ವಶಕ್ಕೆ ಪಡೆಯಲಾಗಿದೆ. ಕಾನೂನು ಪ್ರಕಾರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ವಾಯವ್ಯ ವಿಭಾಗದ ಡಿಸಿಪಿ ಡಿ.ಎಲ್.ನಾಗೇಶ್ ಮಾಹಿತಿ ನೀಡಿದರು.

'ನಮ್ಮ ಮಗಳನ್ನು ಸುದೀಪ್‌ಗೆ ಮದುವೆ ಮಾಡಿಕೊಟ್ಟಿದ್ದೆವು. ಮಗಳು ಗರ್ಭಿಣಿ. ಗುರುವಾರ ಬೆಳಿಗ್ಗೆ ಕಚೇರಿಗೆ ಹೋಗುವುದಾಗಿ ಸುದೀಪ್ ಮನೆಯಿಂದ ಹೊರಟಿದ್ದ. ಮಾರ್ಗ ಮಧ್ಯದಲ್ಲಿ ಅಕ್ಕನ ಮನೆಗೆ ಹೋಗಿದ್ದ. ಅಲ್ಲಿಂದ ಛಾಯಾ ಅವರ ಮನೆಗೆ ಇಬ್ಬರೂ ತೆರಳಿದ್ದರು' ಎಂದು ಮೃತ ಸುದೀಪ್ ಮಾವ ಸುರೇಶ್ ಹೇಳಿದರು.

### ಯಮುನಾ ಪುತ್ರಿ ಆತ್ಮಹತ್ಯೆಗೆ ಯತ್ನ

ತಾಯಿ ಯಮುನಾ ಕೊಲೆಯಾದ ಮಾಹಿತಿ ತಿಳಿಯುತ್ತಿದ್ದಂತೆಯೇ ಅವರ ಪುತ್ರಿ ಆತ್ಮಹತ್ಯೆಗೆ ಯತ್ನಿಸಿದ್ದರು. ಮನೆಯಲ್ಲಿ ಇದ್ದವರು ಆಕೆಯನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ.

# 2 ನಗರ ಪಾಲಿಕೆಗಳ ಬಜೆಟ್ ಇಂದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇಂದ್ರ ಹಾಗೂ ಪೂರ್ವ ನಗರ ಪಾಲಿಕೆಗಳ ಮೊದಲ ಬಜೆಟ್ ಶುಕ್ರವಾರ ಮಂಡನೆಯಾಗಲಿದೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆಯ 2026-27ನೇ ಸಾಲಿನ ಬಜೆಟ್ ಅನ್ನು ಆಯುಕ್ತ ರಾಜೇಂದ್ರ ಚೋಳನ್ ಅವರು ಪುರಭವನದಲ್ಲಿ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಮಂಡಿಸಲಿದ್ದಾರೆ. ಕೇಂದ್ರ ನಗರ ಪಾಲಿಕೆ ಬಜೆಟ್ ಮಂಡನೆಯನ್ನು ಯೂಟ್ಯೂಬ್‌ನಲ್ಲಿಯೂ (https://www.youtube.com/live/H1QL3UYk7NQ?si=-GR4jnb3i9szgaUw) ಪ್ರಸಾರ ಮಾಡಲಾಗುತ್ತದೆ.

ಬೆಂಗಳೂರು ಪೂರ್ವ ನಗರ ಪಾಲಿಕೆ 2026-27ನೇ ಸಾಲಿನ ಬಜೆಟ್ ಅನ್ನು ಆಯುಕ್ತ ಡಿ.ಎಸ್. ರಮೇಶ್ ಅವರು ಶುಕ್ರವಾರ ಬೆಳಿಗ್ಗೆ 9ಕ್ಕೆ ಮಂಡಿಸಲಿದ್ದಾರೆ. ಮಹದೇವಪುರದ ವೈಟ್‌ಫೀಲ್ಡ್ ಮುಖ್ಯರಸ್ತೆ, ಗರುಡಾಚಾರ್‌ಪಾಳ್ಯದಲ್ಲಿರುವ ಎಂ.ಎಲ್. ಆರ್ ಕನ್ವೆನ್ಷನ್ ಸೆಂಟರ್‌ನಲ್ಲಿ ಬಜೆಟ್ ಮಂಡನೆಯಾಗಲಿದೆ. ಪೂರ್ವ ನಗರ ಪಾಲಿಕೆ ಬಜೆಟ್ ಅನ್ನು ಯೂಟ್ಯೂಬ್‌ನಲ್ಲಿ (https://www.youtube.com/live/DXG4GnwuEuM?si=DD3pZvV24L_LTR6f) ವೀಕ್ಷಿಸಬಹುದು.

ಆಯವ್ಯಯ ಪ್ರಸ್ತುತಪಡಿಸುವ ಸಭೆಯಲ್ಲಿ ಆಯಾ ನಗರ ಪಾಲಿಕೆ ವ್ಯಾಪ್ತಿಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ- ಸಂಸ್ಥೆಗಳು, ಎನ್‌ಜಿಒಗಳು, ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

**ನಾಳೆ ಮೂರು:** ಬೆಂಗಳೂರು ಉತ್ತರ, ದಕ್ಷಿಣ ಹಾಗೂ ಪಶ್ಚಿಮ ನಗರ ಪಾಲಿಕೆಗಳ ಬಜೆಟ್ ಮಾರ್ಚ್ 28ರ ಶನಿವಾರ ಮಂಡನೆಯಾಗಲಿದೆ.

ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರು ಯಲಹಂಕ ಉಪನಗರದಲ್ಲಿರುವ ಅಂಬೇಡ್ಕರ್ ಭವನದಲ್ಲಿ ಶನಿವಾರ ಬೆಳಿಗ್ಗೆ 9.30ಕ್ಕೆ ಬಜೆಟ್ ಮಂಡಿಸಲಿದ್ದಾರೆ.

ಪಶ್ಚಿಮ ನಗರ ಪಾಲಿಕೆಯ ಆಯುಕ್ತ ಕೆ.ವಿ. ರಾಜೇಂದ್ರ ಅವರು ಮಲ್ಲೇಶ್ವರದಲ್ಲಿರುವ ಬೆಂಗಳೂರು ಜಲಮಂಡಳಿಯ ಸುವರ್ಣ ಭವನದಲ್ಲಿ ಶನಿವಾರ ಮಧ್ಯಾಹ್ನ 12.30ಕ್ಕೆ ಹಾಗೂ ದಕ್ಷಿಣ ನಗರ ಪಾಲಿಕೆಯ ಆಯುಕ್ತ ಕೆ.ಎನ್. ರಮೇಶ್ ಅವರು ಬನಶಂಕರಿ ದೇವಸ್ಥಾನದ ಸಮೀಪವಿರುವ ನಗರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ಮಧ್ಯಾಹ್ನ 2.30ಕ್ಕೆ ಬಜೆಟ್ ಮಂಡಿಸಲಿದ್ದಾರೆ.

# ವಿದ್ಯಾರ್ಥಿನಿಗೆ ಪ್ರೇಮ ನಿವೇದನೆ: ಪ್ರಾಧ್ಯಾಪಕನಿಗೆ ಥಳಿತ

ಪ್ರಜಾವಾಣಿ ವಾರ್ತೆ

**ನೆಲಮಂಗಲ:** ಗೃಹ ಸಚಿವ ಜಿ.ಪರಮೇಶ್ವರ ಒಡೆತನದ ಸಿದ್ಧಾರ್ಥ ಮೆಡಿಕಲ್ ಕಾಲೇಜಿನ ತರಗತಿಯಲ್ಲಿ ಎಲ್ಲ ಸಹ ವಿದ್ಯಾರ್ಥಿಗಳ ಸಮ್ಮುಖದಲ್ಲಿ ವಿದ್ಯಾರ್ಥಿನಿಗೆ ಪ್ರಾಧ್ಯಾಪಕ ಅಬ್ದುಲ್ ಎಂಬುವವರು ಪ್ರೇಮ ನಿವೇದನೆ ಮಾಡಿದ್ದು, ಇದರಿಂದ ಆಕ್ರೋಶಗೊಂಡ ವಿದ್ಯಾರ್ಥಿಗಳು ಪ್ರಾಧ್ಯಾಪಕನಿಗೆ ಥಳಿಸಿದ್ದಾರೆ. ಅಲ್ಲದೇ ವಿದ್ಯಾರ್ಥಿನಿಯೂ ಚಪ್ಪಲಿ ಏಟು ನೀಡಿದ್ದಾರೆ.

ಕಾಲೇಜು ಆಡಳಿತ ಮಂಡಳಿ ದೂರಿನ ಮೇರೆಗೆ ಪ್ರಾಧ್ಯಾಪಕನ ವಿರುದ್ಧ ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತರಗತಿಗೆ ಬಂದ ಪ್ರಾಧ್ಯಾಪಕ ಅಬ್ದುಲ್ ಅವರು, 'ನೀನು ನನಗೆ ಪ್ರೇಮ ನಿವೇದನೆ ಮಾಡಿಕೊಂಡಿದ್ದೀಯ. ನಿನ್ನ ಪ್ರೇಮ ನಿವೇದನೆಯನ್ನು ಒಪ್ಪಿ ನಿನ್ನನ್ನು ಪ್ರೀತಿಸುತ್ತಿದ್ದೇನೆ. ಎಲ್ಲರಿಗೂ ಚಾಕೊಲೇಟ್ ಕೊಡುತ್ತೇನೆ' ಎಂದಿದ್ದರು. 'ನಾನು ಯಾವಾಗ ಪ್ರೇಮ ನಿವೇದನೆ ಮಾಡಿಕೊಂಡಿದ್ದೆ' ಎಂದು ವಿದ್ಯಾರ್ಥಿನಿ ಪ್ರಶ್ನಿಸಿದ್ದರು. ಅದಕ್ಕೆ ವಿಡಿಯೊ ಸಾಕ್ಷ್ಯ ಇದೆ ಎಂದು ಹೇಳಿ ಪ್ರಾಧ್ಯಾಪಕ ಹೊರಗಡೆ ಹೋಗಿದ್ದರು. ಅಲ್ಲೇ ಇದ್ದ ವಿದ್ಯಾರ್ಥಿಗಳು ಪ್ರಾಧ್ಯಾಪಕರನ್ನು ಹಿಡಿದು ಥಳಿಸಿದ್ದಾರೆ. ಅಷ್ಟರಲ್ಲಿ ಬೇರೆ ವಿಭಾಗದ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಭದ್ರತಾ ಸಿಬ್ಬಂದಿ ಬಂದು ಗಲಾಟೆ ಬಿಡಿಸಿದ್ದಾರೆ. ಬಳಿಕ ಅಬ್ದುಲ್ ಅವರ ವಿರುದ್ಧ ದೂರು ನೀಡಲಾಗಿದೆ.

'ಪ್ರಾಧ್ಯಾಪಕನನ್ನು ವಜಾ ಮಾಡಲಾಗುವುದು' ಎಂದು ಕಾಲೇಜು ಆಡಳಿತ ಮಂಡಳಿ ತಿಳಿಸಿದೆ.

ಅಬ್ದುಲ್

ಐಪಿಎಲ್ ಬೆಟ್ಟಿಂಗ್: ದಂಧೆಗೆ ಕಡಿವಾಣ ಹಾಕಲು ಕ್ರಮ

# ಪಂಟರ್, ಆ್ಯಪ್ ಮೇಲೆ ನಿಗಾ

• ಆದಿತ್ಯ ಕೆ.ಎ.

**ಬೆಂಗಳೂರು:** ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿ ವೇಳೆ ಬೆಟ್ಟಿಂಗ್ ದಂಧೆಗೆ ಕಡಿವಾಣ ಹಾಕಲು ರಾಜ್ಯದ ಪೊಲೀಸ್ ಠಾಣೆಗಳಲ್ಲಿ ವಿಶೇಷ ತಂಡಗಳನ್ನು ರಚಿಸಲಾಗಿದೆ. ಆ ತಂಡಗಳು ಪಂಟರ್‌ಗಳು, ಬೆಟ್ಟಿಂಗ್ ಆ್ಯಪ್–ವೆಬ್‌ಸೈಟ್‌ಗಳ ಮೇಲೆ ನಿಗಾ ವಹಿಸಲಿವೆ.

ಮಾರ್ಚ್ 28ರಿಂದ ಮೇ 31ರ ವರೆಗೆ ಟೂರ್ನಿ ನಡೆಯಲಿದ್ದು, ಈ ಹೊತ್ತಿನಲ್ಲಿ ಬೆಟ್ಟಿಂಗ್ ಭರಾಟೆ ನಡೆಯುವ ಸಾಧ್ಯತೆಯಿದೆ.

2023ರ ಜನವರಿಯಿಂದ 2026ರ ಫೆಬ್ರುವರಿವರೆಗೆ ರಾಜ್ಯದಾದ್ಯಂತ 1,198 ಪ್ರಕರಣಗಳು ದಾಖಲಾಗಿದ್ದವು. ಈ ಅವಧಿಯಲ್ಲಿ ಹುಬ್ಬಳ್ಳಿ-ಧಾರವಾಡ, ಬೆಂಗಳೂರಿನಲ್ಲಿಯೇ ಹೆಚ್ಚಿನ ಪ್ರಕರಣಗಳು ದಾಖಲಾಗಿವೆ. ಅಲ್ಲದೇ, ಕೋಟ್ಯಂತರ ರೂಪಾಯಿ ವ್ಯವಹಾರ ನಡೆದಿರುವುದೂ ಈ ನಗರಗಳಲ್ಲಿ ಪತ್ತೆಯಾಗಿದೆ. ಹೀಗಾಗಿ, ಬೆಂಗಳೂರು ಹಾಗೂ ಹುಬ್ಬಳ್ಳಿ- ಧಾರವಾಡದಲ್ಲಿ ಸಿಸಿಬಿ ಪೊಲೀಸರು ವಿಶೇಷ ಕಾರ್ಯಾಚರಣೆಯ ಮೂಲಕ ಪಂಟರ್‌ಗಳು, ಬೆಟ್ಟಿಂಗ್‌ನಲ್ಲಿ ಹಣ ತೊಡಗಿಸುವವರಿಗೆ ಈ ಬಾರಿ 'ಬಿಸಿ' ಮುಟ್ಟಿಸಲು ಮುಂದಾಗಿದ್ದಾರೆ.

'ಐಪಿಎಲ್ ಬೆಟ್ಟಿಂಗ್ ಗೀಳಿನಿಂದಾಗಿ ವಿಪರೀತ ಸಾಲ ಮಾಡಿ, ಕೆಲವರು ಆತ್ಮಹತ್ಯೆಯನ್ನೂ ಮಾಡಿಕೊಂಡಿದ್ದಾರೆ. ಈ ವರ್ಷ ಬೆಟ್ಟಿಂಗ್ ದಂಧೆ ನಡೆಯದಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ' ಎಂದು ಅಧಿಕಾರಿ ಹೇಳಿದರು.

'ಪಂದ್ಯ ನಡೆಯುವ ದಿನಗಳಂದು ಸಂಜೆ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಮಿಕರು, ಕ್ರಿಕೆಟ್ ಪ್ರೇಮಿಗಳು, ಸಣ್ಣಪುಟ್ಟ ವ್ಯಾಪಾರಿಗಳು ಒಂದೆಡೆ ಜಮಾವಣೆ ಆಗುತ್ತಾರೆ. ಹೋಟೆಲ್, ಲಾಡ್ಜ್‌ಗಳು, ಮೊಬೈಲ್ ಶಾಪ್, ಪಾನ್ ಅಂಗಡಿಗಳ ಬಳಿ ಆನ್‌ಲೈನ್ ಮೂಲಕ ಹಣ ಹಾಕುತ್ತಿರುವುದು ಕಂಡು ಬರುತ್ತಿದೆ. ಈ ಬಾರಿ ಅಂತಹ ಪ್ರದೇಶಗಳ ಮೇಲೆ ನಿಗಾ ಇಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

**ಪುತ್ರನ ಸಾಲ ತೀರಿಸಿದ್ದ ತಂದೆ:** ಶಿವಮೊಗ್ಗದವರಾದ ಮೂರ್ತಿ ಅವರು ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದು, ಬೆಂಗಳೂರಿನ ಹೊಂಗಸಂದ್ರದಲ್ಲಿ ವಾಸವಾಗಿದ್ದರು. 2025ರ ಐಪಿಎಲ್ ಟೂರ್ನಿ ವೇಳೆ ಆನ್‌ಲೈನ್ ಬೆಟ್ಟಿಂಗ್ ಆಡಿ, ಲಕ್ಷಾಂತರ ರೂಪಾಯಿ ಕಳೆದುಕೊಂಡಿದ್ದರು. ಪುತ್ರನ ಸಾಲ ತೀರಿಸುವ ಸಲುವಾಗಿ, ಅವರ ತಂದೆ ಜಮೀನು ಮಾರಾಟ ಮಾಡಿ ₹25 ಲಕ್ಷ ನೀಡಿದ್ದರು. ಬಳಿಕ ಜೀವನ ನಿರ್ವಹಣೆಗಾಗಿ ಶಿವಮೊಗ್ಗದಿಂದ ಬೆಂಗಳೂರಿಗೆ ಬಂದು ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡಿದ್ದರು' ಎಂದು ಅಧಿಕಾರಿ ಹೇಳಿದರು.

'ತಂದೆ ಜಮೀನು ಮಾರಾಟ ಮಾಡಿದ್ದರೂ ಪುತ್ರನ ಆನ್‌ಲೈನ್ ಬೆಟ್ಟಿಂಗ್ ವ್ಯಾಮೋಹ ಕಡಿಮೆ ಆಗಿರಲಿಲ್ಲ. ಮೂರ್ತಿ ಮತ್ತಷ್ಟು ಹಣ ಕಳೆದುಕೊಂಡಿದ್ದರು. ಬಳಿಕ ಸಾಲ ತೀರಿಸಲು ಸಾಧ್ಯವಾಗದೇ ಸಾಫ್ಟ್‌ವೇರ್ ಎಂಜಿನಿಯರ್ ಕೆಲಸ ಬಿಟ್ಟು ವಿವಿಧೆಡೆ ಕಳ್ಳತನ ಮಾಡಿದ್ದರು. ಬಳಿಕ ಕಳ್ಳತನ ಪ್ರಕರಣದಲ್ಲಿ ಮೂರ್ತಿ ಅವರನ್ನು ಮಾಗಡಿ ಠಾಣೆಯ ಪೊಲೀಸರು ಬಂಧಿಸಿದ್ದರು. ಹೀಗೆ ಬೆಟ್ಟಿಂಗ್ ದಂಧೆ ಕುಟುಂಬವನ್ನು ಬೀದಿಗೆ ತರುತ್ತಿದೆ. ಸಾಮಾಜಿಕ ಜಾಲತಾಣದ ಮೂಲಕ ಬೆಟ್ಟಿಂಗ್ ದಂಧೆಯಲ್ಲಿ ಭಾಗಿ ಆಗದಂತೆ ಅರಿವು ಮೂಡಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

### ಹೇಗೆ ನಡೆಯುತ್ತದೆ ಬೆಟ್ಟಿಂಗ್?

ಬೆಟ್ಟಿಂಗ್ ವ್ಯವಹಾರವು ಬರೀ ತಂಡಗಳ ಸೋಲು–ಗೆಲುವು ಆಧರಿಸಿ ನಡೆಯುವುದಿಲ್ಲ. ಫೋರ್, ಸಿಕ್ಸ್, ನೋ ಬಾಲ್, ವೈಡ್ ಎಸೆತದ ಮೇಲೆ ಬೆಟ್ಟಿಂಗ್ ನಡೆಯುತ್ತದೆ. ಕ್ಷಣಕ್ಷಣಕ್ಕೂ ಹಣ ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಗೋವಾ, ದುಬೈನ ಸ್ಟಾರ್ ಹೋಟೆಲ್‌ಗಳಲ್ಲಿ ಕುಳಿತು ಪಂಟರ್‌ಗಳು ದಂಧೆ ನಡೆಸುತ್ತಾರೆ.

ಮೈದಾನದಲ್ಲಿ ಕುಳಿತು ವೀಕ್ಷಿಸುವ ಪಂದ್ಯಕ್ಕೂ, ಟಿ.ವಿ ನೇರಪ್ರಸಾರಕ್ಕೂ ಕೆಲವು ಸೆಕೆಂಡ್ ಅಂತರ ಇರುತ್ತದೆ. ಅದನ್ನೇ ಬಂಡವಾಳ ಮಾಡಿಕೊಂಡು ಪಂಟರ್‌ಗಳು ಹಣ ದೋಚುತ್ತಾರೆ. ಕಳೆದ ವರ್ಷ ಪಂಟರ್‌ಗಳಿಗೆ ಮಾಹಿತಿ ನೀಡುತ್ತಿದ್ದ ಆರು ಮಧ್ಯವರ್ತಿಗಳನ್ನು ಬೆಂಗಳೂರಿನಲ್ಲಿ ಬಂಧಿಸಲಾಗಿತ್ತು ಎಂದು ಮೂಲಗಳು ಹೇಳಿವೆ.

**ನಾಲ್ಕು ವರ್ಷದ ಪ್ರಕರಣಗಳು**

| ವರ್ಷ | ಪ್ರಕರಣಗಳು |
|---|---|
| 2023 | 357 |
| 2024 | 331 |
| 2025 | 503 |
| 2026 | 7 (ಫೆಬ್ರುವರಿ ಅಂತ್ಯಕ್ಕೆ) |

ಒಟ್ಟು 1,198

**ಅತಿಹೆಚ್ಚು ದಾಖಲಾದ ಪ್ರಕರಣಗಳ ವಿವರ**

| ಜಿಲ್ಲೆ/ ನಗರ | ಸಂಖ್ಯೆ |
|---|---|
| ಹುಬ್ಬಳ್ಳಿ- ಧಾರವಾಡ ನಗರ | 343 |
| ಬೆಂಗಳೂರು ನಗರ | 163 |
| ವಿಜಯನಗರ | 82 |
| ಬೀದರ್ | 77 |
| ಗದಗ | 73 |
| ಬಳ್ಳಾರಿ | 57 |
| ವಿಜಯಪುರ | 49 |
| ಕೋಲಾರ | 48 |
| ಕೊಪ್ಪಳ | 38 |
| ಬಾಗಲಕೋಟೆ | 27 |
| ದಾವಣಗೆರೆ | 27 |
| ಬೆಳಗಾವಿ ಜಿಲ್ಲೆ | 26 |
| ಯಾದಗಿರಿ | 23 |
| ಹಾವೇರಿ | 22 |
| ಉಡುಪಿ | 16 |
| ಚಿಕ್ಕಬಳ್ಳಾಪುರ | 15 |
| ಮೈಸೂರು ನಗರ | 9 |
| ಕಲಬುರಗಿ ನಗರ | 8 |

**ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ**
ಸಿ.ಎ. ನಿವೇಶನ ಖಾತೆ ನಂ.31–511–371, ವಾರ್ಡ್ ನಂ.20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.
ಸಂ: ಬಿಐಎಎಪಿಎ/ಟಿಪಿ/ಭೂಉಬ/145/2025–26/3612 ದಿನಾಂಕ:26.03.2026

**ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ ಸಂ | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ–ಗು | ಮಹಾ ಯೋಜನೆಯ ಪ್ರಕಾರ ಭೂಉಪಯೋಗ | ಬದಲಾವಣೆ ಕೋರಿರುವ ಭೂಉಪಯೋಗ |
|---|---|---|---|---|---|---|---|---|
| 1. | ಶ್ರೀ ಮುನೇಗೌಡ ಬಿನ್ ಲೇ॥ ಬಚ್ಚಣ್ಣ ಉ ಬಚ್ಚಪ್ಪ | ದೇವನಹಳ್ಳಿ | ಚನ್ನರಾಯ ಪಟ್ಟಣ | ಬೊಮ್ಮನಹಳ್ಳಿ | 27/4 | 0-06.12 | ವ್ಯವಸಾಯ | ವಸತಿ |
| 2. | Sri Prathapaneni Hinduja Datta D/o Markonda Naidu Prathapaneni @ Prathapaneni Markonda Naidu & Sri Prathapaneni Mohit Datta S/o Prathapaneni Markonda Naidu | | | | 28/1 | 0-7.08 | | |
| 3. | | | | | 28/2 | 1-12 | | |
| 4. | | | | | 29/7 | 0-18.12 | | |
| ಕ್ರ.ಸಂ. (1) ರ ಪರವಾಗಿ ನೊಂದಾಯಿತ ಪವರ್ ಆಫ್ ಅಟಾರ್ನಿದಾರರು Sri Prathapaneni Hinduja Datta D/o Markonda Naidu Prathapaneni @ Prathapaneni Markonda Naidu & Sri Prathapaneni Mohit Datta S/o Prathapaneni Markonda Naidu | | | | | | | | |

**ಷರಾ:–** ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಹಾಗೂ ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ಈಗಾಗಲೇ ವಸತಿ ಉದ್ದೇಶದ ಅಭಿವೃದ್ಧಿಗಳು ಬಂದಿರುವುದರಿಂದ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದು. ಸದರಿ ಜಮೀನುಗಳು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸದರಿ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಯೋಜನಾಬದ್ಧವಾಗಿ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ
ಡಿಐಪಿಆರ್/ಸಿಪಿ/6484/ಸಿಸಿಎಲ್/2025–26

CONNECT ಕ್ಲಾಸಿಫೈಡ್ಸ್

ಅದ್ಧೂರಿ ಉದ್ಘಾಟನೆ
ನಮ್ಮ 3ನೇ ಮಳಿಗೆ
MYSORE SILKS ಸೀರೆ ಉತ್ಸವ By Sulakshmi Silks
Opening Offer 60% off
ON PURE MYSORE CREPE SILK SAREE

ಸೀರೆ ಉತ್ಸವ-3 ನಮ್ಮೊಂದಿಗೆ ಸೇರಿ ಆಚರಿಸಿ
ನಮ್ಮ ಹೊಸ ಮಳಿಗೆಯಲ್ಲಿ 16 ರಿಂದ 31ನೇ ಮಾರ್ಚ್ 2026 ರ ವರೆಗೆ
SULAKSHMI SILKS
ಕರ್ನಾಟಕದ ಅತಿದೊಡ್ಡ ಸೀರೆ ಉತ್ಸವ
ಸಂಪರ್ಕಿಸಿ: 99727 18898 | 93531 38343 | 9886306643 | 96631 27606
ಸ್ಥಳ: ನಂ.119/1, ಶ್ರೀನಿಧಿ ಕಾಂಪ್ಲೆಕ್ಸ್, 11ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

Kalakruthi® Confluence of Arts, Crafts & Textiles presents
ಸಂತೆ santhe SHOPPING FESTIVAL
FREE ENTRY & PARKING
MAR 27TH TO APR 5TH
11 AM - 9 PM
V.V Convention Hall
BANASWADI RING ROAD, BABUSAPALYA, HORAMAVU
CONTACT - 8553836868
SCAN FOR LOCATION

Orchid TRAVEL & TOURS ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್
ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.
ರಿಯಾಯಿತಿ ದರದಲ್ಲಿ ಪ್ರವಾಸಗಳು–2026
ಬ್ಯೂಟಿಫುಲ್ ಬಾಲಿ
Bali (Indonesia Special)
ಕೈಲಾಸ ಮಾನಸ ಸರೋವರ ಯಾತ್ರೆ
14 ದಿನಗಳ ಮಹೋನ್ನತ ಯಾತ್ರೆ
14 Days Kailasa Manasa Sarovar Yathra
For Bookings contact :
98800 79588 / 99000 80793 / 99000 93615

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**REAL ESTATE SELLING**

Flat
Whitefield

SALE: PRESTIGE Park_View, Whitefield, 3BHK, 1839 SBUA, Semi-Furnished, 15th Floor, West Facing, Price- 2.75 CR, Call- 9108253029, 9108045702

Industrial & Factory
Tumkur Road

SALE/ BUILT to suit, 10 Acres Industrial Converted Land Suitable for Warehouse, Industry. Dabaspet 9141326819

**JOB OPPORTUNITIES**

Graphic Designers

REQUIRED GRAPHIC Designer- Photoshop/ Corel Draw/ Illustrator Experience 1 Year or above in around Rajajinagar. Contact: 9902891620/ 9845579620

HRD & Admin

WANTED Female Office Assistant Any Degree Knowing Tally, Fluent In English, Kannada, Hindi Around Rajajinagar Contact: 9902891620/ 9845579620

**AUTOMOTIVE**

Four Wheelers Selling
Others

AUDI-A6 MODEL 2017 1st OWNER, 17000 KM, WHITE COLOUR, FANCY NUMBER, Excellent condition: 9740999060

**PERSONAL**

Change of Name

CHANGE OF NAME
I, VICKY S/o Late Ganesh Victor, Residing at No.8, 1st Cross, Prajavani Layout, Rajivnagar Main Road, Devasandra, Bengaluru -560 036, have changed my name to VICKY G vide affidavit dated 26-03-2026 before notary S. I. Balaguru, Bengaluru. Henceforth I shall be called as VICKY G only.

CHANGE OF NAME
I, MAYURA RAM TEJA GANESHA, No. 06, 9th Cross, 1st Block, Akshaynagar, Ramamurthynagar, Bengaluru-560 016, have changed my name to MAYUR RAM TEJA GANESHA vide affidavit dated 13-03-2026 before notary Nijagunaradhya T.C. Bengaluru. Henceforth I shall be called MAYUR RAM TEJA GANESHA only

JOB
To Place your Classified Ads Contact:
9886213331

ಹೆಸರಿನ ಬದಲಾವಣೆ
ಕೊಪ್ಪಳ ಶ್ರೀ ಗವಿಸಿದ್ಧೇಶ್ವರ ಸಂಸ್ಥಾನ ಶ್ರೀಗವಿಮಠ ಶಾಖಾ ಮಠಗಳ ಪಟ್ಟಾಧಿಕಾರ ಮಹೋತ್ಸವ ದಿನಾಂಕ 11–02–2026 ಬುಧವಾರದ ನಂತರ **ಶ್ರೀ ವೀರೇಶ ಚಿದಾನಂದಯ್ಯ** (ಪೂರ್ವದ ಹೆಸರು) ಕುಟುಗನಹಳ್ಳಿ ಗೊರಲೆಕೊಪ್ಪಮಠ, ಕಂಪಸಾಗರ ತಾ:ಜಿಲ್ಲಾ: ಕೊಪ್ಪಳ. ಇವರ ಹೆಸರನ್ನು **ಶ್ರೀ ಶಿವಶಾಂತವೀರ ಸ್ವಾಮೀಜಿ** (ನೂತನ ಹೆಸರು) ಶ್ರೀ ಗವಿಸಿದ್ಧೇಶ್ವರ ಶಾಖಾಮಠ ಬಿಸರಳ್ಳಿ ತಾ:ಜಿಲ್ಲಾ:ಕೊಪ್ಪಳ ಎಂದು ನಾಮಕರಣ ಮಾಡಲಾಗಿದೆ. ಇದನ್ನು ಕೊಪ್ಪಳ ಉಪ ನೋಂದಣಾಧಿಕಾರಿಗಳಿಂದ ದಿನಾಂಕ: 03–03–2026 ರಂದು ನೋಂದಣಿ (ದಸ್ತಾವೇಜು ಸಂಖ್ಯೆ: ಪಿ 00558) ಮಾಡಲಾಗಿದೆ.

ಹೆಸರಿನ ಬದಲಾವಣೆ
ಕೊಪ್ಪಳ ಶ್ರೀ ಗವಿಸಿದ್ಧೇಶ್ವರ ಸಂಸ್ಥಾನ ಶ್ರೀಗವಿಮಠ ಶಾಖಾ ಮಠಗಳ ಪಟ್ಟಾಧಿಕಾರ ಮಹೋತ್ಸವ ದಿನಾಂಕ 11–02–2026 ಬುಧವಾರದ ನಂತರ **ಶ್ರೀ ಪ್ರಶಾಂತ ಬಸವರಾಜಯ್ಯ ಹಿರೇಮಠ** (ಪೂರ್ವದ ಹೆಸರು) ಬಿರಾಳ ಬಿ, ತಾಲೂಕು ಜೇವರಗಿ ಜಿಲ್ಲೆ ಕಲಬುರ್ಗಿ ಇವರ ಹೆಸರನ್ನು **ಶ್ರೀ ಮರಿಶಾಂತವೀರ ಸ್ವಾಮೀಜಿ** (ನೂತನ ಹೆಸರು) ಶ್ರೀ ಗವಿಸಿದ್ಧೇಶ್ವರ ಶಾಖಾಮಠ ಕಡಲಬಾಳು ತಾ:ಹಗರಿಬೊಮ್ಮನಹಳ್ಳಿ, ಜಿಲ್ಲಾ: ವಿಜಯನಗರ ಎಂದು ನಾಮಕರಣ ಮಾಡಲಾಗಿದೆ. ಇದನ್ನು ಕೊಪ್ಪಳ ಉಪ ನೋಂದಣಾಧಿಕಾರಿಗಳಿಂದ ದಿನಾಂಕ: 03–03–2026 ರಂದು ನೋಂದಣಿ (ದಸ್ತಾವೇಜು ಸಂಖ್ಯೆ: ಪಿ 00557) ಮಾಡಲಾಗಿದೆ.

CHANGE OF NAME
I, SAINATH PRASANTH REDDY, Residing at No.39/A, 1st Floor, 2nd Main, 1st Block, Banagirinagar, BSK 3rd Stage, Bengaluru-560 085, have changed my name to SAINATH PRASHANTH REDDY vide affidavit dated 02-03-2026 sworn before notary Mohammed Hussain. K, Reg No.20459, Bengaluru. Henceforth I shall be called as SAINATH PRASHANTH REDDY only.

I, SANJAY KIRAN KUMAR, Residing at #26, Banashankari Nilaya, Devasandra Krishnarajapuram Bangalore-36 have changed my name as SANJAY KIRAN, vide affidavit dated 25/03/2026 before Notary V.Nagarajan, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ದೇವಿಕಾ ಭಟ್

# ‘ಬೃಂದಾವಿಹಾರಿ’ಯ ರಾಧ ಈ ದೇವಿಕಾ

ರೀಲ್ಸ್, ಧಾರಾವಾಹಿಯಲ್ಲಿ ಸದ್ದು ಮಾಡಿದ ದೇವಿಕಾ ಭಟ್ ಪ್ರಸ್ತುತ ‘ಬೃಂದಾವಿಹಾರಿ’ ಸಿನಿಮಾ ಮೂಲಕ ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿದ್ದಾರೆ. ಮೊದಲ ಸಿನಿಮಾದಲ್ಲೇ ನಟ ಗಣೇಶ್ ಜೊತೆ ತೆರೆಹಂಚಿಕೊಳ್ಳುವ ಅವಕಾಶ ಪಡೆದ ಅವರು ತಮ್ಮ ಪಯಣದ ಬಗ್ಗೆ ಮಾತಿಗಿಳಿದಾಗ...

• ಅಭಿಲಾಷ್ ಪಿ.ಎಸ್.

• **ನಿಮ್ಮ ಹಿನ್ನೆಲೆ...**

ನಾನು ಶೃಂಗೇರಿ ಬಳಿ ಇರುವ ಕೊಪ್ಪದವಳು. ಬೆಳೆದಿದ್ದು ಬೆಂಗಳೂರಿನಲ್ಲಿ. ಶಿಕ್ಷಣವೂ ರಾಜಧಾನಿಯಲ್ಲೇ. ಇತ್ತೀಚೆಗೆ ಎಂಬಿಎ ಪೂರ್ಣಗೊಳಿಸಿದೆ. ಶಿಕ್ಷಣದ ಜೊತೆಗೆ ಸಿನಿಮಾದಲ್ಲಿ ನಟಿಸುವ ಕನಸು ಇಟ್ಟುಕೊಂಡಿದ್ದೆ. ಅಮ್ಮನ ಆಸೆಯೂ ಇದೇ ಆಗಿತ್ತು. ಕುಟುಂಬದ ಇಚ್ಛೆಯಂತೆ ಮೊದಲು ಶಿಕ್ಷಣ ಪೂರ್ಣಗೊಳಿಸಿದೆ. ಆಸೆ ಆದ್ಯತೆಯಾಯಿತು. ಈ ಅವಧಿಯಲ್ಲಿ ಕ್ಯಾಮೆರಾ ಮುಂದೆ ನಿರ್ಭೀತಿಯಿಂದ ಕಾಣಿಸಿಕೊಳ್ಳಬೇಕು ಎನ್ನುವ ಕಾರಣಕ್ಕಾಗಿ ಇನ್‌ಸ್ಟಾಗ್ರಾಂ ರೀಲ್ಸ್‌ಗಳಲ್ಲಿ, ಫೋಟೋಶೂಟ್‌ಗಳಲ್ಲಿ ಕಾಣಿಸಿಕೊಂಡೆ. ಇವುಗಳು ಹೆಚ್ಚಿನ ಜನರಿಗೆ ತಲುಪಲಿವೆ ಎನ್ನುವುದನ್ನು ಊಹಿಸಿಯೂ ಇರಲಿಲ್ಲ. ತನ್ನ ರೀಲ್ಸ್‌ಗಳನ್ನು ಹೆಚ್ಚಿನ ಜನರು ಇಷ್ಟಪಟ್ಟಾಗ ಅವುಗಳ ಸಂಖ್ಯೆ ಹೆಚ್ಚಿಸಿದೆ. ಇವುಗಳ ಮೂಲಕವೇ ನನ್ನ ಬಣ್ಣದ ಪಯಣಕ್ಕೂ ದಾರಿ ತೆರೆಯಿತು. ನಿರ್ದೇಶಕರು, ಚಿತ್ರತಂಡಗಳು ನನ್ನನ್ನು ಗುರುತಿಸಿದ್ದೂ ಇವುಗಳಿಂದಲೇ. ಬಳಿಕ ‘ರಾಮಾಚಾರಿ’ ಧಾರಾವಾಹಿಯಲ್ಲಿ ನಟಿಸಿದೆ. ಧಾರಾವಾಹಿ, ರೀಲ್ಸ್‌ಗಳಲ್ಲಿ ನನ್ನನ್ನು ನೋಡಿ ಕನ್ನಡ, ತೆಲುಗು, ತಮಿಳಿನಿಂದ ಹಲವು ಆಫರ್‌ಗಳು ಬಂದವು. ಧಾರಾವಾಹಿಯ ಪಾತ್ರ ನೆಗೆಟಿವ್ ಶೇಡ್‌ನತ್ತ ತಿರುಗಿದಾಗ, ಸಿನಿಮಾದಲ್ಲಿ ಅವಕಾಶಗಳು ಹೆಚ್ಚಾದಾಗ ಧಾರಾವಾಹಿ ನಟನೆ ನಿಲ್ಲಿಸಿದೆ. ಬಳಿಕ ಓದು ಪೂರ್ಣಗೊಳಿಸುವತ್ತ ಚಿತ್ತಹರಿಸಿದೆ. ಹೀಗಾಗಿ ಎಂಬಿಎ ಪೂರ್ಣಗೊಳಿಸಿದ ಬೆನ್ನಲ್ಲೇ ‘ಬೃಂದಾವಿಹಾರಿ’ ಪ್ರಾಜೆಕ್ಟ್ ಕೈಗೆತ್ತಿಕೊಂಡೆ.

• **ಮೊದಲ ಸಿನಿಮಾದಲ್ಲೇ ಸ್ಟಾರ್ ಜೊತೆ ನಟನೆ...**

ಇದು ಕನಸು ನನಸಾದ ಕ್ಷಣ. ರೀಲ್ಸ್ ಮಾಡುತ್ತಿದ್ದ ಸಂದರ್ಭದಲ್ಲಿ ದೊಡ್ಡ ತೆರೆಯಲ್ಲಿ ನಾನು ಹೇಗೆ ಕಾಣಿಸಿಕೊಳ್ಳಬಹುದು ಎನ್ನುವ ಕುತೂಹಲವಿತ್ತು. ಈಗಲೂ ಈ ಕುತೂಹಲವಿದೆ. ನನ್ನನ್ನಿನ್ನೂ ಬೃಹತ್ ಪರದೆಯಲ್ಲಿ ನೋಡಿಲ್ಲ. ಮೊದಲ ಸಿನಿಮಾದಲ್ಲೇ ಗಣೇಶ್ ಅವರ ಜೊತೆ ನಟಿಸುತ್ತೇನೆ ಎನ್ನುವುದನ್ನು ನಿರೀಕ್ಷಿಸಿಯೂ ಇರಲಿಲ್ಲ. ಮೊದಲ ಬಾರಿ ಅವರನ್ನು ನೋಡಿದಾಗ, ಅವರೊಂದಿಗೆ ನಟಿಸಿದಾಗ ಆದ ಖುಷಿಗೆ ಪಾರವೇ ಇಲ್ಲ. ಗಣೇಶ್ ಅವರ ‘ಮುಂಗಾರು ಮಳೆ’, ‘ಚೆಲುವಿನ ಚಿತ್ತಾರ’, ‘ಗಾಳಿಪಟ’ ನನ್ನ ನೆಚ್ಚಿನ ಚಿತ್ರಗಳು. ಅವುಗಳಲ್ಲೂ ‘ಗಾಳಿಪಟ’ಕ್ಕೆ ಒಂದು ಅಂಕ ಹೆಚ್ಚೇ ಎನ್ನಬಹುದು. ಒಂದು ರೀತಿಯಲ್ಲಿ ಕಾಲೇಜು ದಿನಗಳ ಕ್ರಶ್ ಅವರು. ಅವರ ಸಿನಿಮಾಗಳಲ್ಲಿನ ಹಾಡುಗಳ ಅಭಿಮಾನಿ ನಾನು.

• **ಯಾರು ಈ ರಾಧ?**

ನನ್ನ ಪಾತ್ರವಾದ ‘ರಾಧ’ ಓರ್ವ ಮುಗ್ಧ ಹುಡುಗಿ. ‘ರಾಧೆ’ ಎನ್ನುವ ಹೆಸರಿಗೆ ತಕ್ಕಂತ ಹುಡುಗಿ. ನಾನು ಕಥಕ್ ನೃತ್ಯಗಾರ್ತಿ. ಇದು ಸಿನಿಮಾದಲ್ಲಿನ ನನ್ನ ಪಾತ್ರಕ್ಕೂ ಸಹಕಾರಿಯಾಯಿತು.

• **ನಿಮ್ಮ ಕನಸುಗಳು...**

ಕನ್ನಡದಲ್ಲೇ ಒಳ್ಳೆಯ ಸಿನಿಮಾಗಳನ್ನು ಮಾಡಬೇಕು, ಮನೆಮನೆಯ ಮಾತಾಗಬೇಕು ಎನ್ನುವ ಕನಸು ನನ್ನದು. ಪುಟ್ಟ ಮಗುವಿಗಿರುವ ಖುಷಿಯಂತೆ ಮೊದಲ ಸಿನಿಮಾ ಮಾಡಿದ ಖುಷಿಯಲ್ಲೇ ಇನ್ನೂ ಇದ್ದೇನೆ. ಹೊಸ ಮುಖಗಳ ನಡುವೆ ಆರಂಭವಾದ ನನ್ನ ಮೊದಲ ಸಿನಿಮಾದ ಪಯಣ ಇದೀಗ ನನಗೊಂದು ಕುಟುಂಬವನ್ನೇ ನೀಡಿದೆ. ಮೈಸೂರಿನಲ್ಲಿ ಎರಡು ತಿಂಗಳ ಶೂಟಿಂಗ್ ಅನುಭವ ಹೊಸ ಪಾಠಗಳನ್ನು ಕಲಿಸಿದೆ. ಸದ್ಯ ಹೊಸಕಥೆಗಳನ್ನು ಕೇಳುತ್ತಿದ್ದೇನೆ. ಕೆಲವು ಪ್ರಾಜೆಕ್ಟ್‌ಗಳು ಮಾತುಕತೆ ಹಂತದಲ್ಲಿವೆ. ❖

# ಸಿನಿ ಸಮ್ಮಾನಕ್ಕೆ ಸಿನಿಮಾಗಳ ಆಹ್ವಾನ

ಮೂರನೇ ಆವೃತ್ತಿಯ ಕಾರ್ಯಕ್ರಮದಲ್ಲಿ ನಟ ರವಿಚಂದ್ರನ್–ನಟಿ ಮಾಲಶ್ರೀ ಹೆಜ್ಜೆ...

**‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’**-ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆ. ಇಂತಹ ವೇದಿಕೆ ಇದೀಗ ನಾಲ್ಕನೇ ಆವೃತ್ತಿಯನ್ನು ಆಯೋಜಿಸಲು ಸಜ್ಜಾಗುತ್ತಿದೆ.

ಅಸಾಧಾರಣ ಪ್ರತಿಭೆಗಳನ್ನು ಪ್ರಶಂಸಿಸಿ, ಕನ್ನಡ ಚಿತ್ರರಂಗದ ಬೆಳವಣಿಗೆಗೆ ಉತ್ತೇಜನ ನೀಡುವುದು ಈ ಪ್ರಶಸ್ತಿಯ ಉದ್ದೇಶ. ಕಳೆದ ಮೂರು ಆವೃತ್ತಿಗಳಲ್ಲಿ ಎಲ್ಲರೂ ಮೆಚ್ಚುವಂತಹ ವರ್ಣರಂಜಿತ, ಅದ್ದೂರಿ, ಅರ್ಥಗರ್ಭಿತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗುವುದು. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಚಿತ್ರತಂಡಗಳು ನೋಂದಣಿ ಮಾಡಿಕೊಂಡು ಸಿನಿಮಾಗಳನ್ನು ಸಲ್ಲಿಸಬಹುದಾಗಿದೆ. ನೋಂದಣಿಗೆ ಏಪ್ರಿಲ್ 10 ಕೊನೆಯ ದಿನ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ. ❖

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

# ದೈಜಿ ಚಿತ್ರೀಕರಣ ಪೂರ್ಣ

**ರಮೇಶ್ ಅರವಿಂದ್** ನಟನೆಯ ‘ದೈಜಿ’ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಕೆಲವು ತಿಂಗಳಲ್ಲೇ ಸಿನಿಮಾ ತೆರೆಗೆ ಬರಲಿದೆ.

ಥ್ರಿಲ್ಲರ್ ಹಾರರ್ ಜಾನರ್‌ನ ಈ ಸಿನಿಮಾವನ್ನು ರಮೇಶ್ ಅವರು ನಟಿಸಿದ್ದ ‘ಶಿವಾಜಿ ಸುರತ್ಕಲ್’ ಸಿನಿಮಾ ಸರಣಿಯ ಆಕಾಶ್ ಶ್ರೀವತ್ಸ ನಿರ್ದೇಶಿಸಿದ್ದಾರೆ. ಇವರ ಕಾಂಬಿನೇಷನ್‌ನ ಮೂರನೇ ಸಿನಿಮಾವಾಗಿ ‘ದೈಜಿ’ ಬರಲಿದೆ. ರವಿ ಕಶ್ಯಪ್ ನಿರ್ಮಾಣದ ಈ ಸಿನಿಮಾದಲ್ಲಿ ನಾಯಕಿಯಾಗಿ ರಾಧಿಕಾ ನಾರಾಯಣ್ ನಟಿಸಿದ್ದಾರೆ. ವಿದೇಶದ ಕಲಾವಿದರೂ ಚಿತ್ರದಲ್ಲಿ ಬಣ್ಣಹಚ್ಚಿದ್ದು, ದಿಗಂತ್ ಮಹತ್ವವಾದ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ನೈಜ ಘಟನೆಗಳನ್ನು ಆಧಾರವಾಗಿ ಇಟ್ಟುಕೊಂಡು ಅದಕ್ಕೆ ಚಿತ್ರಕಥೆ ಬರೆದಿದ್ದಾರೆ ಆಕಾಶ್ ಶ್ರೀವತ್ಸ. ಚಿತ್ರವು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು ವಿ.ಎಫ್.ಎಕ್ಸ್., ರೀರೆಕಾರ್ಡಿಂಗ್ ಕೆಲಸಗಳು ನಡೆಯುತ್ತಿದೆ. ಶೀಘ್ರದಲ್ಲೇ ಬಿಡುಗಡೆ ದಿನಾಂಕವನ್ನು ಚಿತ್ರತಂಡ ಘೋಷಿಸಲಿದೆ. ಶ್ರೀಶ ಕೂದುವಳ್ಳಿ ಛಾಯಾಚಿತ್ರಗ್ರಹಣ, ಜೂಡಾ ಸ್ಯಾಂಡಿ ಹಿನ್ನೆಲೆ ಸಂಗೀತ ಚಿತ್ರಕ್ಕಿದೆ. ಇಂಗ್ಲೆಂಡ್‌ನ ಬಾರ್ನ್ಮೌತ್, ಸ್ಕಾಟ್‌ಲ್ಯಾಂಡ್‌ನ ಎಡಿನ್ಬರ್ಗ್, ವಾರಾಣಸಿ, ಸಕಲೇಶಪುರ, ಮಡಿಕೇರಿ, ಬೆಂಗಳೂರು–ಹೀಗೆ ಹಲವು ಪ್ರದೇಶದಲ್ಲಿ ಈ ಸಿನಿಮಾ ಚಿತ್ರೀಕರಣಗೊಂಡಿದೆ. ❖

ರಮೇಶ್ ಅರವಿಂದ್

# ‘ಗುರುಸಿದ್ಧ’ನಾದ ಪ್ರಜ್ವಲ್

**ಬಿ.ಎಂ. ಗಿರಿರಾಜ್** ನಿರ್ದೇಶನದ, ಗುರು ದೇಶಪಾಂಡೆ ನಿರ್ಮಾಣದ ‘ರಾಮರಸ’ ಚಿತ್ರವು ಪಾತ್ರಗಳಿಂದಲೇ ಕುತೂಹಲ ಮೂಡಿಸಿದೆ. ಈ ಹಿಂದೆ ಶರಣ್ ಅವರು ನಿಭಾಯಿಸಿರುವ ‘ಇಂದ್ರ’ ಎಂಬ ಪಾತ್ರವನ್ನು ಪರಿಚಯಿಸಿದ್ದ ಚಿತ್ರತಂಡ, ಇದೀಗ ಪ್ರಜ್ವಲ್ ದೇವರಾಜ್ ಅವರ ‘ಗುರುಸಿದ್ಧ’ ಪಾತ್ರದ ಲುಕ್ಕನ್ನು ಬಿಡುಗಡೆ ಮಾಡಿದೆ.

ಜಿ ಸಿನಿಮಾಸ್ ಮತ್ತು ಸೆವೆನ್ ಸ್ಟಾರ್ ಮೂವೀಸ್ ಜಂಟಿಯಾಗಿ ನಿರ್ಮಿಸುತ್ತಿರುವ ಫ್ಯಾಂಟಸಿ ಡ್ರಾಮಾ ಹಿನ್ನೆಲೆಯ ಈ ಸಿನಿಮಾದಲ್ಲಿ ಪ್ರಜ್ವಲ್ ದೇವರಾಜ್ ವಿಶೇಷ ಪಾತ್ರದಲ್ಲಿದ್ದಾರೆ. ‘ಚಿತ್ರದಲ್ಲಿ ಅತ್ಯಂತ ಶಕ್ತಿಯುತ ಹಾಗೂ ವಿಭಿನ್ನವಾದ ಪಾತ್ರ ಇದಾಗಿದೆ. ಕರ್ನಾಟಕದ ಅಲೆಮಾರಿ ಪರಂಪರೆಯಾದ ‘ಸುಡುಗಾಡು ಸಿದ್ಧ’ ಸಮುದಾಯದ ಹಿನ್ನೆಲೆಯನ್ನು ಈ ಪಾತ್ರ ಹೊಂದಿದೆ. ಇವರು ಶಿವನ ಪರಮ ಭಕ್ತರು. ಸಿದ್ಧರು ಹಳ್ಳಿ ಹಳ್ಳಿಗೆ ಸಂಚಾರ ಮಾಡುವವರು. ಭವಿಷ್ಯ ನುಡಿಯುವುದು, ಮಾಯಾಜಾಲ, ಅಪರೂಪದ ಗಿಡಮೂಲಿಕೆಗಳ ಮೂಲಕ ಚಿಕಿತ್ಸೆ ನೀಡುವಲ್ಲಿ ಇವರು ನಿಸ್ಸೀಮರು. ಹಳ್ಳಿಗಳನ್ನು ದುಷ್ಟಶಕ್ತಿಗಳಿಂದ ರಕ್ಷಿಸುವ ಈ ಸಮುದಾಯದ ಸಂಸ್ಕೃತಿಯನ್ನು ಈ ಪಾತ್ರದ ಮೂಲಕ ತರಲಾಗುತ್ತಿದೆ’ ಎಂದಿದೆ ಚಿತ್ರತಂಡ.

‘ಬಿಗ್‌ಬಾಸ್’ ಖ್ಯಾತಿಯ ಕಾರ್ತಿಕ್ ಮಹೇಶ್ ನಾಯಕರಾಗಿ ನಟಿಸಿರುವ ಈ ಚಿತ್ರದಲ್ಲಿ ‘ಅಧ್ಯಕ್ಷ’ ಖ್ಯಾತಿಯ ಹೆಬಾ ಪಟೇಲ್ ನಾಯಕಿಯಾಗಿದ್ದಾರೆ. ಬಾಲಾಜಿ ಮನೋಹರ್, ವೈಶಾಲಿ ಚಿತ್ರದ ತಾರಾಬಳಗದಲ್ಲಿದ್ದಾರೆ. ಎ ವಿ ಕೃಷ್ಣಕುಮಾರ್ ಛಾಯಾಚಿತ್ರಗ್ರಹಣ, ಭರತ್ ಬಿ.ಜೆ. ಸಂಗೀತ, ಹೊಸ್ಮನೆ ಮೂರ್ತಿ ಕಲಾ ನಿರ್ದೇಶನ, ಅರ್ಜುನ್ ರಾಜ್ ಸಾಹಸ ನಿರ್ದೇಶನ, ಮುರುಳಿ ಮಾಸ್ಟರ್ ನೃತ್ಯ ಸಂಯೋಜನೆ, ಅರ್ಜುನ್ ಕಿಟ್ಟು ಸಂಕಲನ ಚಿತ್ರಕ್ಕಿದೆ. ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಶೀಘ್ರದಲ್ಲೇ ಸಿನಿಮಾ ತೆರೆ ಮೇಲೆ ಬರಲಿದೆ ಎಂದಿದೆ ಚಿತ್ರತಂಡ. ❖

ಪ್ರಜ್ವಲ್‌ದೇವರಾಜ್


ಪ್ರಮೋದ್

# ದೊಡ್ಡ ಹಂತಕ್ಕೆ ಸಜ್ಜಾದ ಹಲ್ಕಾ ಡಾನ್

**‘ರತ್ನನ್ ಪ್ರಪಂಚ’** ಖ್ಯಾತಿಯ ಪ್ರಮೋದ್ ನಟನೆಯ ‘ಹಲ್ಕಾ ಡಾನ್’ ಸಿನಿಮಾದ ಮೂರು ಹಂತಗಳ ಚಿತ್ರೀಕರಣ ಪೂರ್ಣಗೊಂಡಿದ್ದು, ಮುಂದಿನ ಹಂತಕ್ಕೆ ಚಿತ್ರತಂಡ ಸಜ್ಜಾಗುತ್ತಿದೆ. ಇತ್ತೀಚೆಗೆ ಪ್ರಮೋದ್ ಪಾತ್ರದ ಪೋಸ್ಟರ್ ಅನ್ನು ಚಿತ್ರತಂಡ ಬಿಡುಗಡೆಗೊಳಿಸಿದೆ.

‘ಸದ್ಯ 28 ದಿನಗಳ ಶೂಟಿಂಗ್ ಪೂರ್ಣಗೊಂಡಿದೆ. ಇನ್ನೂ ಐವತ್ತು ದಿನಗಳ ಶೂಟಿಂಗ್ ಬಾಕಿ ಇದೆ. ಮುಂದಿನ ಹಂತದಲ್ಲಿ ಮಂಗಳೂರು, ಹೈದರಾಬಾದ್, ತೆಲಂಗಾಣದ ಹಲವೆಡೆ ಚಿತ್ರೀಕರಣ ನಡೆಯಲಿದೆ. ಈ ಹಂತದಲ್ಲಿ ಖ್ಯಾತ ಕಲಾವಿದರು ಚಿತ್ರತಂಡ ಸೇರಿಕೊಳ್ಳಲಿದ್ದಾರೆ. ಈ ಬಗ್ಗೆ ಶೀಘ್ರದಲ್ಲೇ ಮಾಹಿತಿ ನೀಡಲಾಗುವುದು. ಆಶ್ಚರ್ಯಪಡುವಂತೆ ಖ್ಯಾತ ಕಲಾವಿದರು ಇರಲಿದ್ದಾರೆ. ಏಪ್ರಿಲ್ 15ರ ಬಳಿಕ ನಾಲ್ಕನೇ ಹಂತದ ಚಿತ್ರೀಕರಣ ಪುನರಾರಂಭವಾಗಲಿದೆ. ವರ್ಷಾಂತ್ಯಕ್ಕೇ ಸಿನಿಮಾವನ್ನು ತೆರೆಗೆ ತರುವ ಪ್ರಯತ್ನದಲ್ಲಿದ್ದೇವೆ’ ಎನ್ನುತ್ತಾರೆ ಪ್ರಮೋದ್.

‘ಹಲ್ಕಾ ಡಾನ್’ ಸಿನಿಮಾವನ್ನು ‘ಟಗರು’, ‘ಸಲಗ’ ಹಾಗೂ ‘ಯುಐ’ ಚಿತ್ರಗಳನ್ನು ನಿರ್ಮಿಸಿರುವ ಕೆ.ಪಿ.ಶ್ರೀಕಾಂತ್ ನಿರ್ಮಾಣ ಮಾಡುತ್ತಿದ್ದಾರೆ. ಚಲಾ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ವೀನಸ್ ಎಂಟರ್‌ಟೈನರ್ ಬ್ಯಾನರ್ ಅಡಿಯಲ್ಲಿ ಮೂಡಿಬರುತ್ತಿರುವ ನಾಲ್ಕನೇ ಚಿತ್ರ ಇದಾಗಿದೆ. ಚಿತ್ರಕ್ಕೆ ‘ಸಾಯಿಕುಮಾರ್ ಫ್ಯಾನ್’ ಎಂಬ ಅಡಿಬರಹವಿದ್ದು, ಸಾಯಿಕುಮಾರ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಪ್ರಮೋದ್‌ಗೆ ಜೋಡಿಯಾಗಿ ಅಮೃತಾ ಅಯ್ಯಂಗಾರ್ ನಟಿಸುತ್ತಿದ್ದು, ರಮೇಶ್ ಇಂದಿರಾ, ಜ್ಯೋತಿ ರೈ ತಾರಾಬಳಗದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗಿನಲ್ಲಿ ಏಕಕಾಲಕ್ಕೆ ಈ ಸಿನಿಮಾ ನಿರ್ಮಾಣವಾಗುತ್ತಿದೆ. ವಿ.ಹರಿಕೃಷ್ಣ ಸಂಗೀತ, ಸತ್ಯ ಹೆಗಡೆ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ❖


ರಿಷಬ್ ಶೆಟ್ಟಿ

# ‘ಅಧ್ಯಾಯ ಎರಡು–ಇಲ್ಲಿಂದ ಶುರು’

**‘ಕಾಂತಾರ–ಒಂದು ದಂತಕಥೆ ಅಧ್ಯಾಯ ಒಂದು’** ಬಳಿಕ ರಿಷಬ್ ಶೆಟ್ಟಿ ಸದ್ಯ ಪ್ರಶಾಂತ್ ವರ್ಮಾ ನಿರ್ದೇಶನದ ಪ್ಯಾನ್ ಇಂಡಿಯಾ ಸಿನಿಮಾ ‘ಜೈ ಹನುಮಾನ್’ನಲ್ಲಿ ತೊಡಗಿಸಿಕೊಂಡಿದ್ದಾರೆ. ಇದರ ನಡುವೆ ಇತ್ತೀಚೆಗೆ ರಿಷಬ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಹಾಕಿದ ಒಂದು ಪೋಸ್ಟ್ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

‘ಅಧ್ಯಾಯ ಎರಡು–ಇಲ್ಲಿಂದ ಶುರು’ ಎಂಬ ಪೋಸ್ಟ್ ಸದ್ಯ ಚರ್ಚೆಯಲ್ಲಿದೆ. ಇದು ‘ಕಾಂತಾರ–ಅಧ್ಯಾಯ ಎರಡು’ ಇರಬಹುದೇ ಎನ್ನುವ ಮಾತುಗಳು ಕೇಳಿಬರುತ್ತಿವೆ. ಆದರೆ ಪೋಸ್ಟ್‌ನಲ್ಲಿ ಮೊದಲೆರಡು ಸರಣಿಯನ್ನು ನಿರ್ಮಿಸಿದ್ದ ಹೊಂಬಾಳೆ ಫಿಲ್ಮ್ಸ್ ಉಲ್ಲೇಖವಿಲ್ಲ. ಬದಲಾಗಿ ರಿಷಬ್ ಅವರ ‘ರಿಷಬ್ ಶೆಟ್ಟಿ ಫಿಲ್ಮ್ಸ್’ನ ಲಾಂಛನ ಹಾಕಲಾಗಿದೆ.

ಇತ್ತೀಚೆಗೆ ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ ‘ನನ್ನ ನಿರ್ಮಾಣ ಸಂಸ್ಥೆಯಡಿ ‘ಸರ್ಕಾರಿ ಹಿ.ಪ್ರಾ.ಶಾಲೆ ಕಾಸರಗೋಡು’ ಆದ ಮೇಲೆ ನನ್ನದೇ ಸಿನಿಮಾ ಬಂದಿಲ್ಲ. ಬೇರೆಯವರ ಸಿನಿಮಾ ನಿರ್ಮಾಣ ಮಾಡಿದ್ದೆ. ಈ ಸಂಸ್ಥೆಯನ್ನು ಮತ್ತಷ್ಟು ಬೆಳೆಸಬೇಕಾಗಿದೆ. ‘ಜೈ ಹನುಮಾನ್’ನಲ್ಲಿ ‘ರಿಷಬ್ ಶೆಟ್ಟಿ ಫಿಲ್ಮ್ಸ್’ ಕೂಡಾ ನಿರ್ಮಾಣದಲ್ಲಿ ಕೈಜೋಡಿಸಿದೆ. ಈ ಸಂಸ್ಥೆಯ ಬಗ್ಗೆ ನನ್ನೊಳಗೊಂದಿಷ್ಟು ಕನಸುಗಳು ಇವೆ. ಈ ಬಗ್ಗೆ ಕುತೂಹಲಕಾರಿ ಬೆಳವಣಿಗೆಗಳು ಆಗುತ್ತಿವೆ’ ಎಂದಿದ್ದರು. ಹೀಗಾಗಿ ರಿಷಬ್ ಅವರ ನಿರ್ಮಾಣ ಸಂಸ್ಥೆಯ ಹೊಸ ಅಧ್ಯಾಯ ಇರಬಹುದು ಎನ್ನುವ ಚರ್ಚೆಯೂ ನಡೆಯುತ್ತಿದೆ. ಈ ಬಗ್ಗೆ ರಿಷಬ್ ಅವರು ಪ್ರತಿಕ್ರಿಯೆ ನೀಡಿಲ್ಲ. ❖

# ಶೀಘ್ರದಲ್ಲೇ ತೆರೆಗೆ ‘ಬಾಸ್’

**ತನುಷ್ ಶಿವಣ್ಣ** ನಾಯಕರಾಗಿ ನಟಿಸಿರುವ ‘ಬಾಸ್’ ಸಿನಿಮಾ ರಿಲೀಸ್‌ಗೆ ಸಜ್ಜಾಗುತ್ತಿದ್ದು, ಸಿನಿಮಾದ ‘ಏನಿದೆಯೋ ನಿನ್ನ ಮಾಯೆ’ ಎಂಬ ಹಾಡು ಇತ್ತೀಚೆಗೆ ಬಿಡುಗಡೆಯಾಗಿದೆ.

ಸಿರಿ ಪ್ರೊಡಕ್ಷನ್ಸ್ ಈ ಸಿನಿಮಾ ನಿರ್ಮಾಣ ಮಾಡಿದ್ದು, ವಿ.ಲವ ನಿರ್ದೇಶಿಸಿದ್ದಾರೆ. ಈ ಹಾಡನ್ನು ಪ್ರಮೋದ್ ಮರವಂತೆ ಬರೆದಿದ್ದಾರೆ. ಡೆವಿ ಸುರೇಶ್ ಸಂಗೀತ ನೀಡಿರುವ ಹಾಡನ್ನು ನವೀನ್ ಸಜ್ಜು ಹಾಡಿದ್ದಾರೆ. ‘ಪ್ರತಿಯೊಬ್ಬರಿಗೂ ಒಳ್ಳೆಯದನ್ನೇ ಬಯಸುವ ವ್ಯಕ್ತಿಯೊಬ್ಬನ ಜೀವನದಲ್ಲಿ ಕಷ್ಟ ಬಂದಾಗ ಆತ ಅನುಭವಿಸುವ ನೋವು ಹಾಗೂ ಪರದಾಟಗಳ ಬಗ್ಗೆ ಬರೆದಿದ್ದೇನೆ’ ಎಂದರು ಪ್ರಮೋದ್ ಮರವಂತೆ. ಕ್ರೈಮ್ ಥ್ರಿಲ್ಲರ್ ಕಥಾಹಂದರದ ಈ ಸಿನಿಮಾವನ್ನು ಏಪ್ರಿಲ್‌ನಲ್ಲಿ ತೆರೆಗೆ ತರಲು ಚಿತ್ರತಂಡ ಯೋಚಿಸಿದೆ.

ಸಿನಿಮಾದಲ್ಲಿ ತನುಷ್ ಶಿವಣ್ಣ ಅವರಿಗೆ ಜೋಡಿಯಾಗಿ ಮೋನಿಕಾ ಗೌಡ ಹಾಗೂ ಪಾಯಲ್ ಚಂಗಪ್ಪ ನಟಿಸಿದ್ದಾರೆ. ಚಿತ್ರಕ್ಕೆ ವಿ.ಲವ ಅವರೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಶರತ್ ಎನ್.ಆರ್.ಪುರ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ವೀರೇನ್ ಕೇಶವ್, ಭೀಷ್ಮ ರಾಮಯ್ಯ, ಲಕ್ಷ್ಮಣ್ ಪೂಜಾರಿ, ಪ್ರಮೋದ್ ಹಿರೇಮಠ, ಅಕ್ಷಯ್ ತಾರಾಬಳಗದಲ್ಲಿದ್ದಾರೆ. ❖

ತನುಷ್ ಶಿವಣ್ಣ

ಪಾಯಲ್ ಚಂಗಪ್ಪ

# ‘ಕಾಲ ಭೈರವ’ ಸುದೀಪ್

**ಪ್ರೇಮ್** ನಿರ್ದೇಶನದ ‘KD’ ಸಿನಿಮಾದಲ್ಲಿ ಸುದೀಪ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಅವರ ಪಾತ್ರದ ಫಸ್ಟ್‌ಲುಕ್ ಪೋಸ್ಟರ್ ಬಿಡುಗಡೆಯಾಗಿದೆ.

ಚಿತ್ರದಲ್ಲಿ ‘ಕಾಲ ಭೈರವ’ ಎಂಬ ಪಾತ್ರಕ್ಕೆ ಸುದೀಪ್ ಬಣ್ಣಹಚ್ಚಿದ್ದಾರೆ. ಕೈಯಲ್ಲಿ ರುದ್ರಾಕ್ಷಿ ಹಿಡಿದು ಮಣಿಕರ್ಣಿಕಾ ಘಾಟ್‌ನಲ್ಲಿ ನಿಂತಿರುವಂತೆ ಪಾತ್ರವನ್ನು ಪ್ರಸ್ತುತಪಡಿಸಲಾಗಿದೆ. ‘ಮಾರ್ಕ್’ ಶೂಟಿಂಗ್ ಸಂದರ್ಭದಲ್ಲೇ ಸುದೀಪ್ ಈ ಸಿನಿಮಾದ ಶೂಟಿಂಗ್‌ನಲ್ಲೂ ಭಾಗವಹಿಸಿದ್ದರು. ಹೈದರಾಬಾದ್‌ನಲ್ಲಿ ಅವರ ಪಾತ್ರದ ಚಿತ್ರೀಕರಣ ನಡೆದಿತ್ತು. ‘KD’ ಸಿನಿಮಾ ಏಪ್ರಿಲ್ 30ರಂದು ತೆರೆಕಾಣುತ್ತಿದ್ದು, ‘ಏಕ್ ಲವ್ ಯಾ’ ಸಿನಿಮಾ ನಂತರ ಪ್ರೇಮ್ ನಿರ್ದೇಶನದ ಪ್ಯಾನ್ ಇಂಡಿಯಾ ಚಿತ್ರ ಇದಾಗಿದೆ. ಧ್ರುವ ಸರ್ಜಾ, ರೀಷ್ಮಾ ನಾಣಯ್ಯ, ಸಂಜಯ್ ದತ್, ರವಿಚಂದ್ರನ್, ಶಿಲ್ಪಾ ಶೆಟ್ಟಿ, ರಮೇಶ್ ಅರವಿಂದ್ ಚಿತ್ರದ ತಾರಾಬಳಗದಲ್ಲಿದ್ದಾರೆ. ‘KD’–ಕಾಳಿದಾಸ ಸಿನಿಮಾವನ್ನು ಕೆವಿಎನ್ ಪ್ರೊಡಕ್ಷನ್ಸ್ ನಿರ್ಮಾಣ ಮಾಡಿದೆ. 70-75ರ ದಶಕಗಳಲ್ಲಿ ನಡೆದ ನೈಜಘಟನೆ ಆಧಾರಿತ ಗ್ಯಾಂಗ್‌ಸ್ಟರ್ ಕಥೆ ಈ ಚಿತ್ರಲ್ಲಿದೆ. ಚಿತ್ರಕ್ಕಾಗಿ ಸುಮಾರು 180 ದಿನ ಚಿತ್ರೀಕರಣ ನಡೆಸಿದೆ ಚಿತ್ರತಂಡ. ❖

# ಏ.3ಕ್ಕೆ ‘ಫಸ್ಟ್ ನೈಟ್ ವಿದ್ ದೆವ್ವ’

**‘ಬಿಗ್‌ಬಾಸ್’** ಖ್ಯಾತಿಯ ಪ್ರಥಮ್ ಅಭಿನಯದ ‘ಫಸ್ಟ್ ನೈಟ್ ವಿದ್ ದೆವ್ವ’ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಸಿನಿಮಾ ಏಪ್ರಿಲ್ 3ರಂದು ತೆರೆಗೆ ಬರಲಿದೆ.

ಚಿತ್ರವನ್ನು ಪಿ.ವಿ.ಆರ್. ಸ್ವಾಮಿ ಗೂಗಾರದೊಡ್ಡಿ ನಿರ್ದೇಶಿಸಿದ್ದಾರೆ. ಚಿತ್ರಕ್ಕೆ ಕಥೆ, ಚಿತ್ರಕಥೆಯನ್ನು ಪ್ರಥಮ್ ರಚಿಸಿದ್ದಾರೆ. ‘ಚಿತ್ರದ ಡಬ್ಬಿಂಗ್, ಸ್ಯಾಟಲೈಟ್ ಹಕ್ಕುಗಳು ಉತ್ತಮ ಮೊತ್ತಕ್ಕೆ ಮಾರಾಟವಾಗಿವೆ. ಮನರಂಜನೆಯನ್ನೇ ಮುಖ್ಯವಾಗಿಟ್ಟುಕೊಂಡು ಮಾಡಿರುವ ಹಾರರ್ ಕಾಮಿಡಿ ಚಿತ್ರವಿದು. ನಾಯಕನಿಗೆ ಮದುವೆಯಾಗುತ್ತದೆ. ಅದರ ಬೆನ್ನಲ್ಲೇ ತನ್ನ ಹೆಂಡತಿ ದೆವ್ವ ಎಂಬುದು ಆತನಿಗೆ ತಿಳಿಯುತ್ತದೆ. ನಂತರದ ಘಟನೆಗಳೇ ಚಿತ್ರದ ಕಥಾಹಂದರ’ ಎಂದರು ಪ್ರಥಮ್.

ನಿರ್ದೇಶಕ ಪಿ.ವಿ.ಆರ್. ಸ್ವಾಮಿ ಮಾತನಾಡಿ, ‘ಪ್ರಥಮ್ ಒಳ್ಳೆಯ ಮಾತುಗಾರ. ಆದರೆ ಈ ಸಿನಿಮಾದಲ್ಲಿ ಅವರ ಪಾತ್ರಕ್ಕೆ ಮಾತು ಕಡಿಮೆ. ನಾನೇ ಛಾಯಾಚಿತ್ರಗ್ರಹಣ ಹಾಗೂ ನಿರ್ದೇಶನವನ್ನೂ ಮಾಡಿದ್ದೇನೆ. ಇದು ನನ್ನ ನಿರ್ದೇಶನದ ಐದನೇ ಚಿತ್ರ. ಈ ಚಿತ್ರದಲ್ಲಿ ಮಿಮಿಕ್ರಿ ಗೋಪಿ, ತುಕಾಲಿ ಸಂತು, ಸುಶ್ಮಿತಾ ಇವರೆಲ್ಲರ ಪಾತ್ರಗಳು ಚೆನ್ನಾಗಿ ಮೂಡಿಬಂದಿವೆ’ ಎಂದರು.

ಚಿತ್ರದಲ್ಲಿ ಪ್ರಥಮ್ ಅವರ ಪತ್ನಿಯಾಗಿ ನಿಖಿತಾ ಸ್ವಾಮಿ ನಟಿಸಿದ್ದಾರೆ. ಈ ಪಾತ್ರಕ್ಕೆ ಎರಡು ಶೇಡ್‌ಗಳಿವೆ. ಶ್ರೀನಿವಾಸಮೂರ್ತಿ, ಹರೀಶ್ ರಾಜ್, ರಮೇಶ್ ಭಟ್ ಚಿತ್ರದ ತಾರಾಬಳಗದಲ್ಲಿದ್ದಾರೆ. ಅದ್ವಿಕ್ ವರ್ಮ ಸಂಗೀತ ನಿರ್ದೇಶನ, ನಾಗೇಶ್ ನಾರಾಯಣ್ ಸಂಕಲನ ಹಾಗೂ ಸಂಭಾಷಣೆ, ಥ್ರಿಲ್ಲರ್ ಮಂಜು ಸಾಹಸ ಸಂಯೋಜನೆ ಚಿತ್ರಕ್ಕಿದೆ. ❖

ಪ್ರಥಮ್

ನಿಖಿತಾ ಸ್ವಾಮಿ

# ‘ಅಪಾರ್ಟ್‌ಮೆಂಟ್ ಸಿಟಿ’ ಆಗಲಿದೆ ನಗರ

## ಬೆಂಗಳೂರು ಅಭಿವೃದ್ಧಿಗೆ ಹಂತ ಹಂತವಾಗಿ ₹1.50 ಲಕ್ಷ ಕೋಟಿ ವೆಚ್ಚ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ವ್ಯಾಪ್ತಿ ಹಿಗ್ಗುತ್ತಾ ಹೋಗುವುದನ್ನು ತಡೆಯಲು ಮತ್ತು ಜನರು ತಮ್ಮ ಕೆಲಸ ಕಾರ್ಯಗಳಿಗೆ ದೂರ ಪ್ರಯಾಣ ಮಾಡುವುದನ್ನು ತಪ್ಪಿಸಲು ನಗರವನ್ನು ಇನ್ನು ಮುಂದೆ ಲಂಬಾಕಾರವಾಗಿ (ವರ್ಟಿಕಲ್) ಬೆಳೆಸಲು ಆದ್ಯತೆ ನೀಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಬೆಂಗಳೂರು ನಗರದ ಸಮಸ್ಯೆಗಳ ಕುರಿತು ವಿಧಾನಸಭೆಯಲ್ಲಿ ನಡೆದ ಚರ್ಚೆಗೆ ಅವರು ಉತ್ತರ ನೀಡಿದರು.

‘ಬೆಂಗಳೂರು ನಗರ ಯೋಜಿತವಾಗಿ ಬೆಳೆದಿಲ್ಲ. ಭವಿಷ್ಯದಲ್ಲಿ ಇನ್ನಷ್ಟು ಸಮಸ್ಯೆಗಳು ಆಗುವುದನ್ನು ತಪ್ಪಿಸಲು ಸಮಾನಾಂತರ ಬದಲಿಗೆ ಲಂಬಾಕಾರವಾಗಿ ಬೆಳೆಸಬೇಕಾಗಿದೆ. ಬೆಂಗಳೂರನ್ನು ಜಾಗತಿಕ ಮಟ್ಟದ ನಗರವಾಗಿ ಅಭಿವೃದ್ಧಿಪಡಿಸುವುದು ನನ್ನ ಗುರಿ’ ಎಂದು ಅವರು ಹೇಳಿದರು.

ನಿವೇಶನ ಹಂಚಿಕೆ ಬದಲಿಗೆ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸಿ ಫ್ಲ್ಯಾಟ್‌ಗಳ ಹಂಚಿಕೆಗೆ ಆದ್ಯತೆ ನೀಡಲಾಗುವುದು. ನಿವೇಶನಗಳ ಹಂಚಿಕೆಯನ್ನು ಕಡಿಮೆ ಮಾಡಲಾಗುವುದು ಎಂದರು.

ಇದರಿಂದ ವಸತಿ ಸಮುಚ್ಚಯ ಇರುವ ಕಡೆಗಳಲ್ಲೇ ಕಚೇರಿಗಳು, ರಸ್ತೆ, ಮೆಟ್ರೊ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸುವುದರಿಂದ, ನಗರದ ಇನ್ನೊಂದು ಭಾಗಕ್ಕೆ ಪ್ರಯಾಣಿಸುವ ಅಗತ್ಯ ಇರುವುದಿಲ್ಲ. ನಗರದ ಮೇಲಿನ ಒತ್ತಡವೂ ಕಡಿಮೆ ಆಗುತ್ತದೆ. ಹೀಗಾಗಿ ಎತ್ತರದ ಅಪಾರ್ಟ್‌ಮೆಂಟ್‌ಗಳಿಗೆ ಆದ್ಯತೆ ನೀಡಲಾಗುವುದು ಎಂದರು.

**ಮುಖ್ಯಾಂಶಗಳು**

- ನಗರವನ್ನು ಲಂಬಾಕಾರವಾಗಿ ಬೆಳೆಸಲು ಕ್ರಮ
- ನಿವೇಶನಗಳ ಬದಲಿಗೆ ಬಹುಮಹಡಿ ಕಟ್ಟಡಗಳ ನಿರ್ಮಾಣಕ್ಕೆ ಆದ್ಯತೆ

**ಅಭಿವೃದ್ಧಿಗೆ ₹1.50 ಲಕ್ಷ ಕೋಟಿ:** ನಗರದ ಸಂಚಾರ ದಟ್ಟಣೆ ನಿವಾರಿಸಿ, ಯೋಜಿತ ರೀತಿಯ ಬೆಳವಣಿಗೆಯೊಂದಿಗೆ ಸಮಗ್ರ ಅಭಿವೃದ್ಧಿಗೆ ಸುಮಾರು ₹1.50 ಲಕ್ಷ ಕೋಟಿ ಬೇಕಾಗುತ್ತದೆ. ಇದನ್ನು ಹಂತ–ಹಂತವಾಗಿ ವಿನಿಯೋಗಿಸಲಾಗುವುದು. ನನ್ನ ಆಲೋಚನೆಗಳ ಬಗ್ಗೆ ಈಗ ಟೀಕೆ ಮಾಡಬಹುದು ಮುಂದೆ ನನ್ನ ನಿರ್ಧಾರ ಸರಿ ಎಂದು ಹೇಳುವ ಕಾಲ ಬರುತ್ತದೆ ಎಂದು ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

**ಅಪಾರ್ಟ್‌ಮೆಂಟ್ ನಿರ್ವಹಣೆಗೆ ಸುಗ್ರೀವಾಜ್ಞೆ:** ಅಪಾರ್ಟ್‌ಮೆಂಟ್‌ಗಳ ನಿರ್ವಹಣೆ ಕುರಿತಂತೆ ಮಸೂದೆ ಸಿದ್ಧವಾಗಿದೆ. ಈ ವಿಚಾರವಾಗಿ ಬೆಂಗಳೂರು ಮತ್ತು ಇತರ ಪಾಲಿಕೆಗಳ ವ್ಯಾಪ್ತಿಯ ಶಾಸಕರ ಸಭೆಯನ್ನು ನಡೆಸಲಾಗುವುದು. ಆ ಬಳಿಕ ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಲಾಗುವುದು ಎಂದು ತಿಳಿಸಿದರು.

### ಪ್ರಮುಖ ಅಂಶಗಳು:

- **ಬೆಂಗಳೂರು ಬ್ಯುಸಿನೆಸ್ ಕಾರಿಡಾರ್:** ನಗರದಲ್ಲಿ ರಸ್ತೆ ವಿಸ್ತರಣೆ ಅಸಾಧ್ಯವಾಗಿದೆ. ಹೀಗಾಗಿ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಯೋಜನೆ ರೂಪಿಸಲಾಗಿದೆ. ಮೊದಲ ಹಂತದ ಯೋಜನೆಗೆ ಶೇ 80ರಷ್ಟು ಭೂಸ್ವಾಧೀನ ಪ್ರಕ್ರಿಯೆಗೆ ಅನುಮತಿ ಸಿಕ್ಕಿದೆ. ಸದ್ಯವೇ ಟೆಂಡರ್ ಕರೆಯಲಾಗುವುದು. ಇದರಿಂದ ಶೇ 50ರಷ್ಟು ದಟ್ಟಣೆ ತಗ್ಗಲಿದೆ.
- **ಸುರಂಗ ರಸ್ತೆ:** ಸುಗಮ ಸಂಚಾರಕ್ಕಾಗಿ ಸುರಂಗ ರಸ್ತೆ ನಿರ್ಮಿಸಲಾಗುವುದು. ಇದರ ಭೂಸ್ವಾಧೀನಕ್ಕೆ ₹2,000 ಕೋಟಿಯಿಂದ ₹3,000 ಕೋಟಿ ಬೇಕಾಗುತ್ತದೆ. ಯೋಜನೆ ಅನುಷ್ಠಾನಕ್ಕೆ ₹17,000 ಕೋಟಿ ವೆಚ್ಚವಾಗಲಿದೆ.
- **ಎಲಿವೇಟೆಡ್ ಕಾರಿಡಾರ್:** 109 ಕಿ.ಮೀ ಉದ್ದದ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಕಾಮಗಾರಿ ಆರಂಭಿಸಲಾಗುವುದು. ರಾಜಕಾಲುವೆ ಪಕ್ಕದ ಬಫರ್ ಜಾಗದಲ್ಲಿ 300 ಕಿ.ಮೀ. ಉದ್ದದ ರಸ್ತೆ ನಿರ್ಮಿಸಲಾಗುವುದು.
- 40 ಕಿ.ಮೀ. ಉದ್ದದ ಡಬಲ್ ಡೆಕ್ಕರ್ ನಿರ್ಮಾಣಕ್ಕಾಗಿ ತಾಂತ್ರಿಕ ವರದಿ ಸಿದ್ಧಪಡಿಸಲಾಗುತ್ತಿದೆ. ಮೆಟ್ರೊ ಮತ್ತು ರಸ್ತೆ ಒಟ್ಟಿಗೆ ಇರುತ್ತದೆ. ಪ್ರತ್ಯೇಕ ಪಾರ್ಕಿಂಗ್ ನೀತಿ ಜಾರಿಗೊಳಿಸಲಾಗುವುದು.
- **ಕಾವೇರಿ 6ನೇ ಹಂತ:** ಕಾವೇರಿ 6ನೇ ಹಂತ ಕುಡಿಯುವ ನೀರಿನ ಯೋಜನೆಗೆ ₹7000 ಕೋಟಿ ವೆಚ್ಚದಲ್ಲಿ ಸಮಗ್ರ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದೆ. ಇದಕ್ಕೆ ಜೈಕಾ (ಜಪಾನ್ ಇಂಟರ್ ನ್ಯಾಷನಲ್ ಕೋ- ಆಪರೇಷನ್ ಏಜೆನ್ಸಿ) ಹಣಕಾಸು ನೆರವು ನೀಡಲು ಒಪ್ಪಿಕೊಂಡಿದೆ. ಈ ಯೋಜನೆ ಅನುಷ್ಠಾನಗೊಂಡರೆ ನಗರದ ಕುಡಿಯುವ ನೀರಿನ ಸಮಸ್ಯೆ ನೀಗಲಿದೆ.

ಬೆಂಗಳೂರು ದೇಶದ ಇತರ ಯಾವುದೇ ನಗರಗಳೊಂದಿಗೆ ಸ್ಪರ್ಧಿಸುತ್ತಿಲ್ಲ. ಬೆಂಗಳೂರು ನಡೆದ ಹಾದಿಯಲ್ಲಿ ಬೇರೆ ನಗರಗಳು ಸಾಗುವಂತೆ ಮಾಡಲಾಗುತ್ತಿದೆ
**ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

ಜಕ್ಕೂರಿನ ವಾಯುಯಾನ ತರಬೇತಿ ಶಾಲೆಯನ್ನು ಉಳಿಸಿಕೊಳ್ಳಲು ಸದನದಲ್ಲಿ ಹೋರಾಟ ಮಾಡಿದ್ದೇನೆ. ಇದರ ಪರಿಣಾಮವಾಗಿ ಭೂಮಿ ಉಳಿದಿದೆ
**ಆರ್. ಅಶೋಕ,** ವಿರೋಧ ಪಕ್ಷದ ನಾಯಕ

### ‘ದಕ್ಷಿಣದಲ್ಲೇ ಎರಡನೇ ವಿಮಾನ ನಿಲ್ದಾಣ’

‘ಎರಡನೇ ವಿಮಾನ ನಿಲ್ದಾಣವನ್ನು ದಕ್ಷಿಣ ಭಾಗದಲ್ಲೇ ಮಾಡಬೇಕಾಗಿದೆ’ ಎಂದು ಶಿವಕುಮಾರ್ ಹೇಳಿದರು.

‘ಈ ಹಿಂದೆ ಎಚ್.ಡಿ.ಕುಮಾರಸ್ವಾಮಿ ಅವರು ನಂದಗುಡಿ, ಸೋಲೂರು, ಬಿಡದಿ ಟೌನ್‌ಶಿಪ್ ಮಾಡಲು ಹೋಗಿ ನಂತರ ಕೈಬಿಟ್ಟರು. ಈಗ ನಾವು ಅದನ್ನು ಮಾಡಲು ಮುಂದಾಗಿದ್ದೇವೆ. ಬಿಡದಿಯಲ್ಲಿ ನೀರಿನ ಸೌಲಭ್ಯ ಇರುವುದರಿಂದ ಅಲ್ಲೇ ಟೌನ್‌ಶಿಪ್ ಮಾಡಬೇಕಾಗಿದೆ. ಅಲ್ಲಿ ನೋಟಿಫಿಕೇಶನ್ ಆಗಿರುವ 8 ಸಾವಿರ ಎಕರೆಯಲ್ಲಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕೇಂದ್ರ ನಿರ್ಮಿಸುವ ವಿಚಾರವಾಗಿ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು ಎಂದರು.

### ಸಿಸಿ, ಒಸಿ ವಿನಾಯಿತಿ: ಸಂಪುಟದಲ್ಲಿ ತೀರ್ಮಾನ

ಸಿಸಿ ಮತ್ತು ಒಸಿ ಇಲ್ಲದ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡದಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ನ್ಯಾಯಾಲಯ ತೀರ್ಪಿನ ಪ್ರಕಾರ ಸಣ್ಣಪುಟ್ಟ ತೀರ್ಮಾನ ತೆಗೆದುಕೊಳ್ಳಬಹುದಾಗಿದೆ. ಅದರ ಅನ್ವಯ 30x40 ವಿಸ್ತೀರ್ಣದ ನಿವೇಶನ ಕಟ್ಟಡಗಳಿಗೆ ವಿನಾಯಿತಿ ನೀಡಲಾಗಿದೆ ಎಂದರು.

ಇನ್ನೂ ಹೆಚ್ಚಿನ ವಿಸ್ತೀರ್ಣದ ಕಟ್ಟಡಗಳಿಗೆ ವಿನಾಯಿತಿ ನೀಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗುವುದು ಎಂದರು.

‘ಇ–ಖಾತಾ ನೀಡಲು ಅಧಿಕಾರಿಯೊಬ್ಬರು ಲಂಚ ಪಡೆದ ವಿಚಾರವನ್ನು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಪುರಾವೆ ಸಮೇತ ನನ್ನ ಗಮನಕ್ಕೆ ತಂದಿದ್ದು, ಲಂಚ ಪಡೆದ ಅಧಿಕಾರಿಯನ್ನು ಅಮಾನತುಗೊಳಿಸಲಾಗಿದೆ’ ಎಂದು ಹೇಳಿದರು.

### ಬನಶಂಕರಿ ಮೇಲ್ಸೇತುವೆ ನಿರ್ಮಾಣ

‘ಬನಶಂಕರಿ ದೇವಸ್ಥಾನ ಜಂಕ್ಷನ್‌ನಲ್ಲಿ ವೃತ್ತಾಕಾರದ ಸ್ಕೈವಾಕ್‌ನೊಂದಿಗೆ ಮೇಲ್ಸೇತುವೆಯನ್ನೂ ನಿರ್ಮಿಸಲಾಗುತ್ತದೆ. ಈ ಬಗ್ಗೆ ರಾಮಲಿಂಗಾರೆಡ್ಡಿ, ಸಂಸದರೂ ಹೇಳಿದ್ದಾರೆ. ನಿಮ್ಮ ಸಲಹೆಯನ್ನೂ ತೆಗೆದುಕೊಂಡಿದ್ದೇನೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ಪ್ರಜಾವಾಣಿ’ಯಲ್ಲಿ ಮಾರ್ಚ್ 26ರಂದು ಪ್ರಕಟವಾಗಿದ್ದ ‘ಬನಶಂಕರಿ ಮೇಲ್ಸೇತುವೆ ಅತ್ಯಗತ್ಯ’ ಸುದ್ದಿಯನ್ನು ಪ್ರಸ್ತಾಪಿಸಿದ ಆರ್. ಅಶೋಕ ಅವರಿಗೆ ಉತ್ತರಿಸಿದರು.

‘ರಾಮಲಿಂಗಾರೆಡ್ಡಿ ಹಾಗೂ ನನ್ನ ಕ್ಷೇತ್ರದ ವ್ಯಾಪ್ತಿಗೆ ಈ ಪ್ರದೇಶ ಬರುತ್ತದೆ. ಇಲ್ಲಿ ಮೇಲ್ಸೇತುವೆ ನಿರ್ಮಿಸುವುದರಿಂದ ಕನಕಪುರದ ಕಡೆಗೆ ವಾಹನ ಸಂಚಾರ ಸುಗಮವಾಗುತ್ತದೆ’ ಎಂದು ಅಶೋಕ ಸಲಹೆ ನೀಡಿದರು.

ಈಜಿಪುರ ಮೇಲ್ಸೇತುವೆ ಕಾಮಗಾರಿ ನಾಲ್ಕು ತಿಂಗಳಲ್ಲಿ ಮುಗಿಯಲಿದೆ. ಗುತ್ತಿಗೆದಾರರಿಗೆ ₹25 ಕೋಟಿ ಬಾಕಿ ಇದೆ. ಅದನ್ನು ಕೂಡಲೇ ಬಿಡುಗಡೆ ಮಾಡಲಾಗುವುದು’ ಎಂದು ಅಶೋಕ ಅವರ ಪ್ರಶ್ನೆಗೆ ಶಿವಕುಮಾರ್ ಉತ್ತರಿಸಿದರು.

**ಸ್ಥಳಾಂತರ ಇಲ್ಲ:** ಜಕ್ಕೂರು ವಿಮಾನ ಹಾರಾಟ ತರಬೇತಿ ಕೇಂದ್ರದಲ್ಲಿ ಕ್ಲಬ್ ನಿರ್ಮಾಣ ಮಾಡುವ ಪ್ರಸ್ತಾವ ಸರ್ಕಾರ ಮುಂದೆ ಬಂದಿತ್ತು. ಅದಕ್ಕೆ ವಿರೋಧ ಬಂದ ಕಾರಣ ಮುಖ್ಯಮಂತ್ರಿಯವರು ಈ ಬಗ್ಗೆ ಈಗ ತೀರ್ಮಾನ ಮಾಡುವುದು ಬೇಡವೆಂದು ಹೇಳಿದ್ದಾರೆ ಎಂದು ಶಿವಕುಮಾರ್ ತಿಳಿಸಿದರು.

ಇಲ್ಲಿ ಯಶೋಭೂಮಿ ಮಾದರಿಯಲ್ಲಿ ನಿರ್ಮಾಣ ಮಾಡಲು ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರು ಸೇರಿ ಹಲವರು ಸಲಹೆ ನೀಡಿದರು. ಇದಕ್ಕೆ ಅನುದಾನ ನೀಡುವುದಾಗಿಯೂ ಹೇಳಿದರು. ಸದ್ಯಕ್ಕೆ ಜಕ್ಕೂರು ವಿಮಾನ ಹಾರಾಟ ತರಬೇತಿ ಕೇಂದ್ರ ಸ್ಥಳಾಂತರ ಮಾಡುವುದಿಲ್ಲ ಎಂದರು.

**ಸುದ್ದಿ 2 ನಿಮಿಷ**

### ದಾವೂದ್ ಹೆಸರಿನ ಸ್ಟಿಕ್ಕರ್ ಖಾಸಗಿ ಬಸ್ ವಶ

**ಚಿಕ್ಕಮಗಳೂರು:** ‘ದಾವೂದ್ ದಿ ರಿಯಲ್ ಹೀರೊ’ ಎಂದು ಸ್ಟಿಕ್ಕರ್ ಅಂಟಿಸಿಕೊಂಡಿದ್ದ ತಮಿಳುನಾಡಿನ ಖಾಸಗಿ ಬಸ್ ಅನ್ನು ನಗರದ ಬಸವನಹಳ್ಳಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ತಮಿಳುನಾಡಿನ ನೋಂದಣಿ ಸಂಖ್ಯೆ (ಟಿಎನ್-21, ಎಯು- 2699) ಹೊಂದಿರುವ ಖಾಸಗಿ ಬಸ್ ತುಂಬೆಲ್ಲಾ ಕೆಂಪು ಮತ್ತು ಕಪ್ಪು ಬಣ್ಣದಲ್ಲಿ ಚಿತ್ರಿಸಲಾಗಿದೆ. ‘ಕ್ರೈಮ್ ಲಾರ್ಡ್ ಕ್ರಾನಿಕಲ್ಸ್, ದಾವೂದ್ ದಿ ರಿಯಲ್ ಹೀರೊ, ಲೈವ್ ಬೈ ಎ ಗನ್, ಡೈ ಬೈ ಎ ಗನ್, ಡಿ ಗ್ಯಾಂಗ್ ಆಫ್ ಮುಂಬೈ, ಬಾಂಬೆ ಅಂಡರ್ ವರ್ಲ್ಡ್ ದಾವೂದ್ ರಿಯಲ್ ಡಾನ್; ಎಂದು ಸ್ಟಿಕ್ಕರ್‌ಗಳನ್ನು ಅಂಟಿಸಲಾಗಿದೆ.

ಪ್ರವಾಸಿಗರನ್ನು ಕರೆತಂದು ನಗರದ ಎನ್‌ಎಂಸಿ ವೃತ್ತದ ಬಳಿ ನಿಂತಿದ್ದಾಗ ಗಮನಿಸಿದ ಹಿಂದೂ ಮುಖಂಡರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಬಸವನಹಳ್ಳಿ ಪೊಲೀಸರು ಬಸ್ ವಶಕ್ಕೆ ಪಡೆದು ಎಫ್‌ಐಆರ್ ದಾಖಲಿಸಿದ್ದಾರೆ.

### ಹೊತ್ತಿ ಉರಿದ ಕೆಎಸ್‌ಆರ್‌ಟಿಸಿ ಬಸ್

**ಬೆಂಗಳೂರು:** ಲುಲ್ ಮಾಲ್ ಬಳಿ ಕೆಎಸ್‌ಆರ್‌ಟಿಸಿ ಬಸ್ಸೊಂದು ಗುರುವಾರ ರಾತ್ರಿ ಹೊತ್ತಿ ಉರಿದಿದೆ.

ಬಸ್ ಚಾಲಕ, ನಿರ್ವಾಹಕ ಹಾಗೂ ಪ್ರಯಾಣಿಕರು ಪಾರಾಗಿದ್ದಾರೆ. ರಾತ್ರಿ 10.15ಕ್ಕೆ ಮೆಜೆಸ್ಟಿಕ್ ಬಸ್ ನಿಲ್ದಾಣದಿಂದ ಶಿವಮೊಗ್ಗಕ್ಕೆ ಬಸ್ ಹೊರಟಿತ್ತು. ಲುಲು ಮಾಲ್ ಬಳಿ ರಾತ್ರಿ 10.30ರ ಸುಮಾರಿಗೆ ಬಂದಾಗ ಬಸ್‌ನ ಕೆಳಭಾಗದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಅದನ್ನು ಗಮನಿಸಿದ ಸ್ಥಳೀಯರೊಬ್ಬರು ಚಾಲಕನ ಗಮನಕ್ಕೆ ತಂದರು. ಚಾಲಕ ಬಸ್ ಅನ್ನು ನಿಲ್ಲಿಸಿ ಪ್ರಯಾಣಿಕರನ್ನು ಕೆಳಗೆ ಇಳಿಸಿದ್ದಾರೆ. ಅದಾದ ಮೇಲೆ ಬಸ್ ಸಂಪೂರ್ಣ ಬೆಂಕಿಗೆ ಆಹುತಿಯಾಗಿದೆ.

ಮೆಜೆಸ್ಟಿಕ್‌ನಿಂದ ಲುಲುಮಾಲ್‌ಗೆ ಹೋಗುವ ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿತ್ತು.

### ಕುಲಶಾಸ್ತ್ರೀಯ ಅಧ್ಯಯನ ನಡೆಸಲು ತುಲುನಾಡ್ ಮನ್ಸ ಸಮಾಜ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮನ್ಸ ಜಾತಿಯ ಕುಲಶಾಸ್ತ್ರೀಯ ಅಧ್ಯಯನ ನಡೆಸುವ ಆದೇಶವನ್ನು ಕೂಡಲೇ ಹೊರಡಿಸಬೇಕು ಎಂದು ತುಲುನಾಡ್ ಮನ್ಸ ಸಮಾಜ ಸೇವಾ ಸಂಘ ಆಗ್ರಹಿಸಿದೆ.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ವೆಂಕಣ್ಣ ಕೊಯ್ಯೂರು, ‘ಮನ್ಸ ಸಮುದಾಯವು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಬರುತ್ತದೆ. ಆದರೆ ಈ ಪಟ್ಟಿಯಲ್ಲಿ ನಮ್ಮ ಸಮುದಾಯದ ಹೆಸರನ್ನು ಉಲ್ಲೇಖಿಸಿಲ್ಲ. ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಹಾಗೂ ಕೇರಳದ ಕಾಸರಗೋಡು ಜಿಲ್ಲೆಗಳಲ್ಲಿ ನಮ್ಮ ಸಮುದಾಯದ ಜನಸಂಖ್ಯೆ 5 ಲಕ್ಷಕ್ಕೂ ಹೆಚ್ಚಿದೆ. 2023ರಲ್ಲಿ ಮನ್ಸ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಮುಂದಾಗಿತ್ತು. ಆದರೆ ಇದುವರೆಗೂ ಆದೇಶ ಹೊರಡಿಸಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ನಾವು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದಿದ್ದೇವೆ. ನಮ್ಮ ಜಾತಿಯ ಕುಲಶಾಸ್ತ್ರೀಯ ಅಧ್ಯಯನ ಮಾಡುವುದರ ಜೊತೆಗೆ ಸರಿಯಾದ ದತ್ತಾಂಶಗಳನ್ನು ಸಂಗ್ರಹಿಸಿ, ಮನ್ಸ ಜಾತಿ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಪ್ರಮಾಣವನ್ನು ಹಂಚಿಕೆ ಮಾಡಬೇಕು. ಇದರ ಜೊತೆಗೆ ನಮ್ಮ ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು’ ಎಂದು ಆಗ್ರಹಿಸಿದರು.

**ಚಿಟಿಕೆ ಸುದ್ದಿ**

### ಜಲಮಂಡಳಿ ಫೋನ್–ಇನ್ ಇಂದು

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಅಧ್ಯಕ್ಷತೆಯಲ್ಲಿ ಮಾರ್ಚ್ 27ರ ಬೆಳಿಗ್ಗೆ 09.30ರಿಂದ 10.30ರವರೆಗೆ ನೇರ ಫೋನ್ ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು.

ದೂರವಾಣಿ ಸಂಖ್ಯೆ; 080-22945119 ಮತ್ತು 080-22229639.

### ಏ.4ರಂದು ಘಟಿಕೋತ್ಸವ

ಬೆಂಗಳೂರು: ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ 5ನೇ ಘಟಿಕೋತ್ಸವವು ಏ.4ರ ಬೆಳಿಗ್ಗೆ 11.30ಕ್ಕೆ ನಗರದ ಅರಮನೆ ರಸ್ತೆಯಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಲಿದ್ದಾರೆ. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಸಿಸ್ಟಮ್ಸ್ ವಿಭಾಗದ ಮಹಾನಿರ್ದೇಶಕ ಬಿನಯ್ ಕುಮಾರ್ ದಾಸ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಭಾಗವಹಿಸುವರು.

ಕುಲಪತಿ ಬಿ.ರಮೇಶ್, ಕುಲಸಚಿವ ಎ.ನವೀನ್ ಜೋಸೆಫ್, ರಮೇಶ್ ಬಿ. ಕುಡೇನಟ್ಟಿ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

### ಉದ್ಯೋಗ ಮೇಳ

ಬೆಂಗಳೂರು: ಉಪ ಪ್ರಾದೇಶಿಕ ಉದ್ಯೋಗ ವಿನಿಮಯ ಕಚೇರಿ ಹಾಗೂ ಯಲಹಂಕದ ಸೋಲದೇವನಹಳ್ಳಿ ಆಚಾರ್ಯ ವಿದ್ಯಾಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಏ. 7ರಂದು ಆಚಾರ್ಯ ವಿದ್ಯಾಸಂಸ್ಥೆಯಲ್ಲಿ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ.

ಹತ್ತನೇ ತರಗತಿ, ಪಿಯುಸಿ, ಪದವಿ, ಐಟಿಐ, ಡಿಪ್ಲೊಮಾ, ಬಿ.ಇ ಹಾಗೂ ಸ್ನಾತಕೋತ್ತರ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಈ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು.

ಉದ್ಯೋಗಾಕಾಂಕ್ಷಿಗಳು https://docs.google.com/forms/u/7/d/1xEhF2ert9lagBXmYn6jTje5MynEVEWt9c3jM12DDPmQ/edit ಲಿಂಕ್‌ನಲ್ಲಿ ನೋಂದಾಯಿಸಿಕೊಳ್ಳಬಹುದು.

ಮಾಹಿತಿಗಾಗಿ ಉಪ ಪ್ರಾದೇಶಿಕ ಉದ್ಯೋಗ ವಿನಿಮಯ ಕಚೇರಿ, ಸಿಒಇ ಕಟ್ಟಡ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಆವರಣ, ತುಮಕೂರು ರಸ್ತೆ ಪೀಣ್ಯ ಬೆಂಗಳೂರು ಇಲ್ಲಿ ಸಂಪರ್ಕಿಸಬಹುದು ಎಂದು ಉಪ ಪ್ರಾದೇಶಿಕ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕ ತಿಳಿಸಿದ್ದಾರೆ

# ವಾಣಿಜ್ಯ ಬಳಕೆ ಸಿಲಿಂಡರ್ ಹಂಚಿಕೆಯಲ್ಲಿ ಏರಿಕೆ

## ಮುಂದಿನ ವಾರದಲ್ಲಿ ಇನ್ನಷ್ಟು ಹೆಚ್ಚಳ ನಿರೀಕ್ಷೆ, ಹೋಟೆಲ್ ಮಾಲೀಕರು ಕೊಂಚ ನಿರಾಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆ ಸ್ವಲ್ಪ ಮಟ್ಟಿಗೆ ಸುಧಾರಿಸಿದೆ. ಇದರಿಂದಾಗಿ ಹೋಟೆಲ್ ಉದ್ಯಮದ ಮೇಲೆ ಬೀರಿದ್ದ ಪರಿಣಾಮ ನಿಧಾನವಾಗಿ ಕಡಿಮೆಯಾಗುತ್ತಿದೆ.

ಹೋಟೆಲ್‌ಗಳಿಗೆ ಈ ಮುಂಚೆ ವಾಣಿಜ್ಯ ಬಳಕೆಯ 1 ಸಾವಿರ ಸಿಲಿಂಡರ್ ಹಂಚಿಕೆ ಮಾಡಲಾಗುತ್ತಿತ್ತು. ಈಗ ಪರಿಸ್ಥಿತಿ ಸುಧಾರಿಸಿರುವುದರಿಂದ ಸಿಲಿಂಡರ್‌ಗಳ ಹಂಚಿಕೆ ಪ್ರಮಾಣದಲ್ಲಿ ಏರಿಕೆಯಾಗಿದೆ. ಹೋಟೆಲ್ ವಲಯಕ್ಕೆ 7 ಸಾವಿರ ಸಿಲಿಂಡರ್ ಪೂರೈಸಲಾಗುತ್ತಿದೆ. ಮುಂದಿನ ವಾರದ ಹೊತ್ತಿಗೆ ಇನ್ನೂ ಹೆಚ್ಚಾಗುವ ನಿರೀಕ್ಷೆಯಿದೆ.

‘ಈ ವಾರ ವಾಣಿಜ್ಯ ಬಳಕೆಯ 10 ಸಾವಿರ ಸಿಲಿಂಡರ್ ಸರಬರಾಜು ಆಗುತ್ತಿದ್ದು, ನಮ್ಮ ವಲಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿದೆ’ ಎಂದು ಕರ್ನಾಟಕ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಜಿ.ಕೆ.ಶೆಟ್ಟಿ ತಿಳಿಸಿದರು.

ಸೋಮವಾರದ ನಂತರ 16,000 ಸಿಲಿಂಡರ್ ಸರಬರಾಜು ಆಗುವ ನಿರೀಕ್ಷೆಯಿದೆ. ಮುಂದಿನ ವಾರದಲ್ಲಿ ಸಿಲಿಂಡರ್ ಪ್ರಮಾಣ ಹೆಚ್ಚಳವಾದರೆ ಪರಿಸ್ಥಿತಿ ಇನ್ನಷ್ಟು ಸುಧಾರಿಸಲಿದೆ. ಇಲ್ಲದೇ ಇದ್ದರೆ ಹೋಟೆಲ್ ಉದ್ಯಮ ನಡೆಸುವುದು ಕಷ್ಟವಾಗಬಹುದು ಎಂದು ಹೇಳಿದರು.

### ಗೃಹ ಬಳಕೆ ಹಂಚಿಕೆ ಸಮಸ್ಯೆ

**ಬೆಂಗಳೂರು:** ಬೆಂಗಳೂರು ನಗರದಲ್ಲಿ ಗೃಹ ಬಳಕೆ ಸಿಲಿಂಡರ್ ಸರಬರಾಜಿನಲ್ಲಿ ಕೆಲವು ಕಡೆ ವ್ಯತ್ಯಯವಾಗಿ ಜನ ಸುಲಭವಾಗಿ ಪಡೆಯಲು ಆಗಿಲ್ಲ.

ನಿಗದಿತ ಅವಧಿ ನಂತರ ಬುಕ್ಕಿಂಗ್ ಮಾಡಿದವರಿಗೂ ಸಿಲಿಂಡರ್ ಸಿಕ್ಕಿಲ್ಲ. ಕೆಲವೆಡೆಯಂತೂ ಸರದಿ ಸಾಲಿನಲ್ಲಿ ನಿಂತು ಪಡೆಯುವ ಸ್ಥಿತಿ ಇದೆ.

ಸಿಲಿಂಡರ್ ಸಿಗದೇ ಇದ್ದರೆ ತೊಂದರೆಯಾಗಬಹುದು ಎನ್ನುವ ಆತಂಕದೊಂದಿಗೆ ತಾವೇ ಪಡೆದುಕೊಂಡು ಹೋಗಲು ಗ್ರಾಹಕರು ಬರುತ್ತಿರುವುದು, ಬುಕ್ಕಿಂಗ್ ಅವಧಿ ನಂತರ ಸಮಸ್ಯೆ ಆಗಿರುವವರು ಏಜೆನ್ಸಿ ಕಚೇರಿಗಳತ್ತ ಆಗಮಿಸುತ್ತಿರುವುದು ಗೊಂದಲಕ್ಕೆ ಕಾರಣವಾಗಿದೆ.

‘ನಗರದಲ್ಲಿ ಸಿಲಿಂಡರ್ ಬೇಡಿಕೆಯಿದ್ದರೂ ಅಗತ್ಯದಷ್ಟು ವಿತರಣೆಯಾಗುತ್ತಿದೆ. ಕೆಲವು ಭಾಗಗಳಲ್ಲಿ ಸರತಿ ಸಾಲಿನ ಸನ್ನಿವೇಶ ಸೃಷ್ಟಿಯಾದರೂ ಅದನ್ನು ಸರಿಪಡಿಸಿ ಸಿಲಿಂಡರ್ ನೀಡಲಾಗುತ್ತಿದೆ’ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಶಾಂತನಗೌಡ ಗುಣಕಿ ತಿಳಿಸಿದರು.

‘ಮೊಬೈಲ್ ಥಿಯೇಟರ್ ವ್ಯಾನ್’ಗೆ ಕೆ.ಪ್ರಕಾಶ್ ಚಾಲನೆ ನೀಡಿದರು

### ‘ಮೊಬೈಲ್ ಥಿಯೇಟರ್ ವ್ಯಾನ್’ಗೆ ಚಾಲನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭಾರತೀಯ ಅಂಚೆ ಇಲಾಖೆಯು 24 ಸ್ಪೀಡ್ ಪೋಸ್ಟ್ ಸೇವೆಯನ್ನು ಪ್ರಾರಂಭಿಸಿದೆ. ಇದರ ಬಗ್ಗೆ ಬೆಂಗಳೂರು ನಗರದಲ್ಲಿ ಜನಜಾಗೃತಿ ಅಭಿಯಾನ ನಡೆಸಲು ವಿಶೇಷವಾಗಿ ವಿನ್ಯಾಸಗೊಳಿಸಿರುವ ‘ಮೊಬೈಲ್ ಥಿಯೇಟರ್ ವ್ಯಾನ್’ಗೆ ಚಾಲನೆ ನೀಡಲಾಯಿತು.

ಸ್ಪೀಡ್ ಪೋಸ್ಟ್ ಸೇವೆಗಳ ವಿಶ್ವಾಸಾರ್ಹ 24 ಗಂಟೆ ಮತ್ತು 48 ಗಂಟೆಗಳ ವಿತರಣಾ ಜಾಲವನ್ನು ಜನರಿಗೆ ಪರಿಚಯಿಸಲಿದೆ.

ಕರ್ನಾಟಕ ಅಂಚೆ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಕೆ. ಪ್ರಕಾಶ್ ಅವರು ವಾಹನಕ್ಕೆ ಚಾಲನೆ ನೀಡಿದರು.

ವಾಹನವು ಒಂದು ತಿಂಗಳು ನಗರದ ವಿವಿಧ ಪ್ರದೇಶಗಳಲ್ಲಿ ಸಂಚರಿಸಿ, ಸ್ಪೀಡ್ ಪೋಸ್ಟ್ ಸೇವೆಗಳ ಕಾರ್ಯಕ್ಷಮತೆ, ಲಭ್ಯತೆ ಹಾಗೂ ವ್ಯಾಪಕ ಜಾಲದ ಬಗ್ಗೆ ಪ್ರಚಾರ ಮಾಡಲಿದೆ ಎಂದು ಅಂಚೆ ಅಧಿಕಾರಿಗಳು ತಿಳಿಸಿದ್ದಾರೆ.

### ಎಚ್‌ಕೆಇಎಸ್‌ನೊಂದಿಗೆ ಫಿಸಿಕ್ಸ್‌ವಾಲಾ ಒಪ್ಪಂದ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯು (ಎಚ್‌ಕೆಇಎಸ್) ಫಿಸಿಕ್ಸ್‌ವಾಲಾ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ ಎಂದು ಎಚ್‌ಕೆಇಎಸ್ ಅಧ್ಯಕ್ಷ ಶಶೀಲ ಜಿ. ನಮೋಶಿ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಒಪ್ಪಂದದ ಪ್ರಕಾರ ಬೆಂಗಳೂರಿನ ಸದಾಶಿವನಗರದಲ್ಲಿರುವ ಸೊಸೈಟಿಯ ಪಿ.ಯು ಕಾಲೇಜಿನ ಹೆಸರನ್ನು ಎಚ್‌ಕೆಇಎಸ್ ಶ್ರೀ ವೀರೇಂದ್ರ ಪಾಟೀಲ್ ಫಿಸಿಕ್ಸ್‌ವಾಲಾ ಪಿ.ಯು ಕಾಲೇಜು ಎಂದು ನಾಮಕರಣ ಮಾಡಲಾಗಿದೆ’ ಎಂದು ಮಾಹಿತಿ ನೀಡಿದರು.

‘ಫಿಸಿಕ್ಸ್‌ವಾಲಾ ಸಂಸ್ಥೆಯ ಸಿಬ್ಬಂದಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ನೀಟ್, ಜೆಇಇ ಮೇನ್ಸ್, ಅಡ್ವಾನ್ಸ್ಡ್ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ವಿಶೇಷ ತರಗತಿಗಳನ್ನು ನಡೆಸಲಿದ್ದಾರೆ. ಇದು ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ಸಹಾಯಕವಾಗಲಿದೆ’ ಎಂದರು.

# ‘ವಾಯುಪಡೆಯಿಂದ ಅರಣ್ಯ ಭೂಮಿ ಮರುವಶ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಬೆಂಗಳೂರು ಉತ್ತರ ತಾಲ್ಲೂಕಿನ ಜಾರಕಬಂಡೆ ಕಾವಲ್‌ನಲ್ಲಿ ಭಾರತೀಯ ವಾಯುಪಡೆಗೆ ಮಂಜೂರು ಮಾಡಿದ್ದ 452 ಎಕರೆ ಮತ್ತು ಪೀಣ್ಯ ಪ್ಲಾಂಟೇಷನ್‌ನಲ್ಲಿ ವಾಯುಪಡೆಯ ವಶದಲ್ಲಿರುವ 83 ಎಕರೆ ಅರಣ್ಯ ಭೂಮಿಯನ್ನು ಮರಳಿ ವಶಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಿ ವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ಅರಣ್ಯ ಭೂಮಿಯನ್ನು ಉಳಿಸಬೇಕು. ರಕ್ಷಣಾ ಸಚಿವಾಲಯದಿಂದ ಭೂಮಿ ವಾಪಸ್ ಪಡೆಯಲು ಕ್ರಮ ವಹಿಸಬೇಕು’ ಎಂದು ಆಗ್ರಹಿಸಿದರು.

‘ಮೀಸಲು ಅರಣ್ಯವನ್ನು ಯಾರಿಗೂ ನೀಡಲು ಆಗುವುದಿಲ್ಲ ಅರಣ್ಯ ಇಲಾಖೆಯ ಜಮೀನು ಯಾರಾದರೂ ಕೇಳಿದರೆ ಅದು ಕೇಂದ್ರ ಪರಿಸರ ಸಚಿವಾಲಯದ ಬಳಿ ಹೋಗಬೇಕಾಗುತ್ತದೆ. ಆದರೂ, ಅರಣ್ಯ ಜಮೀನು ನೀಡಲು ಸಾಧ್ಯವಾಗುವುದಿಲ್ಲ. ಸಾವಿರಾರು ಎಕರೆ ಅರಣ್ಯ ಭೂಮಿ ಇನ್ನೂ ವಾಯುಪಡೆ ಬಳಿಯೇ ಇದೆ’ ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಖಂಡ್ರೆ, ‘ವಾಯುಪಡೆಯವರು 58.08 ಎಕರೆ ಭೂಮಿಯನ್ನು ‘ನಮ್ಮ ಮೆಟ್ರೊ’ ರೈಲು ಯೋಜನೆಗೆ ನೀಡಿ ಹಣ ಪಡೆದು ಕಾನೂನು ಉಲ್ಲಂಘಿಸಿದ್ದಾರೆ. ಈ ಹಣ ಅರಣ್ಯ ಇಲಾಖೆಗೆ ಸಂದಾಯ ಆಗಬೇಕಿದೆ. ಅದನ್ನು ಪಡೆದುಕೊಳ್ಳಲು ಕೂಡ ಕ್ರಮ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದರು.

‘ಜಾರಕಬಂಡೆ ಕಾವಲ್‌ನಲ್ಲಿ ವಾಯುಪಡೆಗೆ 1987ರಲ್ಲಿ ಮಂಜೂರು ಮಾಡಿದ್ದ ಭೂಮಿಯ ಪೈಕಿ 452 ಎಕರೆ ನಾಲ್ಕೂವರೆ ಗುಂಟೆ ಅರಣ್ಯ ಪ್ರದೇಶ. ಆ ಮಂಜೂರಾತಿಯನ್ನು 2017ರಲ್ಲಿಯೇ ರದ್ದುಪಡಿಸಲಾಗಿದೆ. ಈ ಕುರಿತಂತೆ 2018ರ ಸೆ. 15 ರಂದು ರಕ್ಷಣಾ ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆದಿದ್ದ ರಾಜ್ಯ ಮುಖ್ಯ ಕಾರ್ಯದರ್ಶಿ, ‘ಜಾಲಹಳ್ಳಿಯ ಭೂಮಿಯನ್ನು ಬಳಸುವುದನ್ನು ಮುಂದುವರಿಸಲು ವಾಯುಪಡೆ ಬಯಸುವುದಾದರೆ ಅರಣ್ಯ (ಸಂರಕ್ಷಣಾ) ಕಾಯ್ದೆ-1980ರ ಅಡಿಯಲ್ಲಿ ಅರಣ್ಯ ಭೂಮಿಗಳ ಬಳಕೆಯನ್ನು ಕ್ರಮಬದ್ಧಗೊಳಿಸುವುದು ಕಡ್ಡಾಯವಾಗಿದ್ದು ಅದಕ್ಕೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸುವಂತೆ ತಿಳಿಸಿದ್ದರು’ ಎಂದರು.

‘ವಾಯಪಡೆಯು ರಾಷ್ಟ್ರೀಯ ಹಿತಾಸಕ್ತಿಯ ಸಂಸ್ಥೆಯಾಗಿರುವ ಕಾರಣ, ಅರಣ್ಯ ತೀರುವಳಿ ಮಾಡುವಂತೆ ತಿಳಿಸಿದ್ದರೂ, ಈವರೆಗೂ ಅರ್ಜಿ ಸಲ್ಲಿಸಿಲ್ಲ. ನಾನು ಸಚಿವನಾದ ನಂತರ ಈ ಭೂಮಿಯ ಜಂಟಿ ಸರ್ವೆಗೆ ಸೂಚನೆ ನೀಡಿದ್ದೆ. ಈ ಕಾರ್ಯ ಪೂರ್ಣವಾಗಿದೆ. ಈ ಸಂಬಂಧ ನನ್ನನ್ನು 2-3 ಬಾರಿ ಭೇಟಿ ಮಾಡಿದ್ದ ವಾಯುಪಡೆ ಅಧಿಕಾರಿಗಳಿಗೆ ನಿಯಮಾನುಸಾರ ಪರ್ಯಾಯ ಭೂಮಿ ನೀಡಿ, ನಿವ್ವಳ ಪ್ರಸ್ತುತ ಮೌಲ್ಯ (ಎನ್‌ಪಿವಿ) ಪಾವತಿಸಿ ಜಮೀನನ್ನು ಬಳಸುವಂತೆ ತಿಳಿಸಿದ್ದೆ. ಆದರೂ ಅವರು ನಿಯಮಾನುಸಾರ ನಡೆದುಕೊಂಡಿಲ್ಲ’ ಎಂದು ವಿವರಿಸಿದರು.

‘ಪ್ರತಿವರ್ಷ ವೈಮಾನಿಕ ಪ್ರದರ್ಶನ ನಡೆಯುವ ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಹೋಬಳಿ, ಗಂಟಿಗಾನಹಳ್ಳಿ ಗ್ರಾಮದ ಸರ್ವೆ ನಂ. 47ರಲ್ಲಿ 132 ಎಕರೆ 3 ಗುಂಟೆ ಮತ್ತು 48ರಲ್ಲಿ 27 ಎಕರೆ 26 ಗುಂಟೆ ಸೇರಿ ಒಟ್ಟು 159 ಎಕರೆ 29 ಗುಂಟೆ ಪ್ರದೇಶ ಕೂಡಾ ಮೀಸಲು ಅರಣ್ಯ ಪ್ರದೇಶ’ ಎಂದರು.

### ‘ಶ್ರೀಗಂಧ ನಿಯಮ ಸರಳೀಕರಣ’

‘ಶ್ರೀಗಂಧದ ನೀತಿಯಲ್ಲಿ ಸರಳೀಕರಿಸಲು ನಿರ್ಧರಿಸಲಾಗಿದೆ’ ಎಂದು ಖಂಡ್ರೆ ತಿಳಿಸಿದರು.

‘ವೃಕ್ಷರಾಜ ಎಂದೇ ಖ್ಯಾತವಾದ ಶ್ರೀಗಂಧವನ್ನು ತೋಟದ ಬೆಳೆ ಎಂದು ಪರಿಗಣಿಸಲು ಅವಕಾಶ ಇಲ್ಲ. ಆದರೆ, ಶ್ರೀಗಂಧ ಬೆಳೆಗಾರರಿಗೆ ಅನಾನುಕೂಲ ಆಗದಂತೆ ಶ್ರೀಗಂಧ ಬೆಳೆಯಲು, ಕಟಾವು ಮಾಡಲು, ದಾಸ್ತಾನು ಮತ್ತು ಸಾಗಣೆಗೆ ನಿಯಮಗಳನ್ನು ಸರಳೀಕರಿಸಲಾಗುವುದು’ ಎಂದರು.

‘ಶ್ರೀಗಂಧ ಬೆಳೆಯಲು ಸರ್ಕಾರ ಪ್ರೋತ್ಸಾಹ ನೀಡಬೇಕು. ಹರಾಜು ಸಮಯದಲ್ಲಿ ತಮಿಳುನಾಡಿನಲ್ಲಿ ಶ್ರೀಗಂಧ ಬೆಳೆಯುವವರಿಗೆ ₹ 22 ಸಾವಿರ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಆದರೆ, ಶ್ರೀಗಂಧದ ನಾಡಾದ ಕರ್ನಾಟಕದಲ್ಲಿ ₹ 7 ಸಾವಿರ ನೀಡಲಾಗುತ್ತಿದೆ. ಆದ್ದರಿಂದ ರಾಜ್ಯದಲ್ಲೂ ಪ್ರೋತ್ಸಾಹಧನ ಹೆಚ್ಚು ನೀಡಬೇಕು’ ಎಂದು ಆರ್. ಅಶೋಕ ಆಗ್ರಹಿಸಿದರು.

**ಲಿಂಗ ತಾರತಮ್ಯಕ್ಕೆ ಎಡೆ ಮಾಡಿಕೊಡುತ್ತದೆ- ಅರ್ಜಿದಾರರ ಆಕ್ಷೇಪ**

# ‘ಮುಟ್ಟಿನ ರಜೆ ಬೇಡ– ಮಹಿಳೆಯರ ಅರ್ಜಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಾರ್ಮಿಕ ಕಾಯ್ದೆಗಳಡಿ ನೋಂದಣಿಯಾಗಿರುವ ಉದ್ದಿಮೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ಅವರ ಋತುಚಕ್ರದ ಸಮಯದಲ್ಲಿ ತಿಂಗಳಲ್ಲಿ ಒಂದು ದಿನದ ವೇತನ ಸಹಿತ ರಜೆ ನೀಡುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹೊರಡಿಸಿರುವ ಅಧಿಸೂಚನೆ ಪ್ರಶ್ನಿಸಿ ಕೆಲವು ಉದ್ಯೋಗಸ್ಥ ಮಹಿಳೆಯರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.



ಬೆಂಗಳೂರಿನ ಆರ್.ವರ್ಷಾ ಸೇರಿ ಒಟ್ಟು 15 ಮಹಿಳೆಯರು ಸಲ್ಲಿಸಿರುವ ರಿಟ್ ಅರ್ಜಿ ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠದಲ್ಲಿ ವಿಚಾರಣೆಗೆ ನಿಗದಿಯಾಗಿದೆ. ಅರ್ಜಿದಾರರ ಪರ ಹೈಕೋರ್ಟ್‌ನ ಹಿರಿಯ ವಕೀಲೆ ಎಚ್. ಆರ್.ರೇಣುಕಾ ವಕಾಲತ್ತು ವಹಿಸಿದ್ದಾರೆ.

**ಅರ್ಜಿಯಲ್ಲಿ ಏನಿದೆ?:** ‘ಋತುಚಕ್ರದ ಸಮಯದಲ್ಲಿ ತಿಂಗಳಲ್ಲಿ ಒಂದು ದಿನದ ವೇತನಸಹಿತ ರಜೆ ನೀಡುವ ಆದೇಶ ಸಂವಿಧಾನದ 14ನೇ ವಿಧಿಗೆ ವಿರುದ್ಧವಾಗಿದೆ. ಇದು ಲಿಂಗ ತಾರತಮ್ಯಕ್ಕೆ ಎಡೆ ಮಾಡಿಕೊಡುತ್ತದೆ. ಮಹಿಳೆಯರು ಪುರುಷರಿಗಿಂತ ದುರ್ಬಲರು ಎಂಬ ಭಾವನೆಯನ್ನು ಉದ್ಯೋಗದಾತರಲ್ಲಿ ಮೂಡಿಸುತ್ತದೆ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

‘ಮಹಿಳಾ ಉದ್ಯೋಗಿಗಳ ನೇಮಕ ಹಾಗೂ ಬಡ್ತಿಗೆ ಕಂಪನಿಗಳು ಹಿಂದೇಟು ಹಾಕಲು ಈ ಆದೇಶ ಕಾರಣವಾಗಲಿದೆ. ತಿಂಗಳಲ್ಲಿ ಒಂದು ದಿನ ಕಡ್ಡಾಯ ರಜೆ ನೀಡುವುದರಿಂದ ಸ್ಪರ್ಧಾತ್ಮಕ ವೃತ್ತಿಜೀವನದಲ್ಲಿ ಮಹಿಳೆಯರಿಗೆ ಹಿನ್ನಡೆಯಾಗುವ ಸಾಧ್ಯತೆಯಿದೆ. ಉದ್ಯೋಗದಾತರಿಗೆ ಹೊರೆ ಹೆಚ್ಚುತ್ತದೆ. ಮಹಿಳಾ ಉದ್ಯೋಗಿಗಳ ದಕ್ಷತೆಯನ್ನು ಕಡಿಮೆ ಮಾಡುತ್ತದೆ ಮತ್ತು ಅವರ ಸಬಲೀಕರಣಕ್ಕೂ ಅಡ್ಡಿಯಾಗುತ್ತದೆ’ ಎಂದು ವಿವರಿಸಲಾಗಿದೆ.

‘ಸರ್ಕಾರ ಈ ನೀತಿ ರೂಪಿಸುವಾಗ ಸರ್ಕಾರ ಮಹಿಳೆಯರ ಅಭಿಪ್ರಾಯ ಪಡೆದಿಲ್ಲ. ಇದು ಸಹಜ ನ್ಯಾಯತತ್ವದ ಉಲ್ಲಂಘನೆಯಾಗಿದ್ದು, ರಾಜ್ಯ ಕಾರ್ಮಿಕ ಇಲಾಖೆ ಈ ಸಂಬಂಧ 2025ರ ನವೆಂಬರ್ 20ರಂದು ಹೊರಡಿಸಿರುವ ಅಧಿಸೂಚನೆ ರದ್ದುಪಡಿಸಬೇಕು’ ಎಂದು ಕೋರಿದ್ದಾರೆ.

### ಎಚ್‌ಡಿಕೆ–ಚಂದ್ರಶೇಖರ್ ವ್ಯಾಜ್ಯ: ಮಧ್ಯಸ್ಥಿಕೆದಾರರ ನೇಮಕ

**ಬೆಂಗಳೂರು:** ‘ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಲೋಕಾಯುಕ್ತ ಎಡಿಜಿಪಿ ಮತ್ತು ಎಸ್ಐಟಿ ಮುಖ್ಯಸ್ಥ ಎಂ.ಚಂದ್ರಶೇಖರ್ ನೀಡಿರುವ ದೂರಿಗೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣವನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲು ಮಧ್ಯಸ್ಥಿಕೆದಾರರನ್ನು ನೇಮಕ ಮಾಡಲಾಗುವುದು’ ಎಂದು ಹೈಕೋರ್ಟ್ ತಿಳಿಸಿದೆ.

‘ನಮ್ಮ ವಿರುದ್ಧ ಸಂಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಎಚ್.ಡಿ.ಕುಮಾರ ಸ್ವಾಮಿ, ನಿಖಿಲ್ ಕುಮಾರಸ್ವಾಮಿ ಮತ್ತು ಸುರೇಶ್ ಬಾಬು ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಎಚ್.ಡಿ.ಕುಮಾರಸ್ವಾಮಿ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಹಷ್ಮತ್ ಪಾಷ ಹಾಗೂ ಚಂದ್ರಶೇಖರ್ ಪರ ಹಾಜರಿದ್ದ ಹೈಕೋರ್ಟ್ ವಕೀಲ ಎಂ.ಎಚ್.ಹಿದಾಯತ್ ಉಲ್ಲಾ ಅವರು, ಪ್ರಕರಣವನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥ ಮಾಡಲು ಮಧ್ಯಸ್ಥಿಕೆದಾರರನ್ನು ನೇಮಕ ಮಾಡುವುದಕ್ಕೆ ತಮ್ಮ ಕಕ್ಷಿದಾರರು ಸೂಚಿಸಿರುವ ಒಪ್ಪಿಗೆಯನ್ನು ನ್ಯಾಯಪೀಠಕ್ಕೆ ವಿಶದಪಡಿಸಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ‘ಹೈಕೋರ್ಟ್ ವತಿಯಿಂದಲೇ ಸೂಕ್ತ ಮಧ್ಯಸ್ಥಿಕೆದಾರರನ್ನು ಮುಂದಿನ ವಾರ ನೇಮಿಸಲಾಗುವುದು’ ಎಂದು ಹೇಳಿತು. ಈ ಸಂಬಂಧ ದೂರುದಾರ ಚಂದ್ರಶೇಖರ್ ಜೊತೆಗೆ ಚರ್ಚಿಸಿ’ ಎಂದು ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ಅವರಿಗೆ ನಿರ್ದೇಶಿಸಿತು. ವಿಚಾರಣೆಯನ್ನು ಏಪ್ರಿಲ್ 2ಕ್ಕೆ ಮುಂದೂಡಲಾಗಿದೆ.

**ದೂರು:** ‘ಕುಮಾರ ಸ್ವಾಮಿ ನನ್ನ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿ ಬೆದರಿಕೆ ಹಾಕಿದ್ದಾರೆ’ ಎಂದು ಆರೋಪಿಸಿ ಚಂದ್ರಶೇಖರ್, ಸಂಜಯನಗರ ಪೊಲೀಸ್ ಠಾಣೆಯಲ್ಲಿ 2024ರಲ್ಲಿ ದೂರು ದಾಖಲಿಸಿದ್ದರು. ಈ ದೂರನ್ನು ಆಧರಿಸಿ ಭಾರತೀಯ ನ್ಯಾಯ ಸಂಹಿತಾ–2023ರ (ಬಿಎನ್‌ಎಸ್) ಕಲಂ 224 (ಸರ್ಕಾರಿ ನೌಕರರಿಗೆ ಅವರ ಅಧಿಕೃತ ಕರ್ತವ್ಯಗಳ ಮೇಲೆ ಪ್ರಭಾವ ಬೀರಲು ಬೆದರಿಕೆ ಹಾಕಿದ) ಆರೋಪದಡಿ ಎಫ್‌ಐಆರ್ ದಾಖಲಿಸಲಾಗಿದೆ.

# ಬಾಂಗ್ಲಾ: ನದಿಗೆ ಬಸ್ ಉರುಳಿ 24 ಸಾವು

**ಢಾಕಾ (ಪಿಟಿಐ):** ಬಾಂಗ್ಲಾದೇಶದ ರಾಜ್‌ಬಾಢಿ ಜಿಲ್ಲೆಯಲ್ಲಿ, ಬಸ್ ನದಿಗೆ ಉರುಳಿ 24 ಮಂದಿ ಸಾವಿಗೀಡಾಗಿದ್ದು, ಹಲವರು ಕಾಣೆಯಾಗಿದ್ದಾರೆ. ಇಲ್ಲಿನ ಪದ್ಮಾ ನದಿಯ ದೌಲಾದಿಯಾ ಟರ್ಮಿನಲ್‌ನಲ್ಲಿ ಲಾಂಚ್ (ಬಾರ್ಜ್) ಮೇಲೆ ಬಸ್ ಏರುತ್ತಿದ್ದ ವೇಳೆ ಬುಧವಾರ ಅವಘಡ ಸಂಭವಿಸಿದೆ.

ಢಾಕಾಗೆ ತೆರಳುತ್ತಿದ್ದ ಬಸ್‌ನಲ್ಲಿ 40 ಮಂದಿ ಪ್ರಯಾಣಿಕರಿದ್ದರು ಎಂದು ಅಂದಾಜಿಸಲಾಗಿದೆ. 11 ಪ್ರಯಾಣಿಕರು ಈಜಿಕೊಂಡು ಹಾಗೂ ಸ್ಥಳೀಯರ ನೆರವಿನಿಂದ ಜೀವ ಉಳಿಸಿಕೊಂಡಿದ್ದಾರೆ. ಈವರೆಗೆ 24 ಶವಗಳನ್ನು ಹೊರತೆಗೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.



ಬಾಂಗ್ಲಾದೇಶದ ರಾಜ್‌ಬಾಢಿ ಜಿಲ್ಲೆಯಲ್ಲಿ ಬಸ್ ನದಿಗೆ ಉರುಳಿದ ಕ್ಷಣ– ಪಿಟಿಐ ಚಿತ್ರ

ಪ್ರಧಾನಿ ಪ್ರಧಾನಿ ತಾರಿಕ್ ರೆಹಮಾನ್ ಅವರು ಜಿಲ್ಲಾಡಳಿತದ ಅಧಿಕಾರಿಗಳಿಗೆ ಕರೆ ಮಾಡಿ, ಘಟನೆ ಕುರಿತು ಮಾಹಿತಿ ಪಡೆದಿದ್ದು, ತನಿಖೆಗೆ ಆದೇಶಿಸಿದ್ದಾರೆ.

### ‘ಕೊಲ್ಲಿ ಸಂಘರ್ಷ: ಅನಿರೀಕ್ಷಿತ ಪರಿಣಾಮ’

**ಮಾಸ್ಕೊ:** ಕೊಲ್ಲಿ ಸಂಘರ್ಷದಲ್ಲಿ ದಾಳಿ ಬೆಂಬಲಿಸುತ್ತಿರುವವರೂ ಸೇರಿದಂತೆ ಯಾರಿಗೂ ಗಂಭೀರ ಪರಿಣಾಮಗಳನ್ನು ಊಹಿಸಲು ಸಾಧ್ಯವಿಲ್ಲ. ಇದನ್ನು ಕೋವಿಡ್ ಸಾಂಕ್ರಮಿಕದಿಂದ ಆಗಿದ್ದ ಪರಿಣಾಮಕ್ಕೆ ಹೋಲಿಸಬಹುದು’ ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ತಿಳಿಸಿದ್ದಾರೆ. ಸಂಸತ್ತಿನಲ್ಲಿ ಕೈಗಾರಿಕಾ ಉದ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರಸ್ತುತ ಸಂಘರ್ಷವು ಹೆಚ್ಚಿನ ಪರಿಣಾಮ ಬೀರುತ್ತಿದೆ. ಅಂತರರಾಷ್ಟ್ರೀಯ ಸಾಗಣೆ, ಉತ್ಪಾದನೆ ಹಾಗೂ ಪೂರೈಕೆಗೆ ಸರಪಳಿಗೂ ಅಡ್ಡಿ ಉಂಟುಮಾಡಿದೆ ಎಂದು ತಿಳಿಸಿದ್ದಾರೆ.

# ಕೇಂದ್ರ, ಕಾಂಗ್ರೆಸ್ ಮಧ್ಯೆ ಜಟಾಪಟಿ

## ಮಹಿಳಾ ಮೀಸಲಾತಿ ಕಾಯ್ದೆ ಅನುಷ್ಠಾನ ಕುರಿತು ಚರ್ಚೆ

ಹಲವು ಪಕ್ಷಗಳೊಂದಿಗೆ ಸರ್ಕಾರ ಸಮಾಲೋಚನೆ ನಡೆಸಿದೆ. ಮಲ್ಲಿಕಾರ್ಜುನ ಖರ್ಗೆ ಅವರು 'ಪ್ರಧಾನ ವಿರೋಧ ಪಕ್ಷ'ದ ನಾಯಕರಾಗಿದ್ದು, ಅವರ ಸಹಕಾರ ಹಾಗೂ ಪಾಲ್ಗೊಳ್ಳುವಿಕೆ ನಿರ್ಣಾಯಕ

**ಕಿರಣ್ ರಿಜಿಜು,** ಕೇಂದ್ರ ಸಚಿವ

ಕಾಯ್ದೆಯಲ್ಲಿ ಕೆಲ ಬದಲಾವಣೆ ತರಬೇಕೆಂಬ ನಮ್ಮ ಬೇಡಿಕೆಗಳನ್ನು ನಿರ್ಲಕ್ಷಿಸಿ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಐದು ವರ್ಷ ಗತಿಸಿದ ನಂತರ ಮತ್ತೆ ತಿದ್ದುಪಡಿ ಅಗತ್ಯ ಏನು?

**ಮಲ್ಲಿಕಾರ್ಜುನ ಖರ್ಗೆ**
ರಾಜ್ಯಸಭೆಯಲ್ಲಿ ವಿಪಕ್ಷ ನಾಯಕ

ಪ್ರಜಾವಾಣಿ ವಾರ್ತೆ/ಪಿಟಿಐ

**ನವದೆಹಲಿ:** ಸಂಸತ್ ಹಾಗೂ ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33 ರಷ್ಟು ಮೀಸಲಾತಿ ನೀಡುವ ಕಾಯ್ದೆ ಅನುಷ್ಠಾನದ ವಿಚಾರವಾಗಿ ಕೇಂದ್ರ ಸರ್ಕಾರ ಹಾಗೂ ಕಾಂಗ್ರೆಸ್ ಸೇರಿ ವಿರೋಧ ಪಕ್ಷಗಳ ಮಧ್ಯೆ ಹಗ್ಗಜಗ್ಗಾಟ ಆರಂಭವಾಗಿದೆ.

ಈ ಕಾಯ್ದೆ ಅನುಷ್ಠಾನ ಕುರಿತು ಚರ್ಚಿಸಲು ಶೀಘ್ರವೇ ಸರ್ವಪಕ್ಷ ಸಭೆ ನಡೆಸಲು ಕೇಂದ್ರ ಇಚ್ಛಿಸಿದೆ. ಏಪ್ರಿಲ್ 29ರ ನಂತರ ಸರ್ವಪಕ್ಷ ಸಭೆ ಕರೆಯುವುದು ಸಮಂಜಸವಾಗದು. ಇದರಿಂದ ಕಾಯ್ದೆ ಅನುಷ್ಠಾನ ಮತ್ತಷ್ಟು ವಿಳಂಬವಾಗಲಿದೆ ಎಂಬುದು ಕೇಂದ್ರ ಸರ್ಕಾರದ ವಾದ.

'ಕೇಂದ್ರ ಸರ್ಕಾರದ ಈ ವಾದ ದಲ್ಲಿ ಹುರುಳಿಲ್ಲ. 2029ರಲ್ಲಿ ನಡೆಯುವ ಲೋಕಸಭಾ ಚುನಾವಣೆಗೆ ಅನ್ವಯವಾಗುವಂತೆ ಮಹಿಳಾ ಮೀಸಲಾತಿ ಕಾಯ್ದೆ ಜಾರಿಗೊಳಿಸ ಬಹುದು. ಇದಕ್ಕೆ ಸಾಕಷ್ಟು ಸಮಯವೂ ಇದೆ' ಎನ್ನುವ ಮೂಲಕ ಕೇಂದ್ರದ ಉತ್ಸಾಹಕ್ಕೆ ಕಾಂಗ್ರೆಸ್ ತಣ್ಣೀರೆರೆಚಿದೆ.

ಮಹಿಳಾ ಮೀಸಲಾತಿ ಕಾಯ್ದೆಗೆ ತಿದ್ದುಪಡಿ ತಂದು, ನೂತನ ಕಾಯ್ದೆಯನ್ನು ತ್ವರಿತವಾಗಿ ಜಾರಿಗೊಳಿಸುವುದು ಕೇಂದ್ರ ಸರ್ಕಾರದ ಆದ್ಯತೆಯಾಗಿದೆ. ಈ ಕುರಿತು ಚರ್ಚಿಸಲು ಸರ್ವಪಕ್ಷ ಸಭೆ ಆಯೋಜಿಸುವ ಸಂಬಂಧ ಸಂಸದೀಯ ಸಚಿವ ಕಿರಣ್ ರಿಜಿಜು ಅವರು ರಾಜ್ಯಸಭೆಯಲ್ಲಿ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದಿದ್ದಾರೆ ಎಂದು ಮೂಲಗಳು ಹೇಳಿವೆ.

ಇದಕ್ಕೆ ಪ್ರತಿಯಾಗಿ ರಿಜಿಜು ಅವರಿಗೆ ಪತ್ರ ರವಾನಿಸಿರುವ ಖರ್ಗೆ,'ಮಹಿಳಾ ಮೀಸಲಾತಿ ಕಾಯ್ದೆಗೆ ತಿದ್ದುಪಡಿ ತರುವುದಕ್ಕೆ ಸರ್ಕಾರ ಯಾಕಿಷ್ಟು ಅವಸರ ಮಾಡುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ' ಎಂದು ಪ್ರಶ್ನಿಸಿದ್ದಾರೆ.

'ಐದು ರಾಜ್ಯಗಳ ವಿಧಾನಸಭೆಗಳಿಗೆ ಏಪ್ರಿಲ್‌ನಲ್ಲಿ ಚುನಾವಣೆ ನಡೆಯಲಿದ್ದು, ನಾವು ಪ್ರಚಾರ ಕಾರ್ಯದಲ್ಲಿ ತೊಡಗಿದ್ದೇವೆ. ಈ ಕಾರಣಕ್ಕೆ, ಚುನಾವಣೆ ಮುಗಿದ ಬಳಿಕವೇ ಈ ವಿಚಾರ ಕುರಿತು ಸರ್ವಪಕ್ಷ ಕರೆಯ ಬೇಕು. ಹೀಗೆ ಮಾಡುವುದರಿಂದ, ಮಹಿಳಾ ಮೀಸಲಾತಿ ಕಾಯ್ದೆಗೆ (ನಾರಿ ಶಕ್ತಿ ವಂದನ ಅಧಿನಿಯಮ, 2023) ತಿದ್ದುಪಡಿ ತಂದು ಜಾರಿಗೊಳಿಸುವುದರ ಮೇಲೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ' ಎಂಬುದಾಗಿ ಖರ್ಗೆ ಅವರು ರಿಜಿಜು ಅವರಿಗೆ ಬರೆದ ಪತ್ರದಲ್ಲಿ ವಿವರಿಸಿದ್ದಾರೆ.

**ಕೆಲ ಪಕ್ಷಗಳಿಂದ ಮಾತುಕತೆ:** ಕಾಯ್ದೆಗೆ ತಿದ್ದುಪಡಿ ತರುವ ವಿಚಾರವಾಗಿ ಎಲ್ಲ ಪಕ್ಷಗಳ ನಡುವೆ ಒಮ್ಮತ ಮೂಡಿಸಲು ಕೇಂದ್ರ ಸರ್ಕಾರ ಪ್ರಯತ್ನಗಳನ್ನು ಮಾಡುತ್ತಲೇ ಇದೆ.

ಕಾಂಗ್ರೆಸ್, ಟಿಎಂಸಿ ಹಾಗೂ ಸಿಪಿಎಂ ನಾಯಕರು ಸರ್ಕಾರದ ಪ್ರತಿನಿಧಿಗಳನ್ನು ಭೇಟಿ ಮಾಡಿ, ಈ ವಿಚಾರ ಕುರಿತು ಚರ್ಚಿಸಲು ನಿರಾಕರಿಸಿದ್ದಾರೆ. ಮತ್ತೊಂದೆಡೆ, ಸಮಾಜವಾದಿ ಪಕ್ಷ, ಡಿಎಂಕೆ, ಬಿಜೆಡಿ, ವೈಎಸ್‌ಆರ್ ಕಾಂಗ್ರೆಸ್, ಎಐಎಂಐಎಂ, ಶಿವಸೇನಾ(ಯುಬಿಟಿ) ಹಾಗೂ ಎನ್‌ಸಿಪಿ(ಶರದ್‌ಪವಾರ್) ಪಕ್ಷಗಳ ಮುಖಂಡರು ಸರ್ಕಾರದ ಪ್ರತಿನಿಧಿಗಳನ್ನು ಭೇಟಿ ಮಾಡಿ, ಚರ್ಚಿಸಿದ್ದಾರೆ.

### ಭಾರತಕ್ಕೆ ಹಸ್ತಾಂತರ ವಿರೋಧಿಸಿ ಸಲ್ಲಿಸಲಾಗಿದ್ದ ಅರ್ಜಿ

# ಮರು ವಿಚಾರಣೆ: ನೀರವ್ ಮನವಿ ವಜಾ

**ನವದೆಹಲಿ(ಪಿಟಿಐ):** ಭಾರತಕ್ಕೆ ತಮ್ಮನ್ನು ಹಸ್ತಾಂತರಗೊಳಿಸುವುದನ್ನು ವಿರೋಧಿಸಿ ತಾನು ಸಲ್ಲಿಸಿದ್ದ ಅರ್ಜಿಯ ಮರು ವಿಚಾರಣೆ ನಡೆಸಬೇಕು ಎಂಬ ದೇಶಭ್ರಷ್ಟ ವಜ್ರ ವ್ಯಾಪಾರಿ ನೀರವ್ ಮೋದಿ ಮನವಿಯನ್ನು ಲಂಡನ್ ಹೈಕೋರ್ಟ್ ತಿರಸ್ಕರಿಸಿದೆ.



ನೀರವ್ ಮೋದಿ

'ಹಸ್ತಾಂತರ ಬಳಿಕ ನೀರವ್ ಮೋದಿ ಅವರನ್ನು ವಿಚಾರಣೆಗೆ ಒಳಪಡಿಸು ವುದಕ್ಕೆ ಸಂಬಂಧಿಸಿ ಭಾರತ ಸರ್ಕಾರ ನೀಡಿರುವ ಭರವಸೆಗಳು ನಂಬಲರ್ಹ ವಾಗಿರುವ ಕಾರಣ, ಈ ಪ್ರಕರಣ ಕುರಿತು ಮತ್ತೆ ವಿಚಾರಣೆ ನಡೆಸುವುದಕ್ಕೆ ಅನುಮತಿ ನೀಡಲು ಸಾಧ್ಯ ಇಲ್ಲ' ಎಂದು ನ್ಯಾಯಮೂರ್ತಿ ಗಳಾದ ಸ್ಟುವರ್ಟ್ ಸ್ಮಿತ್ ಹಾಗೂ ಜೆ ಅವರು ಇದ್ದ ವಿಭಾಗೀಯ ಪೀಠ ಹೇಳಿದೆ.

'ಬ್ರಿಟನ್‌ನ ಜೈಲಿನಿಂದ ಮುಂಬೈನಲ್ಲಿರುವ ವಿಚಾರಣಾ ನ್ಯಾಯಾಲಯಕ್ಕೆ ಕರೆದೊಯ್ಯು ವಾಗ, ಪ್ರಯಾಣದ ವೇಳೆ ನೀರವ್ ಮೋದಿ ಅವರಿಗೆ ಭಾರತದ ಅಧಿಕಾರಿಗಳು ಚಿತ್ರಹಿಂಸೆ ನೀಡುವ ಅಥವಾ ಅವರೊಂದಿಗೆ ಕೆಟ್ಟದಾಗಿ ವರ್ತಿಸುವ ಅಪಾಯ ಇದೆ ಎಂಬ ವಾದವನ್ನು ಒಪ್ಪಲು ಸಾಧ್ಯ ಇಲ್ಲ. ಈ ವಿಚಾರದಲ್ಲಿ ಭಾರತದ ಗೃಹ ಸಚಿವಾಲಯ, ಮಹಾರಾಷ್ಟ್ರ ಸರ್ಕಾರ ಹಾಗೂ ಇತರ ಐದು ತನಿಖಾ ಸಂಸ್ಥೆಗಳು ನೀಡಿರುವ ವಾಗ್ದಾನಗಳು ಸ್ಪಷ್ಟವಾಗಿವೆ' ಎಂದೂ ಹೇಳಿದೆ.

'ಭ್ರಷ್ಟಾಚಾರ ಆರೋಪ ಎದುರಿಸುತ್ತಿ ರುವ ಸಂಜಯ್ ಭಂಡಾರಿ ಅವರನ್ನು ಹಸ್ತಾಂತರಿಸಿದಲ್ಲಿ, ಭಾರತದ ತನಿಖಾ ಸಂಸ್ಥೆಗಳು ಅವರಿಗೆ ಚಿತ್ರಹಿಂಸೆ ನೀಡುವ ಸಾಧ್ಯತೆ ಇದೆ' ಎಂಬ ಕಾರಣ ನೀಡಿ, ದೇಶಭ್ರಷ್ಟ ಆರೋಪಿ ಭಂಡಾರಿ ಅವರನ್ನು ಭಾರತಕ್ಕೆ ಹಸ್ತಾಂತರಿಸುವುದನ್ನು ಲಂಡನ್‌ನ ನ್ಯಾಯಾಲಯವೊಂದು ರದ್ದು ಮಾಡಿತ್ತು.

# ಸಚಿವ ಜಿರವಾಲ್ ರಾಜೀನಾಮೆಗೆ ಕಾಂಗ್ರೆಸ್ ಆಗ್ರಹ

**ಮುಂಬೈ(ಪಿಟಿಐ):** ಮಹಾರಾಷ್ಟ್ರದ ಆಹಾರ ಸಚಿವ ನರಹರಿ ಜಿರವಾಲ್ ಅವರು ತಮ್ಮ ಗೃಹ ಕಚೇರಿಯಲ್ಲಿ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಯೊಂದಿಗೆ ಅಶ್ಲೀಲವಾಗಿ ವರ್ತಿಸುತ್ತಿದ್ದುದಕ್ಕೆ ಸಂಬಂಧಿಸಿದ್ದು ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ವಾಗಿ ಹರಿ ದಾಡಿದ್ದು, ವಿವಾದಕ್ಕೆ ಕಾರಣವಾಗಿದೆ.

ಇದರ ಬೆನ್ನಲ್ಲೇ, ಸಚಿವ ಹಾಗೂ ಎನ್‌ಸಿಪಿ(ಅಜಿತ್ ಪವಾರ್) ನಾಯಕ ಜಿರವಾಲ್ ವಿರುದ್ಧ ವಾಗ್ದಾಳಿ ನಡೆಸಿರುವ ಕಾಂಗ್ರೆಸ್, ಕೂಡಲೇ ಅವರನ್ನು ಸಂಪುಟ ದಿಂದ ಕೈಬಿಡಬೇಕು ಎಂದು ಆಗ್ರಹಿಸಿದೆ.

'ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿ ಯೊಂದಿಗಿನ ಜಿರವಾಲ್ ಅವರ ವರ್ತನೆ ಅಶ್ಲೀಲ ಹಾಗೂ ಅನೈತಿಕ. ಇದು ಮಹಾ ರಾಷ್ಟ್ರ ರಾಜಕಾರಣ ನೈತಿಕವಾಗಿ ಅಧೋಗತಿಗೆ ಇಳಿದಿರುವುದನ್ನು ತೋರಿ ಸುತ್ತದೆ' ಎಂದು ಕಾಂಗ್ರೆಸ್ ನಾಯಕ ವಿಜಯ ವಡೆಟ್ಟಿವಾರ್ ಟೀಕಿಸಿದ್ದಾರೆ.

'ಜಿರವಾಲ್ ಅವರ ಈ ಖಾಸಗಿ ಕ್ಷಣ ಗಳನ್ನು ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಯ ಸಹೋದರನೇ ಚಿತ್ರೀಕರಿಸಿದ್ದು, ಬ್ಲ್ಯಾಕ್ ಮೇಲ್ ಮಾಡುವ ಕಾರಣಕ್ಕೆ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊವನ್ನು ಹರಿ ಬಿಟ್ಟಿದ್ದಾನೆ ಎನ್ನಲಾಗಿದೆ' ಎಂದಿದ್ದಾರೆ.

# ವಂದೇ ಭಾರತ್: ಮೊಸರಿನಲ್ಲಿ ಹುಳು ಪತ್ತೆ, ₹50 ಲಕ್ಷ ದಂಡ

**ನವದೆಹಲಿ (ಪಿಟಿಐ):** ಪಟ್ನಾ–ಟಾಟಾನಗರ ವಂದೇ ಭಾರತ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಕರಿಗೆ ನೀಡಲಾದ ಮೊಸರಿನ ಪ್ಯಾಕೆಟ್‌ನಲ್ಲಿ ಹುಳುಗಳು ಪತ್ತೆಯಾದ ಕಾರಣ ರೈಲ್ವೆ ಸಚಿವಾಲಯವು ಆಹಾರ ಪೂರೈಕೆದಾರರ ಗುತ್ತಿಗೆಯನ್ನು ರದ್ದುಗೊಳಿಸಿ, ₹50 ಲಕ್ಷ ದಂಡ ವಿಧಿಸಿದೆ.

ಈ ಪ್ರಕರಣವನ್ನು ಸರಿಯಾಗಿ ನಿರ್ವಹಿಸದ ಕಾರಣಕ್ಕೆ, ರೈಲ್ವೆ ಸಚಿವಾಲಯವು ತನ್ನದೇ ಕಂಪನಿ, ಭಾರತೀಯ ರೈಲ್ವೆ ಆಹಾರ ಸರಬರಾಜು ಮತ್ತು ಪ್ರವಾಸೋದ್ಯಮ ನಿಗಮಕ್ಕೂ (ಐಆರ್‌ಸಿಟಿಸಿ) ₹10 ಲಕ್ಷ ದಂಡ ವಿಧಿಸಿದೆ. ಮಾರ್ಚ್ 15ರಂದು ವಂದೇ ಭಾರತ್‌ನಲ್ಲಿ ಪ್ರಯಾಣಿಸುತ್ತಿದ್ದ ಏಳು ಜನರಿಗೆ ಊಟದೊಂದಿಗೆ ನೀಡಲಾಗಿದ್ದ ಮೊಸರಿನ ಪ್ಯಾಕೆಟ್‌ನಲ್ಲಿ ಜೀವಂತ ಹುಳು, ಕೀಟಗಳು ಪತ್ತೆಯಾಗಿದ್ದವು. ಅವರಲ್ಲಿ ಒಬ್ಬ ಪ್ರಯಾಣಿಕರು ಈ ವಿಚಾರವನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿ ಐಆರ್‌ಸಿಟಿಸಿ, ರೈಲ್ವೆ ಸಚಿವಾಲಯ ಮತ್ತು ಇತರರನ್ನು ಟ್ಯಾಗ್ ಮಾಡಿದ್ದರು.

'ಅಧಿಕಾರಿಗಳು ಪ್ರಯಾಣಿಕರಲ್ಲಿ ಕ್ಷಮೆಯಾಚಿಸಿದ್ದಾರೆ ಮತ್ತು ಅವರಿಗೆ ಸಿಹಿ ನೀಡಿದ್ದಾರೆ. ಆದರೂ, ಈ ವಿಚಾರವನ್ನು 'ವೈರಲ್' ಮಾಡುವ ಉದ್ದೇಶದಿಂದ ಅವರು 'ಎಕ್ಸ್'ಪೋಸ್ಟ್ ಅನ್ನು ತೆಗೆದು ಹಾಕಲು ನಿರಾಕರಿಸಿದರು' ಎಂದು ಐಆರ್‌ಸಿಟಿಸಿ ವರದಿ ನೀಡಿತ್ತು. ಆಹಾರ ಪೂರೈಕೆದಾರರಾದ ಕೃಷ್ಣ ಎಂಟರ್‌ಪ್ರೈಸಸ್‌ಗೆ ₹25 ಸಾವಿರ ದಂಡ ವಿಧಿಸಲಾಗಿತ್ತು. ಐಆರ್‌ಸಿಟಿಸಿ ಕ್ರಮದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ರೈಲ್ವೆ ಸಚಿವಾಲಯ ಗುತ್ತಿಗೆ ರದ್ದತಿಗೆ, ದಂಡದ ಮೊತ್ತ ₹50 ಲಕ್ಷಕ್ಕೆ ಏರಿಸುವಂತೆ ಸೂಚಿಸಿದೆ.

# ಬಾಕಿ: ಕೇಂದ್ರದ ಬಳಿಗೆ ಸರ್ವಪಕ್ಷ ನಿಯೋಗ

## ವಿಧಾನಪರಿಷತ್: ಬಜೆಟ್ ಮೇಲಿನ ಚರ್ಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಬೇಕಿರುವ ನ್ಯಾಯಯುತ ಆರ್ಥಿಕ ಪಾಲಿನ ಬಾಕಿ ಉಳಿಸಿಕೊಂಡಿರುವುದು ಬಜೆಟ್ ಮೇಲೂ ಪರಿಣಾಮ ಬೀರಿದೆ. ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರನ್ನೂ ಒಳಗೊಂಡ ಸರ್ವಪಕ್ಷ ನಿಯೋಗ ತೆರಳಿ, ಒತ್ತಡ ಹಾಕಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬಜೆಟ್ ಮೇಲಿನ ಚರ್ಚೆಗೆ ವಿಧಾನ ಪರಿಷತ್‌ನಲ್ಲಿ ಗುರುವಾರ ಅವರು ಉತ್ತರ ನೀಡಿದರು.

'ಗ್ಯಾರಂಟಿ ಯೋಜನೆಗಳನ್ನು ಬಿಟ್ಟರೆ ಯಾವುದೇ ಜನಪರ ಕಾರ್ಯಕ್ರಮಗಳನ್ನು ನೀಡಿಲ್ಲ, ಉತ್ತರ ತೃಪ್ತಿ ತಂದಿಲ್ಲ' ಎಂದು ಆರೋಪಿಸಿ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ಬಿಜೆಪಿ–ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು.

ವಿಪಕ್ಷ ಸದಸ್ಯರ ಅನುಪಸ್ಥಿತಿಯಲ್ಲಿಯೇ, ಧನ ವಿನಿಯೋಗದ ಮಸೂದೆಗಳಿಗೆ ಸರ್ಕಾರ ಅನುಮೋದನೆ ಪಡೆಯಿತು.

ಇದಕ್ಕೆ ಮೊದಲು ಮಾತನಾಡಿದ ಸಿದ್ದರಾಮಯ್ಯ ಅವರು, 'ಕೇಂದ್ರ ಸರ್ಕಾರ ತೆರಿಗೆ, ಅನುದಾನ, ಯೋಜನೆಗಳ ಪಾಲು ಸೇರಿದಂತೆ ಎಲ್ಲ ರೀತಿಯಿಂದಲೂ ರಾಜ್ಯಕ್ಕೆ ಅನ್ಯಾಯ ಮಾಡಿದೆ. ಜಿಎಸ್‌ಟಿ ಪರಿಷ್ಕರಣೆಯಿಂದ ₹10 ಸಾವಿರ ಕೋಟಿ ನಷ್ಟವಾಗಿದೆ. 15ನೇ ಹಣಕಾಸು ಶಿಫಾರಸು ಮಾಡಿದ ₹11,495 ಕೋಟಿ, ಭದ್ರಾ ಮೇಲ್ದಂಡೆ ಯೋಜನೆಗೆ 2023-24ನೇ ಸಾಲಿನ ಬಜೆಟ್‌ನಲ್ಲಿ ನೀಡಬೇಕಿರುವ ₹5,300 ಕೋಟಿ, ಜಲ ಜೀವನ್ ಮಿಷನ್ ಬಾಕಿ ₹15,000 ಕೋಟಿ ಸೇರಿದಂತೆ ಬಾಕಿ ಇದೆ' ಎಂದರು.

'ಎಲ್ಲ ಬಾಕಿ ಮೊತ್ತ ನೀಡುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಕೊಡಮ್ಮ ತಾಯಿ ಎಂದು ಬೇಡಿಕೊಂಡರೂ ಸ್ಪಂದಿಸಿಲ್ಲ. ಹಲವು ಬಾರಿ ದೆಹಲಿಗೆ ತೆರಳಿ ದಮ್ಮಯ್ಯ ಎಂದರೂ ಹಣ ಬಿಡುಗಡೆ ಮಾಡಿಲ್ಲ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗ, ಭದ್ರಾ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸುವುದಾಗಿ ಕೇಂದ್ರ ಸರ್ಕಾರ ಭರವಸೆ ನೀಡಿತ್ತು. ಈ ಯಾವ ಘೋಷಣೆಗಳು ಫಲ ಕಾಣಲಿಲ್ಲ. ರಾಜ್ಯಕ್ಕಾಗಿರುವ ಅನ್ಯಾಯವನ್ನು ರಾಜ್ಯ ಬಿಜೆಪಿ ನಾಯಕರು ಪ್ರಶ್ನಿಸಬೇಕು. ಈಗಲಾದರೂ ಸರ್ವಪಕ್ಷದ ನಿಯೋಗದ ಜತೆ ಬರಬೇಕು. ರಾಜ್ಯದ ಪರವಾಗಿ ಕೇಂದ್ರದ ಬಳಿ ಧ್ವನಿ ಎತ್ತಬೇಕು' ಎಂದು ಹೇಳಿದರು.

'ಕೃಷ್ಣಾ ಮೇಲ್ದಂಡೆ ಯೋಜನೆಗೆ ಕೇಂದ್ರ ಅಧಿಸೂಚನೆಯನ್ನು ಕೇಂದ್ರ ಹೊರಡಿಸಿಲ್ಲ. ಇದರ ಜಾರಿಗೆ ಬಿಜೆಪಿ ಸಂಸದರು ಪ್ರಯತ್ನಿಸಬೇಕು. ಯೋಜನೆಯ ಭೂಸ್ವಾಧೀನಕ್ಕೆ ₹3,000 ಕೋಟಿ ಇಡಲಾಗಿದೆ. ಬಿಜೆಪಿ ಆಡಳಿತದಲ್ಲಿದ್ದಾಗ ಭೂ ಪರಿಹಾರ ನೀಡಬಹುದಾಗಿತ್ತು. ನೀರಾವರಿ ಜಮೀನಿಗೆ ₹40 ಲಕ್ಷ ಹಾಗೂ ಖುಷ್ಕಿ ಜಮೀನಿಗೆ ₹30 ಲಕ್ಷ ನಿಗದಿ ಮಾಡಿದ್ದೇವೆ. ಪೂರಕ ಬಜೆಟ್‌ನಲ್ಲಿ ಮತ್ತಷ್ಟು ಅನುದಾನ ನೀಡಲಾಗುವುದು. ಮಹದಾಯಿ, ಮೇಕೆದಾಟು ಯೋಜನೆಗೂ ಕೇಂದ್ರ ಸರ್ಕಾರದ ಅನುಮತಿ ಸಿಕ್ಕಿಲ್ಲ' ಎಂದು ದೂರಿದರು.

'ಬಿಜೆಪಿ ಶ್ರೀಮಂತರ ಪರವಾಗಿದೆ. ಬಡವರ ವಿರೋಧಿ. ಅದಕ್ಕಾಗಿಯೇ ಬಡವರು, ಮಹಿಳೆಯರ ಸಬಲೀಕರಣದ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿದೆ. ಮಹಿಳಾ ಪರ ಕಾರ್ಯಕ್ರಮಗಳನ್ನು ವಿರೋಧಿಸುವುದು ಮನುವಾದ' ಎಂದು ಸಿದ್ದರಾಮಯ್ಯ ಟೀಕಿಸಿದರು.

ವಿಧಾನ ಪರಿಷತ್ತಿನಲ್ಲಿ ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ. ಸಭಾ ನಾಯಕ ಬೋಸರಾಜು, ಸದಸ್ಯರಾದ ಬಿ.ಕೆ. ಹರಿಪ್ರಸಾದ್, ಸಚಿವ ಭೈರತಿ ಸುರೇಶ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

### ವಿಧಾನಪರಿಷತ್ ಸದಸ್ಯರ ನಿಧಿ ಹೆಚ್ಚಳ

ವಿಧಾನ ಪರಿಷತ್ ಸದಸ್ಯರ ಕ್ಷೇತ್ರಾಭಿವೃದ್ಧಿ ಅನುದಾನವನ್ನು ಹೆಚ್ಚಿಸಲಾಗುವುದು ಎಂದು ಸಿದ್ದರಾಮಯ್ಯ ಹೇಳಿದರು.

ವಾರ್ಷಿಕ ಅನುದಾನವನ್ನು ₹2 ಕೋಟಿಯಿಂದ ₹4 ಕೋಟಿಗೆ ಹೆಚ್ಚಳ ಮಾಡಲಾಗಿದೆ. ವಿಧಾನಸಭೆಯ ಸದಸ್ಯರ ರೀತಿಯಲ್ಲೇ ವಿಧಾನ ಪರಿಷತ್ ಸದಸ್ಯರ ಕ್ಷೇತ್ರಗಳ ಮೂಲ ಸೌಕರ್ಯ ಅಭಿವೃದ್ಧಿಗೆ ₹5ರಿಂದ ₹10 ಕೋಟಿ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ ಆಡಳಿತ-ವಿರೋಧ ಪಕ್ಷಗಳ ಸದಸ್ಯರ ಮನವಿಗೆ ಸ್ಪಂದಿಸಿದ ಅವರು, ಈಗಾಗಲೇ ಬಜೆಟ್‌ನಲ್ಲಿ ₹4,000 ಕೋಟಿ ಮೀಸಲಿಡಲಾಗಿದೆ. ಈ ಕುರಿತು ಚರ್ಚಿಸಿ, ಉಚಿತ ನಿರ್ಧಾರ ಪ್ರಕಟಿಸಲಾಗುವುದು ಎಂದರು.

### ದುರಂಧರ್–ದುರಂತರ್

ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, 'ಬಜೆಟ್ ಟೀಕೆಗಳಿಗೆ ಉತ್ತರ ನೀಡುವಾಗ, ಕೇಂದ್ರ ಸರ್ಕಾರವನ್ನು ಟೀಕಿಸುತ್ತಾರೆ. ದೇಶದ ರಕ್ಷಣೆಗೆ ವ್ಯಯಿಸುವ ಲೆಕ್ಕ ರಾಜ್ಯದ ಜತೆ ಹೋಲಿಸಲು ಸಾಧ್ಯವಿಲ್ಲ. ಆಪರೇಷನ್ ಸಿಂಧೂರ ನಡೆಸಿದ ಪ್ರಧಾನಿ ನರೇಂದರ್ ನಮ್ಮ ದುರಂಧರ್' ಎಂದರು.

ಅದಕ್ಕೆ ಆಡಳಿತ ಪಕ್ಷದ ಸದಸ್ಯರು ದುರಂತರ್ ಎಂದು ಕೂಗಿದರು. 'ನೀವು ಒಪ್ಪಿಕೊಂಡಿರಲ್ಲ ಧನ್ಯವಾದ' ಎಂದು ಛಲವಾದಿ ಪ್ರತಿಕ್ರಿಯಿಸಿದರು. ಆಗ ಬಿಜೆಪಿಯ ಭಾರತಿ ಶೆಟ್ಟಿ ಅವರು 'ಕಾಂಗ್ರೆಸ್ ಸದಸ್ಯರು ಟೀಕೆ ಮಾಡುತ್ತಿದ್ದಾರೆ' ಎಂದು ಎಚ್ಚರಿಸಿದರು.

'ನೀವು ವ್ಯಕ್ತಿ ಪೂಜೆ ಮಾಡಬೇಡಿ, ಹಾಗೆ ಮಾಡಿದರೆ ಸರ್ವಾಧಿಕಾರಕ್ಕೆ ದಾರಿ ಮಾಡಿಕೊಡುತ್ತದೆ. ಪ್ರಜಾಪ್ರಭುತ್ವ ನಾಶಕ್ಕೆ ಕಾರಣವಾಗುತ್ತದೆ' ಎಂದು ಸಚಿವ ಎಂ.ಬಿ. ಪಾಟೀಲ, ಬೈರತಿ ಸುರೇಶ್, ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ ಬಿಜೆಪಿ ಸದಸ್ಯರಿಗೆ ಸಲಹೆ ನೀಡಿದರು.

'ಹೈಕಮಾಂಡ್ ಬಯಸಿದರೆ ಇನ್ನೂ ಎರಡು ಬಜೆಟ್ ಮಂಡಿಸುವೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಇಂತಹ ಬಜೆಟ್ ಮಂಡಿಸುವುದಾದರೆ ಅವರು ಹಣಕಾಸು ಖಾತೆಯನ್ನೇ ವಹಿಸಿಕೊಳ್ಳದಿರುವುದು ಒಳ್ಳೆಯದು' ಎಂದು ಛಲವಾದಿ ಟೀಕಿಸಿದರು.

### ಬೊಮ್ಮಾಯಿ ಖರ್ಚು ₹37 ಕೋಟಿ: ಸಿದ್ದರಾಮಯ್ಯ

ಮುಖ್ಯಮಂತ್ರಿಯಾಗಿ ಸಮಯದ ಅಭಾವದ ಕಾರಣ ಹೆಲಿಕಾಪ್ಟರ್, ವಿಶೇಷ ವಿಮಾನ ಬಳಸಿದ್ದನ್ನೇ ಪ್ರತಿಪಕ್ಷಗಳು ಟೀಕಿಸಿವೆ. ವಾಸ್ತವದಲ್ಲಿ ಬಿಜೆಪಿ ಅವಧಿಯಲ್ಲೇ ಅಂದಿನ ಮುಖ್ಯಮಂತ್ರಿಗಳು ವಿಮಾನಯಾನಕ್ಕೆ ಅಧಿಕ ಹಣ ವ್ಯಯಿಸಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

'ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ 2021–22ರಲ್ಲಿ ₹37 ಕೋಟಿ ಖರ್ಚು ಮಾಡಿದ್ದಾರೆ. 2023–24ರಲ್ಲಿ ನಾನು ಖರ್ಚು ಮಾಡಿರುವುದು ₹29 ಕೋಟಿ. ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಒಂದು ವರ್ಷಕ್ಕೆ ₹814 ಕೋಟಿ ವ್ಯಯಿಸಿದ್ದಾರೆ' ಎಂದು ಅಂಕಿಅಂಶ ನೀಡಿದರು.

ಬಿಜೆಪಿ ನಾಯಕರು ಅರ್ಥವಿಲ್ಲದೆ ಟೀಕೆ ಮಾಡುತ್ತಾರೆ. ರಾಜ್ಯ ಸರ್ಕಾರಗಳು ಪುರಸಭೆಗಳಲ್ಲ. ದೇಶ ಸುಭದ್ರವಾಗಿರಲು ಒಕ್ಕೂಟ ವ್ಯವಸ್ಥೆ ಕಾರಣ. ಕರ್ನಾಟಕದಿಂದ ಕೇಂದ್ರಕ್ಕೆ ತೆರಿಗೆ ರೂಪದಲ್ಲಿ 2024–25ನೇ ಸಾಲಿನಲ್ಲಿ ₹4.50 ಲಕ್ಷ ಕೋಟಿ ಹೋಗಿದೆ. ಇದನ್ನೆಲ್ಲ ಕೇಂದ್ರ ಸರ್ಕಾರ, ಬಿಜೆಪಿ ನಾಯಕರು ಅರ್ಥ ಮಾಡಿಕೊಳ್ಳಬೇಕು ಎಂದರು.

### ಎ, ಬಿ, ಸಿ ಗುಂಪಿಗೇ ಬೆಂಕಿ

ಒಳಮೀಸಲಾತಿ ಹೆಸರಿನಲ್ಲಿ ಪರಿಶಿಷ್ಟ ಸಮುದಾಯವನ್ನು ಎ, ಬಿ, ಸಿ ಗುಂಪುಗಳಾಗಿ ವಿಂಗಡಿಸಲಾಗಿದೆ. ಈಗ ಮೂರು ಗುಂಪುಗಳು ಪರಸ್ಪರ ಕಿತ್ತಾಟ ನಡೆಸಿವೆ. ಈ ಶ್ರೇಯಸ್ಸು ಸಿದ್ದರಾಮಯ್ಯ ಅವರಿಗೆ ಸಲ್ಲಲಿದೆ ಎಂದು ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು.

ಮೊದಲು ಎಲ್ಲರೂ ಪರಿಶಿಷ್ಟ ಸಮುದಾಯದ ನಾಯಕರು ಎಂದು ಹೇಳಿಕೊಳ್ಳುತ್ತಿದ್ದರು. ಈಗ ಪರಿಶಿಷ್ಟ ಸಮುದಾಯದ ಎ, ಬಿ, ಸಿ ವರ್ಗದ ನಾಯಕರು ಎಂದು ಹೇಳಿಕೊಳ್ಳಬೇಕಿದೆ. ಕೆಲ ಸಂಘಟನೆಗಳು ಸರ್ಕಾರದ ವಿರುದ್ಧ ಹೋರಾಟವನ್ನೇ ಕೈಬಿಟ್ಟಿವೆ. ಪ್ಯಾಕೇಜ್ ಸಂಘಟನೆಗಳಾಗಿವೆ. ಪ್ರತಿಭಟನೆ ನೆಪದಲ್ಲಿ ಲಾಭ ಮಾಡಿಕೊಂಡು ಹೋಗುತ್ತಿದ್ದಾರೆ.

### ಆಡಳಿತ–ವಿರೋಧ ಪಕ್ಷಕ್ಕೆ 'ಪ್ರಜಾವಾಣಿ'ಯೇ ಆಕರ

ಸಿದ್ದರಾಮಯ್ಯ ಅವರು ಬಜೆಟ್ ಮಂಡನೆಯ ಮರು ದಿನದ 'ಪ್ರಜಾವಾಣಿ' ಸಂಚಿಕೆಯ ಸಂಪಾದಕೀಯವನ್ನು ಸದನದಲ್ಲಿ ಓದಿದರು. 2026–27ನೇ ಸಾಲಿನ ಬಜೆಟ್ ಜನಸಾಮಾನ್ಯರ ಬಜೆಟ್ ಎನ್ನುವುದಕ್ಕೆ ಇದಕ್ಕಿಂತ ಸಾಕ್ಷಿ ಬೇಕಾ ಎಂದು ವಿರೋಧ ಪಕ್ಷಗಳ ಸದಸ್ಯರನ್ನು ಪ್ರಶ್ನಿಸಿದರು.

ಆಗ ಛಲವಾದಿ ನಾರಾಯಣಸ್ವಾಮಿ, ಸಿ.ಟಿ.ರವಿ ಅವರು, 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ಬಜೆಟ್ ಮೇಲಿನ ಕೆಲ ವಿಶ್ಲೇಷಣೆಗಳನ್ನು ಪ್ರದರ್ಶಿಸಿ, 'ಪತ್ರಿಕೆಗಳ ವಸ್ತುನಿಷ್ಠ ವಿಮರ್ಶೆಗಳನ್ನೂ ಒಪ್ಪಿಕೊಳ್ಳಿ' ಎಂದು ಹೇಳಿದರು.

## ಸುದ್ದಿ 2 ನಿಮಿಷ

### ಸಂಸದೀಯ ಇತಿಹಾಸದಲ್ಲಿ ಹೊಸ ದಾಖಲೆ: ಯು.ಟಿ.ಖಾದರ್

**ಬೆಂಗಳೂರು:** 'ಪ್ರಸಕ್ತ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಮಾರ್ಚ್ 24ರಂದು ನಡೆದ ಕಲಾಪವು ಬೆಳಿಗ್ಗೆ 11.35ಕ್ಕೆ ಆರಂಭವಾಗಿ ಮಧ್ಯರಾತ್ರಿಯನ್ನೂ ದಾಟಿ 1.42ರವರೆಗೆ ಸತತವಾಗಿ ನಡೆಯಿತು. ಇದು ಸಂಸದೀಯ ಇತಿಹಾಸದಲ್ಲಿ ಹೊಸ ದಾಖಲೆ' ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು.

ಬಜೆಟ್ ಅಧಿವೇಶನವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿಧಾನಸಭೆಯ ಇತಿಹಾಸದಲ್ಲಿಯೇ ದಾಖಲಾದ ಸುದೀರ್ಘ ಅವಧಿಯ ಕಲಾಪಗಳಲ್ಲಿ ಇದೂ ಒಂದು. ಹೀಗೆ ನಡೆಸುವ ಮೂಲಕ ಜನಪರ ವಿಷಯಗಳ ಕುರಿತು ಚರ್ಚಿಸಲು ಸರ್ಕಾರ ಮತ್ತು ವಿರೋಧ ಪಕ್ಷಗಳು ತೋರಿದ ಬದ್ಧತೆ ಶ್ಲಾಘನೀಯ' ಎಂದರು.

'16ನೇ ವಿಧಾನಸಭೆಯ ಒಂಬತ್ತನೇ ಅಧಿವೇಶನ ಒಟ್ಟು 13 ದಿನ ನಡೆದಿದ್ದು, 80 ಗಂಟೆ 12 ನಿಮಿಷಗಳ ಸುದೀರ್ಘ ಚರ್ಚೆಗಳನ್ನು ಒಳಗೊಂಡಿದೆ. ಆ ಮೂಲಕ, ಕೆಲವು ಹೊಸ ದಾಖಲೆಗಳನ್ನು ನಿರ್ಮಿಸಿದೆ. ಮಂಡನೆಯಾದ ಒಟ್ಟು 12 ಮಸೂದೆಗಳ ಪೈಕಿ, ಧನ ವಿನಿಯೋಗ ಮಸೂದೆಗಳು ಸೇರಿದಂತೆ 11 ಮಸೂದೆಗಳನ್ನು ವಿಸ್ತೃತ ಚರ್ಚೆಯ ನಂತರ ಅಂಗೀಕರಿಸಲಾಯಿತು. ಇದು ಸರ್ಕಾರದ ಶಾಸನಾತ್ಮಕ ಕಾರ್ಯ ಚಟುವಟಿಕೆಯ ವೇಗವನ್ನು ದೃಢೀಕರಿಸುತ್ತದೆ' ಎಂದು ಅಭಿಪ್ರಾಯಪಟ್ಟರು.

'ಒಟ್ಟು 2,791 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 195 ಚುಕ್ಕೆ ಗುರುತಿನ ಪ್ರಶ್ನೆಗಳಲ್ಲಿ 180ಕ್ಕೆ ಉತ್ತರ ನೀಡಲಾಗಿದೆ. 2,503 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪೈಕಿ 2,254 ಕ್ಕೆ ಉತ್ತರ ಒದಗಿಸಲಾಗಿದೆ. 323 ಗಮನ ಸೆಳೆಯುವ ಸೂಚನೆಗಳಲ್ಲಿ 158ಕ್ಕೆ ಉತ್ತರ ನೀಡಲಾಗಿದೆ. ಸಾರ್ವಜನಿಕ ಹಿತಾಸಕ್ತಿಯ ವಿಷಯಗಳ ಚರ್ಚೆಗೆ ಪೂರಕವಾಗಿರುವ ಮಹಾ ಲೇಖಪಾಲರ ಹಲವು ಪ್ರಮುಖ ವರದಿಗಳನ್ನು ಸದನದಲ್ಲಿ ಮಂಡಿಸಲಾಗಿದೆ. ಮುಂದಿನ ನಾಲ್ಕು ವರ್ಷಗಳ ಕಾಲ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮಾಡಲು ದಿಕ್ಸೂಚಿ ಆಗಲಿರುವ ಐದನೇ ರಾಜ್ಯ ಹಣಕಾಸು ಆಯೋಗದ ವರದಿಯನ್ನೂ ಮಂಡಿಸಲಾಯಿತು' ಎಂದರು.



### ವಿಧಾನ ಮಂಡಲ ಅಧಿವೇಶನ ಅನಿರ್ದಿಷ್ಟಾವಧಿಗೆ ಮುಂದೂಡಿಕೆ

**ಬೆಂಗಳೂರು:** ಇದೇ 6ರಿಂದ ಆರಂಭವಾದ ವಿಧಾನ ಮಂಡಲದ ಬಜೆಟ್ ಅಧಿವೇಶನವು ಅನಿರ್ದಿಷ್ಟಾವಧಿ ಅವಧಿಗೆ ಮುಂದೂಡಿಕೆಯಾಯಿತು.

ವಿಧಾನ ಮಂಡಲದ ಉಭಯ ಸದನಗಳಲ್ಲಿ 13 ದಿನ ಕಲಾಪ ನಡೆಯಿತು. ಮರ್ಯಾದೆಗೇಡು ಹತ್ಯೆಯಂತಹ ಅಮಾನವೀಯ ಕೃತ್ಯಗಳಿಗೆ ಕಡಿವಾಣ ಹಾಕುವ ಉದ್ದೇಶದ 'ಇವ ನಮ್ಮವ ಇವ ನಮ್ಮವ ಮಸೂದೆ', ಪಂಚಾಯತಿ ಚುನಾವಣೆಗಳಲ್ಲಿ ಮತಯಂತ್ರಗಳ ಬದಲಿಗೆ ಮತಪತ್ರಗಳನ್ನು ಬಳಸಲು ಅವಕಾಶ ಮಾಡಿಕೊಡುವ ಮಸೂದೆ ಮೇಲೆ ಉಭಯ ಸದನಗಳಲ್ಲಿ ಸುದೀರ್ಘ ಚರ್ಚೆ ನಡೆಯಿತು.

## ಐಪಿಎಲ್: ಶಾಸಕರಿಗೆ ತಲಾ ನಾಲ್ಕು ಟಿಕೆಟ್‌ಗೆ ಒತ್ತಾಯ

**ಬೆಂಗಳೂರು:** 'ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಐಪಿಎಲ್ ಮತ್ತು ಇತರ ಕ್ರಿಕೆಟ್ ಪಂದ್ಯಗಳು ನಡೆಯುವಾಗ ಶಾಸಕರಿಗೆ ತಲಾ ನಾಲ್ಕು ಟಿಕೆಟ್ ನೀಡಬೇಕು ಮತ್ತು ಪಂದ್ಯ ವೀಕ್ಷಣೆಗೆ ಪ್ರತ್ಯೇಕ ಗ್ಯಾಲರಿ ವ್ಯವಸ್ಥೆ ಮಾಡಬೇಕು ಎಂಬ ಬೇಡಿಕೆಯ ಬಗ್ಗೆ ಅಧ್ಯಕ್ಷರ ಜತೆ ಮಾತನಾಡಿ, ವ್ಯವಸ್ಥೆ ಮಾಡುತ್ತೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.

ಬೆಂಗಳೂರು ಸಮಸ್ಯೆಯ ಕುರಿತು ಚರ್ಚೆ ನಡೆಯುವಾಗ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಇತರ ಶಾಸಕರ ಬೇಡಿಕೆ ಹಾಗೂ ಸಭಾಧ್ಯಕ್ಷ ಯು.ಟಿ.ಖಾದರ್ ಅವರ ಸಲಹೆಗೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದರು.

ಜಕ್ಕೂರು ಏರೋಡ್ರಂ ಮೈದಾನದಲ್ಲಿ ಸ್ಟೇಡಿಯಂ ನಿರ್ಮಿಸಬೇಕು ಎಂಬ ಹಳೇ ಪ್ರಸ್ತಾವನೆ ಚರ್ಚೆಗೆ ಬಂದಾಗ, 'ಮತ್ತೊಂದು ಸ್ಟೇಡಿಯಂನ ಅಗತ್ಯವಿಲ್ಲ. ಚಿನ್ನಸ್ವಾಮಿ ಸ್ಟೇಡಿಯಂ ಸಾಕು. ಆದರೆ, ಅಲ್ಲಿ ಶಾಸಕರಿಗೆ ಅಗೌರವವಾಗುತ್ತಿದೆ. ಶಾಸಕರು ಟಿಕೆಟ್ ಕೇಳಿದರೆ ಸಿಗುತ್ತಿಲ್ಲ. ಅವರ ಮುಂದೆ ಅಂಗಲಾಚುವ ಸ್ಥಿತಿ ಇದೆ. ಅವರಿಗೆ ಮೂಗುದಾರ ಹಾಕಬೇಕು. ಶಾಸಕರ ಹೆಸರಿನಲ್ಲಿರುವ ಟಿಕೆಟ್‌ಗಳನ್ನು ಮಾರಿಕೊಳ್ಳುತ್ತಾರೆ' ಎಂದು ಅಶೋಕ ಕಿಡಿಕಾರಿದರು.

'ಒಂದು ಟಿಕೆಟ್‌ಗೆ ₹2,000ದಿಂದ ₹20,000ರವರೆಗೆ ತೆಗೆದುಕೊಳ್ಳುತ್ತಾರೆ. ಸ್ಟೇಡಿಯಂಗೆ 16 ಎಕರೆ 30 ಗುಂಟೆ ಜಾಗ ಕೊಟ್ಟಿದ್ದು ಸರ್ಕಾರ. ಆದರೆ, ಅವರು ಜಾಗಕ್ಕೆ ಕೊಡುವ ಬಾಡಿಗೆ ತಿಂಗಳಿಗೆ ₹1,600. ಇವರಿಗೆ ಇನ್ನೊಂದು ಸ್ಟೇಡಿಯಂ ಕಟ್ಟಿಕೊಡುವುದು ಸರಿಯಲ್ಲ. ಇವರಿಗೆ ಬುದ್ಧಿಕಲಿಸಬೇಕು' ಎಂದು ಒತ್ತಾಯಿಸಿದರು.

ಇದಕ್ಕೆ ಧ್ವನಿಗೂಡಿಸಿದ ಕಾಂಗ್ರೆಸ್‌ನ ವಿಜಯಾನಂದ ಕಾಶಪ್ಪನವರ್, 'ಶಾಸಕಗೆ ಕೊಡುವುದು ಒಂದೇ ಟಿಕೆಟ್. ಅದೂ ಕೆಳಗಡೆ ಗ್ಯಾಲರಿಯಲ್ಲಿ ಕೊಡುತ್ತಾರೆ. ಶಾಸಕಗೆ ಐದು ಟಿಕೆಟ್ ಕೊಡಬೇಕು. ಕುಳಿತು ಕೊಳ್ಳಲು ಪ್ರತ್ಯೇಕ ವ್ಯವಸ್ಥೆ ಮಾಡಬೇಕು' ಎಂದು ಒತ್ತಾಯಿಸಿದರು.


**TUNGABHADRA BOARD : TB DAM**

**e-Procurement Long Term Tender Notice**
**IFB Nos.75/2025-26 to 83/2025-26 Dt.26.03.2026**

Tender for **09 Nos. of Works** in respect of LLC Division, Ballari and LLC Division, Ballari under 'Works Category" are invited through `e-Procurement'.

| | |
|---|---|
| Bid Document downloading Start Date & Time: | 27.03.2026 at 12:00 PM |
| Bid Document downloading End Date & Time: | 13.04.2026 at 3:00 PM |
| Bid Submission End Date & Time: | 13.04.2026 at 5:30 PM |
| Date of opening of Commercial Stage: (upto Rs.50.00 Lakhs) | 13.04.2026 at 6:00 PM |
| Date of opening of PQ Stage: (above Rs.50.00 Lakhs) | 13.04.2026 at 6:00 PM |
| Date of opening of Commercial Stage: (Above Rs.50.00 Lakhs) | 16.04.2026 at 11:00 AM |

Further details can be seen @ https://tender.apeprocurement.gov.in

Ph: 08394 - 259114 *Superintending Engineer* Sd/- S. Narayana Naik
Email: seibtbb@yahoo.com *I.B, TB Board, TB Dam*

**ಪೊಲೀಸ್ ಇಲಾಖೆ**

ಪೊಲೀಸ್ ಮಹಾ ನಿರ್ದೇಶಕರವರ ಕಛೇರಿ, ಸಿ.ಐ.ಡಿ., ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಕಾರ್ಲ್‌ಟನ್ ಭವನ, ಅರಮನೆ ರಸ್ತೆ, ಬೆಂಗಳೂರು–560 001,

ಸಂಖ್ಯೆ: 02/ಸಂಗ್ರಹ–1/ಎಂಡಿಎನ್/ಸಿಸಿಡಿ/ಸಿಐಡಿ/2025–26 ದಿನಾಂಕ: 26/03/2026

**ಇ–ಖರೀದಿ ನೋಟೀಸ್**

ಸಿಐಡಿ ಕಛೇರಿಗೆ ಅವಶ್ಯವಿರುವ ಕೆಳಕಂಡ ಸಾಫ್ಟ್‌ವೇರ್/ಪರಿಕರಗಳನ್ನು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ (www.kppp.karnataka.gov.in) 2 ನೇ ಬಾರಿಗೆ ಕರೆಯಲಾಗಿರುವ 15 ದಿನಗಳ ಅಲ್ಪಾವಧಿ ಇ–ಟೆಂಡರ್ ಪ್ರಕ್ರಿಯೆ ಮೂಲಕ ಖರೀದಿಸಲು ಟೆಂಡರ್‌ಗೆ ಅರ್ಜಿಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

2025-26 Police Modernization Scheme

| Sl. No. | Name of the Item/Component | Qty | Approximate Cost in Rs. | Last date for bid submission |
|---|---|---|---|---|
| 15 days Short term E-Tender (Call-2) | | | | |
| 1 | Crypto Currency Investigation Tool (License for 03 Years) | 01 No. | ₹ 34,00,000.00 | 02.04.2026 at 17-00 Hours |
| 2 | Forensic Workstations (License for 03 Years) | 02 No's | ₹ 52,00,000.00 | |

ಮೇಲಿನ ಸಾಫ್ಟ್‌ವೇರ್/ಪರಿಕರಗಳನ್ನು ಸರಬರಾಜು ಮಾಡಲು ಇಚ್ಛಿಸುವವರು ಇ-ಖರೀದಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಇ-ಖರೀದಿಯ ಬಗ್ಗೆ ತರಬೇತಿಯ ಕಾರ್ಯಕ್ರಮವನ್ನು ಇ–ಖರೀದಿ ಪ್ರೊಕ್ಯೂರ್‌ಮೆಂಟ್ ಸೆಲ್‌ನಲ್ಲಿ ವ್ಯವಸ್ಥೆಗೊಳಿಸಲಾಗುತ್ತಿದ್ದು, ಎಲ್ಲಾ ಸರಬರಾಜುದಾರರು ದೂರವಾಣಿ ಸಂಖ್ಯೆ 080–46010000, 080–68948777 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ-ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ-ಖರೀದಿ ಪ್ಲಾಟ್‌ಫಾರಂನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಥವಾ ಹೆಲ್ಪ್‌ಲೈನ್ ಸಂಖ್ಯೆ 080–46010000, 080–68948777 ಗಳಿಗೆ ಸಂಪರ್ಕಿಸತಕ್ಕದ್ದು.

ಪೊಲೀಸ್ ಮಹಾ ನಿರ್ದೇಶಕರು
ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು ರವರ ಪರವಾಗಿ

ವಾ.ಸಾ.ಸಂ.ಇ/ವಾಪ್ರ/6483/ಆಕಾರ್/2025–26


## ವಿಧಾನಸಭೆಯಲ್ಲಿ ಕೋಲಾಹಲ • ಮುನಿರತ್ನ ಅಮಾನತಿಗೆ ಕಾಂಗ್ರೆಸ್ ಪಟ್ಟು

# ಸದನದಲ್ಲಿ ಡಿಕೆಶಿ– ಮುನಿರತ್ನ ಕದನ

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಮುನಿರತ್ನ

**ಬೆಂಗಳೂರು:** ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಬಿಜೆಪಿ ಶಾಸಕ ಮುನಿರತ್ನ ನಡುವಿನ ವೈಯಕ್ತಿಕ ಜಗಳ ವಿಧಾನಮಂಡಲ ಅಧಿವೇಶನದ ಕೊನೇ ದಿನ ಸ್ಫೋಟಗೊಂಡು, ಅಸಹನೀಯ ಮಟ್ಟಕ್ಕೆ ತಿರುಗಿತು.

ಇಬ್ಬರೂ ಪರಸ್ಪರ ಸವಾಲು– ಪ್ರತಿ ಸವಾಲುಗಳನ್ನು ಹಾಕಿಕೊಂಡರು. ಅವರು ಬಳಸಿದ ಪದಗಳನ್ನು ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಕಡತದಿಂದ ತೆಗೆಸಿದರು. 'ಯಾವುದೇ ಕಾರಣಕ್ಕೂ ವರದಿ ಮಾಡಬೇಡಿ. ಇದು ರಾಜ್ಯದ ಮಾರ್ಯಾದೆ ಪ್ರಶ್ನೆ' ಎಂದು ಮಾಧ್ಯಮ ಪ್ರತಿನಿಧಿಗಳಿಗೆ ಖಾದರ್ ಪರಿಪರಿಯಾಗಿ ಮನವಿ ಮಾಡಿದರು.

ಬೆಂಗಳೂರು ನಗರದ ಸಮಸ್ಯೆಗಳ ಕುರಿತು ಚರ್ಚೆಗೆ ಉತ್ತರ ನೀಡುವಾಗ ಕೊನೆ ಹಂತದಲ್ಲಿ ಇಬ್ಬರ ಮಧ್ಯೆ ಮಾತಿನ ಜಟಾಪಟಿ ನಡೆಯಿತು. ಮುನಿರತ್ನ ಅವರನ್ನು ಸದನದಿಂದ ಅಮಾನತು ಗೊಳಿಸಬೇಕು ಎಂದು ಕಾಂಗ್ರೆಸ್ ಸದಸ್ಯರು ಪಟ್ಟು ಹಿಡಿದು ಧರಣಿಯನ್ನೂ ನಡೆಸಿದರು.

ಉತ್ತರ ನೀಡಲೆಂದು ಸದನದೊಳಗೆ ಬಹುಮುಂಚಿತವಾಗಿ ಬಂದು ಶ್ರದ್ಧೆಯಿಂದ ಕಡತಗಳನ್ನು ಅವಲೋಕಿಸಿದ ಡಿ.ಕೆ.ಶಿವಕುಮಾರ್ ಅವರು ತಮ್ಮ ಉತ್ತರದ ಮಧ್ಯೆ ಡಿವಿಜಿಯವರ ಕಗ್ಗದ ಸಾಲುಗಳು, ಬೆಂಗಳೂರು ನಗರವನ್ನು ಜಾಗತಿಕ ಗುಣಮಟ್ಟದ ನಗರವನ್ನಾಗಿ ರೂಪಿಸುವ ತಮ್ಮ ಕನಸುಗಳನ್ನು ಮುಂದಿಟ್ಟರು.

ಎಲ್ಲ ಸದಸ್ಯರ ಪ್ರಶ್ನೆಗಳು, ಟೀಕೆಗಳಿಗೆ ಸಮಾಧಾನಕರ ಉತ್ತರಗಳನ್ನು ನೀಡುತ್ತಾ ಬಂದಿದ್ದರು. 'ಬೆಂಗಳೂರು ಅಭಿವೃದ್ಧಿಯ ಕೆಲಸ ಒಬ್ಬನಿಂದಲೇ ಸಾಧ್ಯವಿಲ್ಲ. ಆಡಳಿತ ಮತ್ತು ವಿರೋಧ ಪಕ್ಷಗಳ ನೆರವಿನಿಂದಲೇ ಮಾಡಬೇಕಾಗುತ್ತದೆ. ಅದಕ್ಕೆ ನಿಮ್ಮೆಲ್ಲರ ಸಲಹೆ–ಸೂಚನೆಗಳು ಅಗತ್ಯ, ಅದಕ್ಕೆ ಪೂರಕವಾಗಿಯೇ ಯೋಜನೆಗಳನ್ನು ರೂಪಿಸುತ್ತೇನೆ' ಎಂದು ವಿನೀತರಾಗಿಯೇ ಹೇಳಿದರು.

ಇದೇ ಹಂತದಲ್ಲಿ ಡಿ.ಕೆ. ಶಿವಕುಮಾರ್ ಅವರು, 'ಮುತ್ತು ರತ್ನಗಳಿಗೆ (ಮುನಿರತ್ನ) ಕೊನೆಯಲ್ಲೇ ಉತ್ತರ ಹೇಳುತ್ತೇನೆ' ಎಂದರು. ಮುನಿರತ್ನ ತಮ್ಮ ಮೇಜಿನ ಮುಂದೆ ಒಂದೆರಡು ಕಡತಗಳನ್ನು ಇಟ್ಟುಕೊಂಡಿದ್ದರು. ಚರ್ಚೆಯಲ್ಲಿ ವೇಳೆಯಲ್ಲಿ ತಾವು ಎತ್ತಿದ ಪ್ರಶ್ನೆಗಳಿಗೆ ಉತ್ತರ ಪಡೆಯುವುದರ ಜತೆ ಮತ್ತಷ್ಟು ಉಪಪ್ರಶ್ನೆಗಳ ಮೂಲಕ ಇಕ್ಕಟ್ಟಿಗೆ ಸಿಲುಕಿಸಲು ಸಜ್ಜಾಗಿ ಕುಳಿತ್ತಿದ್ದರು.

ಆದರೆ, ಸೌಹಾರ್ದಯುತವಾಗಿ ಸಂವಾದ ನಡೆಯುವುದರ ಬದಲು ಆತಂಕ ಹುಟ್ಟಿಸುವ ಜಟಾಪಟಿ, ಕೋಲಾಹಲಕ್ಕೆ ಕಾರಣವಾಯಿತು. ಶಿವಕುಮಾರ್ ಅವರು ಮುನಿರತ್ನ ಅವರ ಪ್ರಶ್ನೆಗಳಿಗೆ ಉತ್ತರಿಸುವ ಬದಲು ವೈಯಕ್ತಿಕ ನೆಲೆಯಲ್ಲಿ ಟೀಕಾ ಪ್ರಹಾರ ನಡೆಸಿ, ಸವಾಲುಗಳನ್ನು ಎಸೆದರು. ಇದಕ್ಕೆ ಪ್ರತಿಯಾಗಿ ಅಷ್ಟೇ ಗಟ್ಟಿಯಾಗಿ ಮುನಿರತ್ನ ಕೂಡಾ ಶಿವಕುಮಾರ್ ವಿರುದ್ಧ ಟೀಕಾ ಪ್ರಹಾರ ನಡೆಸಿ, ತಮ್ಮ ಪ್ರಶ್ನೆಗಳಿಗೆ ಉತ್ತರಿಸುವಂತೆ ಪಟ್ಟು ಹಿಡಿದರು. ಉಪಮುಖ್ಯಮಂತ್ರಿ ವಿರುದ್ಧ ಮುನಿರತ್ನ ಆಡಿದ ಮಾತುಗಳು ಕಾಂಗ್ರೆಸ್ ಸದಸ್ಯರನ್ನು ಕೆರಳಿಸಿತು. ಅವರು ಎದ್ದು ನಿಂತು ಗದ್ದಲ ಆರಂಭಿಸಿದರು.

ಆಗ ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷ ಖಾದರ್ ಅವರು ಮುನಿರತ್ನ ಅವರನ್ನು ಕುಳಿತುಕೊಳ್ಳುವಂತೆ ಹೇಳಿದರೂ ಕೇಳದ ಮುನಿರತ್ನ ತಮಗೆ ಪ್ರಶ್ನೆ ಕೇಳಲು ಅವಕಾಶ ನೀಡಲೇಬೇಕು ಎಂದು ಪಟ್ಟು ಹಿಡಿದರು. ಕಾಂಗ್ರೆಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದೆ ಧಾವಿಸಿ, ಮುನಿರತ್ನ ಅವರ ಅಮಾನತ್ತಿಗೆ ಆಗ್ರಹಿಸಿದರು.

> ಬೆಂಗಳೂರು ಅಭಿವೃದ್ಧಿ ಬಗ್ಗೆ ಚರ್ಚೆ ನಡೆಯುತ್ತಿದೆ. ಇಲ್ಲಿ ಯಾರೂ ವೈಯಕ್ತಿಕ ವಿಷಯ ಬಗ್ಗೆ ಜಗಳವಾಡುವುದು ಸರಿಯಲ್ಲ. ಚರ್ಚೆಯ ಮಹತ್ವವೇ ಮರೆಯಾಗುತ್ತದೆ
>
> **ಆರ್.ಅಶೋಕ,** ವಿರೋಧ ಪಕ್ಷದ ನಾಯಕ

ಪರಿಸ್ಥಿತಿ ಕೈ ಮೀರುತ್ತಿರುವುದನ್ನು ಅರಿತ ವಿರೋಧಪಕ್ಷದ ನಾಯಕ ಆರ್.ಅಶೋಕ, ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ವಿ.ಸುನಿಲ್ ಕುಮಾರ್ ಅವರು ಸುಮ್ಮನಿರುವಂತೆ ಮುನಿರತ್ನ ಅವರಿಗೆ ಸೂಚಿಸಿದರೂ ಕೇಳುವ ಸ್ಥಿತಿಯಲ್ಲಿ ಅವರು ಇರಲಿಲ್ಲ.

ಅಶೋಕ, ಸುರೇಶ್‌ಕುಮಾರ್ ಮತ್ತು ಆರಗ ಜ್ಞಾನೇಂದ್ರ ಅವರು, 'ಮುನಿರತ್ನ ಕೇಳಿದ ಪ್ರಶ್ನೆಗಳಿಗೆ ನಿರ್ದಿಷ್ಟವಾಗಿ ಉತ್ತರ ಕೊಡಿ, ವೈಯಕ್ತಿಕವಾಗಿ ಗುರಿ ಮಾಡುವ ಅಗತ್ಯವಿಲ್ಲ. ಮೊನ್ನೆ ಮಾತನಾಡಿದ ಸಂದರ್ಭದಲ್ಲಿ ಅವರು ನಿಮ್ಮ ವಿರುದ್ಧವಾಗಿ ವೈಯಕ್ತಿಕವಾಗಿ ಮಾತನಾಡಿಲ್ಲ. ವೈಯಕ್ತಿಕ ವಿಷಯಗಳನ್ನು ಬೇರೆ ಸಂದರ್ಭದಲ್ಲಿ ಮಾತನಾಡಿ. ಬೆಂಗಳೂರಿನ ಕುರಿತು ಚೆನ್ನಾಗಿಯೇ ಉತ್ತರ ಕೊಟ್ಟಿದ್ದೀರಿ. ಆದರೆ, ಈಗ ದಾರಿ ತಪ್ಪಿದ್ದು ಸರಿಯಲ್ಲ' ಎಂದು ಹೇಳಿದರು.

ಗದ್ದಲ ತಹಬದಿಗೆ ಬಾರದ ಕಾರಣ ಬಿಜೆಪಿ ನಾಯಕರು ಮುನಿರತ್ನ ಅವರಿಗೆ, 'ಉತ್ತರ ತೃಪ್ತಿಯಾಗಿಲ್ಲ ಎಂದು ಸಭಾತ್ಯಾಗ ಮಾಡಿ, ಹೊರ ಹೋಗಿ. ಜಿದ್ದಾಜಿದ್ದಿ ಬೇಡ. ನಿಮ್ಮ ವಿರುದ್ಧ ಕ್ರಮ ತೆಗೆದುಕೊಂಡರೆ ಕಷ್ಟವಾಗಬಹುದು' ಎಂಬ ಸೂಚನೆ ನೀಡಿದ ಬಳಿಕ ಮುನಿರತ್ನ ತಮ್ಮ ಆಸನದಲ್ಲಿ ಕೂತರು. ಆದರೂ ಕಾಂಗ್ರೆಸ್ ಸದಸ್ಯರು ಅಮಾನತು ಮಾಡಲೇಬೇಕು ಎಂಬ ಒತ್ತಾಯವನ್ನು ಕೈಬಿಡಲಿಲ್ಲ.

ಶಿವಕುಮಾರ್ ಅವರ ಗಮನ ಬೇರೆಡೆ ಸೆಳೆಯಲು ಅಶೋಕ ಅವರು ಬೇರೆ ವಿಷಯ ಪ್ರಸ್ತಾಪಿಸುವ ಪ್ರಯತ್ನ ನಡೆಸಿದರು. ಅದು ಫಲ ನೀಡಲಿಲ್ಲ. ಆಗ ಸುನಿಲ್ ಅವರು, ಮುನಿರತ್ನ ಅವರನ್ನು ನಿಮ್ಮ ಕೊಠಡಿಗೆ ಕರೆಸಿಕೊಂಡು ಅಧಿಕಾರಿಗಳನ್ನು ಕರೆಸಿ, ಅವರ ಪ್ರಶ್ನೆಗಳಿಗೆ ಉತ್ತರ ಕೊಡಿಸಿ ಸಮಸ್ಯೆ ಬಗೆಹರಿಸಿ ಎಂದು ಸಭಾಧ್ಯಕ್ಷರಿಗೆ ಸಲಹೆ ನೀಡಿದರೂ ಪ್ರಯೋಜನವಾಗಲಿಲ್ಲ.

ಧರಣಿಯಲ್ಲಿದ್ದ ಆಡಳಿತ ಪಕ್ಷದ ಸದಸ್ಯರ ಗದ್ದಲವನ್ನು ತಣ್ಣಗಾಗಿಸಿದ ಖಾದರ್ ಅವರು, 'ಇಂತಹ ಘಟನೆ ನಡೆಯಬಾರದು. ಇಲ್ಲಿ ನಡೆದದ್ದು ಹಳ್ಳಿ ಹಳ್ಳಿಗಳಿಗೂ ತಲುಪುತ್ತದೆ. ನಮ್ಮ ಬಗ್ಗೆ ಗೌರವ ಇರುತ್ತದೆಯೇ ಎಂಬುದನ್ನು ತಿಳಿದುಕೊಳ್ಳಬೇಕು. ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಉಪಮುಖ್ಯಮಂತ್ರಿ ಉತ್ತರ ನೀಡುವಾಗ ಸೌಜನ್ಯದಿಂದ ಕುಳಿತುಕೊಳ್ಳಬೇಕು. ಸದನ ಇರುವುದು ತಾಕತ್ತು ಪ್ರದರ್ಶನಕ್ಕೆ ಅಲ್ಲ. ಇದು ನಮ್ಮ ಸಂಸದೀಯ ಪರಂಪರೆಯೂ ಅಲ್ಲ. ನಮ್ಮ ಸದನಕ್ಕೆ ಘನತೆ ಇದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು' ಎಂದು ಖಾದರ್ ಹೇಳಿದರು.

'ಇನ್ನು ಮುಂದೆ ಇಂತಹ ಘಟನೆ ನಡೆದರೆ ಹೆಸರು ಹೇಳಿ ಕ್ರಮ ಕೈಗೊಳ್ಳಬೇಕಾಗುತ್ತದೆ. ಇಲ್ಲಿ ನಡೆದ ಘಟನೆ ಮತ್ತು ವರ್ತನೆಯನ್ನು ಖಂಡಿಸುತ್ತೇನೆ ಎಂದು ಹೇಳಿ' ಅವರು ಗದ್ದಲಕ್ಕೆ ತೆರೆ ಎಳೆದರು.

## ಆಲಮಟ್ಟಿ: ಎತ್ತರ ಹೆಚ್ಚಿಸಲು ನಿರ್ಣಯ

**ಬೆಂಗಳೂರು:** ಆಲಮಟ್ಟಿ ಜಲಾಶಯದ 26 ಕ್ರಸ್ಟ್‌ಗೇಟ್‌ಗಳ ಎತ್ತರ ಹೆಚ್ಚಿಸಲು ರಾಜ್ಯ ಸರ್ಕಾರವು ಕ್ರಮ ತೆಗೆದುಕೊಳ್ಳಬೇಕು ಎಂಬ ನಿರ್ಣಯವನ್ನು ವಿಧಾನ ಪರಿಷತ್ತು ಅಂಗೀಕರಿಸಿತು.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ನಿರ್ಣಯವನ್ನು ಮಂಡಿಸಿದರು. 'ಅಣೆಕಟ್ಟೆಯ ಎತ್ತರವನ್ನು 519.6 ಮೀಟರ್‌ಗಳಿಂದ 524.25 ಮೀಟರ್‌ಗಳಿಗೆ ಹೆಚ್ಚಿಸಲು ರಾಜ್ಯಕ್ಕಿರುವ ಅಧಿಕಾರವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಅದರ ಭಾಗವಾಗಿ 26 ಕ್ರಸ್ಟ್‌ಗೇಟ್‌ಗಳ ಎತ್ತರವನ್ನು ಹೆಚ್ಚಿಸುವ ಅಗತ್ಯವಿದೆ' ಎಂದರು.

'ಇದಕ್ಕಾಗಿ ಕ್ರಸ್ಟ್‌ಗೇಟ್‌ಗಳ ಮೇಲ್ಭಾಗದಲ್ಲಿ ಹೆಚ್ಚುವರಿಯಾಗಿ ಕಬ್ಬಿಣದ ಫಲಕಗಳನ್ನು (ಸ್ಕಿನ್ ಪ್ಲೇಟ್) ಅಳವಡಿಸಬೇಕಾಗಿದೆ. ಆ ಕಾರ್ಯವನ್ನು ರಾಜ್ಯವು ಕೈಗೆತ್ತಿಕೊಳ್ಳಲಿದೆ' ಎಂದರು.

> ಕೃಷ್ಣಾ ಮೇಲ್ದಂಡೆ ವಿಚಾರವಾಗಿ ರೈತರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತೇವೆ. ನೀರನ್ನು ಒದಗಿಸಲು ಬದ್ಧರಾಗಿದ್ದೇವೆ. ಹಣಕಾಸು ಹೊಂದಿಸಲು ಸವಾಲುಗಳಿದ್ದು, ಸರ್ಕಾರ ದಾರಿ ಹುಡುಕಲಿದೆ
>
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ಈ ನಿರ್ಣಯದ ಪರವಾಗಿ ಮಾತನಾಡಿದ, ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, 'ಈ ವಿಚಾರವಾಗಿ ದೆಹಲಿಗೆ ತೆರಳಿ ಸಭೆ ನಡೆಸಿದ್ದೇವೆ, ಎತ್ತರ ಹೆಚ್ಚಿಸಲು ಆಂಧ್ರ ಪ್ರದೇಶ, ಮಹಾರಾಷ್ಟ್ರ ಅಡ್ಡಿ ಮಾಡುತ್ತಿದ್ದು, ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಕಾನೂನಾತ್ಮಕ ವಿಚಾರಗಳನ್ನು ಚರ್ಚೆ ನಡೆಸಲಾಗಿದೆ' ಎಂದರು.

## 'ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ರಚಿಸಬೇಕು'

**ಬೆಂಗಳೂರು:** 'ಕಲ್ಯಾಣ ಕರ್ನಾಟಕ ಮಾದರಿಯಲ್ಲಿ ಕಿತ್ತೂರು ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಪ್ರತ್ಯೇಕ ಮಂಡಳಿ ರಚಿಸಿ, ಬಜೆಟ್‌ನಲ್ಲಿ ಪ್ರತಿವರ್ಷ ಕನಿಷ್ಠ ₹ 5 ಸಾವಿರ ಕೋಟಿ ವಿಶೇಷ ಅನುದಾನ ನೀಡಬೇಕು' ಎಂದು ಒತ್ತಾಯಿಸಿ ಕಾಂಗ್ರೆಸ್‌ನ ಎನ್.ಎಚ್. ಕೋನರಡ್ಡಿ ಗುರುವಾರ ವಿಧಾನಸಭೆಯಲ್ಲಿ ಖಾಸಗಿ ನಿರ್ಣಯ ಮಂಡಿಸಿದರು.

ಎನ್.ಎಚ್. ಕೋನರಡ್ಡಿ

'ರಾಜ್ಯದಲ್ಲಿ ಕಿತ್ತೂರು ಕರ್ನಾಟಕ ಭಾಗದ ಧಾರವಾಡ, ಬೆಳಗಾವಿ, ಗದಗ, ಹಾವೇರಿ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಲ್ಲಿ ಇನ್ನೂ ನಿರೀಕ್ಷಿತ ಅಭಿವೃದ್ಧಿ ಸಾಧ್ಯವಾಗಿಲ್ಲ. ಕಲ್ಯಾಣ ಕರ್ನಾಟಕಕ್ಕೆ 371-ಜೆ ಅಡಿ ವಿಶೇಷ ಸ್ಥಾನಮಾನ ನೀಡಿರುವಂತೆ ನಮಗೂ ವಿಶೇಷ ಸ್ಥಾನಮಾನ ಒದಗಿಸಿ ಪ್ರತ್ಯೇಕ ಮಂಡಳಿ ಮಾಡಬೇಕು' ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಯೋಜನಾ ಸಚಿವ ಡಿ. ಸುಧಾಕರ್, 'ನಂಜುಂಡಪ್ಪ ಸಮಿತಿ ನೀಡಿದ ವರದಿ ಹಳೆಯದಾಗಿದೆ. ಹೀಗಾಗಿ ಪ್ರೊ.ಗೋವಿಂದರಾವ್ ಸಮಿತಿ ರಚಿಸಲಾಗಿತ್ತು. ಸಮಿತಿಯು ಪ್ರಾದೇಶಿಕ ಅಸಮತೋಲನದ ಕುರಿತು ವರದಿ ಸಲ್ಲಿಸಿದೆ. ಈ ಬಗ್ಗೆ ಮುಂದಿನ ಅಧಿವೇಶನದಲ್ಲಿ ಚರ್ಚಿಸಿ, ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

## ಭೀಮರಾವ್ ಪಾಟೀಲಗೆ ಕಚೇರಿ ಹಂಚಿಕೆ: ಸಭಾಪತಿ

**ಬೆಂಗಳೂರು:** ವಿಧಾನ ಪರಿಷತ್ ಸದಸ್ಯ ಭೀಮರಾವ್ ಪಾಟೀಲ ಅವರಿಗೆ ಅವರ ನೋಡಲ್ ತಾಲ್ಲೂಕು ಔರಾದ್‌ನಲ್ಲಿ ಕಚೇರಿ ಹಂಚಿಕೆಯ ಆದೇಶ ಪತ್ರವನ್ನು ಬೀದರ್ ಜಿಲ್ಲಾಧಿಕಾರಿ ಹಸ್ತಾಂತರಿಸಿದ್ದಾರೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಭೀಮರಾವ್ ಪಾಟೀಲ್ ಅವರು ಪರಿಷತ್ತಿನ ಸದಸ್ಯರಾಗಿ ನಾಲ್ಕೂವರೆ ವರ್ಷವಾದರೂ ಕಚೇರಿ ನೀಡಿಲ್ಲ. ಈ ಬಗ್ಗೆ ಸಭಾಪತಿ ಅವರು ಪತ್ರ ಬರೆದಿದ್ದರೂ ಜಿಲ್ಲಾಧಿಕಾರಿ ಕ್ರಮ ತೆಗೆದುಕೊಂಡಿಲ್ಲ ಎಂದು ಸದಸ್ಯ ಪುಟ್ಟಣ್ಣ ಬುಧವಾರದ ಕಲಾಪದ ವೇಳೆ ದೂರಿದ್ದರು. ಜಿಲ್ಲಾಧಿಕಾರಿಯನ್ನು ಗುರುವಾರ ಪರಿಷತ್ತಿಗೆ ಕರೆಸಿ ಎಂದು ಹೊರಟ್ಟಿ ಅವರು ಸಭಾನಾಯಕ ಎನ್.ಎಸ್.ಬೋಸರಾಜು ಅವರಿಗೆ ಸೂಚಿಸಿದ್ದರು.

ಗುರುವಾರ ಕಲಾಪದ ವೇಳೆ ಈ ಬಗ್ಗೆ ಮಾಹಿತಿ ನೀಡಿದ ಹೊರಟ್ಟಿ, 'ಬೀದರ್ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಹಾಜರಾಗಿದ್ದರು. ಪರಿಷತ್ತಿನ ಸಭಾನಾಯಕ, ವಿರೋಧ ಪಕ್ಷದ ನಾಯಕ, ಸರ್ಕಾರ ಮತ್ತು ವಿರೋಧ ಪಕ್ಷಗಳ ಮುಖ್ಯ ಸಚೇತಕ, ಸದಸ್ಯ ಪುಟ್ಟಣ್ಣ ಮತ್ತು ಮುಖ್ಯ ಕಾರ್ಯದರ್ಶಿ ಸಭೆಯಲ್ಲಿ ಇದ್ದರು' ಎಂದು ತಿಳಿಸಿದರು.

'ಭೀಮರಾವ್ ಅವರಿಗಾಗಿ ಹಂಚಿಕೆ ಮಾಡಲಾದ ಕಚೇರಿಯ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ. ಸಂವಹನದ ಕೊರತೆಯಿಂದಾಗಿ ಭೀಮರಾವ್ ಅವರಿಗೆ ವಿಷಯ ತಿಳಿಸಲಾಗಿಲ್ಲ ಎಂದು ಡಿ.ಸಿ ತಿಳಿಸಿದರು. ಕಚೇರಿ ಹಂಚಿಕೆ ಆದೇಶ ಪತ್ರವನ್ನು ಅವರು ನೀಡಿದ್ದಾರೆ' ಎಂದು ಹೊರಟ್ಟಿ ತಿಳಿಸಿದರು.

**ಮಸೂದೆಗೆ ಅಂಗೀಕಾರ:** ಸಾರಿಗೆ ವಾಹನಗಳ ಮೇಲಿನ ತೆರಿಗೆ ಕಡಿಮೆ ಮಾಡಲು ಅವಕಾಶ ಮಾಡಿಕೊಡುವ 'ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ಮಸೂದೆ–2026' ಅನ್ನು ಪರಿಷತ್ತು ಅಂಗೀಕರಿಸಿತು.

# ತೆರಿಗೆ ಸೋರಿಕೆ: ₹243 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ), ನೋಂದಣಿ ಮತ್ತು ಮುದ್ರಾಂಕ ಶುಲ್ಕ ಹಾಗೂ ವಾಹನಗಳ ಮೇಲೆ ತೆರಿಗೆ ವಿಧಿಸುವಲ್ಲಿ ಆಗಿರುವ ಲೋಪಗಳ ಕಾರಣ 2023–24ನೇ ಆರ್ಥಿಕ ವರ್ಷದಲ್ಲಿ ರಾಜ್ಯ ಸರ್ಕಾರಕ್ಕೆ ಒಟ್ಟು ₹243.33 ಕೋಟಿ ಖೋತಾ ಆಗಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

ಹಿಂದಿನ ಆರ್ಥಿಕ ವರ್ಷಗಳಲ್ಲಿ ವಸೂಲಿಗೆ ಸೂಚಿಸಲಾಗಿದ್ದ ದಂಡದ ಮೊತ್ತವನ್ನೂ ಇದು ಒಳಗೊಂಡಿದೆ. ವಿಧಾನಸಭೆಯಲ್ಲಿ ಮಂಡಿಸಲಾದ, 'ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ರಾಜ್ಯ ರಾಜಸ್ವದ ವರದಿ 2024ರ ಮಾರ್ಚ್'ನಲ್ಲಿ ಈ ಅಂಶಗಳು ಇವೆ.

ಜಿಎಸ್‌ಟಿ ಮರುಪಾವತಿ ಪರಿಶೀಲನೆಯಲ್ಲಿ ಲೋಪಗಳು ಆಗಿವೆ. ಅಗತ್ಯಕ್ಕಿಂತ ಹೆಚ್ಚು ಮೊತ್ತವನ್ನು ಮರುಪಾವತಿ ಮಾಡಲಾಗಿದೆ. ಲೆಕ್ಕಪರಿಶೋಧನೆಗೆ ಒಳಪಡಿಸಿದ 24 ಪ್ರಕರಣಗಳ ಪೈಕಿ 5ರ ದಾಖಲೆಗಳನ್ನು ಮಾತ್ರವೇ ಅಧಿಕಾರಿಗಳು ಒದಗಿಸಿದ್ದು, ₹1.75 ಕೋಟಿಯನ್ನು ಹೆಚ್ಚುವರಿಯಾಗಿ ಮರು ಪಾವತಿ ಮಾಡಲಾಗಿದೆ. 19 ಮರು ಪಾವತಿ ಪ್ರಕರಣಗಳ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಿಲ್ಲ ಎಂದು ಸಿಎಜಿ ವಿವರಿಸಿದೆ.

2020–21ರ ಅವಧಿಯಲ್ಲಿ ಇದೇ ರೀತಿ 90 ಪ್ರಕರಣಗಳಲ್ಲಿ ₹21.26 ಕೋಟಿ ಆದಾಯ ನಷ್ಟ ಮಾಡಲಾಗಿತ್ತು. 2024ರ ಮಾರ್ಚ್ ಅಂತ್ಯದ ಹೊತ್ತಿಗೂ ಇದನ್ನು ವಸೂಲಿ ಮಾಡಿರಲಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕಾಗಿ ರಾಜ್ಯದಾದ್ಯಂತ 28 ಗುತ್ತಿಗೆದಾರರು ನಡೆಸಿಕೊಟ್ಟ ವಿವಿಧ ಕಾಮಗಾರಿಗಳಲ್ಲಿ ಒಟ್ಟು ₹7.28 ಕೋಟಿ ತೆರಿಗೆ ನಷ್ಟವಾಗಿದೆ. 2022ರ ಜನವರಿ 1ರ ನಂತರ ನಿರ್ಮಾಣ ಕಾಮಗಾರಿಗಳ ಮೊತ್ತದ ಮೇಲೆ ಶೇ 18ರಷ್ಟು ತೆರಿಗೆ ಪಾವತಿ ಮಾಡಬೇಕಿತ್ತು. ಆದರೆ 2022ರ ಫೆಬ್ರುವರಿ–ಮಾರ್ಚ್ ಅವಧಿಯಲ್ಲಿ ನಡೆಸಿದ ಕಾಮಗಾರಿಗಳೂ ಶೇ 12ರಷ್ಟು ತೆರಿಗೆಯನ್ನಷ್ಟೇ ಪಾವತಿ ಮಾಡಿಸಿಕೊಳ್ಳಲಾಗಿದೆ. ಉಳಿಕೆ ಮೊತ್ತವಾದ ₹7.28 ಕೋಟಿಯನ್ನು ವಸೂಲಿ ಮಾಡಿಲ್ಲ ಎಂದು ವಿವರಿಸಿದೆ.

ವಾಹನಗಳ ಮೇಲೆ ವಿಧಿಸಲಾಗುವ ವಿವಿಧ ರೀತಿಯ ತೆರಿಗೆ ಮತ್ತು ಶುಲ್ಕಗಳ ಸಂಗ್ರಹದಲ್ಲಿ ಸೋರಿಕೆ ಆಗಿರುವ ಕಾರಣ ₹96.68 ಕೋಟಿಯಷ್ಟು ನಷ್ಟವಾಗಿದೆ. ರಾಜ್ಯದಲ್ಲಿ ಪರವಾನಗಿ ಇಲ್ಲದೆ 7 ಲಕ್ಷಕ್ಕೂ ಹೆಚ್ಚು ವಾಹನಗಳು ಸಂಚರಿಸುತ್ತಿದ್ದು, ಅವುಗಳಿಂದ ₹6.22 ಕೋಟಿ ನಷ್ಟವಾಗಿದೆ ಎಂದು ವಿವರಿಸಿದೆ.

### ನೋಂದಣಿ–ಮುದ್ರಾಂಕದಲ್ಲಿ ಗರಿಷ್ಠ ನಷ್ಟ

ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಆಸ್ತಿಗಳ, ದಸ್ತಾವೇಜುಗಳ ಮೌಲ್ಯವನ್ನು ಕಡಿಮೆ ಅಂದಾಜು ಮಾಡಿ ಆದಾಯ ನಷ್ಟ ಉಂಟು ಮಾಡಲಾಗಿದೆ. ವ್ಯವಹಾರ ಅಧಿಕಾರದ ವರ್ಗಾವಣೆಯಲ್ಲಿ ತಪ್ಪು ಲೆಕ್ಕಾಚಾರದಿಂದ ₹15.06 ಕೋಟಿ, ಮಾರಾಟ ಒಪ್ಪಂದಗಳ ವರ್ಗಾವಣೆಯಲ್ಲಿ ತಪ್ಪು ಲೆಕ್ಕಾಚಾರದಿಂದ ₹18.84 ಕೋಟಿ ನಷ್ಟವಾಗಿದೆ ಎಂದು ಸಿಎಜಿ ಹೇಳಿದೆ.

### ಅಂಕಿ ಅಂಶಗಳು

**₹31.89 ಕೋಟಿ** ಜಿಎಸ್‌ಟಿ ಮರುಪಾವತಿಯಲ್ಲಿನ ಲೋಪದಿಂದ ಆದ ನಷ್ಟ

**₹114.76 ಕೋಟಿ** ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ವಿವಿಧ ಲೋಪಗಳಿಂದ ಆದ ನಷ್ಟ

**₹96.68 ಕೋಟಿ** ವಾಹನಗಳ ಮೇಲಿನ ತೆರಿಗೆ ವಸೂಲಿ, ಯೋಗ್ಯತಾ ಪ್ರಮಾಣಪತ್ರ ಇಲ್ಲದ ವಾಹನಗಳ ಸಂಚಾರದಿಂದ ಆಗಿರುವ ನಷ್ಟ

## ಹುಲಿ ದಾಳಿ ಕರು ಸಾವು

ಪ್ರಜಾವಾಣಿ ವಾರ್ತೆ

**ಗೋಣಿಕೊಪ್ಪಲು (ಕೊಡಗು ಜಿಲ್ಲೆ):** ಪೊನ್ನಂಪೇಟೆ ತಾಲ್ಲೂಕು ಕಿರುಗೂರಿನ ವಿ.ಎಂ.ರವೀಂದ್ರ ಅವರ ಎರಡು ವರ್ಷ ಪ್ರಾಯದ ಆಕಳ ಕರುವನ್ನು ಹುಲಿಯು ಬುಧವಾರ ರಾತ್ರಿ ಕೊಂದಿದ್ದು, ಗುರುವಾರ ಬೆಳಕಿಗೆ ಬಂದಿದೆ.

ಮನೆ ಸಮೀಪದ ಕೊಟ್ಟಿಗೆಗೆ ನುಗ್ಗಿದ್ದ ಹುಲಿಯು, ಕಟ್ಟ ಹಾಕಿದ್ದ ಕರುವಿನ ಮೇಲೆ ದಾಳಿ ನಡೆಸಿ ಗದ್ದೆಗೆ ಎಳೆದೊಯ್ದು, ದೇಹದ ಸ್ವಲ್ಪ ಭಾಗವನ್ನು ತಿಂದು ಹೋಗಿದೆ.

ಪೊನ್ನಂಪೇಟೆ ಡಿಆರ್‌ಎಫ್‌ಒ ದಿವಾಕರ್ ಹಾಗೂ ಆರ್‌ಆರ್‌ಟಿ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿತು. ಹುಲಿಯ ಚಲನವಲನ ಪತ್ತೆ ಹಚ್ಚಲು ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದಾರೆ.

## 1ನೇ ತರಗತಿ ದಾಖಲಾತಿ ನಿಯಮ ಸಡಿಲಿಕೆ

ಪ್ರಜಾವಾಣಿ ವಾರ್ತೆ

ಮಧು ಬಂಗಾರಪ್ಪ

**ಬೆಂಗಳೂರು:** ಒಂದನೇ ತರಗತಿ ದಾಖಲಾತಿಗೆ ಮಕ್ಕಳಿಗೆ ಆರು ವರ್ಷ ತುಂಬಿರಬೇಕೆಂಬ ಎಂಬ ಕಡ್ಡಾಯ ನಿಯಮವನ್ನು 2026–27ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ವಿನಾಯಿತಿ ನೀಡಲಾಗಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ವಿಧಾನಸಭೆಯಲ್ಲಿ ಈ ಕುರಿತು ಹೇಳಿಕೆ ನೀಡಿದ ಸಚಿವರು, 'ಒಂದನೇ ತರಗತಿಗೆ ದಾಖಲಾತಿ ಮಾಡುವಾಗ 60 ದಿನಗಳ ಸಡಿಲಿಕೆ ನೀಡಲು (6 ವರ್ಷ 2 ತಿಂಗಳು) ತೀರ್ಮಾನಿಸಲಾಗಿದೆ. ಇದಕ್ಕೆ ಪೂರಕವಾಗಿ ದಾಖಲಾತಿ ತಂತ್ರಾಂಶದಲ್ಲಿ ಬದಲಾವಣೆ ಮಾಡಲಾಗುವುದು' ಎಂದರು.

ಒಂದನೇ ತರಗತಿ ದಾಖಲಾತಿಗೆ ಆರು ವರ್ಷ ಕಡ್ಡಾಯ ನಿಯಮಕ್ಕೆ ಹೊಂದಿಕೊಳ್ಳಲು ಎಲ್‌ಕೆಜಿ ಮತ್ತು ಯುಕೆಜಿ ಹಂತದಲ್ಲೇ ದಾಖಲಾತಿ ವಯೋಮಿತಿ ನಿಗದಿ ಮಾಡಲು ನಿರ್ದಿಷ್ಟ ಕಾನೂನಿಲ್ಲ. ಇದರಿಂದ ಮಕ್ಕಳ ದಾಖಲಾತಿಗೆ ಸಮಸ್ಯೆಯಾಗುತ್ತಿದೆ ಎಂದರು.

'ಇದಕ್ಕೆ ಪರಿಹಾರ ಕಲ್ಪಿಸಲು ಕಾನೂನಿನ ಅಗತ್ಯವಿದೆ. ಕರ್ನಾಟಕ ಶಿಕ್ಷಣ ಕಾಯ್ದೆಯ ತಿದ್ದುಪಡಿಗಾಗಿ ಮಸೂದೆ ಸಿದ್ಧಪಡಿಸಿ ಮುಂದಿನ ಅಧಿವೇಶನದಲ್ಲಿ ಮಂಡಿಸಲಾಗುವುದು' ಎಂದೂ ಅವರು ತಿಳಿಸಿದರು.

### ಎಸ್‌ಎಸ್‌ಎಲ್‌ಸಿ: 31ಕ್ಕೆ ತೃತೀಯ ಭಾಷೆ ಪರೀಕ್ಷೆ

**ಬೆಂಗಳೂರು:** ಮಾರ್ಚ್ 30ಕ್ಕೆ ನಿಗದಿಯಾಗಿದ್ದ ಎಸ್‌ಎಸ್‌ಎಲ್‌ಸಿಯ ತೃತೀಯ ಭಾಷೆಯ ಪರೀಕ್ಷೆಯನ್ನು ಮಾ.31ಕ್ಕೆ ಮುಂದೂಡಲಾಗಿದೆ.

ರಾಜ್ಯ ಸರ್ಕಾರವು ಮಹಾವೀರ ಜಯಂತಿ ರಜೆಯನ್ನು ಮಾ. 31ರ ಬದಲು 30ಕ್ಕೆ ನಿಗದಿ ಮಾಡಿರುವುದರಿಂದ ಈ ಬದಲಾವಣೆ ಮಾಡಲಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ತಿಳಿಸಿದೆ.

ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಎನ್‌ಎಸ್‌ಕ್ಯೂಎಫ್ ವಿಷಯಗಳ ಪರೀಕ್ಷೆ 31ಕ್ಕೆ ನಡೆಯಲಿದೆ. ಉಳಿದ ವಿಷಯಗಳ ಪರೀಕ್ಷೆಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಮಂಡಳಿಯ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


**ಮುಖ್ಯ ಚುನಾವಣಾಧಿಕಾರಿಯವರ ಕಛೇರಿ, ಕರ್ನಾಟಕ**
ನಿರ್ವಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು–560001
ದೂರವಾಣಿ: 080–22224212.
ಸಂಖ್ಯೆ: ಸಿಇಒ/15/ಚುಸಿಲೆ/20226 ದಿನಾಂಕ: 26.03.2026.

**ಪ್ರಕಟಣೆ**

ಮುಖ್ಯ ಚುನಾವಣಾಧಿಕಾರಿಯವರ ಕಛೇರಿಗೆ ಅವಶ್ಯಕವಿರುವ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ 01 ವರ್ಷದ ಅವಧಿಗೆ ಒದಗಿಸುವ ಸಂಬಂಧ ಇ–ಟೆಂಡರ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಈ ಸಂಬಂಧ ಅಧಿಸೂಚನೆಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಲ್ಲಿ ಲಭ್ಯಪಡಿಸಲಾಗಿದೆ. ಆಸಕ್ತ ಸೇವಾದಾರ ಸಂಸ್ಥೆಗಳು ಬಿಡ್‌ಗಳನ್ನು ದಿನಾಂಕ: 07.04.2026ರ ಸಂಜೆ 05.00 ಗಂಟೆಯೊಳಗಾಗಿ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 080–22224212ನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಇ.ಒ (ಚುನಾವಣೆಗಳು)
ವಾ.ಸಾ.ಸಂ.ಇ/ವಾಪ್ರ/6482/ಅಡ್ವರ್ಟ್/2025–26

**ಭಾರತೀಯ ಸ್ಟೇಟ್ ಬ್ಯಾಂಕ್**
ಪ್ರಾದೇಶಿಕ ವ್ಯವಹಾರ ಕಛೇರಿ 1, ಮಂಗಳೂರು ಫೋರ್ಟ್ ರಸ್ತೆ, ಮಂಗಳೂರು–575001. ದೂರವಾಣಿ: 0824–2210801, ಇಮೇಲ್ ಐಡಿ: rmr1.aomanban@sbi.co.in

**ಟೆಂಡರ್ ಸೂಚನೆ**

ಎಸ್‌ಬಿಐ ಈ ಕೆಳಗಿನ ಕೆಲಸಗಳಿಗೆ ಆನ್‌ಲೈನ್ 'ಇ–ಟೆಂಡರ್' ಅನ್ನು ಆಹ್ವಾನಿಸುತ್ತಿದೆ:
1. ಎಸ್‌ಬಿಐ ಮಂಗಳೂರು ಶಾಖೆಯ ಒಳಾಂಗಣ ಅಲಂಕಾರ/ ಪುನರ್ನಿರ್ಮಾಣ ಕಾಮಗಾರಿಗಳು; ಅಂದಾಜು ವೆಚ್ಚ ರೂ.105 ಲಕ್ಷಗಳು.
2. ಎಸ್‌ಬಿಐ ಮಂಗಳೂರು ಶಾಖೆಯ ಹೆಚ್‌ವಿಎಸಿ ಕಾಮಗಾರಿಗಳು; ಅಂದಾಜು ವೆಚ್ಚ ರೂ.51.26 ಲಕ್ಷಗಳು.

ಅರ್ಹತಾ ಮಾನದಂಡಗಳು, ನಿಯಮಗಳು ಮತ್ತು ಷರತ್ತುಗಳು ಹಾಗೂ ಬಿಡ್ ದಾಖಲೆಗಳನ್ನು, ಈ ವೆಬ್‌ಸೈಟ್‌ಗೆ ಭೇಟಿ ನೀಡಿ: https://sbi.bank.in/web/sbi-in-the-news/procurement-news ಮತ್ತು https://etender.sbi. ಸಲ್ಲಿಕೆಗೆ ಕೊನೆಯ ದಿನಾಂಕ 17.04.2026.

ಸಹಿ/– ಪ್ರಾದೇಶಿಕ ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ
**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು**
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಐಎಲ್–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಮ್ ರೋಡ್, ಬೆಂಗಳೂರು – 560052.
No: KREIS/INFR/OTH/269/2025-ADMN/268706 ದಿನಾಂಕ: 26.03.2026

**ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೈಸೂರು ಕಂದಾಯ ವಿಭಾಗದ ವಸತಿ ಶಾಲೆ/ಕಾಲೇಜುಗಳಲ್ಲಿ ಗ್ಯಾಸ್ ಸ್ಟೀಮ್ ಬಾಯ್ಲರ್ ವಿಥ್ ವೆಸೆಲ್‌ಗಳನ್ನು ಒದಗಿಸಲು ಇ–ಪೋರ್ಟಲ್ ಮುಖಾಂತರ ಆಹ್ವಾನಿಸಲಾದ ಟೆಂಡರ್ ಇಂಡೆಂಟ್ ಸಂಖ್ಯೆ:**KREIS/2025-26/IND0092** ದಿನಾಂಕ: 18.03.2026ರಂದು ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, **ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 17.04.2026**ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ನೋಡಬಹುದಾಗಿದೆ.

ಸಹಿ/– ಜಂಟಿ ನಿರ್ದೇಶಕರು (ಆಡಳಿತ)
ಹಾಗೂ ಟೆಂಡರ್ ಆಹ್ವಾನ ಪ್ರಾಧಿಕಾರ, ಕ.ವ.ಶಿ.ಸಂ.ಸಂಘ
DIPR/CP/YC/6479/2025-26

ಕರ್ನಾಟಕ ಸರ್ಕಾರ
**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು**
ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029
ದೂ.ಸಂ:080–29753354/56, ಇ–ಮೇಲ್–karbuildworkerswelfare@gmail.com
ಸಂ:ಕ.ಕ&ಇ.ನಿ.ಕಾ.ಕ.ಮಂ/ಪ್ರಕಟಣೆ/2025–26 ದಿನಾಂಕ:26.03.2026

**ಇ–ಟೆಂಡರ್ ಪ್ರಕಟಣೆ**

ಈ ಅಧಿಸೂಚನೆ ಮತ್ತು ಟೆಂಡರ್ ದಾಖಲೆಯಲ್ಲಿ ವಿವರಿಸಿದ ನಿಯಮಗಳ ಪ್ರಕಾರ ಕೆಳಗೆ ತಿಳಿಸಿರುವ ಟೆಂಡರನ್ನು ಈ ಮೂಲಕ ಆಹ್ವಾನಿಸಲಾಗಿದೆ.
• ಬಳ್ಳಾರಿ ಜಿಲ್ಲೆ ಶಿರುಗುಪ್ಪ ತಾಲ್ಲೂಕಿನ ಗ್ರಾಮದಲ್ಲಿ ಮಂಜೂರಾಗಿರುವ ವಸತಿಯುತ ಶ್ರಮಿಕ ವಸತಿ ಶಾಲೆ (6ನೇ ತರಗತಿಯಿಂದ 12ನೇ ತರಗತಿಯ ವರೆಗೆ) ನಿರ್ಮಾಣ ಮಾಡುವ ಕಾಮಗಾರಿ.

ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜೆನ್ಸಿಯವರು ಕೆ.ಪಿ.ಪಿ.ಪೋರ್ಟಲ್ www.kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ–ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕವು ಕೆ.ಪಿ.ಪಿ.ಪೋರ್ಟಲ್ ನಲ್ಲಿ ತಿಳಿಸಲಾಗಿದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ಜಂಟಿ ಕಾರ್ಯದರ್ಶಿ
ಕ.ಕ&ಇ.ನಿ.ಕಾ.ಕ.ಮಂಡಳಿ
ವಾಸಾಸಂಇ/ವಾಪ್ರ/ಶಿರಡಿ ಸಾಯಿ/6478/2025–26

**ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ**
ನಂ. 5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560009.
ದೂರವಾಣಿ: 080–22341230/35 ಇ–ಮೇಲ್: bmicapa@gmail.com
ಸಂಖ್ಯೆ:ಬಿಎಂಐಸಿಎಪಿಎ/ಭೂಉಬ–02/26/2021–22/2907 ದಿನಾಂಕ: 26–03–2026

**ಸಾರ್ವಜನಿಕ ಪ್ರಕಟಣೆ**

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ)ರ ಪ್ರಕಾರ)

**ಶ್ರೀ ಹೆಚ್.ವೈ. ಅಶ್ವಥ್ ಬಿನ್ ಲೇಟ್ ಎಲ್ಲೇಗೌಡ** ಇವರು ಬೆಂಗಳೂರು ದಕ್ಷಿಣ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, **ಲಾಲ್‌ಘಟ್ಟ ಗ್ರಾಮದ** ಸರ್ವೆ ಸಂಖ್ಯೆ: **62/1** ರ 01 ಎಕರೆ – 02 ಗುಂಟೆ ವಿಸ್ತೀರ್ಣದ ಜಮೀನನ್ನು ಕೆಟಿಸಿಪಿ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಅನುಮೋದಿತ ಮಹಾಯೋಜನೆಯಲ್ಲಿ **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

1) ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ, ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ದೊರಕುತ್ತವೆ.
2) ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4) ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು, ಒಳಚರಂಡಿ, ವಿದ್ಯುತ್ ಸೌಲಭ್ಯ ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ **ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು** ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.
ವಾಸಾಸಂಇ/ವಾ.ಪ್ರ/6475/ಅಡ್ವರ್ಟೋರ್/2025–26

**ಕರ್ನಾಟಕ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.2, ಹೂವಿನಹಡಗಲಿ, ವಿಜಯನಗರ ಜಿಲ್ಲೆ.
Ph. No. 08399-200001 email:eeslid2hdl@gmail.com

**ಅಲ್ಪಾವಧಿಟೆಂಡರ್ ಪ್ರಕಟಣೆ**
**(ONLY THROUGH "e-Procurement" SYSTEM)**

ಉಲ್ಲೇಖ:ಈ ಕಛೇರಿಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1950/2025–26ದಿನಾಂಕ: 24.03.2026
ಈ ಕಛೇರಿಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1951/2025–26 ದಿನಾಂಕ: 24.03.2026

ಸಿಂಗಟಾಲೂರು ಏತ ನೀರಾವರಿಯೋಜನೆಯಎಡಭಾಗದ ಲಿಫ್ಟ್–2 ಜಾಕ್‌ವೆಲ್‌ನ ಮುಂಡರಗಿ ಶಾಖೆಯ ಪಂಪ್ಸ್ ಮತ್ತು ಮೋಟರ್ಸ್‌ರಿಪೇರಿಕಾಮಗಾರಿಗೆ ಹಾಗೂ ಗದಗ ಶಾಖೆಯ ಪಂಪ್ಸ್ ಮತ್ತು ಮೋಟರ್ಸ್‌ರಿಪೇರಿಕಾಮಗಾರಿಗೆಉಲ್ಲೇಖಿತಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವಂತ, ಅರ್ಹಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ **(KNNL/2025-26/OW/KNNL_INDENT4251&4252)** ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅದರಂತೆ, ಸದರಿಕಾಮಗಾರಿಯ ಟೆಂಡರ್‌ಗಳಿಗೆಇಟ್ಟ ಮೊತ್ತವುರೂ. 253.64 ಲಕ್ಷಮತ್ತು 401.89 ಲಕ್ಷ(ಜಿ.ಎಸ್.ಟಿ ಹೊರತುಪಡಿಸಿ) ಆಗಿರುತ್ತದೆ ಹಾಗೂ ಈ ಕಾಮಗಾರಿಗಳಿಗೆಇ.ಎಂ.ಡಿ. ಮೊತ್ತವುರೂ. 3.80 ಲಕ್ಷ ಮತ್ತು 6.02 ಲಕ್ಷಆಗಿರುತ್ತದೆ.

ಇನ್ನುಳಿದಂತೆ, ಸದರಿ ಟೆಂಡರ್‌ಗಳಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ:27.03.2026ರ ನಂತರ **"https://kppp.karnataka.gov.in"**, ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ಅನ್ನು ಸಲ್ಲಿಸಬಹುದಾಗಿರುತ್ತದೆ. ಸದರಿಕಾಮಗಾರಿಯಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲುಕೊನೆಯ ದಿನಾಂಕ: 10.04.2026ಎಂದು ಮತ್ತುಟೆಂಡರ್‌ತಾಂತ್ರಿಕಬಿಡ್ಡನ್ನುತೆರೆಯುವ ದಿನಾಂಕ: 13.04.2026ಎಂದು ನಿಗದಿಪಡಿಸಲಾಗಿದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು **e-procurement Helpdesk Phone No's:+91-80-46010000, +91-80-68948777** ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆತಿರಸ್ಕರಿಸುವ ಅಧಿಕಾರಿವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಸಿಂಗಟಾಲೂರು ಏತ ನೀರಾವರಿಯೋಜನೆ, ನಂ. 2 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಹೂವಿನಹಡಗಲಿ, ವಿಜಯನಗರಜಿಲ್ಲೆ.
ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/621

ಕರ್ನಾಟಕ ಸರ್ಕಾರ
**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ**
ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಎಇ–1/ಐಎಫ್‌ಟಿ–66/2025–26
ದಿನಾಂಕ: 24–03–2026

**ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ) 3ನೇ ಕರೆ**

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ಸಮಾಲೋಚಕರಿಂದ ಇ–ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ–2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:24–03–2026 ರಿಂದ 07–04–2026 3054–04–337–1–10–200 ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ 1. ಶಿವಮೊಗ್ಗ ವಿಭಾಗ – 1 ಕಾಮಗಾರಿ (ಇ.ನಂ :31804/ Call–3) ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) : 09 ತಿಂಗಳುಗಳು ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ–2.0 kppp.karnataka.gov.in ನಲ್ಲಿಯೇ ಪ್ರಕಟಿಸಲಾಗುವುದು, ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182– 274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–25501216/ 080–25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/– ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/146/03/2081

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ**
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)

**ಇ–ಟೆಂಡರ್ ಪ್ರಕಟಣೆ** (KPP ಪೋರ್ಟಲ್ ಮೂಲಕ ಮಾತ್ರ)

ಬೆವಿಕಂ, ಟೆಂಡರ್ ಸಂಖ್ಯೆ: **BESCOM/2025-26/SE0446** ಅನ್ವಯ ಮುಖ್ಯ ಮಂತ್ರಿ ಸೌರ ಕೃಷಿ ಯೋಜನೆ **(CM-SKY)** ಯಡಿಯಲ್ಲಿ ಸೌರ ವಿದ್ಯುತ್ ಉತ್ಪಾದಕರ**(SPGs)** ಆಯ್ಕೆಗಾಗಿ ಬಿಲ್ಡ್–ಓನ್–ಆಪರೇಟ್**(BOO)**ಆಧಾರದ ಮೇಲೆ ಬೆವಿಕಂ ವ್ಯಾಪ್ತಿಯಲ್ಲಿನ ಸಬ್‌ಸ್ಟೇಷನ್**(SS)**ಗಳ ಫೀಡರ್ ಮಟ್ಟದ ಸೌರೀಕರಣಕ್ಕಾಗಿ **1500MW**(ಅಂದಾಜು) ಸೌರ ಸಾಮರ್ಥ್ಯಕ್ಕೆ ವಿಕೇಂದ್ರಿಕೃತ ಸೌರ ಘಟಕಗಳ ವಿನ್ಯಾಸ, ಸಮೀಕ್ಷೆ, ಸರಬರಾಜು, ಸ್ಥಾಪನೆ, ಪರೀಕ್ಷೆ, ಅನುಷ್ಠಾನ, ಕಾರ್ಯಾಚರಣೆ & ನಿರ್ವಹಣೆ, 11 ಕೆ.ವಿ. ಮಾರ್ಗದ ಮೂಲಕ ಸೌರಘಟಕವನ್ನು ಸಂಬಂಧಿತ ಸಬ್‌ಸ್ಟೇಷನ್‌ಗೆ ಸಂಪರ್ಕ ಹಾಗೂ ಸೌರ ವಿದ್ಯುತ್ ಸ್ಥಾವರಗಳ ರಿಮೋಟ್ ಮಾನಿಟರಿಂಗ್ ಸಿಸ್ಟಮ್ **(RMS)** ನೊಂದಿಗೆ ಸ್ಥಾವರವನ್ನು ರೆಸ್ಕೋ ಮಾದರಿ ಮೂಲಕ 25 ವರ್ಷ ಪಿಪಿಎ ಅವಧಿಯವರೆಗೆ ಸಂಪರ್ಕಿಸಲು ಯೋಜನೆಯ ಪ್ರಸ್ತಾವನೆಯ ವಿನಂತಿ**(RFP)**ಯನ್ನು ಆಹ್ವಾನಿಸಿದೆ. ಬಿಡ್ ದಾಖಲೆಗಳು **06.04.2026**ರ ನಂತರ **https://kppp.karnataka.gov.in**ಇಲ್ಲಿ ಲಭ್ಯವಿರುತ್ತದೆ. ಆಸಕ್ತ ಬಿಡ್ಡುದಾರರು ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಪೋರ್ಟಲ್ ಕುರಿತು ಯಾವುದೇ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 080–46010000, 080–68948777 ಅಥವಾ ಇಮೇಲ್: support@eprochelpdesk.com ಗೆ ಸಂಪರ್ಕಿಸಿ.

ಸಹಿ/– ಪ್ರಧಾನ ವ್ಯವಸ್ಥಾಪಕರು(ವಿ), ಡಿ.ಎಸ್.ಎಂ, ಬೆವಿಕಂ, ಬೆಂಗಳೂರು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ**
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ–ಮೇಲ್: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ: 08152–200049
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/ 3118/2025–26/ ದಿನಾಂಕ:24.03.2026

**ಅಲ್ಪಾವಧಿ/ಮರು ಟೆಂಡರ್ ಪ್ರಕಟಣೆ ಸಂಖ್ಯೆ: 32/2025–26/ ದಿನಾಂಕ:24.03.2026**

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆಡಬ್ಲ್ಯೂ–1&2 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 11 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಮೊತ್ತ ರೂ. 50.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ. 7.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟ್‌ಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ **www.kppp. karnataka.gov.in** ನಲ್ಲಿ **ದಿನಾಂಕ: 25.03.2026 ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download). ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ (Upload) ಕೊನೆಯ ದಿನಾಂಕ: 01.04.2026 ಸಂಜೆ 04:30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02.04.2026ರ ಸಂಜೆ 04:30 ಗಂಟೆಯ ನಂತರ**. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ **www.kppp.karnataka.gov.in** ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:550/ಕೆಎಸ್‌ಎಂಸಿಎ/2025–26

**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ**
ಉಪ ನಿರ್ದೇಶಕರ ಕಛೇರಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಳಗಾವಿ – 590 010.
ದೂರವಾಣಿ : 0831–2950306, ಇಮೇಲ್ : dysobelgaum@gmail.com
No. : D.Y.E.S./BGM/MESS/2025-26 ದಿನಾಂಕ : 26–03–2026

**ಟೆಂಡರ್ ಪ್ರಕಟಣೆ**
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

**ಉಪ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ಬೆಳಗಾವಿ ಇವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕೆಳಕಾಣಿಸಿದ ಕ್ರೀಡಾ ವಸತಿ ಶಾಲೆ / ನಿಲಯದ ಕ್ರೀಡಾಪಟುಗಳಿಗೆ ದೈನಂದಿನ ಊಟೋಪಹಾರ ಸರಬರಾಜು ಮಾಡಲು** ಅರ್ಹ ಗುತ್ತಿಗೆದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕೆಳಕಾಣಿಸಿದ ಇ–ಟೆಂಡರ್ ಆಹ್ವಾನಿಸಿದೆ.

**1) ಟೆಂಡರ್‌ನ ವಿವರ : ಕ್ರೀಡಾ ವಸತಿ ಶಾಲೆ / ನಿಲಯ, ಬೆಳಗಾವಿ, ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) : ರೂ. 1,51,12,500/–, ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ) : ರೂ. 2,26,688/–, 2) ಟೆಂಡರ್ ಆಹ್ವಾನಿಸುವ ದಿನಾಂಕ : 26–03–2026, 3) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 18–04–2026 ರ ಸಂಜೆ 5.00 ಗಂಟೆಗೆ, 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 21–04–2026 ರ ಬೆಳಿಗ್ಗೆ 11.00 ಗಂಟೆಗೆ, 5) ಆರ್ಥಿಕ ಬಿಡ್ ತೆರೆಯುವ ದಿನಾಂಕ : 23–04–2026 ರ ಬೆಳಿಗ್ಗೆ 11.00 ಗಂಟೆಗೆ.**

ಆಸಕ್ತ ಟೆಂಡರ್‌ದಾರರು ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ **ಉಪ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ಬೆಳಗಾವಿ** ಇವರಿಂದ ಅಥವಾ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. **ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ : 080 – 22501216, 25501227 ಹಾಗೂ ಕಛೇರಿಯ ದೂರವಾಣಿ : 0831–2950306 ಮೂಲಕ ಪಡೆಯಬಹುದಾಗಿದೆ.**

ಸಹಿ/– ಉಪ ನಿರ್ದೇಶಕರು ಹಾಗೂ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಬೆಳಗಾವಿ ಜಿಲ್ಲೆ.
ಡಿಐಪಿಆರ್/ಬೆಳಗಾವಿ/2157/ಮಣಿಪಾಲ್/2025–26

ಕರ್ನಾಟಕ ಸರ್ಕಾರ
**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ & ಉಪ ಅರಣ್ಯ ಸಂರಕ್ಷಣಾಧಿಕಾರಿಯುವರ ತಾಂತ್ರಿಕ ಸಹಾಯಕರು ಹಾಸನ, ಸಾಮಾಜಿಕ ಅರಣ್ಯ ವಿಭಾಗ, ಹಾಸನ**
ಸಂಖ್ಯೆ : ಎ3/ಹೊ.ಟೆಂಡರ್/ವಿವ–01/2026–27
ದಿನಾಂಕ:24.03.2026

**ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)**

2026–27ನೇ ಸಾಲಿನಲ್ಲಿ ಹಾಸನ ಸಾಮಾಜಿಕ ಅರಣ್ಯ ವಿಭಾಗ ಮತ್ತು ವಲಯಗಳಲ್ಲಿ ಅಗತ್ಯವಿರುವ ಕಛೇರಿ ಸಹಾಯಕರು, ವಾಹನ ಚಾಲಕರು, ಲಿಪಿಕ ಸಹಾಯಕರು ಮತ್ತು ಗಣಕಯಂತ್ರ ಸಹಾಯಕರು ಇತ್ಯಾದಿಯವರ ಮಾನವ ಸಂಪನ್ಮೂಲ ಸೇವೆಯ ಅಂದಾಜು ಮೊತ್ತ ರೂ.89.96 ಮಾನವ ಸಂಪನ್ಮೂಲ ಸೇವೆಯನ್ನು ದಿನಾಂಕ:01.04.2026 ರಿಂದ 31.03.2027ರ ವರೆಗೆ ಪಡೆಯಲು ಅರ್ಹ ಅಧಿಕೃತ ಹೊರಗುತ್ತಿಗೆ ಸಂಪನ್ಮೂಲ ಏಜೆನ್ಸಿಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಟೆಂಡರ್‌ನ್ನು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:13.04.2026ರ 16:00 ಗಂಟೆಗೆ (4.00 ಗಂಟೆ) ನಿಗಧಿಪಡಿಸಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಕಛೇರಿ ಕೆಲಸದ ದಿವಸಗಳಲ್ಲಿ ಪಡೆಯಬಹುದಾಗಿದೆ.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ & ಉಪ
ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು
ಸಾಮಾಜಿಕ ಅರಣ್ಯ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/1228/ಕೆಎಸ್‌ಎಂಸಿಎ/2025–26

**ಕಾವೇರಿ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ನಂ.02, ವಿಶ್ವೇಶ್ವರಯ್ಯ ನಾಲಾ ವಿಭಾಗ, ಮದ್ದೂರು,
ಜಿಲ್ಲೆ: ಮಂಡ್ಯ ಪಿನ್‌ಕೋಡ್–571428

**ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :11/2025–26 ದಿ:23.03.2026**
**ದ್ವಿ–ಲಕೋಟೆ ಪದ್ಧತಿ**

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ :11/2025–26 ದಿನಾಂಕ: 23.03.2026 ರಲ್ಲಿ ಒಂದು ಕಾಮಗಾರಿಗೆ (ಟೆಂಡರ್‌ಗಿಟ್ಟ ಮೊತ್ತ 370.05 ಲಕ್ಷಗಳು) ಅರ್ಹ ಕೆಪಿಡಬ್ಲೂಡಿ ಸೂಪರ್ ಗ್ರೇಡ್ ಎಲೆಕ್ಟ್ರಿಕಲ್ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಕ್ವಾರೀಸ್/ ಕ್ಲಾರಿಫಿಕೇಷನ್‌ಗಾಗಿ as per e-portal ಇ.ಎಂ.ಡಿ ಮೊತ್ತವನ್ನು e-payment ಮೂಲಕ ಸಂದಾಯ ಮಾಡುವುದು. ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಟೆಂಡರ್‌ನ್ನು ತೆರೆಯುವ ದಿನಾಂಕ as per e-portal ಟೆಂಡರ್‌ಗಳನ್ನು ತೆರೆಯುವ ದಿನಾಂಕ as per e-portal ಹೆಚ್ಚಿನ ವಿವರಗಳಿಗೆ http://kppp.karnataka.gov.in ನಲ್ಲಿ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ 08231–200282 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಕಾವೇರಿ ನೀರಾವರಿ ನಿಗಮ(ನಿ), ನಂ.02, ವಿ.ಸಿ.ವಿಭಾಗ, ಮದ್ದೂರು
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/916/2025–26

**ದಿ ಮೈಸೂರ್ ಲ್ಯಾಂಪ್ ವರ್ಕ್ಸ್ ಲಿಮಿಟೆಡ್**
(ಕರ್ನಾಟಕ ಸರ್ಕಾರದ ಸಾರ್ವಜನಿಕ ಉದ್ದಿಮೆ)
ಹಳೇ ತುಮಕೂರು ರಸ್ತೆ, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು–560055.
ದೂ:080–23340182 ಇಮೇಲ್:**mylampsblr@gmail.com**
ಸಂಖ್ಯೆ: ಎಂಎಲ್‌ಡಬ್ಲ್ಯೂಎಲ್/ಷೇರ್‌ವ್ಯಾಲ್ಯೂ–ಕ್ಲೇಮ್ಸ್/2025–26 ದಿನಾಂಕ: 25.03.2026

**ಸಾರ್ವಜನಿಕ ಪ್ರಕಟಣೆ**

**ಮಾನ್ಯ ನ್ಯಾಷನಲ್ ಕಂಪನಿ ಲಾ ಟ್ರಿಬ್ಯೂನಲ್, ಬೆಂಗಳೂರು ಪೀಠ (ಎನ್‌ಸಿಎಲ್‌ಟಿ) ಅನುಮೋದಿಸಿದ ಬಂಡವಾಳ ಇಳಿಕೆಯ ಆಧಾರದ ಮೇಲೆ ಷೇರು ಮೊತ್ತದ ಕ್ಲೇಮ್ ಕುರಿತು ಕಂಪನಿಯ ಹಿಂದಿನ ಷೇರುದಾರರಿಗೆ ಸೂಚನೆ**

ಈ ಮೂಲಕ ಸೂಚಿಸುವುದೇನೆಂದರೆ, ಮಾನ್ಯ ನ್ಯಾಷನಲ್ ಕಂಪನಿ ಲಾ ಟ್ರಿಬ್ಯೂನಲ್, ಬೆಂಗಳೂರು ಪೀಠ ("ಎನ್‌ಸಿಎಲ್‌ಟಿ"), ಇವರು 6ನೇ ಆಗಸ್ಟ್, 2025 ರಂದು ಹೊರಡಿಸಿದ ಆದೇಶದ ಅನುಸಾರ, ಮೆ॥ ದಿ ಮೈಸೂರ್ ಲ್ಯಾಂಪ್ ವರ್ಕ್ಸ್ ಲಿಮಿಟೆಡ್ ಪಾವತಿಸಿದ ಷೇರುಗಳಲ್ಲಿ ತಲಾ ರೂ.10/– ಮುಖಬೆಲೆಯ 1,18,10,233 ಈಕ್ವಿಟಿ ಷೇರುಗಳಾಗಿ ವಿಂಗಡಿಸಿದ ರೂ.11,81,02,330/– ಅನ್ನು ತಲಾ ರೂ.10/– ಮುಖಬೆಲೆಯ 1,11,48,554 ಈಕ್ವಿಟಿ ಷೇರುಗಳಾಗಿ ವಿಂಗಡಿಸಿದ್ದು ರೂ.11,14,85,540/– ಕ್ಕೆ ಇಳಿಸಲಾಗಿದೆ. ಅಂದರೆ ಕಂಪನಿಯ ಸಾರ್ವಜನಿಕ ಷೇರುದಾರರು ಹೊಂದಿರುವ ತಲಾ ರೂ.10/– ಮುಖಬೆಲೆಯ 6,61,679 ಈಕ್ವಿಟಿ ಷೇರುಗಳನ್ನು ಎನ್‌ಸಿಎಲ್‌ಟಿ ನಿಯಮಗಳು, 2016ರ ನಿಯಮ 11ನ್ನು ಓದಿಕೊಂಡಂತೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 66(1)(B)(ii) ಉಪಬಂಧಗಳನ್ವಯ ಪಾವತಿಸಿದ ಷೇರು ಬಂಡವಾಳ 5.6% ರಷ್ಟಿದೆ. ಅದರಂತೆ, ಕಂಪನಿಯು ಪ್ರತಿ ಷೇರಿಗೆ ರೂ.73.10 ದರದಲ್ಲಿ ಅರ್ಹ ಕಂಪನಿಯ ಹಿಂದಿನ ಷೇರುದಾರರ ಕ್ಲೈಮ್‌ಗಳನ್ನು ಇತ್ಯರ್ಥಪಡಿಸುವ ಉದ್ದೇಶದಿಂದ ನಿರ್ದಿಷ್ಟ ಮೊತ್ತವನ್ನು ಪ್ರತ್ಯೇಕವಾಗಿ ಗೊತ್ತುಪಡಿಸಿದ ಬ್ಯಾಂಕ್ ಖಾತೆಯಲ್ಲಿ ಉಳಿಸಿಕೊಳ್ಳಲು ನಿರ್ದೇಶಿಸಿದೆ.

ಅದರಂತೆ, 6ನೇ ಆಗಸ್ಟ್, 2025 ರಂದು ಕಂಪನಿಯ ಸದಸ್ಯರ ನೋಂದಣಿಯಲ್ಲಿ ಹೆಸರಿರುವ ಮತ್ತು ಸದರಿ ಬಂಡವಾಳ ಕಡಿತದಿಂದ ಉಂಟಾದ ಮೊತ್ತವನ್ನು ಪಡೆಯಲು ಅರ್ಹರಾಗಿರುವ ಕಂಪನಿಯ ಹಿಂದಿನ ಷೇರುದಾರರು ಅಗತ್ಯ ಪೂರಕ ದಾಖಲೆಗಳೊಂದಿಗೆ ಕಂಪನಿಗೆ ತಮ್ಮ ಕ್ಲೇಮ್ ಅನ್ನು ಸಲ್ಲಿಸಲು ವಿನಂತಿಸಿದೆ.

ಕಂಪನಿಯ ಹಿಂದಿನ ಷೇರುದಾರರು ಈ ಕೆಳಗಿನ ದಾಖಲೆಗಳನ್ನು ಸಲ್ಲಿಸುವುದು:
1. ಪ್ಯಾನ್ ಕಾರ್ಡ್ ಮತ್ತು ಆಧಾರ್ ಕಾರ್ಡ್/ ಷೇರುದಾರರ ಮಾನ್ಯ ವಿಳಾಸ ಪುರಾವೆ ಇರುವ ಸ್ವಯಂ–ದೃಢೀಕೃತ ಪ್ರತಿ.
2. ಡೆಪಾಸಿಟರಿ ಪಾರ್ಟಿಸಿಪೆಂಟ್‌ರಿಂದ ಮೂಲ ಷೇರು ಪ್ರಮಾಣಪತ್ರ(ಗಳು) ಅಥವಾ ಷೇರು ಹೊಂದಿರುವ ದಾಖಲೆ ಪುರಾವೆಗಳು ಜೊತೆಗೆ ಕ್ಲೈಂಟ್ ಐಡಿ ಮತ್ತು ಡಿಪಿ ಐಡಿ.
3. ಷೇರುದಾರರ ಹೆಸರು ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ಹೊಂದಿರುವ ಕ್ಯಾನ್ಸಲ್ಡ್ ಚೆಕ್ ಲೀಫ್ / ಬ್ಯಾಂಕ್ ಪಾಸ್‌ಬುಕ್ ಪ್ರತಿ.
4. ಕಾನೂನುಬದ್ಧ ಉತ್ತರಾಧಿಕಾರಿಗಳು / ನಾಮನಿರ್ದೇಶಿತರು ಆಗಿದ್ದಲ್ಲಿ ಮರಣ ಪ್ರಮಾಣಪತ್ರ, ಉತ್ತರಾಧಿಕಾರ ಪ್ರಮಾಣಪತ್ರ, ಪ್ರೊಬೇಟ್ ಅಥವಾ ಅನ್ವಯವಾಗಬಹುದಾದ ಇತರ ಕಾನೂನು ದಾಖಲೆಗಳಂತಹ ಸಂಬಂಧಿತ ದಾಖಲೆಗಳು.

ಈ ಪ್ರಕಟಣೆಯ **ದಿನಾಂಕದಿಂದ 60 (ಅರವತ್ತು)** ದಿನಗಳೊಳಗೆ ಎಲ್ಲಾ ಕ್ಲೇಮ್‌ಗಳನ್ನು ಪೂರಕ ದಾಖಲೆಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ಸಲ್ಲಿಸುವುದು:
**ಮೆ॥ ದಿ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್**
**ನೋಂದಾಯಿತ ಕಚೇರಿ**
**ಹಳೇ ತುಮಕೂರು ರಸ್ತೆ, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು – 560 055.**
**ಇಮೇಲ್: mylampsclaims@gmail.com / ಮೊ: 9844061710**

ದಿ ಮೈಸೂರ್ ಲ್ಯಾಂಪ್ ವರ್ಕ್ಸ್ ಲಿಮಿಟೆಡ್
ಸಹಿ/– (ಗುಂಜನ್ ಕೃಷ್ಣ), ವ್ಯವಸ್ಥಾಪಕ ನಿರ್ದೇಶಕರು

**ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ, ತುಮಕೂರು.**
ಕ್ರ.ಸಂ:ಕಾಇಂ:ಲೋಇವಿ:ತುವು:ಕಿಇಂ–1:ಟೆಂಡರ್61/2025–26
ದಿನಾಂಕ : 23.03.2026

**ಟೆಂಡರ್ ಪ್ರಕಟಣೆ ಸಂ.61/2025–26 ದಿನಾಂಕ: 23.03.2026**

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 61/2025–26 ದಿನಾಂಕ 23/03/2026 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ 4059–80–051–0–60 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ, 8443–ಠೇವಣಿ ವಂತಿಕೆ ಹಾಗೂ 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳು ಸುಧಾರಣೆ ಅಡಿಯಲ್ಲಿ ಒಟ್ಟು 05 ಟೆಂಡರ್ ಅನ್ನು KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಗರಿಷ್ಟ ಟೆಂಡರಿಗಿಟ್ಟ ಮೊತ್ತ ರೂ.119.78 ಲಕ್ಷಗಳು ಮತ್ತು ಕನಿಷ್ಟ ಟೆಂಡರಿಗಿಟ್ಟ ಮೊತ್ತ ರೂ.18.06 ಲಕ್ಷಗಳು ಹಾಗೂ ಗರಿಷ್ಟ ಇ.ಎಂ.ಡಿ ಮೊತ್ತ ರೂ.2,00,000/– ಮತ್ತು ಕನಿಷ್ಟ ಇ.ಎಂ.ಡಿ ಮೊತ್ತ ರೂ. 45,150/–ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 07/04/2026 ರ 17–30 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 25/03/2026 ರಿಂದ 08/04/2026 ರ 16.00 ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 08/04/2026 ರ 16–00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 09/04/2026 ರ 16–30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 10/04/2026 ರ 17–00 ಗಂಟೆಗೆ ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಹಾಗೂ ಮೀಸಲಾತಿ ನೀಡಿರುವ ಕಾಮಗಾರಿ ವಿವರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/514/KSMCA/2025-26

**ಬೆಂಗಳೂರು ಕೇಂದ್ರ ನಗರ ಪಾಲಿಕೆ**
ಕಾರ್ಯಪಾಲಕ ಅಭಿಯಂತರರ ಕಛೇರಿ,
ಚಿಕ್ಕಪೇಟೆ ವಿಭಾಗ, 8ನೇ ಮುಖ್ಯರಸ್ತೆ, 2ನೇ ಬ್ಲಾಕ್, ಜಯನಗರ,
ಕನಕನಪಾಳ್ಯ, ಬೆಂಗಳೂರು – 560011.
ಸಂಖ್ಯೆ: ಕಾಅ/ಚಿಪೇ/ಇ–ಪ್ರೋಕ್/16/2025–26 ದಿನಾಂಕ: 25–03–2026

**ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ**
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಚಿಕ್ಕಪೇಟೆ ವಿಭಾಗ), ಬೆಂಕೇನಪಾ, ಬೆಂಗಳೂರು ಇವರು ಬೆಂಕೇನ ಪಾಲಿಕೆಯಲ್ಲಿ ನೋಂದಾಯಿತ ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್/ ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ–4)

| ಕ್ರ. ಸಂ. | ಕಾಮಗಾರಿಯ ಹೆಸರು |
|---|---|
| 1 | ಚಿಕ್ಕಪೇಟೆ ವಿಭಾಗದಲ್ಲಿ ಪಾದಚಾರಿಮಾರ್ಗ ಸೇರಿದಂತೆ ಆರ್ಟಿರಿಯಲ್ ಮತ್ತು ಸಬ್ ಆರ್ಟಿರಿಯಲ್ ರಸ್ತೆಗಳ ವಾರ್ಷಿಕ ನಿರ್ವಹಣೆ ಕಾಮಗಾರಿ. **(1 ವರ್ಷ ಅವಧಿಗೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 139.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): ರೂ. 1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ರೂ. 1,08,500/– ಬ್ಯಾಂಕ್ ಗ್ಯಾರಂಟಿ ಮೂಲಕ ಸಲ್ಲಿಸಬೇಕು.** |
| 2 | ಚಿಕ್ಕಪೇಟೆ ಮತಕ್ಷೇತ್ರದಲ್ಲಿ ಮಳೆ ನೀರು ಚರಂಡಿಗಳ ವಾರ್ಷಿಕ ನಿರ್ವಹಣೆ ಕಾಮಗಾರಿ. **(3 ವರ್ಷ ಅವಧಿಗೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 430.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): ರೂ. 1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ರೂ. 5,45,000/– ಬ್ಯಾಂಕ್ ಗ್ಯಾರಂಟಿ ಮೂಲಕ ಸಲ್ಲಿಸಬೇಕು.** |

**ಟೆಂಡರ್ ವೇಳಾಪಟ್ಟಿ:** 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಯ: **30–03–2026 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ವಲಯ–2, ಬೆಂಕೇನಪಾ, ಅನೆಕ್ಸ್–3, 4ನೇ ಮಹಡಿ, ಜಿಬಿಎ ಕಛೇರಿ ಕಾಂಪೌಂಡ್, ಎನ್.ಆರ್. ಚೌಕ, ಬೆಂಗಳೂರು ಇಲ್ಲಿ ನಡೆಯುವುದು.** 3) ಭರ್ತಿ ಮಾಡಿದ ಟೆಂಡರ್ ಡಾಕ್ಯೂಮೆಂಟ್‌ನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **02–04–2026 ರಂದು 16.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **04–04–2026 ರಂದು 11.30 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನಮೋದನೆಯ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ, ಬೆಂಕೇನಪಾ.

ಕರ್ನಾಟಕ ಸರ್ಕಾರ
**ಲೋಕೋಪಯೋಗಿ ಇಲಾಖೆ**
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

**ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:36/2025–26 ದಿನಾಂಕ:23.03.2026**

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೆಕ್ಕಶೀರ್ಷಿಕೆ: 5054–80–190–0–01–132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ– ಬಂಡವಾಳ ವೆಚ್ಚಗಳಡಿ ಅನುಮೋದನೆಯಾಗಿರುವ ಈ ವಿಭಾಗದಡಿಯಲ್ಲಿನ ನಂ–1 ಉಪವಿಭಾಗ, ಮೈಸೂರು ವ್ಯಾಪ್ತಿಯ 02 ಸಂಖ್ಯೆ ನಂಜನಗೂಡು ಉಪವಿಭಾಗ ವ್ಯಾಪ್ತಿಯ 02 ಸಂಖ್ಯೆ ಮತ್ತು ತಿ.ನರಸೀಪುರ ಉಪವಿಭಾಗ ವ್ಯಾಪ್ತಿಯ 02 ಸಂಖ್ಯೆ ಒಟ್ಟು 06 ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್ ನಲ್ಲಿ ನೊಂದಾಯಿಸಿರುವ "ಅರ್ಹ" ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/) ಕ್ರಮ ಸಂಖ್ಯೆ 01 ರಿಂದ 03ರ ಕಾಮಗಾರಿಗಳಿಗೆ :ದಿ:24.03.2026 ರಿಂದ 09.04.2026 ರ ಸಂಜೆ 17:00 ರವರೆಗೆ ಹಾಗೂ ಕ್ರಮ ಸಂಖ್ಯೆ 04 ರಿಂದ 06 ರ ಕಾಮಗಾರಿಗಳಿಗೆ :ದಿ:25.03.2026 ರಿಂದ 24.04.2026 ರ ಸಂಜೆ 17:00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.100.77 ಲಕ್ಷಗಳು ಹಾಗೂ ಇ.ಎಂ.ಡಿ ರೂ.2.00 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ.324.17 ಲಕ್ಷಗಳು ಹಾಗೂ ಇ.ಎಂ.ಡಿ ರೂ.4.86 ಲಕ್ಷಗಳಾಗಿರುತ್ತದೆ. ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಮಿತಿ: 5 ರಿಂದ 11 ತಿಂಗಳುಗಳು (ಮಳೆಗಾಲ ಸೇರಿದಂತೆ) ಸದರಿ ಕಾಮಗಾರಿಗಳ ಪೂರ್ವಭಾವಿ ಸಭೆಯನ್ನು ದಿ:02.04.2026 ರ ಬೆಳಿಗ್ಗೆ 11.00 ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಏರ್ಪಡಿಸಲಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

**ಸೂಚನೆ:** 1) ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. 2) ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.
DIPR/DDMYS/1882/KSMCA/1068/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

## ಸುಭಾಷಿತ

ಪ್ರೀತಿ ಯಾವಾಗಲೂ ತೋರುವವರ ಔದಾರ್ಯವೇ ಹೊರತು ಪಡೆಯುವವರ ಯೋಗ್ಯತೆಯಲ್ಲ.

–ಹಾ.ಮಾ. ನಾಯಕ

ಸಂಪಾದಕೀಯ

# ಜೆಜೆಎಂ: ಅನುದಾನ ಬಳಕೆ ಸಮಸ್ಯೆ ನೆಪ ಹೇಳಲಾಗದ ಆಡಳಿತ ವೈಫಲ್ಯ

ರಾಜ್ಯಗಳಿಗೆ ಅನುದಾನ ನೀಡುವುದರಲ್ಲಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದ್ದು, ಕರ್ನಾಟಕಕ್ಕೆ ಅನ್ಯಾಯ ಎಸಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನೇಕ ಸಂದರ್ಭಗಳಲ್ಲಿ ದೂರಿದ್ದಾರೆ. ಆದರೆ, ವಿಧಾನಸಭೆಯಲ್ಲಿ ಮಂಡಿಸಲಾದ ಮಹಾಲೇಖಪಾಲರ ವರದಿ (ಸಿಎಜಿ) ಬೇರೆಯದೇ ಕಥೆಯನ್ನು ಹೇಳುತ್ತಿದೆ. 'ಜಲಜೀವನ್ ಮಿಷನ್' (ಜೆಜೆಎಂ) ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಖರ್ಚು ಮಾಡಲು ರಾಜ್ಯ ಸರ್ಕಾರ ಹೆಣಗಾಡುತ್ತಿದೆ. ಈ ಯೋಜನೆಯ ಅನುಷ್ಠಾನದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮುಖ್ಯ ಪಾತ್ರವಹಿಸುವುದರಿಂದ, ಸಚಿವ ಪ್ರಿಯಾಂಕ್ ಖರ್ಗೆ ಅವರು ಈ ಬಗ್ಗೆ ಗಮನಹರಿಸಬೇಕಾಗಿದೆ. ನೀರು ಪೂರೈಕೆಗೆ ಸಂಬಂಧಿಸಿದ ಈ ಯೋಜನೆಯು ಕಲ್ಯಾಣ ಕಾರ್ಯಕ್ರಮವಾಗಿರದೆ, ಮೂಲಭೂತ ಹಕ್ಕಾಗಿದೆ. ಹಾಗಾಗಿಯೇ, ಪ್ರತಿ ಮನೆಗೂ ನಳದ ನೀರಿನ ಸಂಪರ್ಕ ಕಲ್ಪಿಸುವ 'ಜೆಜೆಎಂ'ನ ಸಾರ್ವತ್ರಿಕ ಯೋಜನೆಯು ಮೂಲಸೌಕರ್ಯ ಕಲ್ಪಿಸುವ ಗುರಿಯಷ್ಟೇ ಆಗಿರದೆ, ಸಾಮಾಜಿಕ ಒಪ್ಪಂದದ ಬದ್ಧತೆಯಾಗಿದೆ. 2019 ಮತ್ತು 2024ರ ನಡುವಿನ ಬಿಜೆಪಿ ಮತ್ತು ಕಾಂಗ್ರೆಸ್ ಆಡಳಿತಾವಧಿಯಲ್ಲಿ ಕೇಂದ್ರದಿಂದ ಹಂಚಿಕೆಯಾಗಿದ್ದ ₹24,819 ಕೋಟಿಯಲ್ಲಿ, ರಾಜ್ಯ ಪಡೆದುಕೊಂಡಿರುವುದು ಶೇ 45ರಷ್ಟು ಮೊತ್ತವನ್ನು ಮಾತ್ರ. ಅನುದಾನವನ್ನು ಬಳಕೆ ಮಾಡಿಕೊಂಡಿದ್ದಕ್ಕೆ ಸಂಬಂಧಿಸಿದ ಪ್ರಮಾಣಪತ್ರಗಳನ್ನು ಸರಿಯಾದ ಸಮಯಕ್ಕೆ ಸಲ್ಲಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿರುವುದೇ ಪೂರ್ಣ ಅನುದಾನ ದೊರೆಯದಿರಲು ಕಾರಣ. ಆಡಳಿತ ಯಂತ್ರದಲ್ಲಿನ ಈ ಸಮಸ್ಯೆಯು ಪಕ್ಷಾತೀತ ಎನ್ನುವುದು ಗಮನಾರ್ಹ.

ಜಲಜೀವನ್ ಮಿಷನ್ ಅನುದಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿರುವುದು, ಆಡಳಿತದ ವೈಫಲ್ಯಕ್ಕೆ ಸ್ಪಷ್ಟ ನಿದರ್ಶನ.

ಅನುದಾನದ ಅಸಮರ್ಪಕ ಬಳಕೆಯ ಪರಿಣಾಮಗಳು ಕಣ್ಣಿಗೆ ಕಾಣಿಸುವಂತಿವೆ. 2024ರ ಕೊನೆಯ ವೇಳೆಗೆ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸುವ ತನ್ನ ಗುರಿಯಲ್ಲಿ ಶೇ 66ರಷ್ಟನ್ನು ಸಾಧಿಸಲಷ್ಟೇ ರಾಜ್ಯ ಯಶಸ್ವಿಯಾಗಿದೆ. ಟೆಂಡರ್ ಪ್ರಕ್ರಿಯೆಯಲ್ಲಿನ ವಿಳಂಬ, ಭೂಮಿಯನ್ನು ಸ್ವಾಧೀನಕ್ಕೆ ಪಡೆಯದೆ ಮಂಜೂರು ಮಾಡಿದ ಯೋಜನೆಗಳು ಹಾಗೂ ಖರ್ಚು ಮಾಡಿದ ನಂತರವೂ ಅಪೂರ್ಣವಾಗಿ ಉಳಿದಿರುವ ಕೆಲಸಗಳು ವ್ಯವಸ್ಥೆಯ ವೈಫಲ್ಯದ ನಿದರ್ಶನದಂತಿವೆ. ಸುಸ್ಥಿರತೆ ಮತ್ತು ಗುಣಮಟ್ಟದ ಬಗ್ಗೆಯೂ ಪ್ರಶ್ನೆಗಳು ಉಳಿದಿವೆ. ಅಂತರ್ಜಲದ ಮೇಲಿನ ರಾಜ್ಯದ ಅವಲಂಬನೆ ಮುಂದುವರಿದಿದೆ. ಆದರೆ, ನೀರಿನ ಗುಣಮಟ್ಟದ ಮೇಲ್ವಿಚಾರಣೆಯ ವೆಚ್ಚವು ಲೆಕ್ಕಪರಿಶೋಧನಾ ಅವಧಿಯಲ್ಲಿ ತೀವ್ರವಾಗಿ ಕುಸಿದಿದೆ. ಅಪೂರ್ಣ ಕಾಮಗಾರಿಗಳ ನಡುವೆಯೂ ಗ್ರಾಮಗಳಲ್ಲಿ ಯೋಜನೆಯು ಸಂಪೂರ್ಣವಾಗಿ ಅನುಷ್ಠಾನಗೊಂಡಿದೆ ಎನ್ನುವ ಘೋಷಿತ ವರದಿಗಳು ಯೋಜನೆಯ ವಿಶ್ವಾಸಾರ್ಹತೆಯನ್ನು ಮತ್ತಷ್ಟು ಕುಗ್ಗಿಸುವಂತಿವೆ. 3,100ಕ್ಕೂ ಹೆಚ್ಚಿನ ಹಳ್ಳಿಗಳಿಗೆ ರಾಸಾಯನಿಕಗಳು ಬೆರೆತು ಕಲುಷಿತಗೊಂಡ ನೀರಿನ ಸರಬರಾಜು ಆಗುತ್ತಿದೆ ಎನ್ನುವ ಇತ್ತೀಚಿನ ವರದಿಗಳು ಸಿಎಜಿಯ ವರದಿಯನ್ನು ಬಲಪಡಿಸುವಂತಿವೆ. ಪರೀಕ್ಷೆಗೆ ಒಳಗಾದ ಸುಮಾರು ಶೇ 10ರಷ್ಟು ಮಾದರಿಗಳಲ್ಲಿ ಮಾಲಿನ್ಯಕಾರಕ ಅಂಶಗಳು ಪತ್ತೆಯಾಗಿವೆ. ಇಂಥ ಪರೀಕ್ಷೆಗಳು ರೋಗ ಹರಡಿದ ನಂತರ ನಡೆಯುತ್ತಿರುವುದೇ ಹೊರತು, ಅವುಗಳನ್ನು ತಡೆಗಟ್ಟುವ ಮುನ್ನೆಚ್ಚರಿಕೆಯಾಗಿ ಅಲ್ಲ ಎನ್ನುವುದು ಸಾರ್ವಜನಿಕ ಆರೋಗ್ಯದ ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಇರುವ ಸಮಸ್ಯೆಯನ್ನು ಬಹಿರಂಗಪಡಿಸುತ್ತದೆ.

ಇಷ್ಟೆಲ್ಲ ಸಮಸ್ಯೆಗಳ ನಡುವೆಯೂ, ಜಲಜೀವನ್ ಮಿಷನ್ ಯೋಜನೆಯ ಇಲ್ಲಿಯವರೆಗಿನ ಅನುಷ್ಠಾನದಿಂದ ಅನೇಕ ಸಕಾರಾತ್ಮಕ ಬೆಳವಣಿಗೆಗಳು ಆಗಿರುವುದನ್ನೂ ಗಮನಿಸಬೇಕು. ಮನೆಗಳಿಗೆ ನಳದ ಸಂಪರ್ಕದಿಂದಾಗಿ ಗ್ರಾಮೀಣ ಮಹಿಳೆಯರ ದೈನಂದಿನ ಶ್ರಮವು ಸ್ವಲ್ಪವಾದರೂ ಹಗುರವಾಗಿದೆ. ಶಾಲೆಯಿಂದ ಹೊರಗುಳಿಯುವ ಬಾಲಕಿಯರ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಈ ವಿದ್ಯಮಾನಗಳು, ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಲ್ಲಿ ಸಾಮಾಜಿಕವಾಗಿ ಏನೆಲ್ಲ ಯಶಸ್ಸು ಸಾಧ್ಯವಾಗಬಹುದು ಎನ್ನುವುದನ್ನು ಸೂಚಿಸುವಂತೆಯೇ, ಕಳಪೆ ನಿರ್ವಹಣೆಯಿಂದಾಗಿ ಏನೆಲ್ಲ ಕಳೆದುಕೊಳ್ಳುತ್ತಿದ್ದೇವೆ ಎನ್ನುವುದರ ಸಂಕೇತವೂ ಆಗಿವೆ. 'ಜೆಜೆಎಂ' ಯೋಜನೆಯ ಅನುಷ್ಠಾನದಲ್ಲಿನ ವೈಫಲ್ಯವು ಆರ್ಥಿಕ ಶಿಸ್ತಿನ ಕೊರತೆಯನ್ನು ಎತ್ತಿ ತೋರಿಸುತ್ತಿದೆ. ಆರ್ಥಿಕ ವರ್ಷದ ಕೊನೆಯ ತಿಂಗಳಲ್ಲಿ ಹೆಚ್ಚು ಹಣ ಖರ್ಚು ಮಾಡುವುದರಲ್ಲಿ ('ಮಾರ್ಚ್ ರಶ್') ರಾಜ್ಯದ ದಾಖಲೆ ಉತ್ತಮವಾಗಿದೆ. ಶೇ 40ರಷ್ಟು ಬಂಡವಾಳ ವೆಚ್ಚವನ್ನು ಮಾರ್ಚ್ ತಿಂಗಳವರೆಗೂ ಮುಂದೂಡುವುದು ತರಾತುರಿಯ ವೆಚ್ಚವನ್ನು ಪ್ರೋತ್ಸಾಹಿಸುವಂತಿದೆ. ಈ ನೀತಿಯಲ್ಲಿ ತುರ್ತು ತಿದ್ದುಪಡಿ ಆಗಬೇಕಾಗಿದೆ. ಫಲಿತಾಂಶ ಆಧರಿಸಿದ ಬಜೆಟ್ ಅನ್ನು ಸರ್ಕಾರ ಸಾಂಸ್ಥೀಕರಣಗೊಳಿಸಬೇಕಾಗಿದೆ. ಹಾಗೆಯೇ ವೆಚ್ಚದ ಬದಲಾಗಿ ನಿಗದಿತ ಮಾನದಂಡಗಳಿಗೆ ನಿಲುಕುವಂತೆ ಅನುದಾನಗಳನ್ನು ಹೊಂದಾಣಿಕೆ ಮಾಡಬೇಕಾಗಿದೆ. ಲಭ್ಯ ಅನುದಾನದ ಸಮರ್ಪಕ ಬಳಕೆ ಮಾಡಿಕೊಂಡಾಗಷ್ಟೇ, ಅನುದಾನ ಹಂಚಿಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ತಾರತಮ್ಯ ಕುರಿತ ರಾಜ್ಯ ಸರ್ಕಾರದ ದೂರುಗಳಿಗೆ ಬಲ ಬರುತ್ತದೆ. ಕುಡಿಯುವ ನೀರಿನಂತಹ ಮೂಲಸೌಕರ್ಯದ ವಿಷಯದಲ್ಲಿನ ವೈಫಲ್ಯಕ್ಕೆ ಯಾವುದೇ ನೆಪ ಸಮರ್ಥನೆ ಆಗದು.

## ಸಿಲಿಂಡರ್ ತಂದರೆ ಚರ್ಚೆ

ಶಾಂತಿ ಸ್ಥಾಪನೆಗಾಗಿ ಏನನ್ನು ಬೇಕಾದರೂ ಮಾಡಲು ನಾನು ಸಿದ್ಧ. ಆದರೆ, ಮಾತುಕತೆಗಾಗಿ ವಾಷಿಂಗ್ಟನ್‌ಗೆ ಹೋಗಲಾರೆ. ಟ್ರಂಪ್ ಹಾಗೂ ಅಮೆರಿಕ ನಿಯೋಗವು ನಾನಿರುವ ಮುಂಬೈ ಕಾಲೊನಿಗೆ ಬಂದರೆ ಅವರಿಗೆ ಊಟ ಹಾಕುತ್ತೇನೆ; ಆದರೆ, ಅವರು ಬರುವಾಗ ದೊಡ್ಡದೊಂದು ಅಡುಗೆ ಅನಿಲದ ಸಿಲಿಂಡರ್ ಹೊತ್ತು ತರಬೇಕು!

**ಬೊಮನ್ ಇರಾನಿ,** ನಟ, 'ಇನ್‌ಸ್ಟಾಗ್ರಾಂ'ನಿಂದ

## ಕಿಡಿನುಡಿ

ಕೇಂದ್ರ ಸರ್ಕಾರವು ಕೊಲ್ಲಿ ಯುದ್ಧ ತಡೆಗೆ ಶಾಂತಿ ಮಧ್ಯಸ್ಥಿಕೆ ವಹಿಸುವ ಅವಕಾಶವನ್ನು ಬಳಸಿಕೊಳ್ಳುತ್ತದೆಂದು ಆಶಿಸಿದ್ದೆ. ಆದರೆ, ಪಾಕಿಸ್ತಾನವು ಟರ್ಕಿ, ಈಜಿಪ್ಟ್‌ನೊಂದಿಗೆ ಮಧ್ಯಸ್ಥಿಕೆಗೆ ಮುಂದಾಗಿದೆ. ಇದು ಭಾರತದ ಪಾಲಿಗೆ ಮುಜುಗರದ ಸಂಗತಿ.

**ಶಶಿ ತರೂರ್,** ಕಾಂಗ್ರೆಸ್ ಸಂಸದ

## 25 ವರ್ಷಗಳ ಹಿಂದೆ

ಮಂಗಳವಾರ, 27-3-2001

**● ಟೈಗರ್ ಪ್ರಭಾಕರ್ ಇನ್ನಿಲ್ಲ**

ಬೆಂಗಳೂರು, ಮಾರ್ಚ್ 26– ಕನ್ನಡ ಚಿತ್ರರಂಗದ ನಟ, ನಿರ್ದೇಶಕ ಪ್ರಭಾಕರ್ (52) ಭಾನುವಾರ ರಾತ್ರಿ ಇಲ್ಲಿ ನಿಧನರಾದರು.

ಟೈಗರ್ ಪ್ರಭಾಕರ್ ಎಂದೇ ಖ್ಯಾತರಾಗಿದ್ದ ಅವರು 250ಕ್ಕೂ ಹೆಚ್ಚು ಕನ್ನಡ, ತೆಲುಗು, ತಮಿಳು ಚಿತ್ರಗಳಲ್ಲಿ ಅಭಿನಯಿಸಿದ್ದರು.

20 ದಿನಗಳ ಹಿಂದೆ ಅಸ್ವಸ್ಥರಾಗಿ ಮಲ್ಯ ಆಸ್ಪತ್ರೆಗೆ ದಾಖಲಾದ ಅವರಿಗೆ ಕಾಮಾಲೆ ಸಮಸ್ಯೆ ಕಾಣಿಸಿಕೊಂಡಿತ್ತು. ಆ ನಂತರ ಕಿಡ್ನಿ ವೈಫಲ್ಯಗೊಂಡು ಡಯಾಲಿಸಿಸ್‌ಗೂ ಒಳಪಡಿಸಲಾಯಿತು. ಕಡೆಗೆ ಭಾನುವಾರ ರಾತ್ರಿ 10.30ರ ವೇಳೆಗೆ ನಿಧನರಾದರು.

ಅವರಿಗೆ ಪತ್ನಿ ಮೇರಿ, ಒಬ್ಬ ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಸಂಜೆ ಆಡುಗೋಡಿಯಲ್ಲಿರುವ ಕ್ರೈಸ್ತರ ರುದ್ರಭೂಮಿಯಲ್ಲಿ ಪ್ರಭಾಕರ್ ಅವರ ಅಂತ್ಯಕ್ರಿಯೆ ನೆರವೇರಿತು.

## 75 ವರ್ಷಗಳ ಹಿಂದೆ

ಮಂಗಳವಾರ, 27-3-1951

**● ಐವತ್ತು ಸಹಸ್ರ ಮಂದಿಗೆ ಭಾರತ ಸೈನ್ಯದಿಂದ ನಿವೃತ್ತಿ**

ನವದೆಹಲಿ, ಮಾರ್ಚ್ 26– ಭಾರತದ ಸೇನೆಯಿಂದ 50,000 ಸೈನಿಕರನ್ನು ನಿವೃತ್ತಿಗೊಳಿಸಲು ಸರ್ಕಾರ ಆಗಲೇ ನಿರ್ಧರಿಸಿರುವುದಾಗಿ ರಕ್ಷಣಾ ಮಂತ್ರಿ ಸರ್ದಾರ್ ಬಲದೇವಸಿಂಗರು ಈ ದಿನ ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ಅವರಲ್ಲಿ ಅನೇಕರನ್ನು ಆಗಲೇ ನಿವೃತ್ತಿಗೊಳಿಸಲಾಗಿದೆಯೆಂದೂ, ಈ ವಿಷಯವನ್ನು ಎಲ್ಲ ದೃಷ್ಟಿಯಿಂದಲೂ ಪರಿಶೀಲಿಸಿ ಸರ್ಕಾರ ಈ ನಿರ್ಧಾರಕ್ಕೆ ಬಂದಿದೆಯೆಂದೂ, ಸರ್ಕಾರಕ್ಕೆ ಈ ಬಗ್ಗೆ ಯಾರ ಮೇಲೂ ದುರುದ್ದೇಶವಿಲ್ಲವೆಂದೂ ಅವರು ಹೇಳಿದರು.

ಭೂ, ಜಲ, ವಾಯು ಸೇನೆಗಳಿಗೆ ರಕ್ಷಣಾ ಸಚಿವರು ಮೆಚ್ಚಿಗೆ ಸಲ್ಲಿಸಿದಾಗ ಸದಸ್ಯರು ಹರ್ಷೋದ್ಗಾರ ಮಾಡಿದರು.

# ಕುಟುಂಬ ತಾನೊಂದೆ ಬಲಂ!



ಅನುಸಂಧಾನ

ರವೀಂದ್ರ ಭಟ್ಟ

'ಮನುಷ್ಯ ಜಾತಿ ತಾನೊಂದೆ ವಲಂ' ಎಂದ ಆದಿಕವಿ ಪಂಪ. ಆದರೆ, ನಮ್ಮ ಆಧುನಿಕ ಮಾನವ 'ಜಾತಿಯೇ ಮನುಷ್ಯನಿಗೆ ಬಲಂ' ಎಂದು ಅನುಸರಿಸುತ್ತಿದ್ದಾನೆ. ಇತ್ತೀಚಿನ ದಿನಗಳಲ್ಲಿ ರಾಜಕಾರಣಿಗಳಂತೂ 'ಜಾತಿ ಬಲ ಹೌದು, ಆದರೆ ಕುಟುಂಬದ ಬಲ ಅದಕ್ಕಿಂತ ದೊಡ್ಡ ಬಲ' ಎಂದು ಭಾವಿಸಿದ್ದಾರೆ. ಮೊದ ಮೊದಲು ಕಾಂಗ್ರೆಸ್ ಪಕ್ಷವನ್ನು ವಂಶಾಡಳಿತದ ಪಕ್ಷ ಎಂದು ಹೇಳಲಾಗುತ್ತಿತ್ತು. ಆದರೆ, ಬರಬರುತ್ತಾ ಎಲ್ಲ ರಾಜಕೀಯ ಪಕ್ಷಗಳೂ ವಂಶಾಡಳಿತದ ಪಕ್ಷಗಳೇ ಆಗಿವೆ. ಕರ್ನಾಟಕದಲ್ಲಿ ಜಾತ್ಯತೀತ ಜನತಾದಳ ಪಕ್ಷವನ್ನು 'ಅಪ್ಪ ಮಕ್ಕಳ ಪಕ್ಷ' ಎಂದು ಕರೆಯುತ್ತಿದ್ದರು. ಈಗ ಎಲ್ಲರ ಮನೆಯ ದೋಸೆಯೂ ತೂತಾಗಿದೆ. ವಂಶಾಡಳಿತ ಇಲ್ಲದ ಪಕ್ಷವೇ ಇಲ್ಲದಂತಾಗಿದೆ. ಸಮಾಜವಾದಿ ಹಿನ್ನೆಲೆಯ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ತಮ್ಮ ಪುತ್ರಪ್ರೇಮವನ್ನು ಕಡಿಮೆ ಮಾಡಿಕೊಂಡಿಲ್ಲ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕೂಡ ತಮ್ಮ ಇಬ್ಬರು ಗಂಡುಮಕ್ಕಳಿಗೂ ಸಿಂಹಾಸನ ಸಿದ್ಧ ಮಾಡಿದ್ದಾರೆ. ಆ ಮಟ್ಟಿಗೆ ಎಲ್ಲ ರಾಜಕೀಯ ಪಕ್ಷಗಳಲ್ಲಿಯೂ ಒಮ್ಮತ ಇದೆ.

ಹಾಲಿ ಶಾಸಕರು ನಿಧನರಾಗಿ ಉಪ ಚುನಾವಣೆ ನಡೆದರೆ ಅಲ್ಲಿ ಮೃತ ವ್ಯಕ್ತಿಯ ಹೆಂಡತಿ ಅಥವಾ ಮಕ್ಕಳಿಗೆ ಟಿಕೆಟ್ ನೀಡಿ ಗೆಲ್ಲಿಸಿಕೊಂಡು ಬರುವುದು ಈಗ ಮಾಮೂಲು ಎನ್ನುವಂತಾಗಿದೆ. ಅದು ಕೆ.ಎನ್. ನಾಗೇಗೌಡರಾಗಲಿ, ಬಂಡಿಸಿದ್ದೇಗೌಡರಾಗಲಿ, ರೇವೂರ ಆಗಲಿ, ಯಾರೇ ಆಗಲಿ, ಅವರ ವಂಶದವರಿಗೇ ಟಿಕೆಟ್ ನೀಡುವುದು ಸಂಪ್ರದಾಯವೇ ಆಗಿದೆ. ಈಗ ದಾವಣಗೆರೆ ಮತ್ತು ಬಾಗಲಕೋಟೆಯಲ್ಲಿಯೂ ಇದು ಮುಂದುವರಿದಿದೆ. ಶಾಮನೂರು ಶಿವಶಂಕರಪ್ಪ ನಿಧನರಾಗಿದ್ದರಿಂದ ನಡೆಯುತ್ತಿರುವ ಉಪ ಚುನಾವಣೆಗೆ ಕಾಂಗ್ರೆಸ್ ಪಕ್ಷ ಶಿವಶಂಕರಪ್ಪ ಅವರ ಮೊಮ್ಮಗ ಸಮರ್ಥ ಮಲ್ಲಿಕಾರ್ಜುನ್ ಅವರಿಗೆ ಟಿಕೆಟ್ ನೀಡಿದೆ. ಅಪ್ಪ ಮಲ್ಲಿಕಾರ್ಜುನ್ ಸಚಿವ. ಅಮ್ಮ ಲೋಕಸಭಾ ಸದಸ್ಯೆ. ಈಗ ಮಗ ಶಾಸಕನಾಗುವ ಹಾದಿಯಲ್ಲಿದ್ದಾನೆ. ಸಚಿವ ಮಲ್ಲಿಕಾರ್ಜುನ್ ಅವರ ಪುತ್ರ, ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಎನ್ನುವುದೇ ಅವರ ಅರ್ಹತೆ. 'ಇದು ಕುಟುಂಬ ರಾಜಕಾರಣ ಅಲ್ಲ. ಗೆಲ್ಲುವ ಸಾಧ್ಯತೆಯನ್ನಷ್ಟೇ ಪರಿಗಣಿಸಿ ಟಿಕೆಟ್ ನೀಡಲಾಗಿದೆ' ಎಂಬ ಸಮರ್ಥನೆ ನಮ್ಮ ಮುಖ್ಯಮಂತ್ರಿಗಳಿಂದ ಬಂದಿದೆ. ಗೆಲ್ಲುವ ಸಾಮರ್ಥ್ಯ ಇದ್ದವರಿಗೆ ಟಿಕೆಟ್ ನೀಡಿ ಗೆಲ್ಲಿಸಿದರೆ ಅಭಿನವ ದೇವರಾಜ ಅರಸು ಆಗುವುದಿಲ್ಲ. ನೇರ ಚುನಾವಣೆಗೆ ನಿಂತು ಗೆಲ್ಲುವ ಸಾಧ್ಯತೆಯೇ ಇಲ್ಲದವರನ್ನು ಆರಿಸಿ, ಹುಡುಕಿ ತೆಗೆದು ಗೆಲ್ಲಿಸಿಕೊಂಡು ಬರುವವರೇ ನಿಜವಾದ ನಾಯಕರಾಗುತ್ತಾರೆ ಎಂದು ಅರ್ಥ ಮಾಡಿಸುವುದು ಹೇಗೆ? ಮತ್ತು ಯಾರು?

ಇದೇ ಮಾನದಂಡವನ್ನು ಬಳಸಿ ಬಾಗಲಕೋಟೆಯಲ್ಲಿಯೂ ಎಚ್.ವೈ. ಮೇಟಿ ಅವರ ಪುತ್ರ ಉಮೇಶ್ ಮೇಟಿ ಅವರಿಗೇ ಟಿಕೆಟ್ ನೀಡಲಾಗಿದೆ. ಬಾಗಲಕೋಟೆಯಲ್ಲಿ ಮೇಟಿ ಕುಟುಂಬದಲ್ಲಿಯೇ ಟಿಕೆಟ್‌ಗೆ ಪೈಪೋಟಿ ಇತ್ತು. ಕುಟುಂಬದ ಸಮಸ್ಯೆ ಕ್ಷೇತ್ರದ ಸಮಸ್ಯೆಯಂತೆಯೂ, ಪಕ್ಷದ ಸಮಸ್ಯೆಯಂತೆಯೂ ಬಿಂಬಿತವಾಗಿತ್ತು. ದಾವಣಗೆರೆ ಕ್ಷೇತ್ರದಲ್ಲಿ ಬಹುಸಂಖ್ಯಾತರಾಗಿರುವ ಮುಸ್ಲಿಮರು ಟಿಕೆಟ್‌ಗೆ ಪಟ್ಟು ಹಿಡಿದಿದ್ದರು. ಎಲ್ಲವನ್ನೂ ಬದಿಗೊತ್ತಿ ಗೆಲ್ಲುವ ಕುದುರೆ ಎಂದು ಸಂಪ್ರದಾಯ, ಪದ್ಧತಿಗೆ ಮಣೆ ಹಾಕಲಾಗಿದೆ. 'ಮುಸ್ಲಿಮರಿಗೆ ಪರ್ಯಾಯ ಸೌಲಭ್ಯ ಒದಗಿಸುತ್ತೇವೆ. ವಿಧಾನ ಪರಿಷತ್ ಸದಸ್ಯತ್ವ, ನಿಗಮ, ಮಂಡಳಿಗಳಲ್ಲಿ ಅವಕಾಶ ನೀಡುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ರಾಜಕೀಯವಾಗಿ ಪ್ರತಿಷ್ಠಿತರಾದ ಕುಟುಂಬದ ಸದಸ್ಯರಿಗೆ ಮೃಷ್ಟಾನ್ನ, ಕಾರ್ಯಕರ್ತರಿಗೆ ಗಂಜಿ ಕೇಂದ್ರ ಎಂಬ ನೀತಿ ಇದು.

ಕರ್ನಾಟಕದ ರಾಜಕೀಯವನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಬನ್ನಿ. ಬೆಳಗಾವಿಯಿಂದ ಹಿಡಿದು ಚಾಮರಾಜನಗರದವರೆಗೆ ಎಲ್ಲ ಜಿಲ್ಲೆಗಳಲ್ಲಿಯೂ ಒಂದೊಂದು ಕುಟುಂಬದ ಹಿಡಿತ ಇದೆ. ಇದು ಆ ಪಕ್ಷ ಈ ಪಕ್ಷ ಅಂತಲ್ಲ. ಎಲ್ಲ ಪಕ್ಷಗಳ ಹಕೀಕತ್ ಹೀಗೆಯೇ ಇದೆ. ಅಪ್ಪ– ಇಲ್ಲ ಮಗ, ಇಲ್ಲ ಮೊಮ್ಮಗ, ಇಲ್ಲ ಸಹೋದರ, ಇಲ್ಲ ಮಗಳು ಹೀಗೆಯೇ ರಾಜಕಾರಣ ನಡೆಯುತ್ತಿದೆ. ಮತ್ತೊಬ್ಬರು ಬೆಳೆಯಲು ಸಾಧ್ಯವಾಗುತ್ತಲೇ ಇಲ್ಲ. ಇದನ್ನು ಯಾವುದೇ ದೃಷ್ಟಿಯಿಂದಲೂ ಪ್ರಜಾಪ್ರಭುತ್ವ ಎನ್ನಲು ಸಾಧ್ಯವೇ ಇಲ್ಲ. ಇದು ನವ ಪಾಳೇಗಾರಿಕೆ. ಸ್ವಾತಂತ್ರ್ಯಪೂರ್ವದಲ್ಲಿ ಪಾಳೇಗಾರರು ಒಂದಿಷ್ಟು ಪ್ರದೇಶಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡ ಹಾಗೆ ಈಗಲೂ ಪ್ರಜಾಪ್ರಭುತ್ವದ ಹೆಸರಿನಲ್ಲಿ ಒಂದಿಷ್ಟು ಕುಟುಂಬಗಳು ಒಂದೊಂದು ಜಿಲ್ಲೆಗಳನ್ನು ಅಥವಾ ಒಂದೊಂದು ಕ್ಷೇತ್ರವನ್ನು ತಮ್ಮ ಕಬ್ಜಾ ಮಾಡಿಕೊಂಡಿವೆ. ಯಾರಾದರೂ ಒಬ್ಬರು ಒಮ್ಮೆ ಶಾಸಕರಾಗಿ ಆಯ್ಕೆಯಾದರೆ, ಅದೃಷ್ಟವಿದ್ದು ಅವರು ಸಚಿವರಾದರೆ, ಲಾಟರಿ ಹೊಡೆದು ಅವರು ಮುಖ್ಯಮಂತ್ರಿಯೇ ಆಗಿಬಿಟ್ಟರೆ, ತಮ್ಮ ಕುಟುಂಬದ ಸದಸ್ಯರನ್ನು ಹೇಗೆ ಗೆಲ್ಲಿಸಬಹುದು; ಅದಕ್ಕೆ ಬೇಕಾಗುವ ವ್ಯವಸ್ಥೆ ಏನು, ಯಾವ ಪಟ್ಟು ಹಾಕಬೇಕು ಎಂದು ಚಿಂತಿಸುತ್ತಾರೆಯೇ ವಿನಾ ಸ್ವಾತಂತ್ರ್ಯಾನಂತರ ಮತ ಹಾಕುವುದನ್ನು ಬಿಟ್ಟು ಉಳಿದಂತೆ ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಭಾಗಿಯೇ ಆಗದ, ಅಧಿಕಾರದ ರುಚಿಯನ್ನೇ ನೋಡದ ಸಮುದಾಯಗಳಿಂದ ಬಂದವರನ್ನು ಗುರ್ತಿಸುವ ಕೆಲಸವೇ ನಡೆಯುತ್ತಿಲ್ಲ. ಆದರ್ಶ, ಸಮಾನತೆ, ಸಾಮಾಜಿಕ ನ್ಯಾಯ ಎನ್ನುವುದೆಲ್ಲ ಪುಸ್ತಕದ ಬದನೆಕಾಯಿ ಅಷ್ಟೆ.

> ಪ್ರಜಾಪ್ರಭುತ್ವದ ಹೆಸರಿನಲ್ಲಿ ನಮ್ಮಲ್ಲಿ ಆಡಳಿತ ನಡೆಸುತ್ತಿರುವುದು ರಾಜಪ್ರಭುತ್ವವೇ ಆಗಿದೆ. ಆ ಕಾರಣದಿಂದಲೇ, ನವ ಪಾಳೇಪಟ್ಟುಗಳು ಎಲ್ಲೆಡೆ ಅಸ್ತಿತ್ವಕ್ಕೆ ಬಂದಿವೆ. ಕುಟುಂಬ ರಾಜಕಾರಣಕ್ಕೆ ಯಾವ ಪಕ್ಷವೂ ಅತೀತವಾಗಿಲ್ಲ. ಅವಕಾಶ ವಂಚಿತರು ಹಾಗೂ ನಿರ್ಲಕ್ಷ್ಯ ವರ್ಗಗಳ ಬಗೆಗಿನ ಕಾಳಜಿಯು ಕೃತಿಗೆ ಬಾರದೆ ಮಾತುಗಳಲ್ಲಷ್ಟೇ ಉಳಿದಿದೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಇತ್ತೀಚೆಗೆ ನಡೆಸಿದ ಸಮೀಕ್ಷೆ ಪ್ರಕಾರ, ನಮ್ಮ ದೇಶದ ಸಂಸದರು ಮತ್ತು ಶಾಸಕರ ಪೈಕಿ ಶೇ 21ರಷ್ಟು ಮಂದಿ ವಂಶಪಾರಂಪರ್ಯ ಹಿನ್ನೆಲೆಯನ್ನು ಹೊಂದಿದ್ದಾರೆ. ಇದು ಲೋಕಸಭೆಯಲ್ಲಿ ಹೆಚ್ಚಾಗಿದೆ ಎನ್ನುತ್ತದೆ ಈ ವರದಿ. ಲೋಕಸಭೆಯಲ್ಲಿ ಶೇ 31ರಷ್ಟು ಸದಸ್ಯರು ಕುಟುಂಬದ ಕುಡಿಗಳೇ ಆಗಿದ್ದಾರೆ. ರಾಜ್ಯಸಭೆಯಲ್ಲಿ ಇದರ ಪ್ರಮಾಣ ಶೇ 21. ರಾಜ್ಯಗಳ ವಿಧಾನಸಭೆ ಮತ್ತು ವಿಧಾನ ಪರಿಷತ್‌ಗಳಲ್ಲಿ ವಂಶಪಾರಂಪರ್ಯ ಸದಸ್ಯರ ಸಂಖ್ಯೆ ಶೇ 22ರಷ್ಟಿದೆ. ಕುಟುಂಬ ರಾಜಕಾರಣದ ಹಿನ್ನೆಲೆಯಿಂದ ಬಂದ ಮಹಿಳಾ ಸದಸ್ಯರ ಸಂಖ್ಯೆ ಶೇ 47 ಇದ್ದರೆ, ಪುರುಷರ ಸಂಖ್ಯೆ ಶೇ 18 ಇದೆ. ಕುಟುಂಬ ರಾಜಕಾರಣದ ಪ್ರಮಾಣ ಮಹಾರಾಷ್ಟ್ರದಲ್ಲಿ ಹೆಚ್ಚಾಗಿದೆ. ಪಶ್ಚಿಮ ಬಂಗಾಳದಲ್ಲಿ ಕಡಿಮೆ ಇದೆ.

ಕುಟುಂಬ ರಾಜಕಾರಣದಲ್ಲಿ ಕರ್ನಾಟಕ ದೇಶದಲ್ಲಿ ನಾಲ್ಕನೇ ಸ್ಥಾನದಲ್ಲಿದೆ. 224 ಶಾಸಕರ ಪೈಕಿ 94 ಸದಸ್ಯರಿಗೆ ಇಂತಹ ರಾಜಕಾರಣದ ಹಿನ್ನೆಲೆ ಇದೆ. ಉತ್ತರ ಪ್ರದೇಶದಲ್ಲಿ 141, ಮಹಾರಾಷ್ಟ್ರದಲ್ಲಿ 129, ಬಿಹಾರದಲ್ಲಿ 96 ಶಾಸಕರಿಗೆ ವಂಶಾಡಳಿತದ ಹಿನ್ನೆಲೆ ಇದೆ. ಅಸ್ಸಾಂ ರಾಜ್ಯದಲ್ಲಿ ಅತ್ಯಂತ ಕನಿಷ್ಠ ಎಂದರೆ 9 ಶಾಸಕರಿಗೆ ಕೌಟುಂಬಿಕ ರಾಜಕಾರಣದ ನಂಟಿದೆ. ಪ್ರಾದೇಶಿಕ ಪಕ್ಷಗಳಲ್ಲಿ ಮಹಾರಾಷ್ಟ್ರದ ಶರದ್ ಪವಾರ್ ಅವರ ಎನ್‌ಸಿಪಿಯಲ್ಲಿ ಅತಿ ಹೆಚ್ಚಿನ ಕುಟುಂಬ ರಾಜಕಾರಣ ಇದೆ. ಈ ಪಕ್ಷದಲ್ಲಿ ಶೇ 42ರಷ್ಟು ಮಂದಿ ಕುಟುಂಬ ರಾಜಕಾರಣದ ಕುಡಿಗಳು ನೆಲೆ ಕಂಡುಕೊಂಡಿದ್ದಾರೆ. ವೈಎಸ್‌ಆರ್–ಸಿಪಿ ಶೇ 38, ಟಿಡಿಪಿ ಶೇ 36, ಟಿಎಂಸಿ ಶೇ 10 ಹಾಗೂ ಎಐಎಡಿಎಂಕೆಯಲ್ಲಿ ಶೇ 10ರಷ್ಟು ಮಂದಿ ಕುಟುಂಬ ರಾಜಕಾರಣದಿಂದ ನೆಲೆ ಕಂಡುಕೊಂಡಿದ್ದಾರೆ. ಇನ್ನು ಡಿಎಂಕೆ, ಜೆಡಿಎಸ್ ಮುಂತಾದ ಪಕ್ಷಗಳಲ್ಲಿ ಅಧಿಕಾರ ಒಂದೇ ಕುಟುಂಬದ ಕೈಯಲ್ಲಿ ಇದೆ.

ರಾಷ್ಟ್ರೀಯ ಪಕ್ಷಗಳಲ್ಲಿ ಅತಿಹೆಚ್ಚು ಕುಟುಂಬ ರಾಜಕಾರಣ ಇರುವುದು ಕಾಂಗ್ರೆಸ್ ಪಕ್ಷದಲ್ಲಿ. ಈ ಪಕ್ಷದಲ್ಲಿ ಶೇ 32ರಷ್ಟು ಕುಟುಂಬ ರಾಜಕಾರಣ ಇದ್ದರೆ, ಭಾರತೀಯ ಜನತಾ ಪಕ್ಷದಲ್ಲಿ ಇದರ ಪ್ರಮಾಣ ಶೇ 18. ಕಾರ್ಯಕರ್ತರ ಪಕ್ಷ ಎಂದೇ ಗುರುತಿಸಲಾಗುವ ಸಿಪಿಐಎಂನಲ್ಲಿ ಕೂಡ ಕುಟುಂಬ ರಾಜಕಾರಣದ ಪ್ರಮಾಣ ಶೇ 8ರಷ್ಟಿದೆ ಎಂದು ಎಡಿಆರ್ ವರದಿ ಹೇಳುತ್ತದೆ. ಜಾತಿ, ಧರ್ಮ, ಹಣ, ತೋಳ್ಬಲ ಮುಂತಾದ ಕಾರಣಗಳಿಗೆ ಕುಟುಂಬ ರಾಜಕಾರಣಕ್ಕೆ ಒತ್ತು ನೀಡಲಾಗುತ್ತಿದೆ. ಕೇಡರ್ ಆಧಾರಿತ ಪಕ್ಷಗಳು ಎನ್ನುವ ಕಲ್ಪನೆಯೇ ಮಾಯವಾಗಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ನವ ಮಾಂಡಲೀಕರು, ಪಾಳೇಗಾರರು ಹುಟ್ಟಿಕೊಂಡು ಪ್ರಜಾಪ್ರಭುತ್ವದ ಬೇರು ಸಂಪೂರ್ಣ ನಾಶವಾಗಿ ಮತ್ತೆ ರಾಜಪ್ರಭುತ್ವ ಬರುತ್ತದೆ. ಈಗ ಇರುವುದೂ ರಾಜಪ್ರಭುತ್ವವೇ ಆಗಿದೆ. ಹೆಸರು ಪ್ರಜಾಪ್ರಭುತ್ವ. ಆಡಳಿತ ಪಾಳೇಗಾರರದ್ದು. ಮತದಾರ ಎಚ್ಚರವಾಗದಿದ್ದರೆ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತದೆ. ಪಕ್ಷಗಳ ಕಾರ್ಯಕರ್ತರೂ ಈ ಬಗ್ಗೆ ಗಂಭೀರ ಚಿಂತನೆ ನಡೆಸಬೇಕಾದ ವಾತಾವರಣ ಸೃಷ್ಟಿಯಾಗಿದೆ.

ಕುಟುಂಬ ರಾಜಕಾರಣಕ್ಕೆ ತಿರಸ್ಕಾರ ಹಾಕಿದ ಉದಾಹರಣೆ ದಾವಣಗೆರೆ ಜಿಲ್ಲೆಯಲ್ಲಿಯೇ ಇದೆ. ಒಮ್ಮೆ ಜೆ.ಎಚ್. ಪಟೇಲರ ಪುತ್ರರೊಬ್ಬರು ತಂದೆಯ ಬಳಿಗೆ ಬಂದು ವಿಧಾನ ಪರಿಷತ್‌ಗೆ ಸ್ಥಳೀಯ ಸಂಸ್ಥೆಗಳಿಂದ ನಡೆಯುವ ಚುನಾವಣೆಗೆ ಪಕ್ಷದ ಟಿಕೆಟ್ ಕೇಳಿದರಂತೆ. ಆಗ ಪಟೇಲರು 'ಮೊದಲು ಗ್ರಾಮ ಪಂಚಾಯ್ತಿಗೆ ಸ್ಪರ್ಧಿಸಿ ಗೆಲ್ಲು. ಅಲ್ಲಿ ಅನುಭವ ಗಳಿಸಿದ ನಂತರ ವಿಧಾನ ಪರಿಷತ್‌ಗೆ ಟಿಕೆಟ್ ಕೇಳು. ಗ್ರಾಮ ಪಂಚಾಯ್ತಿಯಲ್ಲಿ ಕೆಲಸ ಮಾಡಿದ್ದೇನೆ ಎಂದರೆ ಆ ಸದಸ್ಯರೂ ನಿನಗೆ ಮತ ನೀಡಿಯಾರು' ಎಂದು ಹೇಳಿ ಕಳಿಸಿದರಂತೆ. ಅಧಿಕಾರದಲ್ಲಿ ಇದ್ದಾಗ ಮಕ್ಕಳು ಮತ್ತು ಕುಟುಂಬಸ್ಥರನ್ನು ಹತ್ತಿರ ಬಿಟ್ಟುಕೊಳ್ಳದ, ಮಕ್ಕಳಿಗೆ ಟಿಕೆಟ್ ಕೇಳದ ರಾಜಕಾರಣಿಗಳ ಉದಾಹರಣೆ ನಮ್ಮ ರಾಜ್ಯದಲ್ಲಿ ಸಾಕಷ್ಟಿದೆ. ಅಂಥವರ ಸಂತತಿ ಸಾಸಿರವಾಗಲಿ. ಅದಕ್ಕೆ ಮತದಾರರು ಮನಸ್ಸು ಮಾಡಬೇಕು.

## ವಾಚಕರ ವಾಣಿ

### ಒಳಮೀಸಲು ಬಿಕ್ಕಟ್ಟು: ಸರ್ಕಾರ ನಿರಾಸಕ್ತಿ

**ರಾಜ್ಯದಲ್ಲಿ** ಪರಿಶಿಷ್ಟ ಜಾತಿಯ ಒಳಮೀಸಲಾತಿ ಕುರಿತ ಹೋರಾಟ ದಿನೇ ದಿನೇ ತಾರಕಕ್ಕೇರುತ್ತಿದೆ. ಈ ಕುರಿತಂತೆ ಸಾಮಾಜಿಕ ಮಾಧ್ಯಮಗಳಲ್ಲಿ ನಡೆಯುತ್ತಿರುವ ಕೆಸರೆರಚಾಟ ಅಸಹ್ಯದ ಪರಮಾವಧಿಯಾಗಿದೆ. ಕೆಲವರು ಸರ್ಕಾರಿ ಹುದ್ದೆಯಲ್ಲಿ ಇದ್ದರೂ ಸರ್ಕಾರದ ನೀತಿಯ ವಿರುದ್ಧವೇ ಧ್ವನಿ ಎತ್ತುತ್ತಿದ್ದಾರೆ. ಬಹಿರಂಗ ವೇದಿಕೆಗಳಲ್ಲಿಯೂ ಟೀಕಿಸುತ್ತಿರುವುದು ಕೆಟ್ಟ ಮಾದರಿ. ಸರ್ಕಾರವು ತನ್ನ ನೌಕರರ ನಡತೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ವಿಫಲವಾಗಿರುವುದಕ್ಕೆ ಇದು ಉದಾಹರಣೆ ಆಗಿದೆ. ಅಹವಾಲು ಸಲ್ಲಿಕೆಗೆ ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಹಕ್ಕಿದೆ. ಸಂಯಮ ಕಾಯ್ದುಕೊಂಡು ಸಮಯೋಚಿತ ಮಾರ್ಗ ಅನುಸರಿಸುವುದೇ ಸಾಂವಿಧಾನಿಕ ನಡೆ. ರಾಜ್ಯ ಸರ್ಕಾರವು ನಿರಾಸಕ್ತಿಯನ್ನು ಬದಿಗೊತ್ತಿ ಒಳಮೀಸಲಾತಿಯ ಗೊಂದಲ, ಬಿಕ್ಕಟ್ಟಿಗೆ ತ್ವರಿತವಾಗಿ ಪರಿಹಾರ ಹುಡುಕಬೇಕಿದೆ.

**ಶಿವರಾಮು ಕೆ.ಎಸ್.,** ಮೈಸೂರು

### ಚುನಾವಣೆ ವಿಳಂಬ: ಅನುದಾನ ಮರೀಚಿಕೆ

**ಕರ್ನಾಟಕದಲ್ಲಿ** 'ಜಲ ಜೀವನ್ ಮಿಷನ್' ಯೋಜನೆ ಬಹುತೇಕ ವಿಫಲವಾಗಿದೆ. ಸಮರ್ಪಕವಾಗಿ ಕೇಂದ್ರದ ನಿಧಿಯನ್ನು ಬಳಸಿಕೊಂಡಿಲ್ಲ. ಇಚ್ಛಾಶಕ್ತಿ ಕೊರತೆಯು ನಿಗದಿತ ಗುರಿ ಸಾಧನೆಗೆ ಹಿನ್ನಡೆಯಾಗಿದೆ ಎಂದು ಸಿಎಜಿ ವರದಿಯು ಗುರ್ತಿಸಿದೆ. ಯೋಜನೆಯಡಿ ಕೇಂದ್ರದ ನಿಧಿಯಿಂದ ಬಿಡುಗಡೆಯಾದ ಒಟ್ಟು ಮೊತ್ತದಲ್ಲಿ ಅರ್ಧದಷ್ಟು ಅನುದಾನವನ್ನೂ ಬಳಸದಿರುವುದು ಅಚ್ಚರಿ ಮೂಡಿಸಿದೆ. ಮತ್ತೊಂದೆಡೆ ಚುನಾವಣೆ ನಡೆಯದಿರುವುದರಿಂದ ಹದಿನೈದನೇ ಹಣಕಾಸು ಆಯೋಗವು 2025–26ನೇ ಸಾಲಿಗೆ ನಿಗದಿ ಮಾಡಿದ್ದ ಅನುದಾನ ಪಡೆಯಲು ರಾಜ್ಯದ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳು ಅನರ್ಹವಾಗಿವೆ. ಎಲ್ಲಾ ರಾಜಕೀಯ ಪಕ್ಷಗಳು ಪಕ್ಷಾತೀತವಾಗಿ ಆತ್ಮವಿಮರ್ಶೆ ಮಾಡಿಕೊಳ್ಳಲು ಇದು ಸಕಾಲ. ತ್ವರಿತವಾಗಿ ಚುನಾವಣೆ ನಡೆಸಬೇಕಿದೆ; ಇಲ್ಲವಾದರೆ ಅಧಿಕಾರ ವಿಕೇಂದ್ರಿಕರಣದ ಆಶಯ ಮೂಲೆಗೆ ಸರಿಯಲಿದೆ.

**ಶಿವರಾಜ್ ನಡಗೇರಿ,** ಕಲಬುರಗಿ

### ಅಮೆರಿಕ ನಿಲುವು ಮತ್ತು ಮೂರ್ಖರ ಕಥೆ

**ದೊರೆ** ಅಕ್ಬರ್‌ನ ರಾಜಾಜ್ಞೆಯಂತೆ ಮಂತ್ರಿ ಬೀರಬಲ್‌ನು ತಮ್ಮ ರಾಜ್ಯದಲ್ಲಿರುವ ಹತ್ತು ಮೂರ್ಖರನ್ನು ಹುಡುಕಿ ತರುತ್ತಾನೆ. ಅವರ ಪೈಕಿ ಒಬ್ಬ ದಾರಿಯಲ್ಲಿ ಓಡುತ್ತಾ ಇರುವಾಗ ಸಿಕ್ಕಿಬಿದ್ದಿರುತ್ತಾನೆ. ಯಾಕೆ ಹೀಗೆ ಓಡುತ್ತಿದ್ದೆ? ಎಂದು ಪ್ರಶ್ನಿಸಿದಾಗ 'ಯಾರಾದರೂ ಓಡಿಸಿಕೊಂಡು ಬಂದರೆ ಎಂದು ಮೊದಲೇ ಓಡುತ್ತಿದ್ದೇನೆ' ಎಂದು ಉತ್ತರಿಸುತ್ತಾನೆ. ಇರಾನ್ ಪರಮಾಣು ಅಸ್ತ್ರ ಹೊಂದಿದೆ; ಭವಿಷ್ಯದಲ್ಲಿ ಆ ದೇಶವು ಆಕ್ರಮಣ ಮಾಡೀತು ಎಂದು ಇಸ್ರೇಲ್ ಮತ್ತು ಅಮೆರಿಕವು ಇರಾನಿನ ಮೇಲೆ ಭೀಕರ ದಾಳಿ ನಡೆಸುತ್ತಿವೆ. ಕೊಲ್ಲಿ ಯುದ್ಧದ ಸಂದರ್ಭದಲ್ಲಿ ಈ ಮೂರ್ಖರ ಕಥೆ ನೆನಪಾಯಿತು.

**ಬಿ.ಎನ್. ಭರತ್,** ಬೆಂಗಳೂರು

### ಕಾಡಿನ ಯೋಧರ ನೋವಿನ ಕಥಾನಕ

**ಅರಣ್ಯ** ಇಲಾಖೆಯ ಹಂಗಾಮಿ ನೌಕರರು ತಮಗೆ ಖಾಸಗಿ ಏಜೆನ್ಸಿಗಳ ಬದಲು ಇಲಾಖೆಯಿಂದಲೇ ವೇತನ ನೀಡಬೇಕೆಂದು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಈ ನ್ಯಾಯಯುತ ಬೇಡಿಕೆಗೆ ಸಮ್ಮತಿ ನೀಡದಿದ್ದರೆ ಏಪ್ರಿಲ್ 1ರಿಂದ ಬಂಡೀಪುರ ರಾಷ್ಟ್ರೀಯ ಉದ್ಯಾನದಲ್ಲಿ ಮುಷ್ಕರ ನಡೆಸುವುದಾಗಿಯೂ ಎಚ್ಚರಿಕೆ ನೀಡಿದ್ದಾರೆ. ರಾಜ್ಯ ಸರ್ಕಾರವು ನೆರೆಯ ಕೇರಳದ ವಯನಾಡು ಲೋಕಸಭಾ ಕ್ಷೇತ್ರದ ಜನರಿಗೆ ಅನುಕಂಪ ತೋರಿಸಿ ಹೆಚ್ಚುವರಿಯಾಗಿ ₹10 ಕೋಟಿ ಅನುದಾನವನ್ನು ಬಿಡುಗಡೆ ಮಾಡಿದೆ. ಆದರೆ, ರಾಜ್ಯದ ಕಾಡು ಉಳಿಸಲು ದುಡಿಯುತ್ತಿರುವ ಹಂಗಾಮಿ ನೌಕರರ ಸಮಸ್ಯೆಗಳು ನೆನಪಾಗದಿರುವುದು ಸೋಜಿಗ.

**ಎ.ಸಿ. ಲಕ್ಷ್ಮಣ,** ಮೈಸೂರು

### ಸರ್ಕಾರಿ ಶಾಲೆಗಳ ಬಲವರ್ಧನೆ ಅತ್ಯಗತ್ಯ

**ಪ್ರತಿ** ವರ್ಷವೂ ರಾಜ್ಯ ಸರ್ಕಾರ ಹೊಸದಾಗಿ ಖಾಸಗಿ ಶಾಲೆಗಳನ್ನು ತೆರೆಯಲು ಅನುಮತಿ ನೀಡುತ್ತಿದೆ. ಆದರೆ, ಸರ್ಕಾರಿ ಶಾಲೆಗಳ ಅಭಿವೃದ್ಧಿಯ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಸರ್ಕಾರಿ ಶಾಲೆಗಳಲ್ಲಿ ಒಳ್ಳೆಯ ಶಿಕ್ಷಣ ನೀಡುವುದಿಲ್ಲ ಎನ್ನುವುದು ತಪ್ಪುಗ್ರಹಿಕೆ. ಶಿಕ್ಷಕರು ಮತ್ತು ಮೂಲಸೌಕರ್ಯದ ಕೊರತೆಯಿಂದ ಈ ಶಾಲೆಗಳ ಮಕ್ಕಳು ಹಿಂದುಳಿಯುತ್ತಿದ್ದಾರೆ. ಸಮಾಜದಲ್ಲಿ ಎಲ್ಲರಿಗೂ ದುಬಾರಿ ಶುಲ್ಕ ಕೊಟ್ಟು ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುವ ಶಕ್ತಿ ಇರುವುದಿಲ್ಲ. ಬಡ ಮತ್ತು ಮಧ್ಯಮವರ್ಗದ ಮಕ್ಕಳ ಶಿಕ್ಷಣಕ್ಕೆ ಸರ್ಕಾರಿ ಶಾಲೆಗಳೇ ಆಧಾರ. ಹಾಗಾಗಿ, ಈ ಶಾಲೆಗಳ ಬಲವರ್ಧನೆಗೆ ಸರ್ಕಾರ ಮುಂದಾಗಬೇಕಿದೆ. ಆಗಷ್ಟೇ ಪೋಷಕರು ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಲು ಮುಂದಾಗುತ್ತಾರೆ.

**ಭಾರತಿ,** ಸಾಂಗ್ಲಿ

### 'ಇವ ನಮ್ಮವ': ಅಂಗೀಕಾರ ಸ್ವಾಗತಾರ್ಹ

**ಮರ್ಯಾದೆಗೇಡು** ಹತ್ಯೆಯಂತಹ ಅಮಾನವೀಯ ಕೃತ್ಯಗಳಿಗೆ ಕಡಿವಾಣ ಹಾಕುವ ಉದ್ದೇಶದ 'ಇವ ನಮ್ಮವ, ಇವ ನಮ್ಮವ' ಮಸೂದೆಗೆ ವಿಧಾನ ಪರಿಷತ್‌ನಲ್ಲಿ ಅಂಗೀಕಾರ ದೊರೆತಿರುವುದು ಸ್ವಾಗತಾರ್ಹ. ಯಾವುದೇ ಜಾತಿ, ಧರ್ಮದ ಹುಡುಗ ಅಥವಾ ಹುಡುಗಿ ತನ್ನ ಸಂಗಾತಿಯನ್ನು ಆಯ್ಕೆ ಮಾಡಿಕೊಂಡು ಮದುವೆ ಮಾಡಿಕೊಳ್ಳಲು ಬಯಸುವುದು ಅವರ ವೈಯಕ್ತಿಕ ಹಕ್ಕು. ವ್ಯಕ್ತಿ ಸ್ವಾತಂತ್ರ್ಯವನ್ನು ಯಾರೊಬ್ಬರೂ ಹರಣ ಮಾಡತಕ್ಕದ್ದಲ್ಲ. ಎಲ್ಲರಿಗೂ ಬದುಕುವ ಹಕ್ಕಿದೆ; ಕೊಲ್ಲುವ ಅಥವಾ ಹತ್ಯೆ ಮಾಡುವ ಹಕ್ಕು ಯಾರಿಗೂ ಇಲ್ಲ. ಸಮಾಜದಲ್ಲಿ ಜಾತಿ, ಧರ್ಮವನ್ನು ಮೀರಿ ಪ್ರೀತಿಸಿ ಮದುವೆಯಾದವರು ಜೀವಭಯವಿಲ್ಲದೆ ಬದುಕುವ ವಾತಾವರಣ ಸೃಷ್ಟಿಸಬೇಕಿದೆ. ಸರ್ಕಾರ ಕಾಯ್ದೆ ರೂಪಿಸಿದರೆ ಸಾಲದು; ಅದರ ಪರಿಣಾಮಕಾರಿ ಅನುಷ್ಠಾನಕ್ಕೂ ಕ್ರಮವಹಿಸಬೇಕಿದೆ. ಆಗಷ್ಟೇ ಮರ್ಯಾದೆಗೇಡು ಹತ್ಯೆಯಂತಹ ಸಾಮಾಜಿಕ ಕೇಡುಗಳನ್ನು ತಡೆಗಟ್ಟಲು ಸಾಧ್ಯ.

**ಕಾವ್ಯ ಡಿ.ಎಂ.,** ಚಿಕ್ಕಮಗಳೂರು

ಚುರುಮುರಿ

# 'ರಾಹು'ಲ್ ಕಾಲ!

● ಬಿ.ಎನ್. ಮಲ್ಲೇಶ್

'ಮನಿ ಮನಿಗೆ ಹತ್ತು ಸಾವಿರ ರೊಕ್ಕ, ಸಿಲಿಂಡರ್ ಫ್ರೀ, ಫ್ರಿಜ್ಜು ಫ್ರೀ, ಬಸ್ಸಲ್ಲಿ ಗಂಡಸರಿಗೂ ಟಿಕೆಟ್ ಫ್ರೀ... ಹೊಗ್ಗಾ ನಿನ್ನ... ಯಾರಿಗುಂಟು ಯಾರಿಗಿಲ್ಲ' ಎಂದ ಗುಡ್ಡೆ.

'ಎಲ್ಲಿ ಇವೆಲ್ಲ? ಡಿಕೆಶಿ ಸಿಎಂ ಆದ್ರಾ? ಇವು ಅವರ ಗ್ಯಾರಂಟಿನಾ?' ಕೊಟ್ರೇಶಿ ಕೇಳಿದ.

'ಲೇ ತಗಡು, ಇವು ತಮಿಳುನಾಡಿನ ಅಣ್ಣಾ ಪಕ್ಷದ ಎಲೆಕ್ಷನ್ ಗ್ಯಾರಂಟಿ ಕಣಲೆ, ಡಿಕೆಶಿ ಸಿಎಂ ಆಗಾಕೆ ಸಿದ್ರಾಮಣ್ಣ ಬಿಡ್ಬೇಕಲ್ಲ...'

'ಮತ್ತೆ ಮೊನ್ನೆ ವಿಧಾನಸೌಧದ ಮುಂದೆ ಸಿಎಂ ಜತಿಗೆ ಎಲ್ಲ ಶಾಸಕರೂ ಫೋಟೊ ಶೂಟ್ ಮಾಡಿಸ್ಕಂಡ್ರು?'

'ಅದ್ಕೆ? ಅಧಿಕಾರ ಮುಗೀತು ಅಂತಾನಾ? ನಮ್ ಸಿದ್ರಾಮಣ್ಣ ಇನ್ನೂ ಎರಡು ಬಜೆಟ್ ಮಂಡಿಸ್ತಾರೆ...'

'ಸಾಲ ಮಾಡಿ ವಾಲೆ ಹಾಕ್ಕಂಡ್ರು ಅನ್ನಂಗೆ ಸಿದ್ರಾಮಣ್ಣ ಲಕ್ಷ ಕೋಟಿ ಸಾಲ ಮಾಡಿ ಬಜೆಟ್ ಮಂಡಿಸಿದ್ರೆ ಏನ್ ಬಂತು ಬಿಡಲೆ' ಎಂದ ದುಬ್ಬೀರ.

'ಕರೆಕ್ಟ್, ಇದು ಸಾಲದ ಸರ್ಕಾರ' ಮಂಜಮ್ಮ ನಕ್ಕಳು.

'ಮಂಜಮ್ಮ, ನಿಮ್ ಮೋದಿ ಸಾಹೇಬ್ರು ಮಾಡಿರೋ ಸಾಲ ಎಷ್ಟು ಗೊತ್ತಾ? ₹165 ಲಕ್ಷ ಕೋಟಿ! ಅದಕ್ಕೆ ಎಷ್ಟು ಸೊನ್ನೆ ಗೊತ್ತಾ?' ತೆಪರೇಸಿ ತಿರುಗೇಟು ಕೊಟ್ಟ.

'ಈ ಜಗತ್ತಲ್ಲಿ ಸಾಲ ಮಾಡದೇ ಇರೋರು ಯಾರದಾರಲೆ? ನಾನು ಮಂಜಮ್ಮನತ್ರ ಸಾಲ ಮಾಡಿಲ್ವಾ? ಪಾಪ ಮಂಜಮ್ಮ ದೇವರಂಥೋಳು, ಮಾತು ಒರಟಾದ್ರು ಮನಸ್ಸು ಬೆಣ್ಣೆ... ಕೇಳಿದಾಗೆಲ್ಲ ಸಾಲ ಕೊಟ್ಟಿದಾಳೆ...' ಗುಡ್ಡೆ ಹೊಗಳಿದ.

'ಅದ್ಯಾರೋ ಎಮ್ಮೆಲ್ಲೆ, ಡಿಕೆಶಿ ಸಾಹೇಬ್ರನ್ನ ಹೊಗಳಿ ₹50 ಕೋಟಿ ಅನುದಾನ ಹೊಡ್ಕಂಡ್ರಂತೆ... ನಿಂದೂ ಅದೇ ಪ್ಲಾನ್ ಇದ್ದಂಗೈತಿ?' ತೆಪರೇಸಿ ಕಣ್ಣು ಮಿಟುಕಿಸಿದ.

'ಅಲ್ಲ, ಮರೆತಿದ್ದೆ... ನಮ್ ಸಿದ್ರಾಮಣ್ಣ ಮೊನ್ನೆ ರಾಹುಕಾಲ ನೋಡಿ ಬಜೆಟ್ ಮಂಡಿಸಿದ್ರಂತೆ ಹೌದಾ?' ದುಬ್ಬೀರ ಕೇಳಿದ.

'ಅವರು ಯಾವ ಕಾಲದಲ್ಲಾದ್ರು ಮಂಡಿಸ್ಲಿ, ನಮ್ ಡಿಕೆಶಿ ಸಾಹೇಬ್ರು ಸಿಎಂ ಆಗೋ ಕಾಲ ಯಾವಾಗ ಬರುತ್ತೆ ಅದನ್ನೇಳು' ಎಂದ ತೆಪರೇಸಿ.

'ಡಿಕೆಶಿ ಸಿಎಂ ಆಗಾಕೆ 'ರಾಹು'ಲ್ ಕಾಲ ಬರಬೇಕು' ಎಂದ ಗುಡ್ಡೆ. 'ಕರೆಕ್ಟ್' ಎಂದ ಕೊಟ್ರ. ಎಲ್ಲರೂ ನಕ್ಕರು.

## ಸಂಗತ

# ಆಹಾರ ತಾರತಮ್ಯ; ಮೆಚ್ಚನಾ ಪರಮಾತ್ಮನು

ರಾಮನವಮಿ ಸಂದರ್ಭದಲ್ಲಿ ಮಾಂಸಾಹಾರ ಮಾರಾಟ ನಿಷೇಧಿಸಲಾಗಿದೆ. ಇದು, ಬಹುಸಂಖ್ಯಾತರ ಆಹಾರದ ಹಕ್ಕಿನ ಮೇಲೆ ಸರ್ಕಾರ ನಿಯಂತ್ರಣ ಸಾಧಿಸುವ ನಡೆ.

● ರಾಘವೇಂದ್ರ ಕೆ. ತೊಗರ್ಸಿ

**ಶ್ರೀರಾಮನವಮಿ** ದಿನದ ಹಿನ್ನೆಲೆಯಲ್ಲಿ ಮಾರ್ಚ್ 27ರಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಮಾಂಸ ಮಾರಾಟವನ್ನು ನಿಷೇಧಿಸಿ ಪಶುಪಾಲನಾ ಇಲಾಖೆ ಆದೇಶ ಹೊರಡಿಸಿದೆ. ಈ ನಿಷೇಧದಿಂದ ಸರ್ಕಾರ ಯಾರನ್ನು ಮೆಚ್ಚಿಸಲು ಹೊರಟಿದೆಯೋ ತಿಳಿಯದು.

ರಾಮನವಮಿ ದಿನ ಮಾತ್ರವಲ್ಲ, ಮತ್ತೆ ಕೆಲವು ಆಚರಣೆಗಳ ಸಂದರ್ಭದಲ್ಲೂ ಮಾಂಸ ಮಾರಾಟವನ್ನು ನಿಷೇಧಿಸಲಾಗುತ್ತದೆ. ಇದು, ಈ ಮಣ್ಣಿನ ಬಹುಸಂಖ್ಯಾತರ ಆಹಾರದ ಹಕ್ಕಿನ ಮೇಲೆ ನಡೆಯುವ ದಬ್ಬಾಳಿಕೆಯಲ್ಲದೆ ಬೇರೇನೂ ಅಲ್ಲ.

ಆಹಾರಕ್ಕೆ ಸಂಬಂಧಿಸಿದಂತೆ ಪೂರ್ವಗ್ರಹಗಳನ್ನು ಅಳಿಸಬೇಕಾದುದು ಪ್ರಜಾಸತ್ತಾತ್ಮಕ ಸರ್ಕಾರದ ಕರ್ತವ್ಯ. ದುರದೃಷ್ಟವಶಾತ್, ಸರ್ಕಾರ ತಾನು ನಿರ್ವಹಿಸಬೇಕಾದ ಕರ್ತವ್ಯಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿದೆ; ಆಹಾರ ಪದ್ಧತಿಯಲ್ಲಿ ತಾರತಮ್ಯ ಎಸಗುತ್ತಿದೆ. ಶಾಲೆಗಳಲ್ಲಿ ಮೊಟ್ಟೆ ಕೊಡುವುದನ್ನು ಪ್ರತಿಭಟಿಸುವ ಹಾಗೂ ದಲಿತರು ಅಡುಗೆ ಮಾಡುತ್ತಾರೆ ಎನ್ನುವ ಕಾರಣದಿಂದಾಗಿ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿಯುವ ಪೋಷಕರು ಇದ್ದಾರೆ. ಇಂಥ ಮನಃಸ್ಥಿತಿಯನ್ನು, ಮಾಂಸ ಮಾರಾಟ ನಿಷೇಧದ ಆದೇಶವು ಪರೋಕ್ಷವಾಗಿ ಬೆಂಬಲಿಸುವಂತಿದೆ ಹಾಗೂ ಆಹಾರಪದ್ಧತಿಯ ಬಗೆಗಿನ ಮೌಢ್ಯಕ್ಕೆ ಉತ್ತೇಜನ ಕೊಡುವಂತಿದೆ.

ಮಾಂಸಾಹಾರ ಸೇವಿಸಿ ಮಂದಿರ ಪ್ರವೇಶಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪತ್ರಕರ್ತರು ಹಿಂದೊಮ್ಮೆ ಪ್ರಶ್ನಿಸಿದ್ದರು. ಆಗ ಮುಖ್ಯಮಂತ್ರಿ, ತಮ್ಮ ಆಹಾರದ ಸ್ವಾತಂತ್ರ್ಯವನ್ನು ಬಲವಾಗಿ ಪ್ರತಿಪಾದಿಸಿದ್ದರು. ನಿಮ್ಮಿಷ್ಟದ ಆಹಾರ ಸೇವಿಸುವ ಹಕ್ಕು ನಿಮಗೂ ಇದೆ ಎಂದು ಸಂವಿಧಾನದ ಪಾಠ ಮಾಡಿದ್ದರು. 'ಯುಗಾದಿ, ಶಿವರಾತ್ರಿಯ ದಿನವೂ ಮಾಂಸ ತಿನ್ನುವೆ' ಎಂದು ಸದನದಲ್ಲಿಯೇ ಹೇಳಿದ್ದಾರೆ. ಆದರೆ, ಅವರ ಸರ್ಕಾರದಲ್ಲಿಯೇ ಮಾಂಸ ಮಾರಾಟಕ್ಕೆ ನಿಯಮಿತವಾಗಿ ನಿಷೇಧ ಹೇರಲಾಗುತ್ತಿದೆ. ಜಯಂತಿ, ಹಬ್ಬಗಳ ನೆಪದಲ್ಲಿ ಮಾಂಸಾ ಹಾರದ ಮೇಲೆ ನಿರ್ಬಂಧ ವಿಧಿಸುವುದು ಆಹಾರದ ಹಕ್ಕು ಗಳನ್ನು ಮೊಟಕುಗೊಳಿಸುವ ಪ್ರಯತ್ನವಾಗಿದೆ.

ಸರ್ಕಾರದ ಮಾಂಸ ಮಾರಾಟ ನಿಷೇಧದ ಆದೇಶಗಳು ಅನೈತಿಕ ಪೊಲೀಸ್‌ಗಿರಿ ಮಾಡುವವರ ಕೈಗೆ ಬಡಿಗೆಯನ್ನು ಕೊಟ್ಟಂತೆ ಆಗುವ ಸಾಧ್ಯತೆಯೂ ಇದೆ. ಕಸಾಯಿಖಾನೆಯಲ್ಲಿ ಕೆಲಸ ಮಾಡುವ ಕೂಲಿಗಳ ಸಂಪಾದನೆಗೂ ಕುತ್ತು ತರುತ್ತದೆ.

ಶಿವನಿಗೆ ತನ್ನ ಕಣ್ಣನ್ನೇ ಅರ್ಪಿಸಿ ಭಕ್ತಿಯ ಪರಾಕಾಷ್ಠೆ ಮೆರೆದ ಕಣ್ಣಪ್ಪ ಪುರಾಣ ಪ್ರಸಿದ್ಧ. ಪರಮಾತ್ಮನಿಗೆ ದೃಷ್ಟಿ ದಾನ ಮಾಡಿದ ಪರಮಭಕ್ತ ಬೇಡರ ಕಣ್ಣಪ್ಪ ಪುರಾಣ, ಕಾವ್ಯ, ಸಿನಿಮಾಗಳ ಮೂಲಕವೂ ಚಿರಪರಿಚಿತ. ಶಿವನಿಗೆ ಮಾಂಸವನ್ನು ನೈವೇದ್ಯ ಮಾಡಿ ಮೆಚ್ಚಿಸಿದ ಕಣ್ಣಪ್ಪನ ಪರಂಪರೆಯ ಸಂಸ್ಕೃತಿ ನಮ್ಮದು. ಬಹುತ್ವ ಭಾರತದಲ್ಲಿ ಆಹಾರ ವೈವಿಧ್ಯವೂ ಸಂಸ್ಕೃತಿಯ ಪ್ರಧಾನ ಭಾಗ. ಅದನ್ನು ನಿಷೇಧಿಸುವುದು ಸಂಸ್ಕೃತಿಗೆ ವಿರುದ್ಧವಾದ ನಡೆ. ಅಲ್ಲದೆ, ಮಾಂಸಾಹಾರದ ಬಗ್ಗೆ ಗೌರವ ಹೊಂದಿದ್ದ ಶ್ರೀರಾಮನ ಆರಾಧನೆಯ ದಿನ ಮಾಂಸಾಹಾರ ನಿಷೇಧಿಸುವುದು ರಾಮನಿಗೆ ತೋರುವ ಗೌರವವೂ ಅಲ್ಲ.

ಅಯೋಧ್ಯೆಯ ಯುವರಾಜ ಶ್ರೀರಾಮ, ಸೀತೆ ಮತ್ತು ಲಕ್ಷ್ಮಣರೊಂದಿಗಿನ ವನವಾಸದಲ್ಲಿ ಗಂಗಾ ನದಿಯನ್ನು ದಾಟಿ ಚಿತ್ರಕೂಟಕ್ಕೆ ಹೋಗುವ ಸಂದರ್ಭದಲ್ಲಿ, ಸೀತಾಮಾತೆ ತಮ್ಮನ್ನು ಕಾಪಾಡುವಂತೆ ಗಂಗೆಯನ್ನು ಬೇಡಿಕೊಳ್ಳುತ್ತಾಳೆ. ಮರಳಿ ಬರುವಾಗ ಆರಾಧನೀಯ ಗಂಗಾ ಮಾತೆಗೆ ಮಾಂಸಾಹಾರಗಳ ಭಕ್ಷ್ಯದ ನೈವೇದ್ಯ ಅರ್ಪಿಸುವುದಾಗಿ ಹರಕೆ ಹೊತ್ತುಕೊಳ್ಳುತ್ತಾಳೆ. ಆ ಸಂದರ್ಭವನ್ನು ಕುವೆಂಪು ಅವರು ತಮ್ಮ 'ಶ್ರೀರಾಮಾಯಣ ದರ್ಶನಂ'ನಲ್ಲಿ, 'ಕ್ಷೇಮದಿಂ ಮರಳ್ವಂತೆ ಪ್ರೇಮದಿಂ ಪರಕೆಗೈ/ ಕಾಯಿ ಜೀವೇಶನಂ ಕರುಣೆಯಿಂದೋವಿ, ಓ/ ತಾಯೆ ಪಿಂತಿರುಗಿ ಬಂದಾಮೇಲೆ ನಿನಗೀವೆನೌ/ ಮಾಂಸಭೂತೌದನ ಸುರಾಘಟ ಸಹಸ್ರದಾ/ ನಿರ್ದುಷ್ಟ ಪುಷ್ಟ ಸಂತುಷ್ಟ ನೈವೇದ್ಯಮಂ/ ನಿನಗಿಷ್ಟಮಂ ದೇವಿ ಕೈ ಮುಗಿದೆನಿದೋ ಗಂಗೆ!' ಎಂದು ಕಟ್ಟಿಕೊಟ್ಟಿದ್ದಾರೆ. ರಾಮ ಹಾಗೂ ಸೀತೆಯರಿಗೆ ಇಲ್ಲದ ಮಡಿವಂತಿಕೆ 'ಜಿಬಿಎ'ಗೇಕೆ?

ಮಾಂಸಾಹಾರದ ಬಗ್ಗೆ ಮಡಿವಂತಿಕೆಯ ಭಾವನೆ ಹುಟ್ಟಿಸುವ ಅಥವಾ ಮಾಂಸಾಹಾರ ಕೀಳು ಎನ್ನುವ ಭಾವನೆಯನ್ನು ಸರ್ಕಾರ ಹುಟ್ಟಿಸಬಾರದು. ಬಹುಸಂಖ್ಯಾತ ಮಾಂಸಾಹಾರ ಪ್ರೇಮಿಗಳ ಭಾವನೆಗಳಿಗೆ ಧಕ್ಕೆ ಉಂಟುಮಾಡುವುದು, ಸಂವಿಧಾನದ ಮೂಲಭೂತ ಹಕ್ಕಿನ ಉಲ್ಲಂಘನೆಯೂ ಹೌದು. ಮಾಂಸ ಮಾರಾಟ ನಿಷೇಧದ ಆದೇಶ, ನಾಗರಿಕರ ಆಚಾರ ವಿಚಾರ ಹಾಗೂ ಆಹಾರ ಪದ್ಧತಿಯ ಮೇಲೆ ನಿಯಂತ್ರಣ ಸಾಧಿಸುವ ಪ್ರಯತ್ನದಂತೆ ಕಾಣಿಸುತ್ತದೆ.

ಮಾಂಸಾಹಾರದಲ್ಲಿಯೂ ಮೇಲು–ಕೀಳಿನ ಮೌಢ್ಯವಿದೆ. ಅದನ್ನು ಶಿವಶರಣೆ ಕಾಳವ್ವೆ 'ಕುರಿ ಕೋಳಿ ಕಿರಿಮೀನು ತಿಂಬವರಿಗೆಲ್ಲ ಕುಲಜ ಕುಲಜರೆಂದೆಂಬರು/ ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳುಜಾತಿಯೆಂಬರು/ ಅವರೆಂತು ಕೀಳುಜಾತಿಯಾದರು? ಜಾತಿಗಳು ನೀವೇಕೆ ಕೀಳಾಗಿರೊ?' ಎಂದು ಪ್ರಶ್ನಿಸುವ ಮೂಲಕ ದಬ್ಬಾಳಿಕೆಯ ವಿರುದ್ಧ ದನಿ ಎತ್ತಿದ್ದರು. ಅಂತಹ ವೈಚಾರಿಕ ವಿವೇಕವನ್ನು ಮೂಡಿಸಬೇಕಾದುದು ಸರ್ಕಾರದ ಕರ್ತವ್ಯವೇ ಹೊರತು, ಮೌಢ್ಯವನ್ನು ಪೊರೆಯುವುದಲ್ಲ.

ಹಬ್ಬ ಹರಿದಿನ, ಇತ್ಯಾದಿ ಸಂದರ್ಭದಲ್ಲಿ ಮಾಂಸಾಹಾರವನ್ನು ನಿಷೇಧಿಸುವ ಅರ್ಥಹೀನ ಕ್ರಮವನ್ನು ಸರ್ಕಾರ ಇನ್ನಾದರೂ ಕೈಬಿಡಲಿ. ಆಹಾರವು ಖಾಸಗಿ ಸಂಗತಿ ಎನ್ನುವ ಸಾಮಾನ್ಯ ಜ್ಞಾನಎಲ್ಲರದೂ ಆಗಲಿ. ಜನರ ಖಾಸಗಿ ಜೀವನದ ಆಗುಹೋಗು ಗಳ ಬಗ್ಗೆ, ಊಟದ ತಟ್ಟೆಯಲ್ಲಿ ಯಾವಾಗ ಏನಿರಬೇಕು ಎನ್ನುವುದರ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಸಲ್ಲದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತದಲ್ಲಿ ಅತಿ ಹೆಚ್ಚು ಮಂದಿಗೆ ಕೃಷಿಯೇ ಜೀವನಾಧಾರ. ಆದರೆ, ಕೃಷಿಗೆ ಮಹಿಳೆಯರೇ ಜೀವಾಳ. ಕೇಂದ್ರ ಸರ್ಕಾರದ ಮಾಹಿತಿಯ ಪ್ರಕಾರ, ದೇಶದ ಶೇ 80ರಷ್ಟು ಮಂದಿ ಗ್ರಾಮೀಣ ಭಾಗದ ಮಹಿಳೆಯರು ಕೃಷಿ ಮತ್ತು ಕೃಷಿ ಸಂಬಂಧಿ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಹೊಲದಲ್ಲಿ ದುಡಿಯುವ ವಿಚಾರದಲ್ಲಿ ಮುಂಚೂಣಿಯಲ್ಲಿರುವ ಮಹಿಳೆಯರು, ಭೂ ಒಡೆತನದ ವಿಚಾರದಲ್ಲಿ ಹಿಂದುಳಿದಿದ್ದಾರೆ. ದೇಶದಲ್ಲಿ ಜಮೀನು ಮಾಲೀಕತ್ವ ಹೊಂದಿರುವ ಮಹಿಳೆಯರ ಪ್ರಮಾಣ ಅತ್ಯಲ್ಪವಾಗಿದೆ. ವಿಶ್ವಸಂಸ್ಥೆಯು 2026 ಅನ್ನು ಅಂತರರಾಷ್ಟ್ರೀಯ ಮಹಿಳಾ ಕೃಷಿಕರ ವರ್ಷ ಎಂದು ಘೋಷಿಸಿದೆ. ಇದು ಭಾರತದ ಕೃಷಿ ಕ್ಷೇತ್ರದಲ್ಲಿರುವ ಲಿಂಗ ಅಂತರದ ಬಗ್ಗೆ ಗಂಭೀರವಾಗಿ ಚಿಂತಿಸುವಂತೆ ಮಾಡಿದೆ

# ರೈತ ಮಹಿಳೆ

# ದುಡಿಮೆಯಲ್ಲಿ ಮುಂದೆ ಭೂ ಒಡೆತನದಲ್ಲಿ ಹಿಂದೆ

• ಬಿ.ವಿ.ಶ್ರೀನಾಥ್

ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯು 2026 ಅನ್ನು ಅಂತರರಾಷ್ಟ್ರೀಯ ಮಹಿಳಾ ಕೃಷಿಕರ ವರ್ಷ ಎಂದು ಘೋಷಿಸಿದೆ. ಬೇಸಾಯ ರಂಗದಲ್ಲಿ ಮಹಿಳೆಯರು ನಿರ್ಣಾಯಕ ಪಾತ್ರ ವಹಿಸುತ್ತಿದ್ದರೂ, ಅದಕ್ಕೆ ತಕ್ಕಂತೆ ಅವರಿಗೆ ಸಮನಾದ ಹಕ್ಕುಗಳು ಲಭ್ಯವಾಗಿಲ್ಲ. ಆಹಾರ ಉತ್ಪಾದನೆಯಲ್ಲಿ ಅವರು ವಹಿಸುತ್ತಿರುವ ಪಾತ್ರವು ಬಹುತೇಕ ಯಾರ ಗಮನಕ್ಕೂ ಬರುತ್ತಿಲ್ಲ. ಕೃಷಿಗೆ, ಜಾಗತಿಕ ಆಹಾರ ಭದ್ರತೆಗೆ ಮಹಿಳೆಯರು ನೀಡುತ್ತಿರುವ ಕೊಡುಗೆಯನ್ನು ಗುರುತಿಸುತ್ತಲೇ, ಕೃಷಿರಂಗದಲ್ಲಿರುವ ಲಿಂಗ ಅಂತರವನ್ನು ತೊಡೆದುಹಾಕುವ ದಿಸೆಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ವಿಶ್ವಸಂಸ್ಥೆ ಹೇಳಿದೆ. ವಿಶ್ವಸಂಸ್ಥೆಯ ಘೋಷಣೆ, ಆಶಯದ ಬೆಳಕಿನಲ್ಲಿ ನೋಡಿದರೆ, ಭಾರತದಲ್ಲಿ ಭೂ ಒಡೆತನದ ವಿಚಾರದಲ್ಲಿರುವ ಲಿಂಗ ಅಂತರವು ಎದ್ದುಕಾಣುತ್ತದೆ.

ಭಾರತದ ಕೃಷಿಗೆ ಮಹಿಳೆಯರೇ ಆಧಾರ. ರಾಷ್ಟ್ರೀಯ ಮಹಿಳಾ ಆಯೋಗವು ಕೃಷಿಯಲ್ಲಿ ಮಹಿಳೆಯರು ಮತ್ತು ಪುರುಷರು ವಹಿಸುವ ಪಾತ್ರದ ಬಗ್ಗೆ ಅಧ್ಯಯನ ನಡೆಸಿದೆ. ಹೊಲ ಉಳುವುದು, ನೀರಾವರಿ, ಮಾರುಕಟ್ಟೆ ಸೇರಿದಂತೆ ಪುರುಷರದ್ದು ಸೀಮಿತ ಪಾತ್ರವಾದರೆ, ಉಳಿದ ಬಹುತೇಕ ಎಲ್ಲ ಕೆಲಸ, ಜವಾಬ್ದಾರಿಗಳನ್ನೂ ನಿರ್ವಹಿಸುವುದು ಮಹಿಳೆಯೇ ಎಂದು ವರದಿ ಉಲ್ಲೇಖಿಸಿದೆ. ಹೊಲವನ್ನು ಹದಗೊಳಿಸುವುದರಿಂದ ಹಿಡಿದು ಬೀಜ ಬಿತ್ತನೆ, ಕಳೆ ತೆಗೆಯುವುದು, ಕೊಯ್ಲೋತ್ತರ ಕೆಲಸಗಳು ಎಲ್ಲದರಲ್ಲೂ ಮಹಿಳೆಯರು ಮುಂದಿರುತ್ತಾರೆ. ಹೊಲದಲ್ಲಿ ದುಡಿಯುವ ವಿಚಾರದಲ್ಲಿ ಮುಂಚೂಣಿಯಲ್ಲಿರುವ ಮಹಿಳೆಯರು, ಜಮೀನು ಮಾಲೀಕತ್ವದ ವಿಚಾರದಲ್ಲಿ ಹಿಂದುಳಿದಿದ್ದಾರೆ.

ಭಾರತದಲ್ಲಿ ಜೀವನದ ಬಹುತೇಕ ವಲಯಗಳಲ್ಲಿ ಇಂದಿಗೂ ಪುರುಷ ಪ್ರಧಾನ ವ್ಯವಸ್ಥೆಯೇ ಇದೆ. ಇತ್ತೀಚಿನ ದಶಕಗಳಲ್ಲಿ ಹೆಣ್ಣುಮಕ್ಕಳು ವಿದ್ಯಾಭ್ಯಾಸ ಪಡೆಯುವುದರಲ್ಲಿ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಪುರುಷರಿಗೆ ಸಮನಾಗಿ ಮುನ್ನುಗ್ಗುತ್ತಿದ್ದಾರೆ, ಹಲವು ವಲಯಗಳಲ್ಲಿ ಹೆಚ್ಚಿನ ಸಾಧನೆ ಮಾಡಿದ್ದಾರೆ. ಜತೆಗೆ, ಹಿಂದೂ ಉತ್ತರಾಧಿಕಾರ ಕಾಯ್ದೆಯ ಪ್ರಕಾರ, ಹೆಣ್ಣುಮಕ್ಕಳಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು ನೀಡುವುದು ಕಡ್ಡಾಯವಾಗಿದೆ. ಆದರೂ ಮಹಿಳೆಯರ ಭೂ ಒಡೆತನದ ಪ್ರಮಾಣ ಅತ್ಯಲ್ಪವಾಗಿದೆ.

**ಆರ್ಥಿಕ ಸಂಪನ್ಮೂಲ:** ಭೂಮಿ ಎನ್ನುವುದು ಇಂದು ಕೇವಲ ಜೀವನೋಪಾಯದ ಮಾರ್ಗವಾಗಿ ಉಳಿದಿಲ್ಲ. ಸಣ್ಣ ಮತ್ತು ಅತಿಸಣ್ಣ ರೈತರೇ ಹೆಚ್ಚಾಗಿರುವ ದೇಶದಲ್ಲಿ ಭೂಮಿಯು ಪ್ರಮುಖ ಆರ್ಥಿಕ ಸಂಪನ್ಮೂಲವೂ ಆಗಿದೆ. ದುಡಿಮೆಯಲ್ಲಿ ಹೆಚ್ಚಿನ ಪಾಲು ಮಹಿಳೆಯದ್ದೇ ಆದರೂ, ಆರ್ಥಿಕ ಸಂಪನ್ಮೂಲದ ಮೇಲಿನ ಹಕ್ಕಿನ ವಿಚಾರದಲ್ಲಿ ಆಕೆಯ ಪಾತ್ರ ಇಂದಿಗೂ ಅತ್ಯಂತ ಸೀಮಿತವಾಗಿದೆ.

ಭಾರತದಲ್ಲಿ ಮಹಿಳೆಯರ ಭೂಹಕ್ಕಿಗೆ ಸಂಬಂಧಿಸಿದಂತೆ ನಿಖರವಾದ, ಇತ್ತೀಚಿನ ಅಧಿಕೃತ ದತ್ತಾಂಶವೇ ಸಿಗುವುದಿಲ್ಲ. ಅದರ ಬಗ್ಗೆ ಗಂಭೀರವಾದ ಅಧ್ಯಯನ, ಮಾಹಿತಿ ಸಂಗ್ರಹಕ್ಕೆ ಸರ್ಕಾರಗಳು ಪ್ರಯತ್ನ ಮಾಡಿಲ್ಲ. ಲಭ್ಯವಿರುವ ಮಾಹಿತಿಯಂತೆ, ಭಾರತದಲ್ಲಿ ಭೂಮಿಯ ಒಡೆತನ ಹೊಂದಿರುವ ಮಹಿಳೆಯರ ಪ್ರಮಾಣವು (ಏಕಮಾಲೀಕತ್ವ ಅಥವಾ ಜಂಟಿ) ಅತ್ಯಂತ ನಿಧಾನಗತಿಯಲ್ಲಿ ಹೆಚ್ಚಾಗುತ್ತಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಎನ್ಎಫ್ಎಚ್ಎಸ್) ಪ್ರಕಾರ, 15–49 ವರ್ಷದ ಮಹಿಳೆಯರಲ್ಲಿ 2015–16ರಲ್ಲಿ ಈ ಪ್ರಮಾಣವು ಶೇ 28.3ರಷ್ಟಿತ್ತು; 2019–20ರ ವೇಳೆಗೆ ಅದು ಶೇ 31.7ಕ್ಕೆ ಹೆಚ್ಚಾಗಿತ್ತು. 2005–06ರ ಕೃಷಿ ಗಣತಿಯ ಪ್ರಕಾರ, ದೇಶದಲ್ಲಿ ಭೂಒಡೆತನ ಹೊಂದಿದ್ದ ರೈತ ಮಹಿಳೆಯರ ಪ್ರಮಾಣವು ಶೇ 11ರಷ್ಟಿತ್ತು; 2010–11ರ ಹೊತ್ತಿಗೆ ಶೇ 12.8ಕ್ಕೆ ಏರಿದ ಈ ಪ್ರಮಾಣವು 2015–16ರ ಕೃಷಿ ಗಣತಿಯ ಹೊತ್ತಿಗೆ ಶೇ 13.9ರಷ್ಟಾಗಿತ್ತು.

**ಅಡ್ಡಿ ಹಲವು:** ಭೂಒಡೆತನಕ್ಕೆ ಸಂಬಂಧಪಟ್ಟ ಕಾನೂನು ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿ ಇದೆ. ಕರ್ನಾಟಕದಲ್ಲಿ ಪ್ರಸ್ತುತ ತಂದೆ ತಾಯಿ ಮೃತಪಟ್ಟ ನಂತರ ಹೆಣ್ಣುಮಕ್ಕಳ ಹೆಸರುಗಳೂ ಭೂ ದಾಖಲೆಯಲ್ಲಿ ನಮೂದಾಗುತ್ತಿವೆ. ಸ್ತ್ರೀಯರ ಭೂ ಒಡೆತನಕ್ಕೂ, ಅವರ ಆರ್ಥಿಕ ಸ್ವಾತಂತ್ರ್ಯ, ಕೃಷಿ ಉತ್ಪಾದ ನೆಗೂ ನೇರ ಸಂಬಂಧ ಇದೆ ಎಂದು ಹಲವು ಅಧ್ಯಯನಗಳು ಉಲ್ಲೇಖಿಸಿವೆ. ಆದರೆ, ಭೂಒಡೆತನ ಪಡೆಯುವ ವಿಚಾರದಲ್ಲಿ ಮಹಿಳೆಯರಿಗೆ ಸಾಮಾಜಿಕ ನಿಲುವುಗಳು, ಪರಾಂಪರಾಗತ ಪದ್ಧತಿಗಳು, ಕಾನೂನಿನ ತಿಳಿವಳಿಕೆಯ ಕೊರತೆ ಮತ್ತು ಪುರುಷ ಪ್ರಧಾನ ಧೋರಣೆಗಳು ಪ್ರಮುಖ ಅಡ್ಡಿಗಳಾಗಿವೆ ಎಂದು ವಿಶ್ಲೇಷಿಸಲಾಗಿದೆ. ಕೃಷಿಯು ದೇಶದಲ್ಲಿ ಅತಿಹೆಚ್ಚು ಮಂದಿಗೆ ಉದ್ಯೋಗ ಕಲ್ಪಿಸಿರುವ ಕ್ಷೇತ್ರವಾಗಿದೆ. ಇಂಥ ವಲಯದಲ್ಲಿ ಭೂಒಡೆತನ ಸಾಧಿಸುವುದು ಮಹಿಳಾ ಸಮಾನತೆಯ ಹಾದಿಯಲ್ಲಿ ಮುಖ್ಯ ಹೆಜ್ಜೆಯಾಗಲಿದೆ.

ಈ ದಿಸೆಯಲ್ಲಿ ಕೃಷಿಯಲ್ಲಿ ಮಹಿಳೆಯರ ಪಾತ್ರವನ್ನು ಗುರುತಿಸುವುದು, ಭೂಮಿಯ ಲಭ್ಯತೆ, ಅದರ ಸ್ವರೂಪ, ಆರ್ಥಿಕ ನೆರವು, ತಾಂತ್ರಿಕ ತರಬೇತಿ ಮುಂತಾಗಿ ಅವರು ಎದುರಿಸುತ್ತಿರುವ ಸವಾಲು–ಸಮಸ್ಯೆಗಳನ್ನು ಬಗೆಹರಿಸುವುದು, ಅದಕ್ಕೆ ಪೂರಕವಾಗಿ ನೀತಿ, ಕಾನೂನು ರೂಪಿಸುವುದು ಆದ್ಯತೆಯಾಗಬೇಕು ಎಂದು ವಿಶ್ವಸಂಸ್ಥೆ ಹೇಳಿದೆ. ರೈತ ಮಹಿಳೆಯರ ಉನ್ನತಿಗಾಗಿ ಅಭ್ಯುದಯಕ್ಕಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದೂ ಅದು ತಿಳಿಸಿದೆ.

**ಆಧಾರ:** ಪಿಐಬಿ, ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ, ಕೃಷಿ ಗಣತಿ 2015–16

### ಸಂಬಳವಿಲ್ಲದ ಕೆಲಸ

ಕೃಷಿಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಬೇರೊಂದು ಆಯಾಮವೂ ಇದೆ. ಪ್ರಸ್ತುತ, ಕೃಷಿ ಕಡಿಮೆ ಆದಾಯದ ಮೂಲವಾಗಿರುವುದು ಮತ್ತು ಇತರ ಕಾರಣಗಳಿಂದಾಗಿ ಮಹಿಳೆಯರದ್ದು ಸಂಬಳರಹಿತ ದುಡಿಮೆಯಾಗಿದೆ. ಪೀರಿಯಾಡಿಕ್ ಲೇಬರ್ ಫೋರ್ಸ್ ಸರ್ವೆ–2024ರ (ಪಿಎಲ್ಎಫ್ಎಸ್) ಪ್ರಕಾರ, ಮಹಿಳಾ ಕಾರ್ಮಿಕರ ಪಾಲ್ಗೊಳ್ಳುವಿಕೆ ದರವು 2017ರಲ್ಲಿ ಶೇ 24.8 ಇದ್ದದ್ದು 2023ಕ್ಕೆ ಶೇ 42ಕ್ಕೆ ಹೆಚ್ಚಾಗಿದೆ. ಅಂದರೆ, ಸ್ವಯಂಉದ್ಯೋಗದಲ್ಲಿ ತೊಡಗಿರುವ ಮಹಿಳೆಯರ ಪ್ರಮಾಣ ಹೆಚ್ಚಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಸ್ವಯಂಉದ್ಯೋಗ ಎಂದರೆ, ಕುಟುಂಬದ ಜಮೀನಿನಲ್ಲಿ ದುಡಿಯುವುದು ಮತ್ತು ತತ್ಸಂಬಂಧಿ ಕೆಲಸಗಳಲ್ಲಿ ತೊಡಗುವುದೇ ಆಗಿದೆ. ಹೆಚ್ಚಿನ ಮಹಿಳೆಯರು ಪ್ರತಿಫಲವೇ ಇಲ್ಲದ ದುಡಿಮೆಯಲ್ಲಿ ತೊಡಗಿರುವುದನ್ನು ಇದು ಸೂಚಿಸುತ್ತಿದೆ ಎಂದು ವಿಶ್ಲೇಷಿಸಲಾಗಿದೆ.

| 80% | 33% | 47% | 14% |
|---|---|---|---|
| ಕೃಷಿ ಕ್ಷೇತ್ರದಲ್ಲಿ ಗ್ರಾಮೀಣ ಮಹಿಳೆಯರ ಪ್ರಮಾಣ | ಮಹಿಳಾ ಕೂಲಿ ಕಾರ್ಮಿಕರ ಪ್ರಮಾಣ | ಸ್ವಂತ ಹೊಲಗಳಲ್ಲಿ ದುಡಿಯುತ್ತಿರುವ ರೈತ ಮಹಿಳೆಯರ ಪ್ರಮಾಣ | ಭೂ ಒಡೆತನ ಹೊಂದಿರುವ ರೈತ ಮಹಿಳೆಯರ ಪ್ರಮಾಣ |

ಬೆಳಗಾವಿ ತಾಲ್ಲೂಕಿನ ಕುರಿಹಾಳದ ವೈಷ್ಣವಿ ಬಾಳಾರಾಮ ಚೌಗಲೆ ಅವರು ಎತ್ತುಗಳ ಕೊರತೆಯಿಂದಾಗಿ ತಮ್ಮ ಇಬ್ಬರು ಪುತ್ರಿಯರ ನೆರವಿನಿಂದಲೇ ಎಡೆಕುಂಟೆ ಹೊಡೆದಿದ್ದರು ಪ್ರಜಾವಾಣಿ ಸಂಗ್ರಹ ಚಿತ್ರ: ಸಂತೋಷ ಈ. ಚಿನಗುಡಿ

### ಹಿಂದೂ ಉತ್ತರಾಧಿಕಾರ ಕಾಯ್ದೆ

ಮಹಿಳೆಗೆ ಮೂರು ರೀತಿಯಲ್ಲಿ ಭೂಹಕ್ಕಿನ ಒಡೆತನ ಪ್ರಾಪ್ತವಾಗುತ್ತದೆ. ಪಿತ್ರಾರ್ಜಿತವಾಗಿ, ಸರ್ಕಾರದ ಭೂ ಮಂಜೂರಾತಿ ಮತ್ತು ಖಾಸಗಿ ಭೂಮಿಯನ್ನು ಕೊಂಡುಕೊಳ್ಳುವ ಮೂಲಕ ಮಹಿಳೆಯರು ಭೂಒಡತಿಯರಾಗಬಹುದು. ಪುರುಷರೇ ಕುಟುಂಬದ ಯಜಮಾನರಾಗಿರುವುದರಿಂದ, ಸರ್ಕಾರಗಳು ಮಂಜೂರು ಮಾಡುವಾಗಲೂ ಬಹುತೇಕ ಸಂದರ್ಭಗಳಲ್ಲಿ ಪುರುಷ ಫಲಾನುಭವಿಗಳಿಗೇ ಮಂಜೂರಾತಿ ಸಿಗುತ್ತದೆ. ಮಹಿಳೆಯರ ಭೂಒಡೆತನವನ್ನು ಪ್ರೋತ್ಸಾಹಿಸಲು ಕೆಲವು ರಾಜ್ಯ ಸರ್ಕಾರಗಳು ವಿಶೇಷ ಯೋಜನೆಗಳನ್ನೂ ರೂಪಿಸಿದ್ದವು (ಉದಾಹರಣೆಗೆ, ಆಂಧ್ರಪ್ರದೇಶದ 'ಭೂಮಿ', ಗುಜರಾತ್‌ನ 'ನಾರಿ ಗೌರವ ನೀತಿ').

ಮಹಿಳೆಯರು ಜಮೀನನ್ನು ಕೊಂಡುಕೊಳ್ಳುವ ಮೂಲಕ ಭೂಹಕ್ಕು ಪಡೆಯುವುದು ವಿರಳವಾದ ವಿದ್ಯಮಾನವಾಗಿದೆ. ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆಯುವುದು ಅತ್ಯಂತ ಸಾಮಾನ್ಯವಾದ ವಿಧಾನವಾಗಿದೆ. ಭೂಮಿಯ ಹಕ್ಕು ಪಡೆಯುವುದು ವೈಯಕ್ತಿಕ ಕಾನೂನಿನ ಅಡಿಯಲ್ಲಿ ಬರುತ್ತದೆ. ಭಾರತದಲ್ಲಿ ಒಂದೊಂದು ಧರ್ಮದಲ್ಲಿ ಒಂದೊಂದು ರೀತಿಯಲ್ಲಿ ಹಕ್ಕುಗಳು ಲಭ್ಯವಾಗುತ್ತವೆ. ಉದಾಹರಣೆಗೆ, ಹಿಂದೂ ಉತ್ತರಾಧಿಕಾರ ಕಾಯ್ದೆ (1956) ಪ್ರಕಾರ, ಗಂಡುಮಕ್ಕಳಿಗೆ ಮಾತ್ರ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಇತ್ತು. ಈ ಕಾಯ್ದೆಗೆ 2005ರಲ್ಲಿ ತಿದ್ದುಪಡಿ ತಂದು, ಹೆಣ್ಣುಮಕ್ಕಳಿಗೂ ಸಮಾನ ಹಕ್ಕು ಕಲ್ಪಿಸಲಾಯಿತು. ಹಿಂದೂಗಳ ಜತೆಗೆ ಬೌದ್ಧ, ಸಿಖ್ ಮತ್ತು ಜೈನರಿಗೂ ಇದೇ ಕಾಯ್ದೆ ಅನ್ವಯವಾಗುತ್ತಿದೆ. ಮುಸ್ಲಿಂ ವೈಯಕ್ತಿಕ ಕಾನೂನಿನ (1937) ಪ್ರಕಾರ, ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡುಮಕ್ಕಳಿಗೆ ಸಿಗುವ ಪಾಲಿನಲ್ಲಿ ಅರ್ಧ ಪಾಲಿನ ಮೇಲೆ ಮಾತ್ರ ಹಕ್ಕು ಪ್ರಾಪ್ತವಾಗುತ್ತದೆ.

### ಜಾಗತಿಕ ಚಿತ್ರಣ ಭಿನ್ನವಲ್ಲ

ಭಾರತವಷ್ಟೇ ಅಲ್ಲ, ಬಹುತೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಮಹಿಳೆಯರೇ ಮುಖ್ಯ ಪಾತ್ರ ವಹಿಸುತ್ತಿದ್ದಾರೆ. ಅಲ್ಲಿಯೂ ಭೂಮಿಯ ಒಡೆತನ ಹೊಂದಿರುವ ಮಹಿಳೆಯರ ಪ್ರಮಾಣ ಕಡಿಮೆ. ಮಹಿಳೆಯರ ಒಡೆತನದಲ್ಲಿರುವ ಹೆಚ್ಚಿನ ಭೂಮಿಗಳು ಒಂದೋ ಕಿರಿದಾಗಿರುತ್ತವೆ, ಇಲ್ಲವೇ ಪುರುಷರು ಹೊಂದಿರುವ ಭೂಮಿಗಿಂತ ಕಡಿಮೆ ಗುಣಮಟ್ಟದವಾಗಿರುತ್ತವೆ. ಕೆಲವೆಡೆ, ಮಹಿಳೆಯರ ಭೂಒಡೆತನವು ಅಸುರಕ್ಷಿತವೂ ಆಗಿದೆ. ವಿಶ್ವಸಂಸ್ಥೆಯ ಲಿಂಗ ಮತ್ತು ಭೂಮಿಯ ಹಕ್ಕುಗಳ ದತ್ತಾಂಶದ (ಜಿಎಲ್ಆರ್‌ಡಿ) ಪ್ರಕಾರ, ಜಾಗತಿಕ ಮಟ್ಟದಲ್ಲಿ ಮಹಿಳೆಯರು ಭೂಒಡೆತನ ಹೊಂದಿರುವ ಪ್ರಮಾಣವು ಶೇ 15ರಷ್ಟು ಮಾತ್ರ. ಉತ್ತರ ಆಫ್ರಿಕಾ ಮತ್ತು ಪಶ್ಚಿಮ ಏಷ್ಯಾದಲ್ಲಿ ಈ ಪ್ರಮಾಣವೂ ಇನ್ನೂ ಕಡಿಮೆ ಇದೆ. ದಕ್ಷಿಣ ಏಷ್ಯಾದಲ್ಲಿ ಪಿತ್ರಾರ್ಜಿತ ಕಾನೂನುಗಳು ಧಾರ್ಮಿಕ ಚೌಕಟ್ಟಿಗೆ ಒಳಪಟ್ಟಿರುವುದು ಮಹಿಳೆಯರು ಭೂಒಡೆತನ ಪಡೆಯಲು ಅಡ್ಡಿಯಾಗಿದೆ.

## ರಾಷ್ಟ್ರೀಯ

# 'ಎ.ಐ ಬಳಸಿ ಸಿದ್ಧಪಡಿಸಿದ ತೀರ್ಪು ಉಲ್ಲೇಖ ಹೆಚ್ಚಳ'



ನವದೆಹಲಿ (ಪಿಟಿಐ): ತಾನು ನೀಡದೇ ಇರುವಂತಹ ತೀರ್ಪುಗಳನ್ನು ಕೃತಕ ಬುದ್ಧಿಮತ್ತೆ (ಎ.ಐ) ಬಳಸಿ ಸೃಷ್ಟಿಸಲಾಗುತ್ತಿದ್ದು, ದಾವೆದಾರರು ಹಾಗೂ ವಕೀಲರು ಇಂತಹ ತೀರ್ಪುಗಳನ್ನು ಉಲ್ಲೇಖಿಸುತ್ತಿರುವ 'ಅಪಾಯಕಾರಿ' ಪ್ರವೃತ್ತಿ ಹೆಚ್ಚುತ್ತಿದೆ ಎಂದು ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ.

'ಎ.ಐ ಬಳಸಿ ಸೃಷ್ಟಿಸಲಾದ ತೀರ್ಪುಗಳನ್ನು ಉಲ್ಲೇಖ ಮಾಡುವ ಪ್ರವೃತ್ತಿ ಭಾರತ ಮಾತ್ರವಲ್ಲ ವಿಶ್ವದೆಲ್ಲೆಡೆ ವ್ಯಾಪಕವಾಗುತ್ತಿದೆ' ಎಂದು ನ್ಯಾಯಮೂರ್ತಿಗಳಾದ ರಾಜೇಶ್ ಬಿಂದಲ್ ಹಾಗೂ ವಿಜಯ ಬಿಷ್ಣೋಯಿ ಅವರು ಇದ್ದ ಪೀಠ ಹೇಳಿದೆ.

ಕಂಪನಿಯೊಂದರ ನಿರ್ದೇಶಕ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದಾಗ ಬಾಂಬೆ ಹೈಕೋರ್ಟ್ ವ್ಯಕ್ತಪಡಿಸಿದ್ದ ಅಭಿಪ್ರಾಯಗಳನ್ನು ತೆಗೆದುಹಾಕುವ ವೇಳೆ ಪೀಠವು ಈ ಮಾತು ಹೇಳಿದೆ.

ಅರ್ಜಿದಾರ ಸಲ್ಲಿಸಿದ್ದ ಬಾಂಬೆ ಹೈಕೋರ್ಟ್‌ನದ್ದು ಎನ್ನಲಾದ ಆದೇಶ ಹಾಗೂ ಅದರಲ್ಲಿನ ಅವರ ನಿವೇದನೆಗಳನ್ನು ಚಾಟ್‌ಜಿಪಿಟಿ ಅಥವಾ ಇಂಥದೇ ಎ.ಐ ತಂತ್ರಾಂಶದ ನೆರವಿನಿಂದ ಸಿದ್ಧಪಡಿಸಲಾಗಿದೆ ಎಂಬುದು ಕಂಡುಬರುತ್ತದೆ ಎಂದು ಪೀಠ ಹೇಳಿದೆ.

# ಮಹಾರಾಷ್ಟ್ರ: ದೇವಾಲಯಕ್ಕೆ ₹1 ಕೋಟಿ ಮಂಜೂರು

## ಅಶೋಕ್ ಖರಾತ್‌ಗೆ ಸಂಬಂಧಿಸಿದ ದೇವಸ್ಥಾನ

ಮುಂಬೈ (ಪಿಟಿಐ): ಅತ್ಯಾಚಾರ ಪ್ರಕರಣದಲ್ಲಿ ಬಂಧಿತರಾಗಿರುವ, ಸ್ವಯಂ ಘೋಷಿತ ದೇವಮಾನವ ಅಶೋಕ್ ಖರಾತ್ ಅವರಿಗೆ ಸಂಬಂಧಿಸಿದ ದೇವಾಲಯದ ಅಭಿವೃದ್ಧಿ ಕಾರ್ಯಗಳಿಗಾಗಿ ಮಹಾರಾಷ್ಟ್ರ ಸರ್ಕಾರವು 2018ರಲ್ಲಿ ₹1 ಕೋಟಿಗೂ ಹೆಚ್ಚಿನ ಅನುದಾನ ಮಂಜೂರು ಮಾಡಿತ್ತು.

ಪ್ರವಾಸೋದ್ಯಮ ಇಲಾಖೆಯು ಪ್ರಾದೇಶಿಕ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಯಡಿ 2018ರಂದು ಮಾರ್ಚ್ 31ರಂದು ಅನುದಾನ ಮಂಜೂರಾತಿಗೆ ಅನುಮೋದನೆ ನೀಡಿತ್ತು.

ಸರ್ಕಾರದ ನಿರ್ಣಯದ ಪ್ರಕಾರ, ನಾಸಿಕ್ ಜಿಲ್ಲೆಯ ಸಿನ್ನಾರ್‌ನಲ್ಲಿರುವ ಶ್ರೀ ಈಶಾನ್ಯೇಶ್ವರ ದೇವಸ್ಥಾನ ಟ್ರಸ್ಟ್‌ಗೆ ಸೇರಿದ ದೇವಾಲಯದ ಆವರಣದಲ್ಲಿ ₹1.05 ಕೋಟಿ ಮೊತ್ತದ ಅಭಿವೃದ್ಧಿ ಕಾರ್ಯಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. ಸಭಾಂಗಣ ನಿರ್ಮಾಣ, ಆವರಣಕ್ಕೆ ಟೈಲ್ಸ್ ಹಾಕಲು, ಪುರುಷ ಹಾಗೂ ಮಹಿಳೆಯರ ಶೌಚಾಲಯಗಳು, ಬಟ್ಟೆ ಬದಲಾಯಿಸುವ ಕೊಠಡಿಗಳು, ಪಾರ್ಕಿಂಗ್ ಸೌಲಭ್ಯ, ಭಕ್ತರಿಗೆ ವಸತಿ, ಉದ್ಯಾನ ನಿರ್ಮಾಣ ಕಾಮಗಾರಿಗಳು ಇದರಲ್ಲಿ ಸೇರಿವೆ.

ಮಂಜೂರಾದ ಅನುದಾನದಲ್ಲಿ 2017–18ರ ಹಣಕಾಸು ವರ್ಷದಲ್ಲಿ ₹25 ಲಕ್ಷ ಮೊತ್ತವನ್ನು ಬಿಡುಗಡೆ ಮಾಡಲಾಗಿತ್ತು. ಈಶಾನ್ಯೇಶ್ವರ ದೇವಸ್ಥಾನದ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆ ಮೂಲಕ ನಿರ್ವಹಣೆ ಮಾಡಲಾಗಿತ್ತು.

'ಅನುದಾನ ಮಂಜೂರು ಮಾಡುವ ಸಮಯದಲ್ಲಿ ಖಾರತ್ ವಿರುದ್ಧ ಯಾವುದೇ ಆರೋಪ ಕೇಳಿಬಂದಿರಲಿಲ್ಲ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಮೂರು ವರ್ಷಗಳ ಅವಧಿಯಲ್ಲಿ ಪದೇ ಪದೇ ಅತ್ಯಾಚಾರ ಎಸಗಿದ್ದಾರೆ' ಎಂದು 35 ವರ್ಷದ ಮಹಿಳೆಯೊಬ್ಬರು ಆರೋಪಿಸಿದ ನಂತರ ಮಾರ್ಚ್ 18ರಂದು ಖಾರತ್ ಅವರನ್ನು ಬಂಧಿಸಲಾಗಿತ್ತು. ಅವರು ಪ್ರಸ್ತುತ ಪೊಲೀಸ್ ಕಸ್ಟಡಿಯಲ್ಲಿದ್ದಾರೆ.

ಐಪಿಎಸ್ ಅಧಿಕಾರಿ ತೇಜಸ್ವಿ ಸಾತಪುತೆ ನೇತೃತ್ವದ ವಿಶೇಷ ತನಿಖಾ ತಂಡ (ಎಸ್ಐಟಿ) ಖರಾತ್ ವಿರುದ್ಧದ ಪ್ರಕರಣಗಳ ತನಿಖೆ ನಡೆಸುತ್ತಿದೆ. ಇದುವರೆಗೆ ಅವರ ವಿರುದ್ಧ ಆರು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಸಂತ್ರಸ್ತರ ಪೈಕಿ ಗರ್ಭಿಣಿಯೂ ಸೇರಿದ್ದಾರೆ.

ಖರಾತ್ ಅವರಿಗೆ ಸಂಬಂಧಿಸಿದ ಸುಮಾರು ₹1,500 ಕೋಟಿ ಮೌಲ್ಯದ ಆಸ್ತಿ ಹಾಗೂ 100 ಆಕ್ಷೇಪಾರ್ಹ ವಿಡಿಯೊಗಳನ್ನು ಎಸ್ಐಟಿ ಪತ್ತೆಹಚ್ಚಿದೆ.

# ಹಕ್ಕಿ ಜ್ವರ: 22 ಸಾವಿರ ಕೋಳಿ ಹತ್ಯೆ

ಬಿಲಾಸಪುರ (ಪಿಟಿಐ): ಹಕ್ಕಿ ಜ್ವರ ಪತ್ತೆಯಾದ ಕಾರಣ ಛತ್ತೀಸಗಢದ ಬಿಲಾಸ್‌ಪುರ ಜಿಲ್ಲೆಯ ಸರ್ಕಾರಿ ಸ್ವಾಮ್ಯದ ಫಾರ್ಮ್‌ವೊಂದರಲ್ಲಿದ್ದ 22,808 ಕೋಳಿಗಳನ್ನು ಹತ್ಯೆ ಮಾಡಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

'25,896 ಮೊಟ್ಟೆ ಮತ್ತು 79 ಕ್ವಿಂಟಲ್ ಕೋಳಿ ಆಹಾರವನ್ನು ವೈಜ್ಞಾನಿಕ ವಿಧಾನದಲ್ಲಿ ನಾಶಪಡಿಸಲಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ. ಮಾರ್ಚ್ 19ರಿಂದ ಮಾರ್ಚ್ 24ರವರೆಗೆ 4,400 ಕೋಳಿಗಳು ಹಕ್ಕಿಜ್ವರದಿಂದ ಮೃತಪಟ್ಟಿವೆ.

## ಪಿಟಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ಯುವಕರ ಗುಂಪು ದೇವಸ್ಥಾನವೊಂದರ ಮೇಲೆ ಹತ್ತಿ, ಅದನ್ನು ಧ್ವಂಸ ಮಾಡುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಅಂಬೇಡ್ಕರ್‌ವಾದಿ ಬೌದ್ಧರ ಗುಂಪು ರಾಜಸ್ಥಾನದ ಅಲ್ವಾರ್‌ನಲ್ಲಿ ಹಿಂದೂ ದೇವಾಲಯವನ್ನು ಧ್ವಂಸ ಮಾಡಿದೆ. ದೇವಸ್ಥಾನದ ಮೇಲೆ ಬೌದ್ಧ ಧರ್ಮದ ಸಂಕೇತವಾದ ಚಕ್ರವನ್ನು ಹೊಂದಿರುವ ನೀಲಿ ಬಾವುಟವನ್ನು ನೆಡಲಾಗಿದೆ' ಎಂದು ವಿಡಿಯೊ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.




✓ ವಿಡಿಯೊದ ಕೀಫ್ರೇಮ್‌ಗಳನ್ನು ಇನ್‌ವಿಡ್ ಟೂಲ್ ಮತ್ತು ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, ಅದು 'ಟಿಂಕು ಗೌತಮ್ ಹರ್ಯಾನ್ವಿ' ಎನ್ನುವ ಯೂಟ್ಯೂಬ್ ವಾಹಿನಿಗೆ ಸಂಪರ್ಕ ಕಲ್ಪಿಸಿತು. ಅದರಲ್ಲಿ ಇಂಥದೇ ವಿಡಿಯೊ ಅನ್ನು ಅಪ್‌ಲೋಡ್ ಮಾಡಲಾಗಿದೆ. ನಿರ್ದಿಷ್ಟ ಪದದ ಮೂಲಕ ಹುಡುಕಾಟ ನಡೆಸಿದಾಗ, ವಿಡಿಯೊದ ಖಚಿತ ದಿನಾಂಕ ಲಭ್ಯವಾಗದಿದ್ದರೂ, ಅದು 2024ರ ಏ.18ರಿಂದ ಆನ್‌ಲೈನ್‌ನಲ್ಲಿ ಇರುವುದು ದೃಢಪಟ್ಟಿತು. ಇದೇ ವಿಡಿಯೊಗೆ ಸಂಬಂಧಿಸಿದಂತೆ ರಾಜಸ್ಥಾನದ ಪೊಲೀಸರು ಮಾರ್ಚ್ 23ರಂದು ಪ್ರಕಟಣೆ ನೀಡಿದ್ದಾರೆ. 'ಇದು ಎರಡು ವರ್ಷಗಳ ಹಿಂದಿನ ವಿಡಿಯೊ ಆಗಿದ್ದು, ವಿಡಿಯೊಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಮಾಡಲಾಗುತ್ತಿರುವ ಪ್ರತಿಪಾದನೆಗಳು ಸುಳ್ಳಾಗಿವೆ. ಈ ವಿಡಿಯೊ ಹಂಚಿಕೊಂಡು ಸಾಮಾಜಿಕ ಸಾಮರಸ್ಯ ಕದಡುವ ವದಂತಿ ಹರಡಿದರೆ ಅಂಥವರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅಲ್ವಾರ್ ಪೊಲೀಸರು ಕೂಡ ಪ್ರಕಟಣೆ ನೀಡಿದ್ದು, ಸುಳ್ಳು ಮಾಹಿತಿ ಹರಡಿದವರ ವಿರುದ್ಧ ಈಗಾಗಲೇ ಕ್ರಮ ಜರುಗಿಸಲಾಗಿದೆ ಎಂದಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

## ನುಡಿ ಬೆಳಗು

### ಪ್ರಾಮಾಣಿಕತೆಯೇ ದೊಡ್ಡ ಬಹುಮಾನ

ರೇಣುಕಾ ನಿಡಗುಂದಿ

ಒಮ್ಮೆ ಒಬ್ಬ ವ್ಯಕ್ತಿ ಹಣವನ್ನು ತೆಗೆಯಲು ಬ್ಯಾಂಕಿಗೆ ಹೋದನು. ಕ್ಯಾಷಿಯರ್ ಹಣವನ್ನು ನೀಡಿದ ತಕ್ಷಣ, ಗ್ರಾಹಕನು ಅದನ್ನು ಸುಮ್ಮನೆ ತನ್ನ ಚೀಲದಲ್ಲಿ ಇಟ್ಟುಕೊಂಡು ಅಲ್ಲಿಂದ ಹೊರಟನು. ಅವನು ಒಂದು ಲಕ್ಷದ ನಲವತ್ತು ಸಾವಿರ ರೂಪಾಯಿಗಳನ್ನು ಡ್ರಾ ಮಾಡಿದ್ದನು. ಆದರೆ, ಕ್ಯಾಷಿಯರ್ ತಪ್ಪಾಗಿ ಒಂದು ಲಕ್ಷದ ನಲವತ್ತು ಸಾವಿರದ ಬದಲಿಗೆ ಒಂದು ಲಕ್ಷದ ಅರವತ್ತು ಸಾವಿರ ರೂಪಾಯಿಗಳನ್ನು ನೀಡಿದ್ದಾನೆ ಎಂಬುದು ಅವನಿಗೆ ತಿಳಿದಿತ್ತು. ಆದರೆ, ತಾನು ಹಣವನ್ನು ಎಣಿಸಿಯೇ ಇಲ್ಲ ಮತ್ತು ಕ್ಯಾಷಿಯರ್ ಮೇಲೆ ತನಗೆ ಸಂಪೂರ್ಣ ನಂಬಿಕೆಯಿದೆ ಎಂಬಂತೆ ನಟಿಸುತ್ತಾ, ಅವನು ಸುಮ್ಮನೆ ಹಣವನ್ನು ಇಟ್ಟುಕೊಂಡನು.

ಆದರೆ, ಚೀಲದಲ್ಲಿ ಹಣ ಇಟ್ಟ ತಕ್ಷಣ ಆ ಹೆಚ್ಚುವರಿ 20,000 ರೂಪಾಯಿಗಳ ಬಗ್ಗೆ ಅವನ ಮನಸ್ಸಿನಲ್ಲಿ ತಳಮಳ ಶುರುವಾಯಿತು. 'ಹೆಚ್ಚುವರಿ ಹಣವನ್ನು ಹಿಂತಿರುಗಿಸು' ಎಂದು ಅವನ ಮನಸ್ಸು ಹೇಳಿತು. ಆದರೆ ಮರುಕ್ಷಣವೇ, 'ನಾನು ಯಾರಿಗಾದರೂ ತಪ್ಪಾಗಿ ಹೆಚ್ಚು ಹಣ ಕೊಟ್ಟಿದ್ದರೆ ಅವರೇನು ವಾಪಸ್ ಕೊಡುತ್ತಿದ್ದರೇ?' ಎಂದು ಯೋಚಿಸಿದನು.

ಹಣವನ್ನು ಹಿಂತಿರುಗಿಸಬೇಕೆಂದು ಮನಸ್ಸು ಪದೇ ಪದೇ ಹೇಳುತ್ತಿತ್ತು. ಆದರೆ, ಬುದ್ಧಿ ಮಾತ್ರ ಹಣವನ್ನು ಇಟ್ಟುಕೊಳ್ಳಲು ಒಂದಲ್ಲ ಒಂದು ನೆಪ ಅಥವಾ ಕಾರಣವನ್ನು ಹುಡುಕುತ್ತಿತ್ತು.

ಆದರೆ, ಮನುಷ್ಯನೊಳಗೆ ಬುದ್ಧಿ ಮಾತ್ರ ಇರುವುದಿಲ್ಲವಲ್ಲ. ಹೃದಯ ಮತ್ತು ಅಂತರಾತ್ಮ ಕೂಡ ಇರುತ್ತದೆ. 'ಇದೇನಾ ನಿನ್ನ ಪ್ರಾಮಾಣಿಕತೆ' ಎಂದು ಅಂತರಾತ್ಮ ಅವನನ್ನು ಚುಚ್ಚುತ್ತಿತ್ತು.

ಅವನ ಆತಂಕ ಹೆಚ್ಚಾಗುತ್ತಾ ನೆಮ್ಮದಿಯೇ ಇಲ್ಲವಾಯ್ತು. ಅವನು ಚೀಲದಿಂದ ಆ ಇಪ್ಪತ್ತು ಸಾವಿರ ರೂಪಾಯಿಗಳನ್ನು ತೆಗೆದು ಜೇಬಿಗೆ ಹಾಕಿಕೊಂಡು ಬ್ಯಾಂಕಿನ ಕಡೆಗೆ ನಡೆದನು.

ಈಗ ಅವನ ಆತಂಕ ಮತ್ತು ಒತ್ತಡ ಕಡಿಮೆಯಾಗತೊಡಗಿತು. ಅವನು ಹಗುರಾದ; ಆರೋಗ್ಯವಾಗಿರುವಂಥ ಅನುಭವ. ಯಾವುದೋ ಕಾಯಿಲೆಯಿಂದ ಮುಕ್ತಿ ಸಿಕ್ಕಂಥ ಅನುಭವವಾಯ್ತು. ಯಾವುದೋ ಯುದ್ಧವನ್ನು ಗೆದ್ದಂಥ ಸಂತೋಷ ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತು.

ಹಣವನ್ನು ಕಂಡು ಕ್ಯಾಷಿಯರ್ ನೆಮ್ಮದಿಯ ನಿಟ್ಟುಸಿರುಬಿಟ್ಟನು. ಅವನು ತನ್ನ ಜೇಬಿನಿಂದ ಒಂದು ಸಾವಿರ ರೂಪಾಯಿಯ ನೋಟನ್ನು ತೆಗೆದು ಗ್ರಾಹಕನಿಗೆ ನೀಡುತ್ತಾ, 'ಅಣ್ಣ, ನಿಮಗೆ ತುಂಬಾ ಧನ್ಯವಾದಗಳು. ಇವತ್ತು ನನ್ನ ಕಡೆಯಿಂದ ಮಕ್ಕಳಿಗೆ ಸಿಹಿ ತೆಗೆದುಕೊಂಡು ಹೋಗಿ, ದಯವಿಟ್ಟು ಬೇಡ ಅನ್ನಬೇಡಿ' ಎಂದನು.

'ಅಣ್ಣ, ನಾನು ನಿಮಗೆ ಧನ್ಯವಾದ ಹೇಳಬೇಕು ಮತ್ತು ಇವತ್ತು ಸಿಹಿಯನ್ನು ನಾನೇ ನಿಮ್ಮೆಲ್ಲರಿಗೂ ತಿನ್ನಿಸುತ್ತೇನೆ' ಎಂದು ಗ್ರಾಹಕ ಹೇಳಿದನು.

ಕ್ಯಾಷಿಯರ್ ಆಶ್ಚರ್ಯದಿಂದ ಕೇಳಿದನು: 'ನೀವು ಯಾವುದಕ್ಕಾಗಿ ಧನ್ಯವಾದ ಹೇಳುತ್ತಿದ್ದೀರಿ ಮತ್ತು ಯಾವ ಸಂತೋಷಕ್ಕಾಗಿ ಸಿಹಿ ಹಂಚುತ್ತೀರಿ?'

ಗ್ರಾಹಕ ಉತ್ತರಿಸಿದನು: 'ಈ ಇಪ್ಪತ್ತು ಸಾವಿರ ರೂಪಾಯಿಗಳು ನನಗೆ ಆತ್ಮಾವಲೋಕನ ಮಾಡಿಕೊಳ್ಳುವ ಅವಕಾಶ ನೀಡಿದ್ದಕ್ಕಾಗಿ ನಾನು ನಿಮಗೆ ಆಭಾರಿಯಾಗಿದ್ದೇನೆ. ನೀವು ಈ ತಪ್ಪು ಮಾಡದಿದ್ದರೆ ನಾನು ಈ ದ್ವಂದ್ವಕ್ಕೆ ಸಿಲುಕುತ್ತಿರಲಿಲ್ಲ ಮತ್ತು ನನ್ನ ಲೋಭವನ್ನು ಜಯಿಸಲು ಸಾಧ್ಯವಾಗುತ್ತಿರಲಿಲ್ಲ. ಇದು ತುಂಬಾ ಕಷ್ಟದ ಕೆಲಸವಾಗಿತ್ತು. ಗಂಟೆಗಳ ಕಾಲ ನಡೆದ ಮಾನಸಿಕ ಹೋರಾಟದ ನಂತರ ನಾನು ಗೆದ್ದಿದ್ದೇನೆ. ಈ ಅಪರೂಪದ ಅವಕಾಶಕ್ಕಾಗಿ ನಿಮಗೆ ಧನ್ಯವಾದಗಳು'.❖

## ಗುಂಡಣ್ಣ

## ಪದಬಂಧ 6355

ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಈತ ಹೆದರುವ ವ್ಯಕ್ತಿ (3)
2.ತುಸುವೇ ಬೀರಿದ ಮಂದಹಾಸ (4)
4.ಈತ ಅಕ್ಕಸಾಲಿಗ (3)
5.ಆಧ್ಯಾತ್ಮಿಕ ಜ್ಞಾನದ ಅರಿವು ಸಾರದಲ್ಲಿದೆ (4)
6.ದಂಪತಿಗಳು ಹಬ್ಬಿಸಿದ ಗಾಳಿಸುದ್ದಿ (3)
7.ಮತ ಹಾಕುವಾಗ ಆವರಿಸಿದ ಕತ್ತಲು (2)
9.ಆನೆಯ ದಾಡೆ (3)
11.ತಿಕ್ಕಲ ಹಿಡಿದಿರುವ ಎಳ್ಳು (2)
13.ಹುರಿಯುವ ಹೆಂಚು (3)
14.ಮಟ್ಟಸವಾದ ಪ್ರದೇಶ (4)
15.ಗಣಪತಿಯ ವಾಹನ (3)
16.ಸುಗಂಧ ಲೇಪನವನ್ನು ಹೀಗೆನ್ನಿ (4)
17.ಒದಗಿಸುವಿಕೆಗೊಂದು ಪರ್ಯಾಯ ಪದ (3)

**ಮೇಲಿಂದ ಕೆಳಕ್ಕೆ**

1.ಹಿಂಸೆ ಮಾಡಬಾರದೆಂಬ ವ್ರತ (5)
2.ನಗರದಲ್ಲಿರುವ ಮನುಜ (2)
3.ಅದೇ ತಾನೆ ಮದುವೆಯಾದ ಜೋಡಿ (5)
4.ಒಬ್ಬೊಬ್ಬರಿಗೆ ಸಂಬಂಧಿಸಿದ್ದು (4)
8.ಈತ ಲಗ್ನವಾಗುತ್ತಿರುವವ (5)
10.ಗಂಡೂ ಅಲ್ಲ ಹೆಣ್ಣೂ ಅಲ್ಲದ ವ್ಯಕ್ತಿ (4)
12.ರಾಮನ ಮಗನಿರುವುದಕ್ಕೇ ಈ ಹುರುಪು! (5)
15.ಈತ ಮಾತು ಬಾರದವನು (2)

| | | | | | | | | |
|---|---|---|---|---|---|---|---|---|
| 1 | | | ■ | ■ | 2 | | 3 | |
| | ■ | ■ | 4 | | | ■ | | ■ |
| 5 | | | | ■ | ■ | 6 | | |
| | ■ | ■ | | ■ | ■ | ■ | | ■ |
| 7 | 8 | ■ | 9 | | 10 | ■ | 11 | 12 |
| ■ | | ■ | ■ | ■ | | ■ | ■ | |
| 13 | | | ■ | ■ | 14 | | | |
| ■ | | ■ | 15 | | | ■ | ■ | |
| 16 | | | | ■ | ■ | 17 | | |

### 6354ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಆರಂಬ 3.ಗದಗ 5.ರತ್ನಾಕರ 6.ಸಾಕ್ಷರ 10.ವರ್ತಮಾನಪತ್ರಿಕೆ 13.ಪ್ರಮಾದ 15.ಸ್ವಯಾರ್ಜಿತ 17.ಕಮ್ಮಾರ 18.ಟಗರು

**ಮೇಲಿಂದ ಕೆಳಕ್ಕೆ:** 1.ಆಪದ್ಬಂದು 2.ಬರ 3.ಗರ 4.ಗವಾಕ್ಷ 6.ಸಾರ್ವತ್ರಿಕ 7.ರಟ್ಟು 8.ಆರ್ತನಾದ 9.ಮಾನಸಿ 11.ವಿಪ್ರ 12.ಮಂಗಳೂರು 14.ಮಾಲೀಕ 15.ಸ್ವರ 16.ತಟ

## ಸುಡೊಕು 6739

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| | 7 | | | 1 | | | 6 | |
| | | 9 | | 5 | | 7 | | 3 |
| 4 | | | | | 3 | | 2 | |
| | 4 | 2 | | 9 | | | 3 | |
| 3 | | | 8 | | 1 | | | 2 |
| 1 | 9 | | | 2 | | | | 7 |
| | 8 | | | | | | 7 | |
| 2 | | 4 | 9 | | 7 | 1 | | 6 |
| | 5 | | | 3 | | | 8 | |

### 6738 ಸುಡೊಕು

| | | | | | | | | |
|---|---|---|---|---|---|---|---|---|
| 8 | 7 | 2 | 3 | 4 | 6 | 1 | 9 | 5 |
| 5 | 1 | 4 | 8 | 2 | 9 | 7 | 6 | 3 |
| 9 | 3 | 6 | 5 | 1 | 7 | 2 | 8 | 4 |
| 3 | 8 | 9 | 1 | 6 | 5 | 4 | 2 | 7 |
| 4 | 2 | 1 | 9 | 7 | 3 | 8 | 5 | 6 |
| 6 | 5 | 7 | 2 | 8 | 4 | 3 | 1 | 9 |
| 7 | 4 | 8 | 6 | 9 | 2 | 5 | 3 | 1 |
| 1 | 9 | 5 | 7 | 3 | 8 | 6 | 4 | 2 |
| 2 | 6 | 3 | 4 | 5 | 1 | 9 | 7 | 8 |

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

27 ಮಾರ್ಚ್ 2026 ಶುಕ್ರವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ನವಮಿ ಗಂ. 10-07 ನಕ್ಷತ್ರ: ಪುನರ್ವಸು ಗಂ. 15-24 ಯೋಗ: ಅತಿಗಂಡ ಗಂ. 22-10 ಕರಣ: ಕೌಲವ ಗಂ 10-07 ಮೀನ ಮಾಸದ 13 ನೇ ದಿನ. ಮಳೆ ನಕ್ಷತ್ರ : ಉತ್ತರಾಭಾದ್ರ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00 , ಸೂರ್ಯೋದಯ : 06-33 ಸೂರ್ಯಾಸ್ತ : 06-38, ಮುಸ್ಲಿಂ ದಿನಾಂಕ : 7 ಶವ್ವಾಲ್, ದಿನ ವಿಶೇಷ : ರಾಮ ನವಮಿ, ಅದೃಷ್ಟ ಸಂಖ್ಯೆ : 7, 6

**ಮೇಷ:** ಅಚ್ಚರಿಯೆನಿಸುವ ಸುದ್ದಿಯೊಂದು ಅನ್ಯರ ಮೂಲಕ ತಿಳಿಯಲಿದೆ. ಯಾರಲ್ಲೂ ಹೇಳಿಕೊಳ್ಳದೇ ಇರುವುದು ಉತ್ತಮ. ರಾಜಕೀಯದಿಂದ ವೈಯಕ್ತಿಕ ಅನುಕೂಲಗಳಾಗಲಿವೆ.

**ವೃಷಭ:** ಮಾದರಿಯಾಗುವಂತೆ ಜೀವನ ನಡೆಸಬೇಕೆಂಬುವ ಆಸೆಗೆ ಪುಷ್ಟಿ ಕೊಡುವ ವಾತಾವರಣ ಸಿಗಲಿದೆ. ಮದುವೆಗೆ ಇರುವ ಅಡಚಣೆಗಳನ್ನು, ಸಮಸ್ಯೆ ಬಗೆಹರಿಸಿಕೊಳ್ಳುವ ಬಗ್ಗೆ ಗಮನಹರಿಸಿ.

**ಮಿಥುನ:** ಸಮಸ್ಯೆಗಳಿಗೆ ಪೊಲೀಸರಿಂದ ಪರಿಹಾರ ತೆಗೆದುಕೊಳ್ಳಿ. ಜೀವನದಲ್ಲಿ ಸಾಂಸಾರಿಕವಾಗಿ ನೆಲೆ ಕಂಡ ಸಂತೃಪ್ತಿ ಭಾವ ನಿಮ್ಮಲ್ಲಿ ಮೂಡಲಿದೆ. ಇರುವ ಖುಷಿಯನ್ನು ಅನುಭವಿಸಿ.

**ಕರ್ಕಾಟಕ:** ಮಗಳ ಮದುವೆಯ ವಿಚಾರದಲ್ಲಿ ಸಂಬಂಧಗಳು ಹುಡುಕಿಕೊಂಡು ಬಂದರೂ ಈ ದಿನವೇ ಒಪ್ಪಿಗೆ ತಿಳಿಸದಿರಿ. ವೈದ್ಯರ ಸಲಹೆಯಂತೆಯೇ ನಡೆದರೆ ಮಕ್ಕಳ ಆರೋಗ್ಯವು ಉತ್ತಮ.

**ಸಿಂಹ:** ಭಾವನೆಗಳಿಗೆ ಬೆಲೆ ಕೊಡುವ ಸಂಗಾತಿ ಸಿಕ್ಕಿರುವುದರಿಂದ ಸಂತೋಷ ಇಮ್ಮಡಿಗೊಳ್ಳುತ್ತದೆ. ಕೋರ್ಟು-ಕಚೇರಿಗಳಲ್ಲಿ ಯಶಸ್ಸು ಪಡೆಯಲಿದ್ದೀರಿ. ಖರ್ಚು ವೆಚ್ಚಗಳಲ್ಲಿ ಮಿತ ವ್ಯಯ ಸಾಧಿಸಲು ಪ್ರಯತ್ನಿಸಿ.

**ಕನ್ಯಾ:** ಇನ್ನೊಬ್ಬರನ್ನು ಹೀಯಾಳಿಸುವ ಬುದ್ಧಿಗೆ ಪೂರ್ಣವಿರಾಮ ಹೇಳಿ. ಆತ್ಮವಿಶ್ವಾಸ ಹಾಗೂ ಧನಾತ್ಮಕ ಮನೋಭಾವ ಇದ್ದರೆ ಅದುವೇ ಗೆಲುವಿಗೆ ಕಾರಣವಾಗಲಿದೆ.

**ತುಲಾ:** ಕೈತಪ್ಪಿ ಹೋಗಿದ್ದ ಕೆಲವು ಕೆಲಸಗಳು ಹಿರಿಯರೊಬ್ಬರ ಸಹಾಯದಿಂದ ಪುನಃ ದೊರೆಯಲಿದೆ. ನ್ಯಾಯಾಂಗ ಇಲಾಖೆಯಲ್ಲಿ ಇರುವವರಿಗೆ ಬಡ್ತಿ ಅಥವಾ ವರ್ಗಾವಣೆಯ ಸಾಧ್ಯತೆಗಳಿದೆ. ನೂತನ ವಾಹನ ಖರೀದಿಯ ಯೋಗವಿದೆ.

**ವೃಶ್ಚಿಕ:** ಅವಸರ ಮತ್ತು ಉದ್ವೇಗ ಇವೆರಡೂ ತಲೆ ತಗ್ಗಿಸುವಂತೆ ಮಾಡುತ್ತದೆ. ವ್ಯವಹಾರದ ವಿಸ್ತರಣೆಗೆ ಸ್ನೇಹಿತರಿಂದ ಉತ್ತಮ ಸಲಹೆ ಸಹಾಯವಿರುವುದು. ಕಲಾವಿದರ ಅಭ್ಯಾಸದ ಫಲದಿಂದ ಅವಕಾಶಗಳು ಲಭ್ಯ.

**ಧನು:** ಸಂಸಾರದಲ್ಲಿ ಅನುಮಾನ ಪಡುವುದು ಅಥವಾ ಹಲವು ವಿಚಾರವನ್ನು ಪತ್ನಿಯಿಂದ ಮುಚ್ಚಿಡುವ ಕೆಲಸವನ್ನು ಮಾಡುವುದು ಸರಿಯಲ್ಲ. ಖರ್ಚು ವೆಚ್ಚಕ್ಕೆ ಸಂಬಂಧಿಸಿದಂತೆ ಯೋಚಿಸಿ ಹೆಜ್ಜೆ ಇಡುವುದು ಸೂಕ್ತ.

**ಮಕರ:** ನೂತನ ಪ್ರಾರಂಭದ ಬಗ್ಗೆ ತಿಳಿದವರಲ್ಲಿ ಸಲಹೆ ಪಡೆಯುವುದು ಸನ್ಮಾರ್ಗವನ್ನು ತೋರಿಸಿಕೊಡುತ್ತದೆ. ಒಪ್ಪಂದಗಳು ಹಾಗೂ ಹಣದ ಹೂಡಿಕೆ ಮಾಡದಿರಿ.

**ಕುಂಭ:** ಬಿಡುವಿಲ್ಲದ ಕೆಲಸದಿಂದ ಬಳಲಿರುವ ನೀವು ವಿಶ್ರಾಂತಿಗಾಗಿ ಸ್ವಲ್ಪ ಸಮಯ ಮೀಸಲಿಡಿ. ಹೊಸ ಮನೆಯ ಕೆಲಸಗಳು ಮುಕ್ತಾಯ ಹಂತ ತಲುಪುವುದರಿಂದ ಮನಸ್ಸಿಗೆ ನೆಮ್ಮದಿ ಇರಲಿದೆ.

**ಮೀನ:** ವ್ಯವಹಾರಗಳನ್ನು ನೇರ ನಡೆ ನುಡಿಯಿರುವವರೊಂದಿಗೆ ಮಾತ್ರ ಮುಂದುವರಿಸಿ. ನಿಮ್ಮ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕವಾಗಿ ಎಲ್ಲಾ ರೀತಿಯಲ್ಲಿ ಅನುಕೂಲ ಉಂಟಾಗುವುದು.

# ಏ.1ರಿಂದ ಟೋಲ್ ದರ ದುಬಾರಿ

## ಕಾರುಗಳಿಗೆ ₹5ರಿಂದ ₹10, ವಾಣಿಜ್ಯ ವಾಹನಗಳಿಗೆ ₹15ರಿಂದ ₹45ರವರೆಗೆ ಹೆಚ್ಚಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ 62 ಟೋಲ್ ಪ್ಲಾಜಾಗಳಲ್ಲಿ ಏ.1ರಿಂದ ಟೋಲ್ ದರ ಶೇ 3ರಿಂದ 5ರಷ್ಟು ಏರಿಕೆಯಾಗಲಿದೆ.

ಸಗಟು ಬೆಲೆ ಸೂಚ್ಯಂಕಕ್ಕೆ (ಹಣದುಬ್ಬರಕ್ಕೆ) ಅನುಗುಣವಾಗಿ ಶುಲ್ಕ ಹೆಚ್ಚಳ ಮಾಡಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಕಾರುಗಳಿಗೆ ₹5ರಿಂದ ₹10 ಹೆಚ್ಚಳವಾಗಲಿದೆ. ವಾಣಿಜ್ಯ ಬಳಕೆಯ ವಾಹನಗಳಿಗೆ ₹15ರಿಂದ ₹40 ಅಧಿಕ ಪಾವತಿಸಬೇಕಾಗುತ್ತದೆ. ಹೆಚ್ಚಳವನ್ನು ಪೂರ್ಣಾಂಕ ಗೊಳಿಸಲಾಗಿದೆ. ಉದಾಹರಣೆಗೆ ಸಗಟು ಬೆಲೆ ಸೂಚ್ಯಂಕದ ಪ್ರಕಾರ ₹ 2.5 ಅಥವಾ ಅದಕ್ಕಿಂತ ಹೆಚ್ಚಿಗೆ ಇದ್ದರೆ ಅದು ₹5 ಪೂರ್ಣಾಂಕ ಆಗುತ್ತದೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿರುವ ಕಣಿಮಿಣಿಕೆ ಮತ್ತು ಶೇಷಗಿರಿಹಳ್ಳಿ, ಬೆಂಗಳೂರು–ಹೈದರಾಬಾದ್ ಹೆದ್ದಾರಿಯಲ್ಲಿರುವ ಬಾಗೇಪಲ್ಲಿ, ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಸಾದಹಳ್ಳಿ, ಬೆಂಗಳೂರು–ತಿರುಪತಿ ಹೆದ್ದಾರಿಯಲ್ಲಿ ನಂಗಲಿ, ಬೆಂಗಳೂರು ಸ್ಯಾಟಲೈಟ್ ಟೌನ್ ರಿಂಗ್ ರಸ್ತೆಯಲ್ಲಿರುವ (ಎಸ್‌ಟಿಆರ್‌ಆರ್) ಹುಲಿಕುಂಟೆ, ನಲ್ಲೂರು ದೇವನಹಳ್ಳಿ ಟೋಲ್ ಪ್ಲಾಜಾಗಳು ಸೇರಿವೆ.

ಬೆಂಗಳೂರು –ಮೈಸೂರು ಹೆದ್ದಾರಿಯಲ್ಲಿ ಕಾರು ಏಕಮುಖವಾಗಿ ಪ್ರಯಾಣಿಸುವಾಗ ಎರಡು ಪ್ಲಾಜಾಗಳಲ್ಲಿ ₹345 ಇದ್ದಿದ್ದು, ₹355 ಆಗಲಿದೆ. ಮಿನಿ ಬಸ್‌ಗಳು ಮತ್ತು ಲಘು ವಾಣಿಜ್ಯ ವಾಹನಗಳು ₹555 ಬದಲು ₹565 ಪಾವತಿ ಮಾಡಬೇಕಾಗುತ್ತದೆ. ಸಾದಹಳ್ಳಿ, ಬಾಗೇಪಲ್ಲಿ, ಗದ್ದೂರು ಮುಂತಾದ ಟೋಲ್‌ಪ್ಲಾಜಾಗಳಲ್ಲಿ ಕಾರುಗಳಿಗೆ ಹಳೇ ದರವೇ ಇರಲಿದೆ. ಆದರೆ, ಉಳಿದ ವಾಹನಗಳಿಗೆ ₹ 15ರಿಂದ ₹45ರವರೆಗೆ ಏರಿಕೆಯಾಗಲಿದೆ.

ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮ–2008ರ ನಿಬಂಧನೆಗಳಿಗೆ ಅನುಗುಣವಾಗಿ ಶುಲ್ಕ ಪರಿಷ್ಕರಣೆ ಮಾಡಲಾಗಿದೆ. ಈ ಪ್ರಕ್ರಿಯೆ ಪ್ರತಿ ಹಣಕಾಸು ವರ್ಷದ ಆರಂಭದಲ್ಲಿ ನಡೆಯುತ್ತದೆ. 2008ಕ್ಕಿಂತ ಮೊದಲು ಆರಂಭವಾಗಿರುವ ಬಿಲ್ಡ್ ಆಪರೇಟ್ ಟ್ರಾನ್ಸ್‌ಫರ್ (ಬಿಒಟಿ) ಟೋಲ್ ಪ್ಲಾಜಾಗಳಿಗೆ 1997ರ ಶುಲ್ಕ ನಿಯಮಗಳು ಅನ್ವಯವಾಗುತ್ತದೆ ಎಂದು ಎನ್‌ಎಚ್‌ಎಐ ಯೋಜನಾ ನಿರ್ದೇಶಕ ಕೆ.ಬಿ. ಜಯಕುಮಾರ್ ತಿಳಿಸಿದ್ದಾರೆ.

ರಾಜ್ಯದಲ್ಲಿರುವ 10 ಬಿಒಟಿ ಟೋಲ್ ಪ್ಲಾಜಾಗಳಲ್ಲಿ ಮಾತ್ರ ಸೆಪ್ಟೆಂಬರ್‌ನಲ್ಲಿ ದರ ಹೆಚ್ಚಳವಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

### ಪಾಸ್ ದರ ₹75 ಹೆಚ್ಚಳ

ಎನ್‌ಎಚ್‌ಎಐ ತನ್ನ ವಾರ್ಷಿಕ ಪಾಸ್ ದರವನ್ನು 2026–27ನೇ ಸಾಲಿಗೆ ₹ 75 ಹೆಚ್ಚಳ ಮಾಡಿ ಅಧಿಸೂಚನೆ ಹೊರಡಿಸಿದೆ. ಇದು ಕೂಡ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ. ವಾರ್ಷಿಕ ಪಾಸ್ ದರವು ₹ 3,000 ಇದ್ದಿದ್ದು, ₹ 3075 ಆಗಲಿದೆ.

ರಾಷ್ಟ್ರೀಯ ಹೆದ್ದಾರಿಗಳನ್ನು ನಿಯಮಿತವಾಗಿ ಬಳಸುವ ಪ್ರಯಾಣಿಕರಿಗಾಗಿ ಪಾಸ್ ಸೌಲಭ್ಯವನ್ನು 2025ರ ಆಗಸ್ಟ್ 15ರಂದು ಆರಂಭಿಸಲಾಗಿತ್ತು. ಇದರ ಅವಧಿಯು ಒಂದು ವರ್ಷ ಇಲ್ಲವೇ 200 ಟೋಲ್ ಪ್ಲಾಜಾ ಕ್ರಾಸಿಂಗ್‌ಗಳಿಗೆ ಅನ್ವಯವಾಗುತ್ತದೆ. ಒಂದು ಬಾರಿ ಪಾಸ್ ಮೊತ್ತ ಪಾವತಿಸಿದರೆ ಪದೇ ಪದೇ ಫಾಸ್ಟ್ಯಾಗ್ ರೀಚಾರ್ಜ್ ಮಾಡುವುದು ತಪ್ಪುತ್ತದೆ. ವಾಣಿಜ್ಯೇತರ ವಾಹನಗಳಿಗೆ ಮಾತ್ರ ಈ ಸೌಲಭ್ಯವನ್ನು ಎನ್‌ಎಚ್‌ಎಐ ಒದಗಿಸಿದೆ.

**ನಾಲ್ಕು ಚಕ್ರ ವಾಹನಗಳಿಗೆ ಟೋಲ್**

| ಟೋಲ್ ಪ್ಲಾಜಾ | ಈಗಿನ ದರ | ಪರಿಷ್ಕೃತ ದರ |
|---|---|---|
| ಕಣಿಮಿಣಿಕೆ | ₹170 | ₹175 |
| ಶೇಷಗಿರಿಹಳ್ಳಿ | ₹175 | ₹180 |
| ನಲ್ಲೂರು | ₹80 | ₹85 |
| ಹುಲಿಕುಂಟೆ | ₹105 | ₹110 |

**ಹಗಲು ದರೋಡೆ:** 'ಟೋಲ್ ದರ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುವ ಬದಲು ಹೆಚ್ಚಳವಾಗುತ್ತಿದೆ. ಉದಾಹರಣೆಗೆ ಒಂದು ರಸ್ತೆಯಲ್ಲಿ ದಿನಕ್ಕೆ 10 ಸಾವಿರ ವಾಹನಗಳು ಈ ವರ್ಷ ಸಂಚರಿಸುತ್ತಿದ್ದರೆ, ಮುಂದಿನ ವರ್ಷ ವಾಹನಗಳ ಸಂಖ್ಯೆ 12 ಸಾವಿರಕ್ಕೆ ಏರಿಕೆಯಾಗಲಿದೆ. ರಸ್ತೆ ನಿರ್ಮಿಸುವಾಗಲೇ ಎಷ್ಟು ವಾಹನಗಳು ಹೋಗಬಹುದು ಎಂಬುದನ್ನು ಸರ್ವೆ ಮಾಡಿರುತ್ತಾರೆ. ರಸ್ತೆಗೆ ಒಟ್ಟು ಎಷ್ಟು ವೆಚ್ಚವಾಗಿದೆ ಎಂಬ ಲೆಕ್ಕ ಇರುತ್ತದೆ. ಟೋಲ್ ಮೂಲಕ ಎಷ್ಟು ವರ್ಷದಲ್ಲಿ ಆ ಹಣ ವಾಪಸ್ ಬರುತ್ತದೆ ಎಂಬುದೂ ಗೊತ್ತಿರುತ್ತದೆ. ಆದರೂ ಹಗಲುದರೋಡೆ ಮುಂದುವರಿಸುತ್ತಾರೆ' ಎಂದು ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ ಶರ್ಮ ಅಸಮಾಧಾನ ವ್ಯಕ್ತಪಡಿಸಿದರು.

'ವಾಣಿಜ್ಯ ವಾಹನಗಳ ಮಾಲೀಕರು ರಸ್ತೆ ತೆರಿಗೆ ಪಾವತಿಸುತ್ತಾರೆ. ಆ ನಂತರ ಡೀಸೆಲ್‌ನಲ್ಲಿ ರಸ್ತೆ ನಿರ್ವಹಣೆಗೆ ಸೆಸ್ ಕಟ್ಟುತ್ತಾರೆ. ಜಿಎಸ್‌ಟಿ ಪಾವತಿಸುತ್ತಾರೆ. ಮತ್ತೆ ಈ ರೀತಿಯ ಅವೈಜ್ಞಾನಿಕ ಟೋಲ್ ಯಾಕೆ? ರಸ್ತೆ ನಿರ್ಮಿಸಿದ ಮೇಲೆ ನಿರ್ವಹಣಾ ವೆಚ್ಚ ಬಿಟ್ಟು ಬೇರೆ ಯಾವುದೇ ಖರ್ಚು ಇಲ್ಲದೇ ಇರುವಾಗ ಟೋಲ್ ಏರಿಕೆ ಮಾಡುತ್ತಿರುವುದು ಕೇಂದ್ರ ಸರ್ಕಾರದ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ದರೋಡೆ ಅಲ್ಲದೇ ಮತ್ತೇನು' ಎಂದು ಪ್ರಶ್ನಿಸಿದರು.

'ಪ್ರತಿವರ್ಷ ಟೋಲ್ ಜಾಸ್ತಿಯಾಗುತ್ತಿದೆ. ನಾವು ಅನಿವಾರ್ಯವಾಗಿ ಪ್ರಯಾಣಿಕರಿಂದ ವಸೂಲಿ ಮಾಡುತ್ತೇವೆ. ಅವರ ಮೇಲೆ ಹೊರೆ ಬೀಳುತ್ತದೆ' ಎಂದು ಖಾಸಗಿ ಬಸ್ ಮಾಲೀಕರೊಬ್ಬರು ತಿಳಿಸಿದರು.

## 'ರಾಜ್ಯಪಾಲರ ಸಲಹೆ ಪಡೆಯುವೆ'

ಪ್ರಜಾವಾಣಿ ವಾರ್ತೆ

**ಮೈಸೂರು:** 'ಉನ್ನತ ಶಿಕ್ಷಣ ಇಲಾಖೆಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿರುವುದರ ಬಗ್ಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರ ಸಲಹೆ ಪಡೆದು, ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಹೇಳಿದರು.

ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ರಾಜ್ಯ ಸರ್ಕಾರದ ರದ್ದು ಆದೇಶ ಧಿಕ್ಕರಿಸಿ ನಡೆಯುತ್ತಿರುವ 'ಏಕಾತ್ಮ ಮಾನವ ದರ್ಶನ ಸಮ್ಮೇಳನ'ದಲ್ಲಿ ಗುರುವಾರ ಪಾಲ್ಗೊಂಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ರಾಜ್ಯಪಾಲರು ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿದ್ದಾರೆ. ಅವರ ಗಮನಕ್ಕೆ ತರುವುದೂ ಮುಖ್ಯ. ಬ್ಯಾಂಕ್ ಖಾತೆಗಳು ಸ್ಥಗಿತಗೊಂಡಿದ್ದರಿಂದ ದೈನಂದಿನ ಆಡಳಿತ ನಡೆಸುವುದು ಕಷ್ಟವಾಗುತ್ತಿದೆ' ಎಂದರು.

**ಸಮ್ಮೇಳನ ಸುಸೂತ್ರ:** ರಾಜ್ಯ ಸರ್ಕಾರದ ರದ್ದು ಆದೇಶದ ನಡುವೆಯೂ ಎರಡನೇ ದಿನವೂ ಸಮ್ಮೇಳನವು ನಿರಾತಂಕವಾಗಿ ನಡೆಯಿತು. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮೊದಲು ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳೊಂದಿಗೆ ಸಭೆ ನಡೆಸಿದರು. ರಾಷ್ಟ್ರೀಯ ಶಿಕ್ಷಣ ನೀತಿ–2020 ಅನ್ನು ಸಮರ್ಥವಾಗಿ ಅನುಷ್ಠಾನಗೊಳಿಸಬೇಕೆಂಬ ಸೂಚನೆಯನ್ನು ನೀಡಿದರು.



ಮೇಲುಕೋಟೆಯಲ್ಲಿ ಗುರುವಾರ ಚೆಲುವನಾರಾಯಣ ಸ್ವಾಮಿಯ ಶೇಷವಾಹನೋತ್ಸವ ಸಂಭ್ರಮದಿಂದ ನಡೆಯಿತು

## ಸಂಭ್ರಮದ ಶೇಷವಾಹನೋತ್ಸವ

ಪ್ರಜಾವಾಣಿ ವಾರ್ತೆ

**ಮೇಲುಕೋಟೆ:** ವೈರಮುಡಿ ಜಾತ್ರಾ ಮಹೋತ್ಸವ ಪ್ರಯುಕ್ತ ಚೆಲುವನಾರಾಯಣ ಸ್ವಾಮಿ ಶೇಷ ವಾಹನೋತ್ಸವ ಹಾಗೂ ರಾಮಾನುಜಾಚಾರ್ಯರಿಗೆ ಮಹಾಭಿಷೇಕ ಗುರುವಾರ ವೈಭವದಿಂದ ನೆರವೇರಿತು.

ಎರಡನೇ ತಿರುನಾಳ್ ಅಂಗವಾಗಿ ಬೆಳಿಗ್ಗೆ 10ಕ್ಕೆ ರಾಮಾನುಜಾಚಾರ್ಯರ ಮೂರ್ತಿಗೆ ಅಭಿಷೇಕ ನಡೆಯಿತು. ಆಂಧ್ರಪ್ರದೇಶ, ತಮಿಳುನಾಡು, ಒಡಿಶಾ ರಾಜ್ಯದಿಂದಲೂ ಭಕ್ತರು ಬಂದಿದ್ದರು.

ಶೇಷವಾಹನೋತ್ಸವವು ರಾತ್ರಿ ಇಲ್ಲಿನ ರಾಜಬೀದಿಯಲ್ಲಿ ವೈಭವದಿಂದ ನಡೆಯಿತು. ಬುಧವಾರ ರಾತ್ರಿ ಹಂಸವಾಹನೋತ್ಸವ ಕೂಡ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆದಿತ್ತು.

ಚೆಲುವನಾರಾಯಣ ಸ್ವಾಮಿ ದೇವಾಲಯ ಹಾಗೂ ಭಕ್ತರು ಸೇರುವ ರಾಜಬೀದಿ, ಪಂಚ ಕಲ್ಯಾಣಿ, ಯೋಗಾನರಸಿಂಹಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಸ್ವಚ್ಛತೆ ಹಾಗೂ ಭಕ್ತರ ರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ ಸೂಚನೆ ನೀಡಿದರು.

'ಪಂಚಕಲ್ಯಾಣಿಯ ಒಳಭಾಗದ ಮೆಟ್ಟಿಲಲ್ಲಿ ಸಂಪ್ರದಾಯದಂತೆ ಕಲ್ಲಿನ ಕಂಬಗಳನ್ನು ನಿಲ್ಲಿಸಿ ದೀಪ ಹಚ್ಚಬೇಕು' ಎಂದು ಪ್ರಾಚ್ಯವಸ್ತು ಇಲಾಖೆ ಅಧಿಕಾರಿಗೆ ಸೂಚಿಸಿದರು.

ಮಾರ್ಚ್ 27ರಂದು ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 9ರವರೆಗೆ ನಾಗವಲ್ಲಿ ಮಹೋತ್ಸವ, ಶ್ರೀರಾಮನವಮಿ, ನರಾಂಧೋಳಿ ಕಾರೋಹಣ, ಚಂದ್ರಮಂಡಲ ವಾಹನೋತ್ಸವ, ವಿಶೇಷ ಪಡಿಯೇತ್ತ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ವೈರಮುಡಿ ಕಿರೀಟ ಧಾರಣೆ ಮಹೋತ್ಸವ ಮಾರ್ಚ್ 28ರಂದು ನಡೆಯಲಿದೆ. ಮೇಲುಕೋಟೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಭಕ್ತರು ಸೇರುವ ನಿರೀಕ್ಷೆ ಇದೆ.

## ಗೋಪಾಲಕೃಷ್ಣ ಶಾಸ್ತ್ರಿ ಸೇರಿ 12 ಮಂದಿಗೆ 'ಹವ್ಯಕ ವಿಶೇಷ ಪ್ರಶಸ್ತಿ'

ಗೋಪಾಲಕೃಷ್ಣ

ಎಸ್. ಶಂಭು ಭಟ್



ನೀರ್ನಳ್ಳಿ ಗಣಪತಿ



ವೈ.ವಿ. ಕೃಷ್ಣಮೂರ್ತಿ

ಉಮೇಶ

**ಬೆಂಗಳೂರು:** ಶ್ರೀ ಅಖಿಲ ಹವ್ಯಕ ಮಹಾಸಭಾವು 2025–26ನೇ ಸಾಲಿನ 'ಹವ್ಯಕ ವಿಶೇಷ ಪ್ರಶಸ್ತಿ'ಗಳನ್ನು ಗುರುವಾರ ಪ್ರಕಟಿಸಿದ್ದು, 'ಹವ್ಯಕ ವಿಭೂಷಣ' ಪ್ರಶಸ್ತಿಗೆ ತಾಳಮದ್ದಳೆ ಅರ್ಥಧಾರಿ ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ ಹಾಗೂ ಶಿಕ್ಷಣ ತಜ್ಞ ಎಸ್. ಶಂಭು ಭಟ್ ಕಡತೋಕ ಆಯ್ಕೆಯಾಗಿದ್ದಾರೆ.

'ಹವ್ಯಕ ಭೂಷಣ' ಪ್ರಶಸ್ತಿಗೆ ಚಿತ್ರ ಕಲಾವಿದ ನೀರ್ನಳ್ಳಿ ಗಣಪತಿ, ಪಶು ತಜ್ಞ ವೈ.ವಿ. ಕೃಷ್ಣಮೂರ್ತಿ, ಉದ್ಯಮಿ ಉಮೇಶ ಬಂದಗದ್ದೆ ಭಾಜನರಾಗಿದ್ದಾರೆ. 'ಹವ್ಯಕ ಶ್ರೀ' ಪ್ರಶಸ್ತಿಗೆ ಕಸೂತಿ ಉದ್ಯಮಿ ಪೂರ್ಣಿಮಾ ಕೆ. ಭಟ್, ಯಜುರ್ವೇದ ಘನಪಾಠಿ ಸುಚೇತನ ಭಟ್, ಸಮಾಜ ಸೇವಕ ಆನಂದ ಹೆಗಡೆ ಶೀಗೇಹಳ್ಳಿ, ಕ್ರಿಕೆಟ್ ಆಟಗಾರ್ತಿ ಪ್ರತ್ಯೂಷ ಕುಮಾರ್ ಆಯ್ಕೆಯಾಗಿದ್ದಾರೆ. 'ಹವ್ಯಕ ಸೇವಾಶ್ರೀ' ಪ್ರಶಸ್ತಿಗೆ ಬಿ.ವಿ. ನರಹರಿ ರಾವ್, ಬೋನಂತಾಯ ಶಿವಶಂಕರ ಭಟ್ ಹಾಗೂ ಕೃಷ್ಣಮೂರ್ತಿ ಹೆಗಡೆ ತ್ಯಾಗಲಿ ಭಾಜನರಾಗಿದ್ದಾರೆ. ಇದೇ 29ರಂದು ಮಲ್ಲೇಶ್ವರದ ಹವ್ಯಕ ಭವನದಲ್ಲಿ ಮಹಾಸಭೆಯ 83ನೇ ವರ್ಷದ ಹವ್ಯಕ ಸಂಸ್ಥಾಪನೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ವಿಶೇಷ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ 'ಪಲ್ಲವ' ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಗುತ್ತದೆ.

'ಹವ್ಯಕ' ಮಾಸಪತ್ರಿಕೆಯ ವಜ್ರ ಮಹೋತ್ಸವ ವಿಶೇಷ ಸಂಚಿಕೆಯನ್ನು ಇದೇ ವೇಳೆ ಜನಾರ್ಪಣೆ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

## ಮುಡಾ: ಸಿ.ಎಂಗೆ ತುರ್ತು ನೋಟಿಸ್

**ಬೆಂಗಳೂರು:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪ ಪ್ರಕರಣದಲ್ಲಿ 'ಬಿ' ರಿಪೋರ್ಟ್ ಅಂಗೀಕರಿಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಕ್ರಮವನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಇತರರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲೆ ಲಕ್ಷ್ಮಿ ಅಯ್ಯಂಗಾರ್ ಅವರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಮೈಸೂರಿನ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ, ಜಾರಿ ನಿರ್ದೇಶನಾಲಯ, ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಅವರ ಭಾಮೈದ ಮಲ್ಲಿಕಾರ್ಜುನ ಸ್ವಾಮಿ, ಮುಡಾ ಮಾಜಿ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಹಾಗೂ ಜೆ.ದೇವರಾಜು ಅವರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಮೈಸೂರು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ 2025ರ ಫೆಬ್ರುವರಿ 12ರಂದು ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದ್ದರು. ನ್ಯಾಯಾಲಯ 2026ರ ಜನವರಿ 28ರಂದು ಇದನ್ನು ಅಂಗೀಕರಿಸಿತ್ತು.

## ಶ್ರೀಶ್ರೀ ವಿರುದ್ಧದ ಎಫ್‌ಐಆರ್ ರದ್ದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಕಗ್ಗಲೀಪುರ ವ್ಯಾಪ್ತಿಯಲ್ಲಿ ಸರ್ಕಾರಿ ಜಮೀನು, ಕೆರೆ ಮತ್ತು ರಾಜಕಾಲುವೆ ಒತ್ತುವರಿ ಆರೋಪಕ್ಕೆ ಸಂಬಂಧಿಸಿದಂತೆ ಆರ್ಟ್ ಆಫ್ ಲಿವಿಂಗ್ ಪ್ರತಿಷ್ಠಾನದ ಸಂಸ್ಥಾಪಕ ಶ್ರೀಶ್ರೀ ರವಿಶಂಕರ ಗುರೂಜಿ ವಿರುದ್ಧ ಬೆಂಗಳೂರು ಮೆಟ್ರೊಪಾಲಿಟನ್ ಟಾಸ್ಕ್‌ಫೋರ್ಸ್ (ಬಿಎಂಟಿಎಫ್) ದಾಖಲಿಸಿದ್ದ ಎಫ್‌ಐಆರ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ.



'ನನ್ನ ವಿರುದ್ಧ ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಶ್ರೀಶ್ರೀ ರವಿಶಂಕರ ಗುರೂಜಿ (68) ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರಕಟಿಸಿದೆ.

ರವಿಶಂಕರ್ ಗುರೂಜಿ ಪರ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್, 'ವಾಸ್ತವದಲ್ಲಿ ಒತ್ತುವರಿ ಮಾಡಲಾಗಿದೆ ಎಂಬ ಜಮೀನುಗಳ ಮಾಲೀಕತ್ವಕ್ಕೂ ಮತ್ತು ಅರ್ಜಿದಾರರಿಗೂ ಯಾವುದೇ ಸಂಬಂಧವಿಲ್ಲ. ಒತ್ತುವರಿ ಟೇಬಲ್ ಕಾಲಂನಲ್ಲೂ ಅವರ ಹೆಸರಿಲ್ಲ. ಪೊಲೀಸರು ಅರ್ಜಿದಾರರ ಜೊತೆಗಿನ ಇತರ ನಾಲ್ವರು ಭೂ ಮಾಲೀಕರಿಗೆ ನೋಟಿಸ್ ನೀಡಿದ್ದಾರೆ. ಆದರೆ, ಶ್ರೀಶ್ರೀ ಅವರಿಗೆ ಯಾವುದೇ ನೋಟಿಸ್ ನೀಡಿಲ್ಲ' ಎಂದು ಆಕ್ಷೇಪಿಸಿದ್ದರು.

ಈ ವಾದವನ್ನು ಪುರಸ್ಕರಿಸಿರುವ ನ್ಯಾಯಪೀಠ, 'ಪ್ರಕರಣದಲ್ಲಿ ಶ್ರೀಶ್ರೀ ವಿರುದ್ಧ ಮೇಲ್ನೋಟಕ್ಕೆ ಯಾವುದೇ ಆರೋಪ ಕಾಣಬರುತ್ತಿಲ್ಲ. ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂಬುದಕ್ಕೆ ಪೂರಕವಾದ ದಾಖಲೆಗಳನ್ನು ರಾಜ್ಯ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ ಅವರು ಒದಗಿಸಿಲ್ಲ. ಹೀಗಾಗಿ, ಆರೋಪಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸದ ಹೊರತು ಶ್ರೀಶ್ರೀ ರವಿಶಂಕರ ಅವರನ್ನು ಪ್ರಕರಣದಲ್ಲಿ ಎಳೆದು ತರಲಾಗದು' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಅಂತೆಯೇ, 'ಆದೇಶದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯ, ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ–2023ರ (ಬಿಎನ್‌ಎಸ್‌ಎಸ್) ಕಲಂ 528ರ ಅಡಿ ಅರ್ಜಿದಾರರ ವಿರುದ್ಧದ ಪ್ರಕರಣವನ್ನು ಪರಿಗಣಿಸುವುದಕ್ಕೆ ಮಾತ್ರವೇ ಸೀಮಿತವಾಗಿದೆ' ಎಂದು ಸ್ಪಷ್ಟಪಡಿಸಿದೆ.

**ಆರೋಪ ಏನು?:** 'ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಕಗ್ಗಲೀಪುರ ಗ್ರಾಮದ ಸರ್ವೆ ನಂಬರ್ 46, 135, 137, 150, 160, 164/1 ಮತ್ತು 164/2ರಲ್ಲಿನ ವಿವಿಧೆಡೆ ಸರ್ಕಾರಿ ಜಮೀನು, ಕೆರೆ ಮತ್ತು ರಾಜಕಾಲುವೆ ಒತ್ತುವರಿ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಶ್ರೀಶ್ರೀ ವಿರುದ್ಧ, ಕರ್ನಾಟಕ ಭೂ ಕಂದಾಯ ಕಾಯ್ದೆ–1964ರ ಕಲಂ 192 ಎ ಅಡಿಯಲ್ಲಿ ಬಿಎಂಟಿಎಫ್, ಎಫ್‌ಐಆರ್ ದಾಖಲಿಸಿತ್ತು.

ಕರ್ನಾಟಕ ಸರ್ಕಾರ
**ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ**
**ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.**

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಕೆ.ಕೆ.ಆರ್.ಡಿ.ಬಿ./ಟೆ.ಪ್ರ/ತಾಸ–1/2025–26/2256 ದಿನಾಂಕ:25.03.2026

**ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) (KW-3) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)**

1) **ಕಾಮಗಾರಿಗಳ ವಿವರ.:** ಹುಣಸಗಿ ತಾಲೂಕಿನ ರಾಯನಗೋಳ ಮುಖ್ಯ ರಸ್ತೆ ಯಿಂದ ಮಗಲಗಡ್ಡಿ ಹಳ್ಳಕ್ಕೆ ಸಿ.ಡಿ ನಿರ್ಮಾಣ. ( RDPR/2025-26/RD/WORK_INDENT25169) 2) **ಲೆಕ್ಕ ಶೀರ್ಷಿಕೆ:** 2025–26 ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಯೋಜನೆ. 3) **ಟೆಂಡರಗಿಟ್ಟ ಅಂದಾಜು ಮೊತ್ತ:** ಕನಿಷ್ಠ ಮತ್ತು ಗರಿಷ್ಠ ರೂ 75.00 ಲಕ್ಷ 4) **ಗುತ್ತಿಗೆದಾರರ ದರ್ಜೆ:** 3ನೇ ಮೇಲ್ಪಟ್ಟು ದರ್ಜೆ 5) **ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:** 27.03.2026 ರಿಂದ 08.04.2026 ಸಾಯಂಕಾಲ 4:00 ಗಂಟೆವರೆಗೆ 6) **ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕು ಹಿಂದಿರುಗಿಸಲಾಗುವುದಿಲ್ಲಾ) 7) **ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 08.04.2026 ಸಾಯಂಕಾಲ 4:00 ಗಂಟೆವರೆಗೆ 8) **ಟೆಂಡರ ತೆರೆಯುವ ದಿನಾಂಕ ತಾಂತ್ರೀಕ:** 10.04.2026 ಬೆಳ್ಳಿಗೆ 11:00 ನಂತರ 9) **ಟೆಂಡರ ತೆರೆಯುವ ದಿನಾಂಕ ಆರ್ಥಿಕ:**13.04.2026 ಬೆಳ್ಳಿಗೆ 11:00 ನಂತರ 10) **ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. 11) **ಅಂತರಜಾಲ ತಾಣದ ವಿಳಾಸ:** https://kppp.karnataka.gov.in

**ಸೂಚನೆ:** ಟೆಂಡರರಿಗೆಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ವಾ.ಸಾ.ಸಂ.ಇ/ಯಾದಗಿರ/611/ಕೆ.ಎಸ್.ಎಂ.ಸಿ.&ಎ/2025–26

**ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ**
ನೋಂದಣಿ ಕಚೇರಿ: 30/1, 3ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಪ್ರದೇಶ, ವಸಂತ್ ನಗರ, ಬೆಂಗಳೂರು– 560051. ಇಮೇಲ್ : dgm4bswml25@gmail.com

No: DGM-4/BSWML/Tend/08/2025-26 Date: 26.03.2026

**ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)** (ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1) ಉಪ ಪ್ರಧಾನ ವ್ಯವಸ್ಥಾಪಕರು–4 ಬಿ ಎಸ್ ಡಬ್ಲ್ಯೂ ಎಂ ಎಲ್ ಇವರು ವ್ಯವಸ್ಥಾಪಕ ನಿರ್ದೇಶಕರು, ಬಿ ಎಸ್ ಡಬ್ಲ್ಯೂ ಎಂ ಎಲ್, ಬೆಂಗಳೂರು ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿರುವ ಕಾಮಗಾರಿಗಳಿಗೆ ಅರ್ಹ ಬಿಡ್‌ದಾರರಿಂದ ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ : **https ://kppp.karnataka.gov.in** ಮೂಲಕ ಹೊಸ ಪ್ರಸ್ತಾವನೆಗಳನ್ನು ಆಹ್ವಾನಿಸಿರುತ್ತಾರೆ. ಕಾಮಗಾರಿಗೆ ಅರ್ಹತೆ ಪಡೆಯಲು ಷರತ್ತು 3 ರಲ್ಲಿ ನಿರ್ಧಿಷ್ಟ ಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಬಿಡ್‌ದಾರರಿಗೆ ಸೂಚಿಸಲಾಗಿದೆ. 2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ದಿನಾಂಕ 30.03.2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 3) ಹೆಚ್ಚಿನ ವಿವರಗಳನ್ನು ಟೆಂಡರ್ ಡಾಕ್ಯುಮೆಂಟ್ ನಲ್ಲಿ ವೀಕ್ಷಿಸಬಹುದು.

| ಕ್ರ. ಸಂ. | ಕಾಮಗಾರಿಯ ವಿವರಗಳು | ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷಗಳಲ್ಲಿ) ಜಿಎಸ್‌ಟಿ ಸೇರಿದಂತೆ | ಇಎಂಡಿ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | ಪೂರ್ವ ಮತ್ತು ಯಲಹಂಕ ವಲಯಗಳಲ್ಲಿ ಹೊಸ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮತ್ತು ಅಸ್ತಿತ್ವದಲ್ಲಿರುವ ಸಾರ್ವಜನಿಕ ಶೌಚಾಲಯಗಳನ್ನು ಒಂದು ವರ್ಷದ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆಯೊಂದಿಗೆ ಮೇಲ್ದರ್ಜೆಗೇರಿಸುವುದು. | 929.41 | ರೂ. 13,94,116/– |

ವೇಳಾಪಟ್ಟಿ : 1. ಆರ್‌ಎಫ್‌ಪಿ ದಾಖಲೆಗಳು 30.03.2026 ಸಂಜೆ 4.00 ಗಂಟೆಯಿಂದ ಲಭ್ಯವಿರುತ್ತದೆ. 2. ಆಕ್ಷೇಪಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 07.04.2026 ರ 15.00 ಗಂಟೆಗಳವರೆಗೆ. 3. ಪ್ರೀ ಬಿಡ್ ಮಿಟಿಂಗ್ ದಿನಾಂಕ :07.04.2026 ರಂದು 15.30 ಗಂಟೆಗೆ ಮುಖ್ಯ ಪ್ರಧಾನ ವ್ಯವಸ್ಥಾಪಕರು–2 ಬಿಎಸ್‌ಡಬ್ಲ್ಯೂಎಂಎಲ್ ಕಚೇರಿಯಲ್ಲಿ ನಡೆಯಲಿದೆ. 4. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 15.04.2026 ರಂದು 16.00 ಗಂಟೆಗಳವರೆಗೆ. 5. ತಾಮತ್ರಿಕ ಬಿಡ್ ತೆರೆಯುವ ದಿನಾಂಖ : 16.04.2026 ರಂದು ಸಂಜೆ 4.30 ಗಂಟೆಗೆ. 6. ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ಹಣಕಾಸು ಬಿಡ್‌ಗಳನ್ನು ತೆರೆಯುವ ಬಗ್ಗೆ ತಿಳಿಸಲಾಗುವುದು.

DIPR/CP/6476/NR/2025-26 ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–4, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ.

**ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
**ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ, ನಾಎದಂಕಾ, ವಿಭಾಗ**
**ರೋಡಲಬಂಡಾ–584127 ತಾ: ಲಿಂಗಸುಗೂರು ಜಿ: ರಾಯಚೂರು**

ಸಂ.ಕೃಭಾಜನಿನಿ/ನಾಎದಂಕಾ/ವಿ/ಪಿಬಿ/ಟೆಂಡರ್/25–26/1862 ದಿನಾಂಕ:– 24.03.2026

**ಟೆಂಡರ ಪ್ರಕಟಣೆ**

**(Through Karnataka Public Procurement Portal Only)**
**(SERVICE TENDER)**

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಸಿವಿಲ್ ಒಂದನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ "Survey, Investigation, Design, Supply, Erection, Testing and Commissioning of Tank Filling Scheme Works for Construction of Civil and Electro-Mechanical Works Consisting of the following Components: Construction of Intake Canal/pipe, Jack Well /Sump Cum Pump House, vertical turbine pumps coupled to Motor Electrical Panels, 6.6 kvStarter Panels , Capacitor Banks,6.6 Kv Switch Gear system, 11 KV and 33 KVSubstation Switch Yard and Power Transmission Line, Terminal Bays, RisingMains, PressureDistributionNetwork through MS/HDPE pipes For FILLING UP OF EXISTING 19 TANKS IN YELABURGA AND KUKANOOR TALUK OF KOPPAL DISTRICT BY LIFTING WATER FROM KRISHNA RIVER (BACK WATER OF NARAYANAPURA DAM) with Installation of Surge Protection Systemand Including Supply of Spares Parts and Tools Including Requisite Man Power for O & M of the System Covered under the Scope for Five Years from the date of commissioning on Turnkey Basis"- KBJNL/2025-26/LI/WORK_INDENT2753 (ಕೆರೆಗಳ ವಿವರ:– ಕರಮುಡಿ ಕೆರೆ–1&2, ತೊಂಡಿಹಾಳ ಕೆರೆ, ಯರೇಹಂಚಿನಾಳ ಕೆರೆ, ಸಿದ್ನೇಕೊಪ್ಪ ಕೆರೆ, ಮುಧೋಳ ಕೆರೆ, ಬನ್ನಿಕೊಪ್ಪ ಕೆರೆ, ಮಂಡಲಗೇರಿ ಕೆರೆ–1&2, ದ್ಯಾಂಪುರ ಕೆರೆ, ರಾಜೂರ ಕೆರೆ, ರ‍್ಯಾವಣಕಿ ಕೆರೆ, ಬಂಡಿಹಾಳ ಕೆರೆ–1&2, ಬಿನ್ನಾಳ ಕೆರೆ–1&2, ಚಿಕ್ಕೇನಕೊಪ್ಪ ಕೆರೆ, ಸೋಂಪುರ ಕೆರೆ, ಇಟಗಿ ಕೆರೆ, ಚಿಕ್ಕಬನ್ನಿಗೋಳ ಕೆರೆ, ಲಿಂಗನಬಂಡಿ ಕೆರೆ, ಸಂಗನಹಾಳ ಕೆರೆ, ಆಡೂರ ಕೆರೆ–1&2, ಕುಕನೂರು ಕೆರೆ, ನಿಟ್ಟಾಲಿ ಕೆರೆ, ಭಟಪನಹಳ್ಳಿ ಕೆರೆ, ಮಾಳೇಕೊಪ್ಪ ಕೆರೆ, ಮನ್ನಾಪೂರ ಕೆರೆ, ಲಕಮನಗುಳೆ ಕೆರೆ, & ಹಗೇದಾಳ ಕೆರೆ) ಎಂಬ ಕಾಮಗಾರಿಗೆ ಸಂಬಂಧಿಸಿದಂತೆ, ದ್ವಿಲಕೋಟೆ ಮೂಲಕ ಶೇಕಡಾವಾರು ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ಅರ್ಹ ಗುತ್ತಿಗೆದಾರರವರು ದಿನಾಂಕ 26.03.2026 ರಿಂದ 28.04.2026 ಸಾಯಂಕಾಲ 5.00 ಗಂಟೆಯವರೆಗೆ www.kppp.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಇ–ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಹಾಗೂ ಸದರಿ ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ದಿ. 30.04.2026 ಪೂರ್ವಾಹ್ನ 11.00 ಗಂಟೆಗೆ ತೆರೆಯಲಾಗುವುದು.

ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ನಲ್ಲಿ ಹಾಗೂ ಈ ಕೆಳ ಸಹಿ ಮಾಡಿರುವವರ ಕಚೇರಿಯಲ್ಲಿ, ಕಚೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರು,
ಕೃಭಾಜನಿನಿ, ನಾಎದಂಕಾ ವಿಭಾಗ,
ರೋಡಲಬಂಡಾ.

DIP/RCR/788/KSMC&A/791/2025-26

**ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ**
ಮಿನಿ ವಿಧಾನಸೌಧ ಪಕ್ಕದಲ್ಲಿ, ಸ್ಟೇಷನ್ ಮುಖ್ಯ ರಸ್ತೆ, ಕಲಬುರಗಿ–585102 Email: commissionergda@gmail.com

ಸಂಖ್ಯೆ: ನಪ್ರಾಕ/ತಾಂತ್ರಿಕ/ಬಿಲಲಾಬಾದ ಪಾರ್ಕ/ /2025–26/3638 ದಿನಾಂಕ: 25–03–2026

**:: ಇ–ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ ::**

ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಲಬುರಗಿ ನಗರದ ಸ್ಥಳೀಯ ಯೋಜನಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ ಸಂಖ್ಯೆ. 19 ರ ಬಿಲಲಾಬಾದ ಕಾಲೋನಿ ರೆಹಮಾನ ಮಜೀದ ಹತ್ತಿರದಲ್ಲಿರುವ ಬಿಲಲಾಬಾದ ಪಾರ್ಕ & ಆಟದ ಮೈದಾನ ಅಭಿವೃದ್ಧಿ ಪಡಿಸುವ ಕಾಮಗಾರಿಗಾಗಿ ಇ–ಪ್ರೋಕ್ಯೂರಮೆಂಟ ಟೆಂಡರ ಕರೆಯಲಾಗಿದೆ. ಟೆಂಡರಗಿಟ್ಟ ಮೊತ್ತ ರೂ. **1,34,32,260/-** ಇ.ಎಮ್.ಡಿ ಮೊತ್ತ ರೂ. 2,00,000/– ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ದ್ವಿಲಕೋಟೆ ಮಾದರಿಯಲ್ಲಿ (KW-4) ರಂತೆ, ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ. 10–04–2026 ರಂದು ಸಾಯಂಕಾಲ 4:00 ಗಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ. 15–04–2026 ರಂದು ಬೆಳಗ್ಗೆ 11:00 ಗಂಟೆಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ. 17–04–2026 ರಂದು ಬೆಳಗ್ಗೆ 11:00 ಗಂಟೆಗೆ. ಟೆಂಡರದ ಎಲ್ಲಾ ವಿವರಗಳನ್ನು ಇ–ಪ್ರೋಕ್ಯೂರಮೆಂಟ ವೆಬ್‌ಸೈಟ್ www.kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಇನ್ನುಳಿದಂತೆ ವಿವರಗಳಿಗಾಗಿ ಪ್ರಾಧಿಕಾರದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಾಭಿವೃದ್ಧಿ ಪ್ರಾಧಿಕಾರ ಕಲಬುರಗಿ ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1214/ಕೆ.ಎಸ್.ಎಂ.ಸಿ.&ಎ/2025–26

**ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ**
(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)
ಹಟ್ಟಿ–584115, ಲಿಂಗಸುಗೂರು–ತಾ. ರಾಯಚೂರು ಜಿಲ್ಲೆ, ಕರ್ನಾಟಕ. Ph:(08537)276339/275463,
Email: **material276339@gmail.com**, **website:www.huttigold.karnaraka.gov.in**

**ಟೆಂಡರ್ ಪ್ರಕಟಣೆ ನಂ.37/ 25–26 ದಿನಾಂಕ: 27.03.2026 (KPPP ಮುಖಾಂತರ ಮಾತ್ರ)**

ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು (ಸರಕು) ಇವರಿಂದ ಈ ಕೆಳಗಿನ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.

| ಕ್ರ. ಸಂ. | ಸಾಮಗ್ರಿ ವಿವರ | ಇ.ಎಂ.ಡಿ. ಮೊತ್ತ ರೂ.ಗಳಲ್ಲಿ |
|---|---|---|
| 1 | ರಿಫೈನ್ಡ್ ಸೂರ್ಯಕಾಂತಿ ಎಣ್ಣೆ ಪೂರೈಕೆ. **HGML/2025-26/IND0459** | 56,000/- |
| 2 | ಸೋನಾ ಮಸೂರಿ ಅಕ್ಕಿ ಪೂರೈಕೆ. **HGML/2025-26/IND0460** | 78,000/- |
| 3 | ಕ್ರಷರ್, SAG ಮತ್ತು ಬಾಲ್ ಮಿಲ್ ಪ್ಲಾಂಟ್ ಕನ್ವೇಯರ್ ಬೆಲ್ಟ್‌ಗಳ ಪೂರೈಕೆ. **HGML/2025-26/IND0417** | 1,22,000/- |
| 4 | ಟಿಸಿ ಡ್ರಿಲ್ ಸ್ಟೀಲ್ ಗ್ರೈಂಡಿಂಗ್ ಯಂತ್ರದ ಪೂರೈಕೆ. **HGML/2025-26/IND0388** | 45,000/- |
| 5 | ನ್ಯೂಮ್ಯಾಟಿಕ್ ಟಾರ್ಕ್ ವ್ರೆಂಚ್ ಪೂರೈಕೆ. **HGML/2025-26/IND0414/CALL-2** | 26,000/- |
| 6 | ಕೆ.ವಿ ಸಿಬ್ಬಂದಿ ವಸತಿಗೃಹಗಳಲ್ಲಿ ಪಾರ್ಕಿಂಗ್ ಶೆಡ್ ನಿರ್ಮಾಣ. **HGML/2025-26/BD/WORK_INDENT134** | 25,000/- |
| 7 | CGU ಅತಿಥಿ ಗೃಹದ ನವೀಕರಣ. **HGML/2025-26/OW/WORK_INDENT127/CALL-2** | 29,000/- |

ವೇಳಾ ಪಟ್ಟಿ: (1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 10.04.2026 ರಂದು ಸಂಜೆ 4.00ಗಂಟೆಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 13.04.2026 ರಂದು ಬೆಳಿಗ್ಗೆ 10.00 ಗಂಟೆಗೆ.

ಆಸಕ್ತಿವುಳ್ಳವರು ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://www.kppp.karnataka.gov.in** ನಲ್ಲಿ ನೋಡಬಹುದು. ಹೆಚ್ಚಿನ ಮಾಹಿತಿಗಾಗಿ ಕೆಳಗೆ ನಮೂದಿಸಿದ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಈ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **KPPP** ನೋಂದಾಯಿತರಾಗಿರಬೇಕು.

ಸಹಿ/– ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು (ಸರಕು)

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

**ಪುರಸಭೆ ಕಾರ್ಯಾಲಯ, ಹುಣಸಮಾರನಹಳ್ಳಿ**
ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562157 ದೂರವಾಣಿ: 080–23901864
ಇ–ಮೇಲ್: itstaff_ulb_hmhalli@gmail.com ವೆಬ್‌ಸೈಟ್: www.hunasamaranahallitown.mrc.gov.in

ಸಂಖ್ಯೆ: ಹು.ಪು/ತಾ.ಶಾ/ಸಿ.ಆರ್/22/2025–26 ದಿನಾಂಕ: 25–03–2026

**ಅಲ್ಪಾವಧಿ/ಪೂರ್ಣಾವಧಿ ಟೆಂಡರ್ ಪ್ರಕಟಣೆ** (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಹುಣಸಮಾರನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿನ 2024–24ನೇ ಹಾಗೂ 2025–26ನೇ ಸಾಲಿನ ಎಸ್.ಎಫ್.ಸಿ(ಉಳಿಕೆ) ಮತ್ತು 2025–26ನೇ ಸಾಲಿನ ಪುರಸಭಾ ನಿಧಿ ಅನುದಾನದಲ್ಲಿ ಕಾಮಗಾರಿಗಳು ಸೇವೆಯನ್ನು ಒದಗಿಸಲು ಹಾಗೂ ಇ–ಹರಾಜುವಿನಲ್ಲಿ ಭಾಗವಹಿಸಲು ನೊಂದಾಯಿತ ಅರ್ಹ ದರ್ಜೆ ಏಜನ್ಸಿದಾರರು, ಲೋಕೋಪಯೋಗಿ ಇಲಾಖೆ ಹಾಗೂ ವಿದ್ಯುತ್ ಪರಿವೀಕ್ಷಣಾ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

–:ಕಾಮಗಾರಿಗಳ ವಿವರ:–

| ಕ್ರ. ಸಂ. | ಇಂಡೆಂಟ್ ಸಂಖ್ಯೆ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ವರ್ಗ | ಯೋಜನೆ |
|---|---|---|---|---|
| 1 | DMA/2025-26/SE7583 | 49.97 | ಸಾಮಾನ್ಯ | ಪುರಸಭೆ |
| 2 | DMA/2025-26/RD/WORK_INDENT56163/Call-2 | 2.88 | ಸಾಮಾನ್ಯ | ಎಸ್.ಎಫ್.ಸಿ & ಪುರಸಭೆ |
| 3 | DMA/2025-26/BD/WORK_INDENT56161/Call-2 | 1.70 | ಸಾಮಾನ್ಯ | ಎಸ್.ಎಫ್.ಸಿ & ಪುರಸಭೆ |
| 4 | DMA/2025-26/WS/WORK_INDENT56162/Call-2 | 9.70 | ಸಾಮಾನ್ಯ | ಎಸ್.ಎಫ್.ಸಿ & ಪುರಸಭೆ |
| 5 | DMA/2025-26/WS/WORK_INDENT56734 | 29.80 | ಸಾಮಾನ್ಯ | ಪುರಸಭೆ |
| 6 | DMA/2025-26/OW/WORK_INDENT56732 | 29.85 | ಸಾಮಾನ್ಯ | ಪುರಸಭೆ |
| 7 | DMA/2025-26/IND6130 | 8.00 | ಸಾಮಾನ್ಯ | ಪುರಸಭೆ |
| 8 | DMA/2025-26/OW/WORK_INDENT54238/CALL-2 | 12.75 | ಸಾಮಾನ್ಯ | ಪುರಸಭೆ |

ಅಲ್ಪಾವಧಿ ಟೆಂಡರ್ ಕಾಲಾವಧಿ:– (ಕ್ರ ಸಂಖ್ಯೆ:1,2,3&4) ಆಕ್ಷೇಪಣೆ/ಮಾಹಿತಿಯನ್ನು ಸಲ್ಲಿಸಲು ದಿನಾಂಕ: 06/04/2026 ಸಂಜೆ 5.00 ಗಂಟೆ ವರೆಗೆ. ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 07/04/2026 ಸಂಜೆ 5.00 ಗಂಟೆ ವರೆಗೆ. ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 08/04/2026 ಸಂಜೆ 5.15 ಗಂಟೆಗೆ. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 10/04/2026 ರಂದು ಬೆಳಿಗ್ಗೆ 11.00 ಗಂಟೆ ನಂತರ.

ಪೂರ್ಣಾವಧಿ ಟೆಂಡರ್ ಕಾಲಾವಧಿ:– (ಕ್ರ ಸಂಖ್ಯೆ:5,6,7&8) ಆಕ್ಷೇಪಣೆ/ಮಾಹಿತಿಯನ್ನು ಸಲ್ಲಿಸಲು ದಿನಾಂಕ: 13/04/2026 ಸಂಜೆ 5.00 ಗಂಟೆ ವರೆಗೆ. ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15/04/2026 ಸಂಜೆ 5.00 ಗಂಟೆ ವರೆಗೆ. ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 16/04/2026 ಸಂಜೆ 5.15 ಗಂಟೆಗೆ. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 18/03/2026 ರಂದು ಬೆಳಿಗ್ಗೆ 11.00 ಗಂಟೆ ನಂತರ.

–:ಇ–ಹರಾಜು ವಿವರ:–

| ಕ್ರ. ಸಂ. | ಇಂಡೆಂಟ್ ಸಂಖ್ಯೆ | ನಿಗಧಿಪಡಿಸಿರುವ ಮಾಸಿಕ ಕನಿಷ್ಠ ದರ ರೂ ಗಳಲ್ಲಿ | ವರ್ಗ |
|---|---|---|---|
| 1 | (DMA/2025-26/AUCTION6170) | 3,000.00 | ಸಾಮಾನ್ಯ |

(1) ಆಕ್ಷೇಪಣೆ/ಮಾಹಿತಿಯನ್ನು ಸಲ್ಲಿಸಲು ದಿನಾಂಕ: 13/04/2026 ಸಂಜೆ 05.00 ಗಂಟೆ ವರೆಗೆ. (2) ಇ–ಹರಾಜಿನಲ್ಲಿ ಭಾಗವಹಿಸಲು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:–15.04.2026 ಸಂಜೆ 5.00 ಗಂಟೆ ವರೆಗೆ. (3) ಇ–ಹರಾಜು ಪ್ರಕ್ರಿಯೆ ದಿನಾಂಕ: 18/04/2026ರ ಬೆಳಿಗ್ಗೆ 10.00ರಿಂದ ಸಂಜೆ 17.00 ಗಂಟೆ ವರೆಗೆ (ಡೆಲ್ಟಾ ಸಮಯ:05 ನಿಮಿಷಗಳು). ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ/ಬದಲಾವಣೆಯಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ವಿಳಾಸ https://kppp.karnataka.gov.in ಮೂಲಕ ಮಾತ್ರ ತಿಳಿಸಲಾಗುವುದು.

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಹುಣಸಮಾರನಹಳ್ಳಿ
ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಹುಣಸಮಾರನಹಳ್ಳಿ

DIPR/CP/SMCL/6480/2025-26

# ಪೈಲ್ವಾನ್ ಮನವೊಲಿಸುವ ಪ್ರಯತ್ನ ವಿಫಲ

## ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ನೇತೃತ್ವದ ಕಾಂಗ್ರೆಸ್ ನಿಯೋಗ ಕೊನೆ ಗಳಿಗೆಯಲ್ಲಿ ಭೇಟಿ

ಪ್ರಜಾವಾಣಿ ವಾರ್ತೆ

**ದಾವಣಗೆರೆ:** ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸಲ್ಲಿಸಿರುವ ನಾಮಪತ್ರವನ್ನು ವಾಪಸ್ ಪಡೆಯುವಂತೆ ಸಾದಿಕ್ ಪೈಲ್ವಾನ್ ಮನವೊಲಿಸಲು ಕಾಂಗ್ರೆಸ್ ಮುಖಂಡರು ಕೊನೆಯ ಕ್ಷಣದವರೆಗೂ ನಡೆಸಿದ ಯತ್ನ ವಿಫಲವಾಯಿತು.

ಗುರುವಾರ ಮಧ್ಯಾಹ್ನ ನಾಮಪತ್ರ ಹಿಂಪಡೆಯಲು 15 ನಿಮಿಷ ಬಾಕಿ ಇದ್ದಾಗ ಸಾದಿಕ್ ನಿವಾಸಕ್ಕೆ ಭೇಟಿ ನೀಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಹಾಗೂ ಶಾಸಕ ರಿಜ್ವಾನ್ ಅರ್ಷದ್ ನೇತೃತ್ವದ ಕಾಂಗ್ರೆಸ್ ನಿಯೋಗ, ಕೊನೆಯ ಗಳಿಗೆಯವರೆಗೂ ಸಂಧಾನ ಸಭೆ ನಡೆಸಿದರೂ ನಿರಾಸೆಯಿಂದ ಹೊರ ಬರಬೇಕಾಯಿತು.

‘ಸಮುದಾಯದ ಹಿತಾಸಕ್ತಿ ಕಾಪಾಡಲು ಕಣದಲ್ಲೇ ಉಳಿದಿದ್ದೇನೆ’ ಎಂದು ಬಂಡಾಯ ಅಭ್ಯರ್ಥಿ ಸಾದಿಕ್ ಅವರು ಮುಖಂಡರ ನಿರ್ಗಮನದ ನಂತರ ಘೋಷಿಸಿದಾಗ ಬೆಂಬಲಿಗರ ಕರತಾಡನ ಕಂಡುಬಂತು.

‘ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಜಮೀರ್ ಅಹ್ಮದ್ ಖಾನ್ ಸೇರಿ ಅನೇಕರು ದೂರವಾಣಿ ಕರೆ ಮಾಡಿ ಉಮೇದುವಾರಿಕೆ ಹಿಂಪಡೆಯಲು ಸೂಚಿಸಿದ್ದರು. ಕುಳಿತು ಚರ್ಚೆ ನಡೆಸಿ ತೀರ್ಮಾನಕ್ಕೆ ಬರೋಣ ಎಂದು ಹೇಳಿದ್ದೆ. ಮಧ್ಯಾಹ್ನ 2.30ರವರೆಗೆ ಯಾರೊಬ್ಬರೂ ಮನೆಗೆ ಬರಲಿಲ್ಲ. ನನ್ನ ತೀರ್ಮಾನ ಅಚಲವಾಗಿದ್ದು, ಸ್ಪರ್ಧೆ ನಿಶ್ಚಿತ’ ಎಂದು ಸಾದಿಕ್ ಪೈಲ್ವಾನ್ ಬೆಂಬಲಿಗರಿಗೆ ಮಾಹಿತಿ ನೀಡಿದರು.

> **ಟಿಕೆಟ್ ಕೈತಪ್ಪಿದಾಗ ಇಂತಹ ಆಕ್ರೋಶ ಸಾಮಾನ್ಯ. ಪೈಲ್ವಾನ್ ಅವರೊಂದಿಗೆ ಒಂದು ಸುತ್ತಿನ ಮಾತುಕತೆ ನಡೆಸಿದ್ದೇವೆ. ಅವರನ್ನು ವಿಶ್ವಾಸಕ್ಕೆ ಪಡೆಯಲಿದ್ದು, ಕಾಂಗ್ರೆಸ್‌ಗೆ ಶಕ್ತಿ ಆಗಲಿದ್ದಾರೆ**
> **ಸಲೀಂ ಅಹ್ಮದ್**, ಕೆಪಿಸಿಸಿ ಕಾರ್ಯಾಧ್ಯಕ್ಷ

> **ಸಾದಿಕ್ ಅವರೂ ಕಾಂಗ್ರೆಸ್ ಕುಟುಂಬದ ಸದಸ್ಯ. ಕೆಲ ವಿಚಾರಗಳಲ್ಲಿ ಅವರಿಗೆ ನೋವಾಗಿದೆ. ನಾಮಪತ್ರ ಹಿಂಪಡೆಯುವ ಕಾಲಾವಕಾಶ ಮುಗಿದಿದೆ. ಪರ್ಯಾಯ ಆಲೋಚನೆ ಮಾಡುತ್ತೇವೆ**
> **ರಿಜ್ವಾನ್ ಅರ್ಷದ್**, ಶಾಸಕ

**ಇಡೀ ದಿನ ಹೈಡ್ರಾಮಾ:** ‘ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ನೇತೃತ್ವದಲ್ಲಿ ಕೆಪಿಸಿಸಿ ನಿಯೋಗ ಸಂಧಾನಕ್ಕೆ ಬರಲಿದೆ’ ಎಂಬ ಮಾಹಿತಿ ಹರಡುತ್ತಿದ್ದಂತೆಯೇ ಇಲ್ಲಿನ ವೆಂಕಾಭೋವಿ ಕಾಲೊನಿಯಲ್ಲಿರುವ ಸಾದಿಕ್ ಪೈಲ್ವಾನ್ ಅವರ ನಿವಾಸದ ಎದುರು ನೂರಾರು ಸಂಖ್ಯೆಯಲ್ಲಿ ಬೆಂಬಲಿಗರು ಜಮಾಯಿಸಿದರು.

ಕೆಪಿಸಿಸಿ ಪ್ರಮುಖರು ಬರಲಿದ್ದು, ಸಂಧಾನ ಸಭೆಗೆ ಬರುವಂತೆ ಸ್ಥಳೀಯ ಕಾಂಗ್ರೆಸ್ ಮುಖಂಡರು ನೀಡಿದ ಆಹ್ವಾನಕ್ಕೆ ಜಗ್ಗದ ಸಾದಿಕ್, ‘ಮನೆಗೇ ಬಂದು ಮಾತನಾಡಲು ತಿಳಿಸಿ’ ಎಂದು ಪಟ್ಟುಹಿಡಿದರು.

**‘ಗೋಬ್ಯಾಕ್’ ಬಿಸಿ:** ಸಲೀಂ ಅಹ್ಮದ್ ಹಾಗೂ ರಿಜ್ವಾನ್ ಅರ್ಷದ್ ನೇತೃತ್ವದ ನಿಯೋಗ ಸಾದಿಕ್ ಅವರ ನಿವಾಸಕ್ಕೆ ಭೇಟಿ ನೀಡುವ ಹೊತ್ತಿಗೆ ಮಧ್ಯಾಹ್ನ 2.45 ಆಗಿತ್ತು. ನಾಮಪತ್ರ ಹಿಂಪಡೆಯಲು 15 ನಿಮಿಷ ಮಾತ್ರ ಬಾಕಿ ಇತ್ತು. ಏಕಾಏಕಿ ಧಾವಿಸಿದ ನಿಯೋಗ ಕಂಡ ಬಂಡಾಯ ಅಭ್ಯರ್ಥಿಯ ಬೆಂಬಲಿಗರು ಆಕ್ರೋಶ ವ್ಯಕ್ತಪಡಿಸಿದರು. ‘ಗೋಬ್ಯಾಕ್’ ಘೋಷಣೆ ಕೂಗಿ ಅಸಮಾಧಾನ ಹೊರಹಾಕಿದರು.

ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಸಾದಿಕ್ ಅವರೊಂದಿಗೆ ನಿಯೋಗ ಗೋಪ್ಯ ಸಭೆ ನಡೆಸಿತು. ಮಧ್ಯಾಹ್ನ 2.55ಕ್ಕೆ ಸಾದಿಕ್ ನಿವಾಸದಿಂದ ಹೊರ ಬಂದ ನಾಯಕರು, ‘ನಾಮಪತ್ರ ಹಿಂಪಡೆಯುವ ಸಮಯ ಮೀರಿದೆ. ಸಾದಿಕ್ ಪೈಲ್ವಾನ್ ಪಕ್ಷದೊಂದಿಗೆ ಇದ್ದಾರೆ’ ಎಂದು ತಿಳಿಸಿ ಹೊರನಡೆದರು.

ತಾವು ಪಕ್ಷದೊಂದಿಗೆ ಇರುವುದಾಗಿ ನಾಯಕರು ಹೇಳಿದ್ದನ್ನು ಸಾರಾಸಗಟಾಗಿ ತಿರಸ್ಕರಿಸಿದ ಸಾದಿಕ್, ‘40 ವರ್ಷಗಳಿಂದ ಮುಸ್ಲಿಂ ಸಮುದಾಯಕ್ಕೆ ಅನ್ಯಾಯವಾಗಿದೆ. ಕಾಂಗ್ರೆಸ್ ನಾಯಕರ ಒತ್ತಡಗಳಿಗೆ ಮಣಿದಿಲ್ಲ’ ಎಂದು ಪ್ರಕಟಿಸಿದರು.

### ನಾಮಪತ್ರ ಹಿಂಪಡೆಯಲು ಸೂಚಕರ ಯತ್ನ

ನಾಮಪತ್ರ ಸಲ್ಲಿಕೆ ಸಂದರ್ಭ ಸೂಚಕರಾಗಿ ಮತ್ತು ಅನುಮೋದಕರಾಗಿ ಸಹಿ ಮಾಡಿದ್ದವರು ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಸಾದಿಕ್ ಪೈಲ್ವಾನ್ ಅವರ ಉಮೇದುವಾರಿಕೆಯನ್ನು ಹಿಂಪಡೆಯಲು ಮಹಾನಗರ ಪಾಲಿಕೆ ಕಚೇರಿಯಲ್ಲಿ ಚುನಾವಣಾಧಿಕಾರಿ ಎದುರು ನಡೆಸಿದ ಯತ್ನ ಕೂಡ ಫಲನೀಡಲಿಲ್ಲ. ಅಭ್ಯರ್ಥಿ ಅನುಪಸ್ಥಿತಿಯಲ್ಲಿ ಉಮೇದುವಾರಿಕೆ ಹಿಂಪಡೆಯಲು ನೀಡಿದ್ದ ‘ನಮೂನೆ-5’ನ್ನು ಚುನಾವಣಾಧಿಕಾರಿ ತಿರಸ್ಕರಿಸಿದರು.

‘ಅಭ್ಯರ್ಥಿ ಅನುಪಸ್ಥಿತಿಯಲ್ಲಿಯೂ ಉಮೇದುವಾರಿಕೆ ಹಿಂಪಡೆಯಲು ಅವಕಾಶಗಳಿವೆ. ಸೂಕ್ತ ದಾಖಲೆ, ಸರಿಯಾದ ಅರ್ಜಿ ನೀಡದ ಕಾರಣ ಸಾದಿಕ್ ಪೈಲ್ವಾನ್ ಅವರ ಉಮೇದುವಾರಿಕೆ ಹಿಂಪಡೆಯುವ ಕೋರಿಕೆಯನ್ನು ನಿರಾಕರಿಸಲಾಯಿತು’ ಎಂದು ಚುನಾವಣಾಧಿಕಾರಿ ಸಂತೋಷ್‌ಕುಮಾರ್ ಸ್ಪಷ್ಟಪಡಿಸಿದರು.

ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಸಾದಿಕ್ ಪೈಲ್ವಾನ್ ಅವರ ದಾವಣಗೆರೆಯ ನಿವಾಸದಿಂದ ಗುರುವಾರ ಹೊರಬಂದ ಶಾಸಕ ರಿಜ್ವಾನ್ ಅರ್ಷದ್

### ‘ಕೈ’ ಕಾರ್ಮಿಕ ವಿಭಾಗದ ಅಧ್ಯಕ್ಷ ಉಚ್ಚಾಟನೆ

ಉಪಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಕಾಂಗ್ರೆಸ್ ಕಾರ್ಮಿಕ ವಿಭಾಗದ ಜಿಲ್ಲಾ ಘಟಕದ ಅಧ್ಯಕ್ಷ ಎಚ್. ಸುಭಾನ್ ಸಾಬ್ ಅವರನ್ನು ಕಾಂಗ್ರೆಸ್‌ನಿಂದ 6 ವರ್ಷ ಉಚ್ಚಾಟನೆ ಮಾಡಲಾಗಿದೆ. ‘ಸುಭಾನ್ ಅವರು ನಾಯಕರ ಸೂಚನೆಯನ್ನು ಮೀರಿ ಪಕ್ಷದ ಅಧಿಕೃತ ಅಭ್ಯರ್ಥಿಯ ವಿರುದ್ಧ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ ಹಾಗೂ ಮುಖಂಡರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿ ಶಿಸ್ತು ಉಲ್ಲಂಘನೆ ಮಾಡಿದ್ದಾರೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ತಿಳಿಸಿದ್ದಾರೆ.

## ಅಂತಿಮವಾಗಿ ಕಣದಲ್ಲಿ 9 ಅಭ್ಯರ್ಥಿಗಳು

ಬಾಗಲಕೋಟೆ

**ಬಾಗಲಕೋಟೆ:** ‘ಬಾಗಲಕೋಟೆ ವಿಧಾನಸಭಾ ಉಪಚುನಾವಣೆಗೆ ಸಂಬಂಧಿಸಿದಂತೆ ನಾಮಪತ್ರ ಹಿಂಪಡೆಯಲು ಕೊನೆಯ ದಿನವಾದ ಗುರುವಾರ ಐವರು ನಾಮಪತ್ರ ವಾಪಸ್ ಪಡೆದಿದ್ದಾರೆ. ಅಂತಿಮವಾಗಿ ಕಣದಲ್ಲಿ ಒಂಬತ್ತು ಅಭ್ಯರ್ಥಿಗಳು ಉಳಿದಿದ್ದಾರೆ. ಚಿಹ್ನೆಗಳನ್ನು ನೀಡಲಾಗಿದೆ’ ಎಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ.

‘ಕಾಂಗ್ರೆಸ್‌ನಿಂದ ಉಮೇಶ ಮೇಟಿ (ಕೈ), ಬಿಜೆಪಿಯಿಂದ ವೀರಣ್ಣ (ವೀರಭದ್ರಯ್ಯ) ಚರಂತಿಮಠ (ಕಮಲ), ಉತ್ತಮ ಪ್ರಜಾಕೀಯ ಪಕ್ಷದಿಂದ ಅಂತೋಷ ಸವ್ವಾಸೆ (ಗ್ಯಾಸ್ ಸಿಲಿಂಡರ್), ಜನತಾ ಚಳವಳಿ ಭಾರತ ಪಕ್ಷದಿಂದ ತೇಜೋರಾಮ ಶೆಟ್ಟಿ ದೇವಾಂಗ(ರೋಡ ರೋಲರ್), ಕರ್ನಾಟಕ ರಾಷ್ಟ್ರ ಸಮಿತಿಯಿಂದ ನಾಗರಾಜ ಕಲಕುಟಗರ (ವ್ಹಿಜಲ್), ಬ್ಲೂ ಇಂಡಿಯಾ ಪಾರ್ಟಿಯಿಂದ ತಳವಾರ ಶಿವಕುಮಾರ (ಡೀಸೆಲ್ ಪಂಪ್), ಆಲ್ ಇಂಡಿಯಾ ಜನರಕ್ಷ ಪಾರ್ಟಿಯಿಂದ ಸಿದ್ದಪ್ಪ ಗೋಡಿ (ದ್ರಾಕ್ಷಿ), ಪಕ್ಷೇತರರಾಗಿ ಆನಂದ ಜಕಾತಿ (ಟಿಲ್ಲರ್) ಮತ್ತು ರವಿ ಪಡಸಲಗಿ (ಹಡಗು) ಕಣದಲ್ಲಿದ್ದಾರೆ.

ನಗರಸಭೆ ಮಾಜಿ ಸದಸ್ಯ, ಕಾಂಗ್ರೆಸ್ ಮುಖಂಡ ಗೋವಿಂದರಾಜ ಬಳ್ಳಾರಿ, ಅಬ್ದುಲ್‌ರಜಾಕ ಬಾಳಿಕಾಯಿ, ಅಯ್ಯುಬ್‌ಖಾನ್ ಲಾಲಸಾಬ್ ಬಾಗೇವಾಡಿ, ಪ್ರಶಾಂತ ರಾವ್, ಯಂಕಪ್ಪ ಕಮತಗಿ ನಾಮಪತ್ರ ಹಿಂಪಡೆದಿದ್ದಾರೆ.

### ₹12.54 ಲಕ್ಷ ಜಪ್ತಿ

**ಬಾಗಲಕೋಟೆ:** ಜಿಲ್ಲೆಯ ವಿವಿಧ ಚೆಕ್‌ಪೋಸ್ಟ್‌ಗಳಲ್ಲಿ ದಾಖಲೆಗಳಿಲ್ಲದೇ ಸಾಗಿಸುತ್ತಿದ್ದ ₹12.54 ಲಕ್ಷ ಹಣ ಜಪ್ತಿ ಮಾಡಲಾಗಿದೆ.

ಬಾದಾಮಿ ತಾಲ್ಲೂಕಿನ ಕುಳಗೇರಿ ಕ್ರಾಸ್ ಚೆಕ್ ಪೋಸ್ಟ್‌ನಲ್ಲಿ ಹುಬ್ಬಳ್ಳಿಯಿಂದ ಗೋಕಾಕ್‌ಗೆ ಹೊರಟಿದ್ದ ಕಾರಿನಲ್ಲಿ ಸಾಗಿಸುತ್ತಿದ್ದ ₹2.50 ಲಕ್ಷ, ಇದೇ ಚೆಕ್‌ಪೋಸ್ಟ್‌ನಲ್ಲಿ ಕಾರಿನಲ್ಲಿ ಸಾಗಿಸುತ್ತಿದ್ದ ₹8 ಲಕ್ಷ ಜಪ್ತಿ ಮಾಡಿಕೊಳ್ಳಲಾಗಿದೆ.

ಜಾಲಿಹಾಳ ಚೆಕ್ ಪೋಸ್ಟ್‌ನಲ್ಲಿ ಪ್ರತ್ಯೇಕ ಎರಡು ಪ್ರಕರಣಗಳಲ್ಲಿ ₹64 ಸಾವಿರ ಮತ್ತು ₹75 ಸಾವಿರ, ಬಾಗಲಕೋಟೆ ತಾಲ್ಲೂಕಿನ ಟಕ್ಕಳಕಿ ಚೆಕ್ ಪೋಸ್ಟ್‌ನಲ್ಲಿ ₹65 ಸಾವಿರ ಹಣ ಜಪ್ತಿ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಕಾಂಗ್ರೆಸ್‌ಗೆ ಎದುರಾಗಿದೆ ಮುಸ್ಲಿಂ ಮತಗಳು ಚದುರುವ ಭೀತಿ

• ಜಿ.ಬಿ.ನಾಗರಾಜ್

ಸಮರ್ಥ್

ಟಿ.ಶ್ರೀನಿವಾಸ್ ದಾಸಕರಿಯಪ್ಪ

ಸಾದಿಕ್ ಪೈಲ್ವಾನ್

ಕಣ ಚಿತ್ರಣ

**ದಾವಣಗೆರೆ:** ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಕಣದಿಂದ ಬಂಡಾಯ ಅಭ್ಯರ್ಥಿ ಸಾದಿಕ್ ಪೈಲ್ವಾನ್ ಹಿಂದೆ ಸರಿಯದೇ ಇರುವುದು ಕಾಂಗ್ರೆಸ್‌ಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ. ಕಾಂಗ್ರೆಸ್, ಬಿಜೆಪಿ, ಎಸ್‌ಡಿಪಿಐ ಹಾಗೂ ಬಂಡಾಯ ಅಭ್ಯರ್ಥಿಯ ನಡುವೆ ತೀವ್ರ ಪೈಪೋಟಿ ನಡೆಯುವುದು ಸ್ಪಷ್ಟವಾಗಿದೆ.

ಕ್ಷೇತ್ರದಲ್ಲಿ ನಿರ್ಣಾಯಕ ಮತದಾರರನ್ನು ಹೊಂದಿರುವ ಮುಸ್ಲಿಂ ಸಮುದಾಯ ಕಾಂಗ್ರೆಸ್ ಟಿಕೆಟ್‌ಗೆ ಬಿಗಿಪಟ್ಟು ಹಿಡಿದಿತ್ತು. ಶಾಸಕರಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಸಮರ್ಥ್ ಶಾಮನೂರು ಅವರನ್ನು ಅಭ್ಯರ್ಥಿಯನ್ನಾಗಿ ಘೋಷಿಸುತ್ತಿದ್ದಂತೆಯೇ ಮುಸ್ಲಿಂ ಸಮುದಾಯದ ಪ್ರತಿನಿಧಿಯಾಗಿ ಸಾದಿಕ್ ಪೈಲ್ವಾನ್ ಉಮೇದುವಾರಿಕೆ ಸಲ್ಲಿಸಿದ್ದರು. ಇವರ ಮನವೊಲಿಕೆ ಯತ್ನ ಕೊನೆಗೂ ಕೈಗೂಡಲಿಲ್ಲ.

2008ಕ್ಕೆ ಅಸ್ತಿತ್ವಕ್ಕೆ ಬಂದ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಈವರೆಗೆ ನಡೆದ ನಾಲ್ಕು ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಶಾಮನೂರು ಶಿವಶಂಕರಪ್ಪ ವಿಜೇತರಾಗಿದ್ದರು. ಶಿವಶಂಕರಪ್ಪ ನಿಧನದಿದಾಗಿ ತೆರವಾದ ಬಳಿಕ ಘೋಷಣೆಯಾಗಿರುವ ಉಪಚುನಾವಣೆಯಲ್ಲಿ ಅವಕಾಶ ಕಲ್ಪಿಸುವಂತೆ ಮುಸ್ಲಿಂ ಸಮುದಾಯ ಕಾಂಗ್ರೆಸ್ ಹೈಕಮಾಂಡ್ ಎದುರು ಬೇಡಿಕೆ ಮುಂದಿಟ್ಟಿತ್ತು. ಅವಕಾಶ ‘ಕೈ’ ತಪ್ಪಿದ್ದರಿಂದ ಸಮುದಾಯದಲ್ಲಿ ಅಸಮಾಧಾನದ ಹೊಗೆಯಾಡುತ್ತಿದೆ.

‘ಕಾಂಗ್ರೆಸ್ ಭದ್ರಕೋಟೆ’ ಎಂದೇ ಗುರುತಿಸಿಕೊಂಡ ಕ್ಷೇತ್ರದಲ್ಲಿ ‘ಕೈ’ ಪಾಳಯಕ್ಕೆ ಅಲ್ಪಸಂಖ್ಯಾತರೇ ಬೆನ್ನೆಲುಬು. ಈ ಮತಗಳ ಮೇಲೆ ಕಣ್ಣಿಟ್ಟಿರುವ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಕೂಡ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಸಾದಿಕ್ ಪೈಲ್ವಾನ್ ಸಹ ಸಮುದಾಯದ ಮತಗಳನ್ನು ನಂಬಿಕೊಂಡಿದ್ದಾರೆ. ಕಾಂಗ್ರೆಸ್ ಕಾರ್ಮಿಕ ವಿಭಾಗದ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದ ಎಚ್. ಸುಭಾನ್ ಸಾಬ್ ಸೇರಿದಂತೆ ಕಣದಲ್ಲಿರುವ 25 ಅಭ್ಯರ್ಥಿಗಳಲ್ಲಿ ಅರ್ಧಕ್ಕಿಂತ ಹೆಚ್ಚು ಹುರಿಯಾಳುಗಳು ಇದೇ ಸಮುದಾಯಕ್ಕೆ ಸೇರಿದವರು. ಅಂತೆಯೇ ಮುಸ್ಲಿಂ ಮತಗಳು ಚದುರಿ ಹೋಗಿ, ಪ್ರಬಲ ಎದುರಾಳಿ ಬಿಜೆಪಿಗೆ ಅನುಕೂಲ ಆಗಬಹುದು ಎಂಬ ಭೀತಿ ಕಾಂಗ್ರೆಸ್‌ಗೆ ಕಾಡತೊಡಗಿದೆ.

ಕ್ಷೇತ್ರದಲ್ಲಿ ಕಮಲ ಅರಳಿಸಲು ನಿರಂತರವಾಗಿ ಪ್ರಯತ್ನಿಸುತ್ತಿರುವ ಬಿಜೆಪಿ, ಉಪಚುನಾವಣೆಯಲ್ಲಿ ಕಾರ್ಯತಂತ್ರ ಬದಲಿಸಿದೆ. ಸಾಮಾನ್ಯ ಕ್ಷೇತ್ರದಲ್ಲಿ ಪರಿಶಿಷ್ಟ ಪಂಗಡಕ್ಕೆ ಅವಕಾಶ ಮಾಡಿಕೊಟ್ಟು, ಕಾಂಗ್ರೆಸ್ ಪಾರಂಪರಿಕ ಮತ ಬುಟ್ಟಿಗೆ ಕೈಹಾಕಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಮತಗಳನ್ನು ಕ್ರೋಡೀಕರಿಸುವಲ್ಲಿ ಕಮಲ ಪಡೆ ಮಗ್ನವಾಗಿದೆ.

ಬಣಗಳಾಗಿ ಬೀದಿಯಲ್ಲಿ ಬಡಿದಾಡಿಕೊಳ್ಳುತ್ತಿದ್ದ ಬಿಜೆಪಿ, ಉಪಚುನಾವಣೆ ಘೋಷಣೆಯಾಗುತ್ತಿದ್ದಂತೆಯೇ ವೈಮನಸು ಮರೆತು ಒಗ್ಗೂಡಿದೆ. ಇದೇ ಮೊದಲ ಬಾರಿಗೆ ಕ್ಷೇತ್ರದ ಮುಸ್ಲಿಮರ ಮನಗೆಲ್ಲುವ ಪ್ರಯತ್ನಕ್ಕೆ ಮುಂದಾಗಿದೆ.

### 11 ಮಂದಿ ಕಣದಿಂದ ಹಿಂದಕ್ಕೆ

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಕಣದಿಂದ 11 ಅಭ್ಯರ್ಥಿಗಳು ಹಿಂದೆ ಸರಿದಿದ್ದು, ಅಂತಿಮವಾಗಿ 25 ಹುರಿಯಾಳುಗಳು ಉಳಿದಿದ್ದಾರೆ. ನಾಮಪತ್ರ ಪರಿಶೀಲನೆಯ ಬಳಿಕ 36 ಉಮೇದುವಾರರು ಉಳಿದಿದ್ದರು. ಮುಸ್ಲಿಂ ಸಮುದಾಯದ 22 ಜನರ ಪೈಕಿ 8 ಜನ ಅಭ್ಯರ್ಥಿಗಳು ಉಮೇದುವಾರಿಕೆ ಹಿಂಪಡೆದಿದ್ದು, 14 ಜನರು ಕಣದಲ್ಲಿದ್ದಾರೆ.

ಕಾಂಗ್ರೆಸ್‌ನ ಸಮರ್ಥ್, ಬಿಜೆಪಿಯ ಟಿ.ಶ್ರೀನಿವಾಸ ದಾಸಕರಿಯಪ್ಪ, ಎಸ್‌ಡಿಪಿಐನ ಅಫ್ಸರ್ ಕೊಡ್ಲಿಪೇಟೆ ಹಾಗೂ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಸಾದಿಕ್ ಪೈಲ್ವಾನ್ ಕಣದಲ್ಲಿರುವ ಪ್ರಮುಖರು.

## 2,140 ಅಭ್ಯರ್ಥಿಗಳು ಅಂತಿಮ ಕಣದಲ್ಲಿ

**ನವದೆಹಲಿ:** ಕೇರಳ, ಅಸ್ಸಾಂ ಹಾಗೂ ಪುದುಚೇರಿ ವಿಧಾನಸಭೆ ಚುನಾವಣೆಗೆ 2,140 ಅಭ್ಯರ್ಥಿಗಳು ಅಂತಿಮ ಕಣದಲ್ಲಿದ್ದಾರೆ.




| ರಾಜ್ಯ | ಕ್ಷೇತ್ರಗಳು | ಅಭ್ಯರ್ಥಿಗಳ ಸಂಖ್ಯೆ |
|---|---|---|
| ಅಸ್ಸಾಂ | 126 | 789 |
| ಕೇರಳ | 140 | 985 |
| ಪುದುಚೇರಿ | 30 | 366 |
| ಒಟ್ಟು | 296 | 2,140 |
| ಉಪಚುನಾವಣೆ | | |
| ಗೋವಾ | 1 | 3 |
| ಕರ್ನಾಟಕ | 2 | 50 |
| ನಾಗಾಲ್ಯಾಂಡ್ | 1 | 7 |
| ತ್ರಿಪುರ | 1 | 6 |
| ಒಟ್ಟು | 5 | 66 |

### ಆಯೋಗ ವಶಪಡಿಸಿಕೊಂಡ ವಸ್ತುಗಳ ಮೌಲ್ಯ




*ಮಾಹಿತಿ: ಭಾರತೀಯ ಚುನಾವಣಾ ಆಯೋಗ

## ಕೇರಳ: ಮಹಿಳೆಯರಿಗೆ ಪ್ರಾತಿನಿಧ್ಯ ಇಲ್ಲ

**ತಿರುವನಂತಪುರ (ಪಿಟಿಐ):** ಕೇರಳದ 140 ಕ್ಷೇತ್ರಗಳಿಗೆ ಏಪ್ರಿಲ್‌ನಲ್ಲಿ ಚುನಾವಣೆ ನಡೆಯಲಿದೆ. ರಾಜ್ಯದ ಒಟ್ಟು ಮತದಾರರಲ್ಲಿ ಮಹಿಳಾ ಮತದಾರರು ಶೇ 51.2ರಷ್ಟಿದ್ದಾರೆ- ಅಂದರೆ ಅರ್ಧಕ್ಕಿಂತ ಹೆಚ್ಚು. ಹಾಗಿದ್ದರೂ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಮಾತ್ರ 50 ದಾಟುವುದಿಲ್ಲ. ದೇಶದಲ್ಲಿ ಈಗ ‘ನಾರಿ ಶಕ್ತಿ ವಂದನಾ ಅಧಿನಿಯಮ’ ಕಾಯ್ದೆ ಜಾರಿಯ ಕುರಿತು ದೊಡ್ಡ ಮಟ್ಟದ ಚರ್ಚೆ ನಡೆಯುತ್ತಿದೆ. ಎಲ್ಲ ಪಕ್ಷಗಳೂ ಕಾಯ್ದೆಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನೇ ಆಡಿವೆ. ಹೀಗಿದ್ದರೂ ಮಹಿಳೆಯರಿಗೆ ಮಾತ್ರ ಪ್ರಾತಿನಿಧ್ಯ ನೀಡಲಾಗಿಲ್ಲ ಎನ್ನುವ ದೂರುಗಳು ಕೇಳಿ ಬಂದಿವೆ.




| ಮಹಿಳಾ ಅಭ್ಯರ್ಥಿಗಳ ವಿವರ | | | |
|---|---|---|---|
| | 18 ಎಲ್‌ಡಿಎಫ್ | 12 ಯುಡಿಎಫ್ | 14 ಬಿಜೆಪಿ |
| | 2 ಭಾರತೀಯ ಮುಸ್ಲಿಂ ಲೀಗ್ (ಇತಿಹಾಸದಲ್ಲಿಯೇ ಮೊದಲ ಬಾರಿಗೆ ಈ ಪಕ್ಷವು ಮಹಿಳೆಯರಿಗೆ ಟಿಕೆಟ್ ನೀಡಿದೆ | | |

## ರಾಹುಲ್ ಗಾಂಧಿ ವಿರುದ್ಧ ಸಿ.ಎಂ ಪಿಣರಾಯಿ ವಿಜಯನ್ ವಾಗ್ದಾಳಿ

# ‘ಅನುಭವದಿಂದ ಕಲಿಯುತ್ತಿಲ್ಲ’

**ಕೊಚ್ಚಿ (ಪಿಟಿಐ):** ‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಅನುಭವದಿಂದ ಪಾಠಗಳನ್ನು ಕಲಿಯುತ್ತಿಲ್ಲ. ಅವರ ಪಕ್ಷವು ಬಿಜೆಪಿಯ ಬಿ ಟೀಂ ಆಗಿದೆ’ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಟೀಕಿಸಿದ್ದಾರೆ.

ಆ ಮೂಲಕ ವಿರೋಧ ಪಕ್ಷ ಕಾಂಗ್ರೆಸ್ ವಿರುದ್ಧ ತಮ್ಮ ವಾಗ್ದಾಳಿ ಮುಂದುವರಿಸಿದ್ದಾರೆ.

‘ಕೇಂದ್ರೀಯ ತನಿಖಾ ಸಂಸ್ಥೆಗಳು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಹೊರತುಪಡಿಸಿ ವಿರೋಧ ಪಕ್ಷಗಳ ನಾಯಕರನ್ನು ಬಂಧಿಸುತ್ತಿವೆ ಅಥವಾ ಕರೆದು ವಿಚಾರಣೆ ನಡೆಸುತ್ತಿವೆ’ ಎಂಬ ರಾಹುಲ್ ಗಾಂಧಿ ಹೇಳಿಕೆ ನೀಡಿದ್ದರು.

ಈ ಕುರಿತಂತೆ ಕೂತಮಂಗಲಂನಲ್ಲಿ ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು,‘ರಾಹುಲ್ ಗಾಂಧಿ ಅವರು ರಾಷ್ಟ್ರೀಯ ನಾಯಕ. ಪ್ರಾದೇಶಿಕ ನಾಯಕನ ಕುರಿತಂತೆ ಅವರಿಗೆ ಯಾವುದೇ ಮಾಹಿತಿಯಿಲ್ಲ. ಯಾವ ವಿಚಾರವನ್ನು ಕೂಡ ಸ್ಪಷ್ಟವಾಗಿ ತಿಳಿದುಕೊಂಡಿಲ್ಲ. ತನ್ನ ಅನುಭವದಿಂದಲೂ ಪಾಠ ಕಲಿತುಕೊಂಡಿಲ್ಲ’ ಎಂದು ಆರೋಪಿಸಿದ್ದಾರೆ.

‘ಒಬ್ಬ ರಾಜಕೀಯ ನಾಯಕನಿಗೆ ಇರಬೇಕಾದ ಯೋಗ್ಯ ಲಕ್ಷಣಗಳಿಲ್ಲ. ಕಾಂಗ್ರೆಸ್‌ನ ಪ್ರಮುಖ ನಾಯಕರೊಬ್ಬರು ಇಷ್ಟೊಂದು ಕುಸಿತ ಕಾಣಲು ಹೇಗೆ ಸಾಧ್ಯ? ಈ ಎಲ್ಲವನ್ನೂ ಗಮನಿಸಿದರೆ, ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷವು ಭಾರತದಲ್ಲಿ ಬಿಜೆಪಿಯ ಬಿ ಟೀಂ ಆಗಿದೆ’ ಎಂದು ಹೇಳಿದ್ದಾರೆ.

‘ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಆಮ್ ಆದ್ಮಿ ಪಕ್ಷದ ಮುಖಂಡ ಅರವಿಂದ್ ಕೇಜ್ರಿವಾಲ್ ಅವರನ್ನು ಬಂಧಿಸುವಂತೆ ಕಾಂಗ್ರೆಸ್ ಪಕ್ಷ ಹಾಗೂ ರಾಹುಲ್ ಗಾಂಧಿ ಕೂಡ ಒತ್ತಾಯಿಸಿದ್ದರು. ನಂತರ ಈ ಪ್ರಕರಣದಲ್ಲಿ ಕೇಜ್ರಿವಾಲ್ ಖುಲಾಸೆಯಾದರು. ಇದು ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಮಾಡಿದ ಕಪಾಳಮೋಕ್ಷ’ ಎಂದು ತಿರುಗೇಟು ನೀಡಿದ್ದಾರೆ.

‘ದೆಹಲಿಯಲ್ಲಿ ಆಮ್‌ಆದ್ಮಿ ಪಕ್ಷದೊಂದಿಗೆ ಕೈ ಜೋಡಿಸಿ ಚುನಾವಣೆ ಎದುರಿಸುವ ಬದಲು ಪ್ರತ್ಯೇಕವಾಗಿ ಸ್ಪರ್ಧಿಸಿ, ದೆಹಲಿಯಲ್ಲಿ ಬಿಜೆಪಿ ಗೆಲುವಿಗೆ ಕಾರಣರಾದರು. ಹರಿಯಾಣ ಹಾಗೂ ಬಿಹಾರದಲ್ಲಿ ಮಿತ್ರಪಕ್ಷದ ಜೊತೆಗೆ ಸರಿಯಾಗಿ ಹೊಂದಾಣಿಕೆ ಮಾಡಿಕೊಳ್ಳದೇ ಅಲ್ಲಿ ಕೂಡ ಬಿಜೆಪಿ ಗೆಲ್ಲಲು ರಾಹುಲ್ ಗಾಂಧಿಯೇ ಕಾರಣ’ ಎಂದು ವಿಜಯನ್ ಆರೋಪಿಸಿದರು.

2006ರಲ್ಲಿ ಉತ್ತರ ಪರವೂರ್‌ನ ಮನಕ್ಕಪ್ಪಾಡಿ ಶಾಲೆಯಲ್ಲಿ ನಡೆದ ಆರ್‌ಎಸ್‌ಎಸ್‌ನ 2ನೇ ಸರಸಂಘಚಾಲಕ ಎಂ.ಎಸ್. ಗೋಲ್ವಲ್ಕರ್ ಅವರ ಶತಮಾನೋತ್ಸವದ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದ್ದ ಕಾಂಗ್ರೆಸ್ ನಾಯಕ ವಿ.ಡಿ.ಸತೀಶನ್. ಈ ಚಿತ್ರವನ್ನು ಪಿಣರಾಯಿ ವಿಜಯನ್ ತಮ್ಮ ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿದ್ದಾರೆ

### ಆರೋಪ-ಪ್ರತ್ಯಾರೋಪ

ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ-ಸಿಪಿಎಂ ನಡುವೆ ಒಪ್ಪಂದ ನಡೆದಿದೆ ಎಂದು ಕಾಂಗ್ರೆಸ್ ತಿರುಗೇಟು ನೀಡಿದೆ. ಇದರ ಬೆನ್ನಲ್ಲೇ, ಕಾಂಗ್ರೆಸ್ ನಾಯಕ ವಿ.ಡಿ.ಸತೀಶನ್ ಅವರು ಆರ್‌ಎಸ್‌ಎಸ್ ಜೊತೆಗೆ ನಂಟು ಹೊಂದಿದ್ದಾರೆ ಎಂದು ಆರೋಪಿಸಿರುವ ಪಿಣರಾಯಿ ವಿಜಯನ್, ಇದಕ್ಕೆ ಸಾಕ್ಷಿಯಾಗಿ ‘ಎಕ್ಸ್’ಖಾತೆಯಲ್ಲಿ ಫೋಟೊ ಹಂಚಿಕೊಂಡಿದ್ದಾರೆ.

‘ಜಾತ್ಯತೀತ ಕೇರಳದ ಜನರು ಸತೀಶನ್ ಅವರು ನೈಜ ಮುಖವನ್ನು ಅರಿತುಕೊಳ್ಳಬೇಕು. ಪರವೂರ್ ವಿಧಾನಸಭಾ ಕ್ಷೇತ್ರದ ಮನಕ್ಕಪ್ಪಾಡಿ ಶಾಲೆಯಲ್ಲಿ 2006ರ ಫೆಬ್ರುವರಿಯಲ್ಲಿ ನಡೆದಿದ್ದ ಆರ್‌ಎಸ್‌ಎಸ್‌ನ 2ನೇ ಸರಸಂಘಚಾಲಕ ಎಂ.ಎಸ್. ಗೋಲ್ವಲ್ಕರ್ ಶತಮಾನೋತ್ಸವ ಕಾರ್ಯಕ್ರಮಕ್ಕೆ ಸತೀಶನ್ ಅವರು ದೀಪ ಬೆಳಗಿಸಿ ಚಾಲನೆ ನೀಡಿದ್ದರು’ ಎಂದು ಫೋಟೋ ಅಪ್‌ಲೋಡ್ ಮಾಡಿದ್ದಾರೆ.

‘2001 ಹಾಗೂ 2006ರಲ್ಲಿ ಹಿಂದೂ ಐಕ್ಯವೇದಿ ಸಂಘಟನೆಯು ಪರವೂರ್ ಕ್ಷೇತ್ರದಲ್ಲಿ ಸತೀಶನ್ ಅವರ ಗೆಲುವಿಗೆ ಶ್ರಮಿಸಿತ್ತು’ ಎಂದು ದೂರಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ವಿ.ಡಿ.ಸತೀಶನ್ ಅವರು, ‘ಸಿಪಿಎಂನ ಹಲವು ನಾಯಕರು ಬಿಜೆಪಿ ನಾಯಕರಾದ ಎಲ್.ಕೆ. ಆಡ್ವಾಣಿ ಸೇರಿದಂತೆ ಹಲವು ನಾಯಕರ ಜೊತೆಗೆ ವೇದಿಕೆ ಹಂಚಿಕೊಂಡಿದ್ದರು’ ಎಂದು ಫೋಟೋಗಳನ್ನು ಅಪ್‌ಲೋಡ್ ಮಾಡಿದ್ದಾರೆ.

1989ರಲ್ಲಿ ಕಾಂಗ್ರೆಸ್ ಸರ್ಕಾರವನ್ನು ವಿ.ಪಿ.ಸಿಂಗ್ ಅವರು ಬಿಜೆಪಿ ಹಾಗೂ ಸಿಪಿಎಂ ಬೆಂಬಲದೊಂದಿಗೆ ಉರುಳಿಸಿದ್ದರು’ ಎಂದು ಹೇಳಿದ್ದಾರೆ.

## ರಾಜೀವ್ ಹೆಸರಿನ ಅಭ್ಯರ್ಥಿ ಕಣಕ್ಕೆ: ಬಿಜೆಪಿ ಟೀಕೆ

**ತಿರುವನಂತಪುರಂ:** ಕೇರಳ ವಿಧಾನಸಭಾ ಚುನಾವಣೆಗೆ ನಾಮಪತ್ರ ಹಿಂಪಡೆಯಲು ಗುರುವಾರ ಕೊನೆಯ ದಿನವಾಗಿತ್ತು. ನೇಮಂ ಕ್ಷೇತ್ರದಿಂದ ಬಿಜೆಪಿಯಿಂದ ಕಣಕ್ಕಿಳಿದಿರುವ ರಾಜ್ಯ ಘಟಕದ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ವಿರುದ್ಧ ಅವರದ್ದೇ ಹೆಸರಿನ ಡಮ್ಮಿ ಅಭ್ಯರ್ಥಿಯನ್ನು ಸಿಪಿಎಂ ಕಣಕ್ಕಿಳಿಸಿದೆ ಎಂದು ಬಿಜೆಪಿ ಆರೋಪಿಸಿದೆ.

‘ಸಚಿವ ವಿ.ಶಿವನ್‌ಕುಟ್ಟಿ ಅವರು ಸಿಪಿಎಂ ಪಕ್ಷದ ಅಭ್ಯರ್ಥಿಯಾಗಿದ್ದಾರೆ. ಇದೀಗ ಪಕ್ಷದ ಶಾಖಾ ಕಾರ್ಯದರ್ಶಿ ರಾಜೀವ್ ಕುಮಾರ್ ಜಿ ಅವರನ್ನು ಪಕ್ಷೇತರರಾಗಿ ಕಣಕ್ಕಿಳಿಸುವ ಮೂಲಕ ಶಿವನ್‌ಕುಟ್ಟಿ ಅವರು ಕೀಳುಮಟ್ಟದ ರಾಜಕಾರಣ ನಡೆಸಿದ್ದಾರೆ’ ಎಂದು ಬಿಜೆಪಿ ಮುಖಂಡರು ಆರೋಪಿಸಿದ್ದಾರೆ.

ಪಿಣರಾಯಿ ವಿಜಯನ್ ವಿರುದ್ಧ ಎ.ಎಂ.ವಿಜಯನ್ ಪಕ್ಷೇತರರಾಗಿ ಸ್ಪರ್ಧಿಸಿದ್ದಾರೆ. ಬೇಪೋರ್ ಕ್ಷೇತ್ರದಿಂದ ಪಿಣರಾಯಿ ಅಳಿಯ ಪಿ.ಎ. ಮೊಹಮ್ಮದ್ ರಿಯಾಜ್ ಅವರು ಸಿಪಿಎಂನಿಂದ ಕಣದಲ್ಲಿದ್ದು, ಅವರ ಹೆಸರಿನ ನಾಲ್ವರು ಪಕ್ಷೇತರ ಅಭ್ಯರ್ಥಿಗಳಿಂದ ಸ್ಪರ್ಧೆ ಎದುರಿಸುತ್ತಿದ್ದಾರೆ.

### 6 ಕ್ಷೇತ್ರಗಳಲ್ಲಿ ಮಿತ್ರಪಕ್ಷಗಳ ಸೌಹಾರ್ದ ಸ್ಪರ್ಧೆ

**ಚೆನ್ನೈ:** ಪುದುಚೇರಿ ಚುನಾವಣೆಯಲ್ಲಿ ಡಿಎಂಕೆ ಮತ್ತು ವಿಸಿಕೆ ಪಕ್ಷಗಳು ಕಾಂಗ್ರೆಸ್ ಅಭ್ಯರ್ಥಿಗಳೊಂದಿಗೆ ಸೌಹಾರ್ದಯುತ ಸ್ಪರ್ಧೆ ನಡೆಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಕಾಂಗ್ರೆಸ್ ಅಭ್ಯರ್ಥಿಗಳು ನಾಮಪತ್ರವನ್ನು ಹಿಂಪಡೆಯಲು ನಿರಾಕರಿಸಿದ್ದು, ಇದು ಮೈತ್ರಿಕೂಟದಲ್ಲಿ ಬಿರುಕಿಗೆ ಕಾರಣವಾಗಿದೆ.

## ಎನ್‌ಎಂಪಿಎಗೆ ಬಂದ ಎಲ್‌ಪಿಜಿ ಹಡಗು

ಮಂಗಳೂರು: ನವ ಮಂಗಳೂರು ಬಂದರು ಪ್ರಾಧಿಕಾರವು (ಎನ್‌ಎಂಪಿಎ) ಒಟ್ಟು 40 ಸಾವಿರ ಹಡಗುಗಳನ್ನು ನಿರ್ವಹಿಸಿದ ಮೈಲುಗಲ್ಲನ್ನು ಗುರುವಾರ ಸ್ಥಾಪಿಸಿತು. ಎಲ್‌ಪಿಜಿ ಹೊತ್ತು ತಂದ 'ಎಂ.ಟಿ. ಅಪೊಲೊ ಓಷೀನ್' ಗುರುವಾರ ಸಂಜೆ 4ಕ್ಕೆ ಬಂದರಿನ 13ನೇ ಸಂಖ್ಯೆಯ ಹಡಗು ಕಟ್ಟೆಯನ್ನು ತಲುಪುವ ಮೂಲಕ ಈ ಸಾಧನೆ ದಾಖಲಾಯಿತು.

ಗುಜರಾತಿನ ದಹೇಜ್‌ನಿಂದ ಬಂದ 'ಅಪೋಲೊ ಓಷೀನ್' ಹಡಗನ್ನು ಎನ್‌ಎಂಪಿಎ ಉಪಾಧ್ಯಕ್ಷರಾದ ಎಸ್. ಶಾಂತಿ ಅವರು ಖುದ್ದಾಗಿ ಸ್ವಾಗತಿಸಿದರು. ಹಡಗಿನ ಕ್ಯಾಪ್ಟನ್ ಅವರನ್ನು ಸನ್ಮಾನಿಸಿದರು.

'40 ಸಾವಿರಹಡಗುಗಳ ನಿರ್ವಹಣೆ ನವ ಮಂಗಳೂರು ಬಂದರು ಪ್ರಾಧಿಕಾರದ ಬೆಳವಣಿಗೆ ಮತ್ತು ಕಾರ್ಯಕ್ಷಮತೆಯ ಮತ್ತೊಂದು ಸಾಧನೆಯ ಪ್ರತೀಕ' ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

**ಮೊಟ್ಟೆ ಧಾರಣೆ** (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹425; 12 ಕ್ಕೆ ₹60
ಮೈಸೂರು: 100 ಕ್ಕೆ ₹425

**ರಾಮನಗರ ರೇಷ್ಮೆಗೂಡು**
ಮಿಶ್ರತಳಿ(ಸಿ.ಬಿ) ₹455-768
ದ್ವಿತಳಿ (ಬಿ.ವಿ) ₹433-863

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹213.50
ಆರ್‌ಎಸ್‌ಎಸ್-5 ₹207.50
ಗುಡ್ ಲಾಟ್ ₹189

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)
ದಾವಣಗೆರೆ ₹12950-12950
ತಿಪಟೂರು ₹29500-31000
ತುರುವೇಕೆರೆ ₹27000-30300

**ಮುಂಬೈ ಖಾದ್ಯ ತೈಲ** (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1760 (1760)
ಸೋಯಾ (ರಿಫೈನ್ಡ್) ₹1545 (1540)
ಸೂರ್ಯಕಾಂತಿ (ರಿಫೈನ್ಡ್) ₹1725 (1720)
ಪಾಮೋಲಿನ್ ₹1445 (1435)

| ಮುಂಬೈ ಧಾರಣೆ (ಶೇಂಗಾ) | |
|---|---|
| 26-03-2026 | |
| ಜಾವಾ 70/80(ಹೊಸ) | 11400-11500 |
| ಜಾವಾ 80/90(ಹೊಸ) | 10700-10800 |
| ದಪ್ಪ ಮಧ್ಯಪ್ರದೇಶ (ಹೊಸ) | 8400-8500 |
| ದಪ್ಪ ಗುಜರಾತ್ (ಹೊಸ) | 9700-9800 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1770 (-) |
| ಒಂದು ವಾರದ ಡೆಲಿವರಿ | 1765(-) |
| ಪಾಮ್ ವಾರದ ಡೆಲಿವರಿ | 1443(-) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1595 (-) |
| **ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 1,42,900 (-) |
| ಬೆಳ್ಳಿ ಕೆ.ಜಿಗೆ | 2,24,000 (-) |

ಹಿಂದಿನ ದಿನದ ಧಾರಣೆ ಲಭ್ಯವಿಲ್ಲ

**ಅಡಿಕೆ ಧಾರಣೆ**

| | | | | | |
|---|---|---|---|---|---|
| **ಬೆಳ್ತಂಗಡಿ** | | ಬಿಳಿಗೋಟು | 27319-38719 | ಕೆಂಪುಗೋಟು | 22899-37969 |
| ಕೋಕ | 22000-26000 | ಚಾಲಿ | 40699-48800 | ರಾಶಿ | 49999-57559 |
| ಹೊಸತು | 28000-47000 | ಕೋಕ | 23889-34929 | ತಟ್ಟಿಬೆಟ್ಟೆ | 38218- 51121 |
| ಇತರೆ | 24000-38000 | ಕೆಂಪುಗೋಟು | 29099-34699 | **ಸಾಗರ** | |
| **ಶಿರಸಿ** | | ರಾಶಿ | 49689-53299 | ಬಿಳಿಗೋಟು | 10105-11205 |
| ಬೆಟ್ಟೆ | 40400- 49109 | ತಟ್ಟಿಬೆಟ್ಟೆ | 37299- 44319 | ಚಾಲಿ | 27105-28205 |
| ಬಿಳಿಗೋಟು | 25908-39718 | **ಯಲ್ಲಾಪುರ** | | ಕೋಕ | 9105-9505 |
| ಚಾಲಿ | 44099- 48799 | ಅಪ್ಪಿ | 57700- 58600 | ಕೆಂಪುಗೋಟು | 12105-12105 |
| ಕೆಂಪುಗೋಟು | 25268-35822 | ಬಿಳಿಗೋಟು | 16899-42211 | ರಾಶಿ | 23105-31105 |
| ರಾಶಿ | 48698-53699 | ಕೋಕ | 15201- 34299 | **ಶಿವಮೊಗ್ಗ** | |
| **ಸಿದ್ದಾಪುರ** | | ಹೊಸ ಚಾಲಿ | 38298-49199 | ರಾಶಿಇಡಿ | 51000-53000 |

# '₹51 ಸಾವಿರ ಕೋಟಿ ಹೂಡಿಕೆ'

## 'ಇನ್ವೆಸ್ಟ್ ಕರ್ನಾಟಕ ಸಮಾವೇಶ 2026' ರಲ್ಲಿ 48 ಬಹುರಾಷ್ಟ್ರೀಯ ಕಂಪನಿಗಳಿಂದ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಡೆದ 'ಇನ್ವೆಸ್ಟ್ ಕರ್ನಾಟಕ ಸಮಾವೇಶ 2026'ರಲ್ಲಿ ವೈಮಾಂತರಿಕ್ಷ, ವಾಹನ, ಜೈವಿಕ ತಂತ್ರಜ್ಞಾನ ಮತ್ತು ತಯಾರಿಕಾ ವಲಯದ 48 ಬಹುರಾಷ್ಟ್ರೀಯ ಕಂಪನಿಗಳು ರಾಜ್ಯದಲ್ಲಿ ₹51,469 ಕೋಟಿ ಮೊತ್ತದ ಬಂಡವಾಳ ಹೂಡಿಕೆ ಮಾಡಲು ಒಪ್ಪಂದಗಳಿಗೆ ಸಹಿ ಮಾಡಿವೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ವಿವಿಧ ಕಂಪನಿಗಳ ಮುಖ್ಯಸ್ಥರು ಹೂಡಿಕೆ ಒಪ್ಪಂದಗಳಿಗೆ ಸಹಿ ಹಾಕಿ, ಪತ್ರಗಳನ್ನು ವಿನಿಮಯ ಮಾಡಿಕೊಂಡ ಸಂದರ್ಭದಲ್ಲಿ ಮಾತನಾಡಿದ ಅವರು, 'ಈ ಹೊಸ ಹೂಡಿಕೆಗಳು ಜಾಗತಿಕ ಹೂಡಿಕೆದಾರರ ಸಮಾವೇಶ ಹಾಗೂ ದಾವೋಸ್ ಶೃಂಗಸಭೆಗೆ ಹೊರತಾಗಿವೆ. ಬಂಡವಾಳ ಹೂಡಿಕೆ ಆಕರ್ಷಿಸುವ ಪ್ರಯತ್ನಗಳು ಮುಂದೆಯೂ ಸುಸ್ಥಿರ ರೀತಿಯಲ್ಲಿ ನಡೆಯಲಿವೆ' ಎಂದರು.

'ಈ ಹೂಡಿಕೆ ಬದ್ಧತೆಗಳಿಂದ ರಾಜ್ಯದಲ್ಲಿ 70 ಸಾವಿರ ಉದ್ಯೋಗಾವಕಾಶಗಳು ಸೃಷ್ಟಿಯಾಗುವ ನಿರೀಕ್ಷೆ ಇದೆ. ದೇಶದ ಕೈಗಾರಿಕಾ ಭೂಪಟದಲ್ಲಿ ಪ್ರಮುಖ ಕೈಗಾರಿಕಾ ಮತ್ತು ಉದ್ಯೋಗ ಕೇಂದ್ರವಾಗಿ ಕರ್ನಾಟಕದ ಸ್ಥಾನವನ್ನು ಇನ್ನಷ್ಟು ಬಲಪಡಿಸುವಲ್ಲಿ ಈ ಬಂಡವಾಳ ಹೂಡಿಕೆಗಳು ಮಹತ್ವದ ಪಾತ್ರ ವಹಿಸಲಿವೆ' ಎಂದರು.

ಸಮಾವೇಶದಲ್ಲಿ ಪ್ರಮುಖ ಬಹುರಾಷ್ಟ್ರೀಯ ಉದ್ಯಮಗಳ ಹಾಗೂ ತಂತ್ರಜ್ಞಾನ ಕ್ಷೇತ್ರದ ನವೋದ್ಯಮಗಳ 100ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ವಿಶೇಷವಾಗಿ ಕೈಗಾರಿಕೆಗಳ ಬಳಕೆಗೆ ಲಭ್ಯವಿರುವ ಭೂಮಿಯ ವಿಸ್ತೀರ್ಣವನ್ನು ಕೈಗಾರಿಕಾ ಪಾರ್ಕ್‌ಗಳ ಮಟ್ಟದಲ್ಲಿ ಶೇ 68ರಿಂದ ಶೇ 70ಕ್ಕೆ ಮತ್ತು ವೈಯಕ್ತಿಕ ನಿವೇಶನ ಮಟ್ಟದಲ್ಲಿ ಶೇ 34-44ರಿಂದ ಶೇಕಡ 48-53 ಕ್ಕೆ ಹೆಚ್ಚಿಸಲು ವಲಯ ನಿಯಂತ್ರಣಗಳನ್ನು ಪರಿಷ್ಕರಿಸಿರುವುದನ್ನು ಉದ್ಯಮಿಗಳ ಗಮನಕ್ಕೆ ತರಲಾಯಿತು. ರಾಜ್ಯದಾದ್ಯಂತ 20 ವಿಶೇಷ ಹೂಡಿಕೆ ಪ್ರದೇಶಗಳನ್ನು ಗೊತ್ತುಪಡಿಸಲಾಗಿದೆ ಎಂದರು.

ಪ್ರತಿ ಪ್ರದೇಶದಿಂದ ಸಂಗ್ರಹಿಸಲಾದ ಆಸ್ತಿ ತೆರಿಗೆಯನ್ನು ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ ಅದೇ ಪ್ರದೇಶದಲ್ಲಿ ಮರುಹೂಡಿಕೆ ಮಾಡಲಾಗುತ್ತದೆ. ಹೊಸ ಏಕ ಗವಾಕ್ಷಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದೆ. ಇದು ರಾಜ್ಯದಲ್ಲಿ ಹೂಡಿಕೆಗಳನ್ನು ಸುಲಲಿಗೊಳಿಸಲು ಸುವ್ಯವಸ್ಥಿತ ವಿಧಾನ ಒದಗಿಸಲಿದೆ ಎಂದು ಪಾಟೀಲ ತಿಳಿಸಿದರು.

**ಹೂಡಿಕೆ ವಿವರ**

| ಸಂಸ್ಥೆ | ಹೂಡಿಕೆ (₹ಕೋಟಿಗಳಲ್ಲಿ) | ಉದ್ಯೋಗ ಸೃಷ್ಟಿ |
|---|---|---|
| ಅನಂತ ಟೆಕ್ನಾಲಜೀಸ್ | 500 | 800 |
| ಆಕ್ಸಿಸ್ ಕೇಡ್ಸ್ | 500 | 1,500 |
| ಸೆಂಟಮ್ | 500 | 1500 |
| ಹೇವಿಯಸ್ ಏರೋಟೆಕ್ | 450 | 100 |
| ಮಹೀಂದ್ರಾ ಏರೋಸ್ಪೇಸ್ | 2,000 | 3,000 |
| ನ್ಯೂಸ್ಪೇಸ್ | 1100 | 1400 |
| ನಿಬೆ | 300 | 1000 |
| ಪ್ಯಾನಾಟೋನಿ | 240 | 1500 |
| ಟ್ಯಾನ್ಸೊ | 160 | 50 |
| ಯುನಿಮೆಕ್ | 1,000 | 5,000 |
| ಆಸ್ಟ್ರೋ | 1,222 | 3,030 |
| ಆಮೊವಿಯೊ | 500 | 300 |
| ಕೆಪಿ ಗ್ರೂಪ್ | 1,021 | 800 |
| ಅಲ್ಟ್ರಾವೈಲೆಟ್ | 1,000 | 1,900 |
| ಯಜಕಿ | 255 | 150 |
| ಎಪ್ರೊಕ್ ಟೆಕ್ | 50 | 100 |
| ಮಿನಿ ಮೈನ್ಸ್ | 350 | 1,500 |
| ಪೇಸ್ ಡಿಜಿಟೆಕ್ | 1,750 | 1,500 |

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Multiple Vacancy

ಹೊರಗುತ್ತಿಗೆ ಆಧಾರದ ಮೇಲೆ ITI ANY TRADE ಮಾಡಿರುವ ಪುರುಷ ಹಾಗೂ ಮಹಿಳಾ ತಾಂತ್ರಿಕ ಸಹಾಯಕರು ಬೇಕಾಗಿದ್ದಾರೆ.ಪ್ರಸ್ತುತ ಸರ್ಕಾರಿ K.S.R.T.C ಸಂಸ್ಥೆಯ ಬೆಂಗಳೂರು ವಿಭಾಗದ: ಶಾಂತಿನಗರ, ದೀಪಾಂಜಲಿ ನಗರ, ಸ್ಯಾಟಲೈಟ್, ನೆಲಮಂಗಲ ಹಾಗೂ ವಿಭಾಗೀಯ ಕಾರ್ಯಾಗಾರ. ಚಿಕ್ಕಮಗಳೂರು ವಿಭಾಗದ: ಚಿಕ್ಕಮಗಳೂರು, ಕಡೂರು, ಬೇಲೂರು, ಅರಸೀಕೆರೆ, ಸಕಲೇಶಪುರ, ಮೂಡಿಗೆರೆ. ತುಮಕೂರು ವಿಭಾಗದ: ತುಮಕೂರು ಘಟಕ - 1, ತುಮಕೂರು ಘಟಕ - 2, ಶಿರಾ, ಮಧುಗಿರಿ, ತುರುವೇಕೆರೆ, ತಿಪಟೂರು ಹಾಗೂ ಕುಣಿಗಲ್. ಚಿಕ್ಕಬಳ್ಳಾಪುರ ವಿಭಾಗದ: ಚಿಕ್ಕಬಳ್ಳಾಪುರ, ಗೌರಿಬಿದನೂರು, ದೊಡ್ಡಬಳ್ಳಾಪುರ, ಬಾಗೇಪಲ್ಲಿ, ಶಿಡ್ಲಘಟ್ಟ ಹಾಗೂ ಚಿಂತಾಮಣಿ. ಕೋಲಾರ ವಿಭಾಗದ: ಕೋಲಾರದ ಎಲ್ಲಾ ಘಟಕಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ತಾಂತ್ರಿಕ ಸಹಾಯಕರು / ಮೆಕ್ಯಾನಿಕ್ ಬೇಕಾಗಿದ್ದಾರೆ. ಬೇಕಾಗಿರುವ ದಾಖಲಾತಿಗಳು: 1) ಆಧಾರ್ ಕಾರ್ಡ್, 2) ಮೆಡಿಕಲ್ ಫಿಟ್ನೆಸ್ ಪ್ರಮಾಣ ಪತ್ರ, 3) ಐಟಿಐ / ಡಿಪ್ಲೊಮಾ / ಅಪ್ರೆಂಟೀಸ್, ಮಾರ್ಕ್ಸ್ ಕಾರ್ಡ್, 4) ಫೋಟೋಸ್ - 4, 5) ಜಾತಿ ಪ್ರಮಾಣ ಪತ್ರ, 6) ಬ್ಯಾಂಕ್ ಪಾಸ್‌ಬುಕ್. ಎಲ್ಲಾ ದಾಖಲಾತಿಗಳನ್ನು 2 ಸೆಟ್ ಜೆರಾಕ್ಸ್ ನೊಂದಿಗೆ ಬರಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಪ್ರಕಾಶ ಟಿ ಕಛೇರಿ ಮೈಸೂರು: 0821-3588801, 8618943513, 9110692229

General

ಎಸ್‌ಎಲ್‌ಜೆ ಎಂಟರ್‌ಪ್ರೈಸಸ್‌ಗೆ ಆಫೀಸ್ ಸೂಪರ್‌ವೈಸರ್ ಬೇಕಾಗಿದ್ದಾರೆ. ಪದವಿ ಹೊಂದಿರಬೇಕು, ಮಾಸಿಕ ವೇತನ ರೂ.15000 20000 ವಸತಿ ಸೌಲಭ್ಯವಿರುತ್ತದೆ. ಆಸಕ್ತರು ಸಂಪರ್ಕಿಸಿ: 9902060783 ಎಸ್‌ಎಲ್‌ಜೆ ಎಂಟರ್‌ಪ್ರೈಸಸ್, ಪ್ಲಾಟ್ ನಂ.166ಬಿ, ಅವೇರಹಳ್ಳಿ ಕೈಗಾರಿಕಾ ಪ್ರದೇಶ, ಕೆಐಎಡಿಬಿ ದಾಬಸ್‌ಪೇಟೆ 4ನೇ ಹಂತ, ಸರ್ವೆ ನಂ.7/4ಪಿ, ಸೋಮಪುರ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ 562111

EDUCATION
To Place your Classified Ads Contact: 9845114560

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ
ಟೀಚರ್ಸ್ ಟ್ರೈನಿಂಗ್ ಕೋರ್ಸ್
ಪ್ರೈಮರಿ ಟೀಚರ್ಸ್ ಟ್ರೈನಿಂಗ್ [PTT]
Diploma in Computer Teachers Training Course
DIPLOMA IN COMPUTER DATA ENTRY OPERATOR
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು [Qual: SSLC/PUC]
ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
The RCSS
Empanelled & Recognised by Govt. of India & Karnataka
Mob. 9008419955, 9901520055, 9449198555
Email: info@thercss.co, Web: www.thercss.com

Part-Time Jobs

ತಕ್ಷಣ ಬೇಕಾಗಿದ್ದಾರೆ ಕಂಪನಿಗಳಿಗೆ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ 19,000-25,000 ಸಂಪಾದಿಸಿ ಕೊರಿಯರ್ ಸೌಲಭ್ಯವಿದೆ. 9964322833.

ವೈಯಕ್ತಿಕ

Change of Name

ಹೆಸರಿನ ಬದಲಾವಣೆ
ಕೊಪ್ಪಳ ಶ್ರೀ ಗವಿಸಿದ್ಧೇಶ್ವರ ಸಂಸ್ಥಾನ ಶ್ರೀಗವಿಮಠ ಶಾಖಾ ಮಠಗಳ ಪಟ್ಟಾಧಿಕಾರ ಮಹೋತ್ಸವ ದಿನಾಂಕ 11-02-2026 ಬುಧವಾರದ ನಂತರ ಶ್ರೀ ಪ್ರಶಾಂತ ಬಸವರಾಜಯ್ಯ ಹಿರೇಮಠ (ಪೂರ್ವದ ಹೆಸರು) ಬಿರಾಳ ಬಿ, ತಾಲೂಕು ಜೇವರಗಿ ಜಿಲ್ಲೆ ಕಲಬುರ್ಗಿ ಇವರ ಹೆಸರನ್ನು ಶ್ರೀ ಮರಿಶಾಂತವೀರ ಸ್ವಾಮೀಜಿ (ನೂತನ ಹೆಸರು) ಶ್ರೀ ಗವಿಸಿದ್ಧೇಶ್ವರ ಶಾಖಾಮಠ ಕಡಲಬಾಳು ತಾ:ಹಗರಿಬೊಮ್ಮನಳ್ಳಿ, ಜಿಲ್ಲಾ: ವಿಜಯನಗರ ಎಂದು ನಾಮಕರಣ ಮಾಡಲಾಗಿದೆ. ಇದನ್ನು ಕೊಪ್ಪಳ ಉಪ ನೋಂದಣಾಧಿಕಾರಿಗಳಿಂದ ದಿನಾಂಕ: 03-03-2026 ರಂದು ನೋಂದಣಿ (ದಸ್ತಾವೇಜು ಸಂಖ್ಯೆ: ಪಿ 00557) ಮಾಡಲಾಗಿದೆ.

ಹೆಸರಿನ ಬದಲಾವಣೆ
ಕೊಪ್ಪಳ ಶ್ರೀ ಗವಿಸಿದ್ಧೇಶ್ವರ ಸಂಸ್ಥಾನ ಶ್ರೀಗವಿಮಠ ಶಾಖಾ ಮಠಗಳ ಪಟ್ಟಾಧಿಕಾರ ಮಹೋತ್ಸವ ದಿನಾಂಕ 11-02-2026 ಬುಧವಾರದ ನಂತರ ಶ್ರೀ ವೀರೇಶ ಚಿದಾನಂದಯ್ಯ (ಪೂರ್ವದ ಹೆಸರು) ಕುಟುಗನಹಳ್ಳಿ ಗೊರಲೆಕೊಪ್ಪಮಠ, ಕಂಪಸಾಗರ ತಾ:ಜಿಲ್ಲಾ: ಕೊಪ್ಪಳ. ಇವರ ಹೆಸರನ್ನು ಶ್ರೀ ಶಿವಶಾಂತವೀರ ಸ್ವಾಮೀಜಿ (ನೂತನ ಹೆಸರು) ಶ್ರೀ ಗವಿಸಿದ್ಧೇಶ್ವರ ಶಾಖಾಮಠ ಬಿಸರಳ್ಳಿ ತಾ:ಜಿಲ್ಲಾ:ಕೊಪ್ಪಳ ಎಂದು ನಾಮಕರಣ ಮಾಡಲಾಗಿದೆ. ಇದನ್ನು ಕೊಪ್ಪಳ ಉಪ ನೋಂದಣಾಧಿಕಾರಿಗಳಿಂದ ದಿನಾಂಕ: 03-03-2026 ರಂದು ನೋಂದಣಿ (ದಸ್ತಾವೇಜು ಸಂಖ್ಯೆ: ಪಿ 00558) ಮಾಡಲಾಗಿದೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವ್ಯಾಪಾರ

Business Offers

General

BIOMASS BRIQUETTE from Saw Dust, GroundNut Husk and Wood Chips- Monthly 500MT available. Contact: 9845444066

ಪ್ರವಾಸ

Travel Agencies

ಸಿಂಗಾಪುರ ಮಲೇಶಿಯಾ ಮತ್ತು ಥೈಲ್ಯಾಂಡ್ ಪ್ರವಾಸ 11 ದಿನಗಳು 22/4/26, ಲಕ್ಷದೀಪ ಪ್ರವಾಸ 4 ದಿನಗಳು 22/5/26. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಸುವರ್ಣಯಾತ್ರ 9019462508/ 6360146483

Travel

23.04.2026 09.05.2026 22.05.2026 10.06.2026 ರಿಂದ 14/8 ದಿನಗಳ ದೋಧಾಮ್ ಚಾರ್‌ಧಾಮ್. 08.05.2026 ರಿಂದ 6/9 ದಿನಗಳ ವೈದ್ಯನಾಥ ಜ್ಯೋತಿರ್ಲಿಂಗಗಳು ಕಾಶಿ,ಗಯಾ,ಅಯೋಧ್ಯ. 26.06.2026 ರಿಂದ 13/8/6 ರಿಂದ ದಿನಗಳ ಅಮರನಾಥ್ ಯಾತ್ರೆ. ಸಂಪರ್ಕಿಸಿ. ಏಷ್ಯಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು. 9342287551 9986624447 9986254573

ಹೆಸರಾಂತ ಏಷ್ಯನ್ ಟ್ರಾವೆಲ್ಸ್ ಏಜೆನ್ಸಿ ವತಿಯಿಂದ 24.03.2026 12.04.2026 ಕಾಶಿ,ಅಯೋಧ್ಯ,ಬುದ್ಧಗಯಾ 19.04.2026 03.05.2026 ಚಾರ್‌ಧಾಮ ಪ್ರವಾಸ. 20.04.2026, ಕಾಶ್ಮೀರ್ ವೈಷ್ಣೋದೇವಿ ಕುಲುಮನಾಲಿ ಜ್ವಾಲಾಮುಖಿ. 05.07.2026 ಅಮರನಾಥ್ ಹಿಮಲಿಂಗ ದರ್ಶನ. 19.06.2026 ನೇಪಾಳ,ಮುಕ್ತಿನಾಥ ಪೋಖ್ರಾ. ಸಂಪರ್ಕಿಸಿ. 84310888138 8317446683 9686708171

# ಭಾರತಕ್ಕೆ ಹೊರ್ಮುಜ್ ಮುಕ್ತ

ಒಂದನೇ ಪುಟದಿಂದ...

'ಇರಾನ್‌ನ ಶತ್ರುಗಳೊಂದಿಗೆ ಕೈಜೋಡಿಸಿರುವ ದೇಶಗಳ ಹಡಗುಗಳಿಗೆ ಹೊರ್ಮುಜ್ ದಾಟಲು ಅವಕಾಶ ನೀಡುವುದಿಲ್ಲ' ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಹೊರ್ಮುಜ್ ಜಲಸಂಧಿ ಮೂಲಕ ಹಡಗುಗಳ ಸಂಚಾರಕ್ಕೆ ಇರಾನ್ ನಿರ್ಬಂಧ ಹೇರಿದ ಬೆನ್ನಲ್ಲೇ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿತ್ತು. ಹೊರ್ಮುಜ್ ಬದಲಿಗೆ, ಪರ್ಶಿಯನ್ ಮತ್ತು ಒಮಾನ್ ಕೊಲ್ಲಿಯ ಮೂಲಕ ತೈಲ ಹಡಗುಗಳು ಸಂಚರಿಸುತ್ತಿದ್ದವು. ಆದರೆ, ಈ ಮಾರ್ಗವು ವಿಶ್ವದ ಒಟ್ಟು ತೈಲ ಮತ್ತು ಎಲ್‌ಎನ್‌ಜಿ ಬೇಡಿಕೆಯ ಶೇ 20ರಷ್ಟನ್ನು ಮಾತ್ರ ಪೂರೈಸುತ್ತದೆ.

ಪಶ್ಚಿಮ ಏಷ್ಯಾ ಸಂಘರ್ಷ ಶಮನಕ್ಕೆ ಮತ್ತು ಹೊರ್ಮುಜ್ ಜಲಸಂಧಿ ಮೂಲಕ ತೈಲ ಹಡಗುಗಳ ಮುಕ್ತ ಸಂಚಾರಕ್ಕೆ ಭಾರತವೂ ಕೆಲವು ವಾರಗಳಿಂದ ರಾಜತಾಂತ್ರಿಕ ಪ್ರಯತ್ನಗಳನ್ನು ನಡೆಸಿತ್ತು.

### ಪ್ರತಿಕ್ರಿಯೆ ನೀಡಿದ ಇರಾನ್

'ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸಲು ಅಮೆರಿಕ, ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಮುಂದಿಟ್ಟಿರುವ 15 ಅಂಶಗಳ ಒಪ್ಪಂದದ ಪ್ರಸ್ತಾವಕ್ಕೆ ಇರಾನ್, ಅನಾಮಧೇಯ ಮಧ್ಯಸ್ಥಿಕೆದಾರರ ಮೂಲಕ ಪ್ರತಿಕ್ರಿಯೆ ನೀಡಿದೆ' ಎಂದು ತಸ್ನೀಮ್ ಸುದ್ದಿಸಂಸ್ಥೆ ವರದಿ ಮಾಡಿದೆ.

'ಇರಾನ್ ಈಗಾಗಲೇ ತನ್ನ ಪ್ರತಿಕ್ರಿಯೆಯನ್ನು ಅಧಿಕೃತವಾಗಿ ಅಮೆರಿಕಕ್ಕೆ ತಿಳಿಸಿದೆ ಮತ್ತು ಅಲ್ಲಿಂದ ಬರುವ ಉತ್ತರಕ್ಕಾಗಿ ಕಾಯುತ್ತಿದೆ' ಎಂದು ಖಚಿತ ಮೂಲಗಳನ್ನು ಉಲ್ಲೇಖಿಸಿ ಸುದ್ದಿಸಂಸ್ಥೆ ವರದಿ ಮಾಡಿದೆ.

# ಇಂಧನ ದಾಸ್ತಾನು 60 ದಿನಗಳಿಗೆ ಸಾಕು

ಒಂದನೇ ಪುಟದಿಂದ...

ಇಂಧನ ಕೊರತೆ ಇದೆ ಎಂಬ ವರದಿಗಳು ಜನರು ಭೀತಿಗೆ ಒಳಗಾಗಿ ಇವುಗಳನ್ನು ಮುಗಿಬಿದ್ದು ಖರೀದಿಸಲಿ ಎನ್ನುವ ಉದ್ದೇಶದ ಸುಳ್ಳುಗಳು ಎಂದು ಸಚಿವಾಲಯವು ಆಕ್ರೋಶ ವ್ಯಕ್ತಪಡಿಸಿದೆ. ದೇಶದ ಎಲ್ಲೆಡೆ ಪೆಟ್ರೋಲ್ ಬಂಕ್‌ಗಳಲ್ಲಿ ಇಂಧನ ದಾಸ್ತಾನು ಅಗತ್ಯ ಪ್ರಮಾಣದಲ್ಲಿ ಇದೆ, ಎಲ್ಲವೂ ಎಂದಿನಂತೆ ಕೆಲಸ ಮಾಡುತ್ತಿವೆ, ದೇಶದಲ್ಲಿ ಪೆಟ್ರೋಲ್ ಅಥವಾ ಡೀಸೆಲ್ ಖರೀದಿ, ಮಾರಾಟದ ಮೇಲೆ ನಿರ್ಬಂಧ ಇಲ್ಲ ಎಂದು ಸಚಿವಾಲಯ ತಿಳಿಸಿದೆ.

ಭಾರತವು ಸಂಸ್ಕರಿಸಿದ ಇಂಧನವನ್ನು ವಿಶ್ವದ 150 ದೇಶಗಳಿಗೆ ರಫ್ತು ಮಾಡುವುದನ್ನು ಮುಂದುವರಿಸಿದೆ ಎಂದೂ ಸಚಿವಾಲಯದ ಪ್ರಕಟಣೆಯಲ್ಲಿ ಹೇಳಲಾಗಿದೆ. ಕಚ್ಚಾ ತೈಲವನ್ನು ಪೆಟ್ರೋಲ್, ಡೀಸೆಲ್‌ನಂತಹ ಇಂಧನಗಳನ್ನಾಗಿ ಸಂಸ್ಕರಿಸುವ ದೇಶದ ಪ್ರತಿ ಘಟಕವೂ 'ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡುತ್ತಿದೆ' ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ. ಮುಂದಿನ 60 ದಿನಗಳಿಗೆ ಬೇಕಿರುವ ಕಚ್ಚಾ ತೈಲದ ಪೂರೈಕೆಯನ್ನು ದೇಶದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಖಚಿತಪಡಿಸಿಕೊಂಡಿವೆ. ಪೂರೈಕೆಯಲ್ಲಿ ಅಡಚಣೆ ಇಲ್ಲ ಎಂದು ತಿಳಿಸಿದೆ.

74 ದಿನಗಳ ಅಗತ್ಯವನ್ನು ಪೂರೈಸುವಷ್ಟು ಕಚ್ಚಾ ತೈಲ ದಾಸ್ತಾನು ಮಾಡಿಕೊಳ್ಳುವ ಸಾಮರ್ಥ್ಯವು ದೇಶಕ್ಕೆ ಇದೆ. ಪಶ್ಚಿಮ ಏಷ್ಯಾದಲ್ಲಿ ಯುದ್ಧ ಆರಂಭವಾಗಿ 27 ದಿನಗಳು ಕಳೆದಿದ್ದರೂ, ಈಗಲೂ 60 ದಿನಗಳಿಗೆ ಆಗುವಷ್ಟು ಸಂಗ್ರಹ ಇದೆ. ಇದರಲ್ಲಿ ಕಚ್ಚಾ ತೈಲ, ಇಂಧನ ಸೇರಿವೆ ಎಂದು ಸಚಿವಾಲಯವು ಮಾಹಿತಿ ನೀಡಿದೆ.

### 'ತಿಂಗಳುಗಳವರೆಗೆ ಸಮಸ್ಯೆ ಇಲ್ಲ'

ಜಾಗತಿಕ ಮಟ್ಟದಲ್ಲಿ ಏನೇ ಬದಲಾವಣೆ ಆದರೂ, ದೇಶದ ಪ್ರತಿ ಪ್ರಜೆಗೆ ಸರಿಸುಮಾರು ಎರಡು ತಿಂಗಳಿಗೆ ಆಗುವಷ್ಟು ಇಂಧನದ ನಿರಂತರ ಪೂರೈಕೆ ಇರಲಿದೆ ಎಂದು ಸಚಿವಾಲಯವು ಭರವಸೆ ನೀಡಿದೆ. ಅಲ್ಲದೆ, ಮುಂದಿನ ಎರಡು ತಿಂಗಳಿಗೆ ಆಗುವಷ್ಟು ಕಚ್ಚಾ ತೈಲದ ಪೂರೈಕೆಯನ್ನು ಈಗಾಗಲೇ ಖಚಿತಪಡಿಸಿಕೊಳ್ಳಲಾಗಿದೆ. ಹೀಗಾಗಿ, ಮುಂದಿನ ಹಲವು ತಿಂಗಳುಗಳವರೆಗೆ ಭಾರತಕ್ಕೆ ಸಮಸ್ಯೆ ಇಲ್ಲ ಎಂದು ತಿಳಿಸಿದೆ.

### 'ಎಲ್‌ಪಿಜಿ ಬಗ್ಗೆ ಭೀತಿ ಬೇಡ'

ದೇಶದಲ್ಲಿ ಎಲ್‌ಪಿಜಿ ಪೂರೈಕೆಯು ಅಗತ್ಯಕ್ಕೆ ಆಗುವಷ್ಟು ಇದೆ. ಆಂತರಿಕ ಉತ್ಪಾದನೆಯನ್ನು ಹೆಚ್ಚು ಮಾಡಲಾಗಿದೆ, ಆಮದು ಅಗತ್ಯವನ್ನು ಕಡಿಮೆ ಮಾಡಲಾಗಿದೆ. ಬೇರೆ ಬೇರೆ ದೇಶಗಳಿಂದ ಹೆಚ್ಚುವರಿಯಾಗಿ ಎಲ್‌ಪಿಜಿ ತರಿಸಿಕೊಳ್ಳಲು ಕ್ರಮ ಕೈಗೊಂಡಿದ್ದು, ಲಭ್ಯತೆಯಲ್ಲಿ ಸ್ಥಿರತೆ ಇರಲಿದೆ ಎಂದು ಹೇಳಿದೆ. ಸರ್ಕಾರದ ಆದೇಶದ ನಂತರದಲ್ಲಿ ದೇಶದಲ್ಲಿ ಎಲ್‌ಪಿಜಿ ಉತ್ಪಾದನೆಯು ಶೇ 40ರಷ್ಟು ಹೆಚ್ಚಾಗಿದೆ, ದಿನವೊಂದಕ್ಕೆ 50 ಸಾವಿರ ಟನ್ ಎಲ್‌ಪಿಜಿ ಉತ್ಪಾದನೆ ಆಗುತ್ತಿದೆ. ದೇಶಕ್ಕೆ ಪ್ರತಿದಿನ ಅಂದಾಜು 80 ಸಾವಿರ ಟನ್ ಎಲ್‌ಪಿಜಿ ಬೇಕು. ಈಗಿನ ಉತ್ಪಾದನೆಯು ದೇಶದ ಅಗತ್ಯದ ಶೇ 60ರಷ್ಟಕ್ಕಿಂತ ಹೆಚ್ಚು ಎಂದು ಮಾಹಿತಿ ಒದಗಿಸಿದೆ.

ನಿತ್ಯದ ಆಮದು ಅಗತ್ಯವು 30 ಸಾವಿರ ಟನ್‌ಗೆ ತಗ್ಗಿದೆ... ಅಮೆರಿಕ, ರಷ್ಯಾ, ಆಸ್ಟ್ರೇಲಿಯಾ ಹಾಗೂ ಇತರ ದೇಶಗಳಿಂದ ಎಲ್‌ಪಿಜಿ ಹೊತ್ತ ಹಡಗುಗಳು ಭಾರತದತ್ತ ಬರುತ್ತಿವೆ ಎಂದು ತಿಳಿಸಿದೆ. 'ಒಂದು ತಿಂಗಳ ಅಗತ್ಯದ ಎಲ್‌ಪಿಜಿ ಖಾತರಿ ಆಗಿರುವುದಲ್ಲದೆ, ಹೆಚ್ಚುವರಿ ಎಲ್‌ಪಿಜಿಖರೀದಿಗೆ ನಿರಂತರವಾಗಿ ಕೆಲಸಗಳು ನಡೆದಿವೆ' ಎಂದು ಹೇಳಿಕೆಯಲ್ಲಿ ತಿಳಿಸಿದೆ.

### ಕ್ರಮದ ಎಚ್ಚರಿಕೆ

ಇಂಧನದ ಕೊರತೆ ಇದೆ ಎಂದು ಜನರನ್ನು ತಪ್ಪುದಾರಿಗೆ ಎಳೆಯುವಂತಹ ಸಾಮಾಜಿಕ ಜಾಲತಾಣ ಪೋಸ್ಟ್‌ಗಳನ್ನು ಅನಗತ್ಯ ಭೀತಿ ಸೃಷ್ಟಿಸುವ ಉದ್ದೇಶದಿಂದ ಹಂಚಿಕೊಳ್ಳಲಾಗುತ್ತಿದೆ. ಹೀಗೆ ಮಾಡುವವರ ವಿರುದ್ಧ ಕ್ರಮ ಜರುಗಿಸಲಾಗುತ್ತದೆ ಎಂದು ಸಚಿವಾಲಯ ಎಚ್ಚರಿಕೆ ನೀಡಿದೆ.

### ಸಚಿವಾಲಯ ಹೇಳಿದ್ದು

- ಪೆಟ್ರೋಲ್ ಬಂಕ್ ಮಾಲೀಕರ ಬಳಿ ದುಡಿಯುವ ಬಂಡವಾಳದ ಇಲ್ಲ ಎಂಬ ಕಾರಣಕ್ಕೆ ಬಂಕ್‌ಗಳಲ್ಲಿ ಇಂಧನ ಕೊರತೆ ಆಗಬಾರದು. ಹೀಗಾಗಿ ಒಂದು ದಿನದ ಬದಲು ಕಂಪನಿಗಳು ಅವರಿಗೆ ಮೂರಕ್ಕೂ ಹೆಚ್ಚು ದಿನಗಳಿಗೆ ಇಂಧನವನ್ನು ಸಾಲವಾಗಿ ಕೊಡುವಂತೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.
- ವಿಶ್ವದೆಲ್ಲೆಡೆಗೆ ಬೇರೆ ಬೇರೆ ದೇಶಗಳು ಇಂಧನ ಬೆಲೆ ಹೆಚ್ಚಿಸಿವೆ, ಮಾರಾಟದ ಮೇಲೆ ನಿರ್ಬಂಧ ವಿಧಿಸಿವೆ, ಸಮ-ಬೆಸ ನೋಂದಣಿ ಸಂಖ್ಯೆ ಆಧರಿಸಿ ವಾಹನಗಳಿಗೆ ಇಂಧನ ಮಾರಾಟದ ಮೇಲೆ ನಿರ್ಬಂಧ ಜಾರಿಗೆ ತಂದಿವೆ, ಕೆಲವೆಡೆ ಬಂಕ್‌ಗಳನ್ನು ಒತ್ತಾಯದಿಂದ ಮುಚ್ಚಿಸಲಾಗಿದೆ. ಆದರೆ ಭಾರತದಲ್ಲಿ ಅಂತಹ ಯಾವ ಸಮಸ್ಯೆಯೂ ಇಲ್ಲ.
- ಜನರು ಭೀತಿಗೆ ಒಳಗಾಗಿ ಇಂಧನ ಖರೀದಿಸಿದ ಪ್ರಸಂಗಗಳು ಅಲ್ಲಲ್ಲಿ ನಡೆದಿವೆ. ಉದ್ದೇಶಪೂರ್ವಕವಾಗಿ ಸುಳ್ಳು ಮಾಹಿತಿ ಇರುವ ಕೆಲವು ವಿಡಿಯೊಗಳನ್ನು ಕೆಲವು ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಂಡಿದ್ದುದು ಇದಕ್ಕೆ ಕಾರಣ.
- ಹೊರ್ಮುಜ್ ಜಲಸಂಧಿಯಲ್ಲಿ ಸಮಸ್ಯೆ ಸೃಷ್ಟಿಯಾಗಿದ್ದರೂ, ಹಿಂದೆ ಈ ಜಲಸಂಧಿಯ ಮೂಲಕ ಸಾಗಿಬರುತ್ತಿದ್ದ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲವನ್ನು ಇಂದು ಭಾರತವು 41 ಪೂರೈಕೆದಾರರಿಂದ ಪಡೆದುಕೊಳ್ಳುತ್ತಿದೆ.



# ಶ್ರೀರಾಮ: ಧರ್ಮದ ಸುಂದರ ಎರಕ

• ಎಸ್. ಸೂರ್ಯಪ್ರಕಾಶ ಪಂಡಿತ್

ಮಂಗಳಕರವಾದುದು, ಎಂದರೆ ಎಲ್ಲರ ಒಳಿತನ್ನು ಕಾಪಾಡುವಂಥ ತತ್ತ್ವವೊಂದು ಸೃಷ್ಟಿಯ ಜೊತೆಜೊತೆಯಲ್ಲಿಯೇ ಕೂಡಿಕೊಂಡಿರುತ್ತದೆ. ಇದು ಪುರುಷಾಕಾರದಲ್ಲಿ ತೋರಿಕೊಂಡ ದಿನವೇ ಶ್ರೀರಾಮನವಮಿ; ಆ ಮಂಗಳಕರ ತತ್ತ್ವವೇ ಶ್ರೀರಾಮ. ಕಾಳಿದಾಸನು ರಾಮನನ್ನು ಜಗತ್ತಿನ 'ಪ್ರಥಮ ಮಂಗಳ' ಎಂದು ಕರೆದಿದ್ದಾನೆ. ಎಂದರೆ, ಈ ಮಂಗಳತತ್ತ್ವ ಎಂದಿನಿಂದಲೂ ಇದೆ ಎಂದು ಅರ್ಥ. ಅನಾದಿಕಾಲದಿಂದಲೂ ಇದು ಹೇಗಿದೆ ಎಂದು ತಿಳಿಯಬೇಕಾದರೆ ನಾವು ವಾಲ್ಮೀಕಿ ರಾಮಾಯಣವನ್ನು ನೋಡಬೇಕಾಗುತ್ತದೆ. ಶ್ರೀರಾಮನು ಧರ್ಮದ ಮೂರ್ತರೂಪವಾಗಿದ್ದಾನೆ ಎನ್ನುತ್ತಾರೆ, ವಾಲ್ಮೀಕಿ ಮಹರ್ಷಿ. ಮಂಗಳಕರವಾದುದು ಹೇಗಿರುತ್ತದೆ ಎಂದರೆ ಅದು ರಾಮನಂತೆ ಇರುತ್ತದೆ. ಹೀಗಾಗಿ ನಾವು ಧರ್ಮವನ್ನು ತಿಳಿಯಬೇಕಾದರೆ ರಾಮನ ವ್ಯಕ್ತಿತ್ವವನ್ನು ನೋಡಬೇಕಾಗುತ್ತದೆ.

ಶ್ರೀರಾಮನ ಆಚರಿಸಿದ ಧರ್ಮವೆಲ್ಲವೂ ಮಾನುಷಜೀವನದ ರೀತಿ-ನೀತಿಗಳಿಗೆ ಸೇರಿದಂಥವು. ಗುಣವಂತನಾದ ಮನುಷ್ಯನು ಕುಟುಂಬದಲ್ಲಿ ಹೇಗೆ ಬದುಕಬೇಕು, ಸಮಾಜದಲ್ಲಿ ಹೇಗೆ ಬದುಕಬೇಕು ಎಂಬುದಕ್ಕೆ ಆದರ್ಶವಾದುದು ರಾಮನ ನಡೆ-ನುಡಿಗಳು. ಮೊದಲಿಗೆ ತನ್ನತನದಲ್ಲಿ ಸದ್ಗುಣಗಳನ್ನು ಒಂದಾಗಿಸಿಕೊಳ್ಳಬೇಕು; ಆ ಬಳಿಕ, ಹೀಗೆ ಒಂದಾಗಿಸಿಕೊಂಡಿರುವ ಗುಣಗಳನ್ನು ಸಮಷ್ಟಿಯೊಂದಿಗೆ ಮಿಳಿತವಾಗಿಸಿಕೊಂಡು ಜೀವನವನ್ನು ನಡೆಸಬೇಕು. ಹೀಗೆ ವ್ಯಷ್ಟಿ-ಸಮಷ್ಟಿಗಳಲ್ಲಿ ಸಾಮರಸ್ಯದಿಂದ ಪ್ರಕಟವಾಗುವ ಗುಣಮಾಧುರ್ಯವೇ 'ಧರ್ಮ' ಎನಿಸಿಕೊಳ್ಳುವುದು. ಸಿಹಿಯನ್ನು ಚಿತ್ರದಲ್ಲಿ ಬಣ್ಣಿಸಲಾಗದು; ನಾಲಗೆಯ ಅನುಭವವೇ ಅದಕ್ಕೆ ಪ್ರಮಾಣ. ಅಂತೆಯೇ ಧರ್ಮವೂ ಕಣ್ಣಿಗೆ ಕಾಣುವ ಒಂದನೊಂದು ರೂಪವಲ್ಲ; ಅದು ವ್ಯಕ್ತಿಯೊಬ್ಬನ ನಡೆ-ನುಡಿಗಳಲ್ಲಿ ಪ್ರಕಟವಾಗುವ ಭಾವ. ಇಂಥ ಅಮೂರ್ತವಾದ ಧರ್ಮಕ್ಕೆ ಆಕಾರ ಒದಗಿ ಆದ ವಿಗ್ರಹವೇ ಶ್ರೀರಾಮ; ಎಂದರೆ ಅವನನ್ನು ಬಿಟ್ಟು ಧರ್ಮವಿಲ್ಲ, ಧರ್ಮವನ್ನು ಬಿಟ್ಟು ಅವನಿಲ್ಲ - ಎಂಬ ತಾದಾತ್ಮ್ಯ. ಶ್ರೀರಾಮನು ಮನುಷ್ಯರೂಪದಲ್ಲಿ ಇಷ್ಟು ಪರಿಪೂರ್ಣವಾಗಿ ಬಾಳಿದ ಕಾರಣದಿಂದಲೇ ಅವನನ್ನು ನಮ್ಮ ಸಂಸ್ಕೃತಿಯು ದೈವವಾಗಿ ಕಂಡರಿಸಿತು. ಶ್ರೀರಾಮನ ಈ ದೈವತ್ವದ ಬಗ್ಗೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಆಡಿರುವ ಮಾತುಗಳು ಮನನೀಯವಾಗಿವೆ:

'ರಾಮಚಂದ್ರನಾದರೂ ಹೀಗೆಯೇ ಬಾಳಿನಲ್ಲಿ ಅವರವರ ಸಮ್ಮತಿಗೆ ಅನುಗುಣವಾಗಿ ಒಳ್ಳೆಯದನ್ನು ಸಾಧಿಸುವ ಒಂದು ಆಕಾರವಾಗಿದ್ದಾನೆ. ಆ ಆಕಾರವನ್ನು ಕೆಲವರು ಮನುಷ್ಯನೆನ್ನಬಹುದು; ಇನ್ನು ಕೆಲವರು ದೈವವೆಂದು ಪೂಜಿಸಬಹುದು. ದೈವವೆಂದು ಪೂಜಿಸುವವರು ತಪ್ಪು ಮಾಡುವರೆಂದು ಇತರರು ಭಾವಿಸಬಾರದು. ದೇವರು ಎನ್ನುವ ತತ್ತ್ವವನ್ನು ಒಪ್ಪದವರು, ಬಾಳಿನಲ್ಲಿ ಯಾವುದನ್ನು ಆದರ್ಶವಾಗಿ ಎಣಿಸುವುದು ಸಾಧ್ಯ, ವಿಚಾರಮಾಡಲಿ. ರಾಮನು ಆ ಆದರ್ಶದ ಮಟ್ಟಕ್ಕೆ ಮೀರಿರುವನು ಅಥವಾ ಹತ್ತಿರ ಹತ್ತಿರ ಸಾರುವನು ಎಂದು ಕಾಣುತ್ತದೆ. ದೇವರು ಎನ್ನುವ ತತ್ತ್ವ ಉಂಟು. ಆದರೆ ಅದು ಈ ರಾಮನೆಂಬ ಚಿತ್ರದಿಂದ ಬೇರೆ ಎನ್ನುವವರು, ತಮ್ಮ ಭಾವಕ್ಕೆ ಒಂದು ರೂಪವನ್ನು ಕೊಡಲು ಯತ್ನಮಾಡಲಿ. ಅದು ರಾಮನನ್ನು ಹೋಲುವುದೆಂದು ಕಾಣುತ್ತದೆ.'

ವೈಯಕ್ತಿಕ ಹಿತವನ್ನಷ್ಟೆ ಸಾಧಿಸಿಕೊಡುವುದು ಧರ್ಮವಲ್ಲ; ಋತ, ಎಂದರೆ ಹಲವರ ಹಿತವನ್ನೂ ನೆಲೆಯನ್ನೂ ಎತ್ತಿಹಿಡಿಯುವುದು ಧರ್ಮ - ಎಂಬುದನ್ನು ನಿರೂಪಿಸಿ, ಅದನ್ನು ತನ್ನ ವ್ಯಕ್ತಿತ್ವದ ಬೆಳಕಿನಲ್ಲಿ ಲೋಕಕ್ಕೆ ಕಾಣಿಸಿದವನು ಶ್ರೀರಾಮ. ಋತಕ್ಕೆ ಪೂರಕವಾಗಿರುವ ಧರ್ಮನ ಹೆಜ್ಜೆಗಳು ಬಹಳ ಸಂಕೀರ್ಣವಾಗಿರುತ್ತವೆ. ಕೆಲವೊಮ್ಮೆ ಇವು ಶಕ್ತಿಯ ಲಾಸ್ಯದಂತೆಯೂ ಇರಬಹುದು; ಕೆಲವೊಮ್ಮೆ ಶಿವನ ತಾಂಡವದಂತೆಯೂ ಪ್ರಕಟವಾಗಬಹುದು. ಧರ್ಮದ ಈ ಎರಡೂ ಆಯಾಮಗಳನ್ನೂ ಶ್ರೀರಾಮನ ಚರಿತೆಯು ನಮಗೆ ತೋರಿಸಿಕೊಟ್ಟಿದೆ.

ಶ್ರೀರಾಮ ನಮ್ಮ ಸಂಸ್ಕೃತಿಯ ಲಕ್ಷಣವನ್ನು ರೂಪಿಸಿದ ಧರ್ಮದ ಎರಕ. ನಾವು ಧರ್ಮದ ಮಾರ್ಗದಲ್ಲಿದ್ದೇವೆಯೋ, ಅಧರ್ಮದ ಹಾದಿಯಲ್ಲಿದ್ದೇವೋ - ಎಂಬ ತೀರ್ಮಾನಕ್ಕೆ ಒದಗುವ ಧರ್ಮದಂಡವೇ ಶ್ರೀರಾಮ ಎಂಬ ಮಹಾತತ್ತ್ವ. ಎಲ್ಲಿಯವರೆಗೂ ರಾಮಾಯಣ ಎಂಬ ಜೀವನದಿ ನಮ್ಮ ರಾಷ್ಟ್ರಕಾವ್ಯವಾಗಿರುತ್ತದೆಯೋ, ಎಲ್ಲಿಯವರೆಗೂ ಶ್ರೀರಾಮ ಎಂಬ ಜೀವತತ್ತ್ವ ನಮ್ಮ ಪ್ರತ್ಯಕ್ಷದೈವವಾಗಿರುತ್ತಾನೋ, ಅಲ್ಲಿಯವರೆಗೂ ನಮ್ಮ ನೆಲದಲ್ಲಿ ಧರ್ಮ ಎಂಬ ಸಂಸ್ಕೃತಿಯ ಬೆಳೆಯನ್ನು ಅಧಾರ್ಮಿಕವಾದ ವಿಕೃತ ಕಳೆಗಳು ನಾಶಮಾಡಲಾರವು. ❖

## ಸುದ್ದಿ 2 ನಿಮಿಷ

### ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿದ ನಯಾರಾ

ನವದೆಹಲಿ (ಪಿಟಿಐ): ದೇಶದ ಖಾಸಗಿ ವಲಯದ ಅತಿದೊಡ್ಡ ತೈಲೋತ್ಪನ್ನ ಮಾರಾಟ ಕಂಪನಿ ನಯಾರಾ ಎನರ್ಜಿ ಪೆಟ್ರೋಲ್ ಬೆಲೆಯನ್ನು ಲೀಟರಿಗೆ ₹5ರಷ್ಟು, ಡೀಸೆಲ್ ಬೆಲೆಯನ್ನು ₹3ರಷ್ಟು ಹೆಚ್ಚಿಸಿದೆ ಎಂದು ಮೂಲಗಳು ತಿಳಿಸಿವೆ. ಈ ಮೂಲಕ ಕಚ್ಚಾ ತೈಲದ ಬೆಲೆ ಏರಿಕೆಯನ್ನು ಅದು ಗ್ರಾಹಕರಿಗೆ ಭಾಗಶಃ ವರ್ಗಾವಣೆ ಮಾಡಿದೆ.

ಫೆಬ್ರುವರಿ 28ರ ನಂತರ ಕಚ್ಚಾ ತೈಲದ ಬೆಲೆಯು ಸರಿಸುಮಾರು ಶೇ 50ರಷ್ಟು ಹೆಚ್ಚಳ ಕಂಡಿದೆ. ದೇಶದಲ್ಲಿರುವ ಒಟ್ಟು 1.02 ಲಕ್ಷ ಪೆಟ್ರೋಲ್ ಬಂಕ್‌ಗಳಲ್ಲಿ 6,967 ಬಂಕ್‌ಗಳು ನಯಾರಾ ಎನರ್ಜಿ ಕಂಪನಿಗೆ ಸೇರಿದವು.

ಕಚ್ಚಾ ತೈಲ ಪೂರೈಕೆಯಲ್ಲಿ ಆಗಿರುವ ವ್ಯತ್ಯಯವು ಹಿಂದೆಂದೂ ಕಾಣದಂತಹ ಸವಾಲುಗಳನ್ನು ಸೃಷ್ಟಿಸಿದೆ ಎಂದು ನಯಾರಾ ಎನರ್ಜಿ ಪ್ರಕಟಣೆ ತಿಳಿಸಿದೆ.

ಖಾಸಗಿ ವಲಯದ ಇನ್ನೊಂದು ಕಂಪನಿಯಾದ ಜಿಯೊ-ಬಿಪಿ ಇದುವರೆಗೆ ಬೆಲೆ ಹೆಚ್ಚಳ ಮಾಡಿಲ್ಲ. ಆದರೆ ಕಂಪನಿಯು ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದಿಂದ ಭಾರಿ ನಷ್ಟ ಅನುಭವಿಸುತ್ತಿದೆ. ಕಂಪನಿಯು 2,185 ಬಂಕ್‌ಗಳನ್ನು ಹೊಂದಿದೆ.

ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಕಂಪನಿಗಳು ಪ್ರೀಮಿಯಂ ಪೆಟ್ರೋಲ್ ಹಾಗೂ ಕೈಗಾರಿಕಾ ಬಳಕೆಯ ಡೀಸೆಲ್ ಬೆಲೆಯನ್ನು ಮಾತ್ರ ಈಚೆಗೆ ಹೆಚ್ಚಿಸಿವೆ.

### ಬಿಎಸ್‌ಎನ್‌ಎಲ್‌ನಿಂದ 60 ಸಾವಿರ ಟವರ್: ಸಿಂಧಿಯಾ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಕಂಪನಿಯು 50 ಸಾವಿರದಿಂದ 60 ಸಾವಿರದವರೆಗೆ ಹೊಸ ಮೊಬೈಲ್ ಟವರ್‌ಗಳನ್ನು ತನ್ನ ಜಾಲಕ್ಕೆ ಸೇರಿಸಲಿದೆ ಎಂದು ಕೇಂದ್ರ ದೂರಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ.

ಕಂಪನಿಯ ಕಾರ್ಯಾಚರಣೆ ಲಾಭವು ಎರಡು ಅಂಕಿಗಳಲ್ಲಿ ಹೆಚ್ಚಳ ಕಾಣುವ ನಿರೀಕ್ಷೆ ಇದೆ ಎಂದೂ ಅವರು ಗುರುವಾರ ತಿಳಿಸಿದ್ದಾರೆ.

ಕಂಪನಿಯು ವರ್ಷವೊಂದರ ಗರಿಷ್ಠ ಮೊತ್ತದ ಬಂಡವಾಳ ವೆಚ್ಚವನ್ನು ಪೂರ್ಣಗೊಳಿಸಿದೆ. ₹20 ಸಾವಿರ ಕೋಟಿ ರೂಪಾಯಿ ಬಂಡವಾಳವನ್ನು ಕಂಪನಿಯು 4ಜಿ ಜಾಲ ನಿರ್ಮಾಣಕ್ಕೆ ವಿನಿಯೋಗಿಸಿದೆ. ಇದನ್ನು 5ಜಿ ಜಾಲವನ್ನಾಗಿ ಮೇಲ್ದರ್ಜೆಗೆ ಏರಿಸಲಾಗುವುದು ಎಂದು ಅವರು ಹೇಳಿದ್ದಾರೆ.

'ಇಂದು ಬಿಎಸ್‌ಎನ್‌ಎಲ್‌ನ ಒಂದು ಲಕ್ಷ ಟವರ್‌ಗಳು ಇವೆ... ಇವು 4ಜಿ ಆಧಾರಿತವಾಗಿವೆ. ಇವುಗಳನ್ನು ನೆಲೆಯಾಗಿ ಇರಿಸಿಕೊಂಡು ನಾವು ಜಾಲವನ್ನು ವಿಸ್ತರಿಸಲು ಮುಂದಾಗಿದ್ದೇವೆ' ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಬಿಎಸ್‌ಎನ್‌ಎಲ್ ಕಂಪನಿಯ ಜಾಲವನ್ನು ಆತ್ಮನಿರ್ಭರ 4ಜಿ ಉಪಕರಣ ಬಳಸಿ ನಿರ್ಮಿಸಲಾಗಿದೆ. ಹೀಗಾಗಿ ಇದನ್ನು 5ಜಿಗೆ ಮೇಲ್ದರ್ಜೆಗೆ ಏರಿಸುವುದು ಕಷ್ಟದ ಕೆಲಸ ಆಗುವುದಿಲ್ಲ ಎಂದು ಅವರು ಹೇಳಿದ್ದಾರೆ. 2024ರ ಜೂನ್‌ನಲ್ಲಿ ಕಂಪನಿಯು 8.55 ಕೋಟಿ ಬಳಕೆದಾರರನ್ನು ಹೊಂದಿತ್ತು, ಈಗ ಅವರ ಸಂಖ್ಯೆಯು 9.27 ಕೋಟಿಗೆ ಹೆಚ್ಚಾಗಿದೆ ಎಂದಿದ್ದಾರೆ.

18 ವರ್ಷಗಳ ನಂತರದಲ್ಲಿ ಕಂಪನಿಯು ತ್ರೈಮಾಸಿಕವೊಂದರಲ್ಲಿ ಲಾಭ ಕಂಡಿದೆ, ₹262 ಕೋಟಿ ಲಾಭ ವರದಿ ಮಾಡಿದೆ.

## ಅಬುಧಾಬಿ: ಕ್ಷಿಪಣಿ ಅವಶೇಷ ಬಿದ್ದು ಭಾರತೀಯ ಬಲಿ

ಪ್ಯಾರಿಸ್/ಫ್ರಾನ್ಸ್ (ಎಎಫ್‌ಪಿ): ಇರಾನ್ ವಿರುದ್ಧ ವೈಮಾನಿಕ ದಾಳಿಯನ್ನು ಇಸ್ರೇಲ್ ತೀವ್ರಗೊಳಿಸಿದೆ. ಇಸ್ರೇಲ್‌ನ ನಗರಗಳನ್ನು ಗುರಿಯಾಗಿಸಿ ಇರಾನ್ ಸೇನೆ ಕ್ಷಿಪಣಿ, ಡ್ರೋನ್‌ಗಳನ್ನು ಹಾರಿಸಿದೆ.

ಇರಾನ್ ಹಾರಿಸಿದ ಕ್ಷಿಪಣಿಯ ಅವಶೇಷ ಬಿದ್ದು ಅಬುಧಾಬಿಯಲ್ಲಿ ಒಬ್ಬ ಭಾರತೀಯ ಸೇರಿ ಇಬ್ಬರು ಮೃತಪಟ್ಟಿದ್ದಾರೆ. ಮೂವರು ಗಾಯಗೊಂಡಿದ್ದಾರೆ. ಇಸ್ರೇಲ್‌ನಲ್ಲೂ 6 ಮಂದಿ ಗಾಯಗೊಂಡಿದ್ದಾರೆ. ದಕ್ಷಿಣ ಲೆಬನಾನ್‌ನ ಬೈರೂತ್‌ನಲ್ಲಿ ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿ ನಡೆಸಿದ ದಾಳಿ ವೇಳೆ ಸೈನಿಕರೊಬ್ಬರು ಮೃತಪಟ್ಟಿರುವುದಾಗಿ ಇಸ್ರೇಲ್ ಸೇನೆ ಹೇಳಿದೆ. ಇರಾನ್‌ನ 18 ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ಸೌದಿ ಅರೇಬಿಯಾ ಹೇಳಿದೆ.

**ಇರಾಕ್‌ಗೆ ಮನವಿ:** 'ಇರಾನ್ ಪರ ಸಶಸ್ತ್ರ ಗುಂಪುಗಳಿಗೆ ತನ್ನ ನೆಲದಿಂದ ದಾಳಿ ನಡೆಸಲು ಇರಾಕ್ ಅವಕಾಶ ನೀಡಬಾರದು, ತಕ್ಷಣವೇ ದಾಳಿ ನಿಲ್ಲಿಸಬೇಕು' ಎಂದು ಜೋರ್ಡನ್, ಸೌದಿ ಅರೇಬಿಯಾ, ಬಹ್ರೇನ್ ಸೇರಿದಂತೆ ಹಲವು ಕೊಲ್ಲಿ ದೇಶಗಳು ಇರಾಕ್‌ಗೆ ಆಗ್ರಹಿಸಿವೆ.

**ಯುದ್ಧಕಾಲ ಬಜೆಟ್:** ದಕ್ಷಿಣ ಕೊರಿಯಾ 17 ಬಿಲಿಯನ್ ಡಾಲರ್ ಮೊತ್ತದ ಯುದ್ಧಕಾಲದ ಬಜೆಟ್ ಸಿದ್ಧಪಡಿಸಿದೆ. ತೈಲ ಬಿಕ್ಕಟ್ಟು ಮುಂದುವರಿದಿರುವುದರಿಂದ ಇಂಧನ ತೆರಿಗೆ ಕಡಿತವನ್ನು ಇನ್ನಷ್ಟು ದಿನ ವಿಸ್ತರಿಸಲು ನಿರ್ಧರಿಸಿದೆ.

## ಮುಖ್ಯಮಂತ್ರಿಗಳ ಜತೆ ಮೋದಿ ಸಂವಾದ ಇಂದು

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಪರಿಣಾಮಗಳನ್ನು ಎದುರಿಸುವ ಕುರಿತು, ಚುನಾವಣೆ ಘೋಷಣೆಯಾಗಿರುವ ರಾಜ್ಯಗಳನ್ನು ಹೊರತುಪಡಿಸಿ ಉಳಿದ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಸಂವಾದ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಕುರಿತಾಗಿ ಮೊದಲ ಬಾರಿಗೆ ಮುಖ್ಯಮಂತ್ರಿಗಳ ಜತೆ ಪ್ರಧಾನಿ ಅವರ ಸಂವಾದ ನಡೆಯಲಿದೆ.

'ಯುದ್ಧದ ಪರಿಣಾಮಗಳನ್ನು ಎದುರಿಸಲು ಕೈಗೊಂಡಿರುವ ಸಿದ್ಧತೆಗಳು ಮತ್ತು ಯೋಜನೆಗಳ ಕುರಿತು ಪ್ರಧಾನಿ ಅವರು ಮುಖ್ಯಮಂತ್ರಿಗಳ ಜೊತೆ ಶುಕ್ರವಾರ ಸಂಜೆ ವಿಡಿಯೊ ಸಂವಾದ ನಡೆಸಲಿದ್ದಾರೆ' ಎಂದು ಮೂಲಗಳು ಹೇಳಿವೆ.

ತಮಿಳುನಾಡು, ಪಶ್ಚಿಮಬಂಗಾಳ, ಅಸ್ಸಾಂ, ಕೇರಳ ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೆರಿಯಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ ಅಲ್ಲಿನ ಮುಖ್ಯಮಂತ್ರಿಗಳಿಗೆ ಸಭೆಗೆ ಆಹ್ವಾನ ನೀಡಿಲ್ಲ. ಅಲ್ಲಿನ ಮುಖ್ಯ ಕಾರ್ಯದರ್ಶಿಗಳ ಜೊತೆ ಸಂಪುಟ ಸಚಿವಾಲಯವು ಪ್ರತ್ಯೇಕ ಸಭೆ ನಡೆಸಲಿದೆ.

# ಹೊತ್ತಿ ಉರಿದ ಬಸ್: 14 ಮಂದಿ ಸಾವು

## ಆಂಧ್ರಪ್ರದೇಶದ ರಾಯವರಂ ಬಳಿ ಖಾಸಗಿ ಬಸ್–ಟಿಪ್ಪರ್ ನಡುವೆ ಭೀಕರ ಅಪಘಾತ; 28 ಪ್ರಯಾಣಿಕರಿಗೆ ಗಾಯ

ಪ್ರಜಾವಾಣಿ ವಾರ್ತೆ/ಪಿಟಿಐ

**ರಾಯವರಂ:** ಆಂಧ್ರಪ್ರದೇಶದ ಮಾರ್ಕಾಪುರಂ ಜಿಲ್ಲೆಯ ರಾಯವರಂ ಸಮೀಪ ಗುರುವಾರ ಬೆಳಿಗ್ಗೆ ಹರಿಕೃಷ್ಣ ಟ್ರಾವೆಲ್ಸ್‌ಗೆ ಸೇರಿದ ಬಸ್ ಟಿಪ್ಪರ್‌ಗೆ ಡಿಕ್ಕಿ ಹೊಡೆದು ಬೆಂಕಿ ಹೊತ್ತಿಕೊಂಡ ಪರಿಣಾಮ 14 ಪ್ರಯಾಣಿಕರು ಸಜೀವ ದಹನವಾಗಿದ್ದಾರೆ. 28 ಮಂದಿ ಗಾಯಗೊಂಡಿದ್ದಾರೆ.

ಸಾವಿಗೀಡಾದವರಲ್ಲಿ ಐದು ತಿಂಗಳ ಶಿಶು ಮತ್ತು ಮಹಿಳೆಯರು ಸೇರಿದ್ದಾರೆ. ಕೆಲವರು ಬಸ್ ಒಳಗೆ ಜೀವಂತವಾಗಿ ಸುಟ್ಟು ಹೋದರೆ, ಮತ್ತೆ ಕೆಲವರು ಪ್ರಾಣ ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಕಿಟಕಿಗಳ ನಡುವೆ ಸಿಲುಕಿ ಬೆಂಕಿಗೆ ಆಹುತಿಯಾಗಿದ್ದಾರೆ.

ತೆಲಂಗಾಣದ ಜಗಿತ್ಯಾಲದಿಂದ ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಕಲಿಗಿರಿಗೆ ಹೊರಟಿದ್ದ ‘ಸೀಟರ್–ಕಮ್–ಸ್ಲೀಪರ್’‘ ನಾನ್–ಎಸಿ ಬಸ್ ರಾಯವರಂ ಬಳಿ ಬೆಳಿಗ್ಗೆ 5.30ರಿಂದ 6 ಗಂಟೆ ನಡುವೆ ಅಪಘಾತ ಸಂಭವಿಸಿದೆ. ಜಲ್ಲಿಕಲ್ಲು ತುಂಬಿದ್ದ ಟಿಪ್ಪರ್‌ಗೆ ಬಸ್ ಡಿಕ್ಕಿ ಹೊಡೆದಿದೆ. ಈ ವೇಳೆ ಟಿಪ್ಪರ್‌ನ ಡೀಸೆಲ್ ಟ್ಯಾಂಕ್‌ಗೆ ಹಾನಿಯಾಗಿ ಬೆಂಕಿ ಹೊತ್ತಿಕೊಂಡಿದ್ದು, ಕೆಲವೇ ಕ್ಷಣಗಳಲ್ಲಿ ಎಲ್ಲೆಡೆ ವ್ಯಾಪಿಸಿದೆ. ದಟ್ಟ ಹೊಗೆಯಿಂದಾಗಿ ಕೆಲ ಪ್ರಯಾಣಿಕರು ಹೊರಬರುವ ಮುನ್ನವೇ ಉಸಿರುಗಟ್ಟಿ ಮೃತಪಟ್ಟಿದ್ದಾರೆ. ಎಲ್ಲ ಪ್ರಯಾಣಿಕರು ಜಗಿತ್ಯಾಲ, ನೆಲ್ಲೂರು ಹಾಗೂ ಮಾರ್ಕಾಪುರಂ ಜಿಲ್ಲೆಗೆ ಸೇರಿದ್ದಾರೆ.

ಸ್ಥಳಕ್ಕೆ ಬಂದ ಮೂರು ಅಗ್ನಿಶಾಮಕ ವಾಹನಗಳು ಬೆಂಕಿಯನ್ನು ನಂದಿಸಿದವು.

‘ಬಸ್‌ನಲ್ಲಿ 41 ಪ್ರಯಾಣಿಕರಿದ್ದರು. ಗಾಯಾಳುಗಳನ್ನು ಮಾರ್ಕಾಪುರಂ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಏಳು ಮಂದಿಯ ಸ್ಥಿತಿ ಗಂಭೀರವಾಗಿದೆ. ಹರಿಕೃಷ್ಣ ಟ್ರಾವೆಲ್ಸ್‌ನ ಮಾಲೀಕರು ಕನಿಗಿರಿಗೆ ಸೇರಿದವರು. ಈ ಬಸ್ 2026ರ ಡಿಸೆಂಬರ್‌ವರೆಗೆ ಪರವಾನಗಿ, ವಿಮೆ ಹೊಂದಿದೆ’ ಎಂದು ಗೃಹ ಸಚಿವೆ ವೆಂಗಲಪುಡಿ ಅನಿತಾ ತಿಳಿಸಿದ್ದಾರೆ.

‘ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ಜಿಲ್ಲಾಧಿಕಾರಿ ಪಿ. ರಾಜಾಬಾಬು ತಿಳಿಸಿದ್ದಾರೆ.

**ತನಿಖೆಗೆ ಆದೇಶ:** ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಹಿರಿಯ ಅಧಿಕಾರಿಗಳು ಮತ್ತು ಸಚಿವರೊಂದಿಗೆ ಟೆಲಿಕಾನ್ಫರೆನ್ಸ್ ನಡೆಸಿದ್ದಾರೆ. ಗಾಯಾಳುಗಳಿಗೆ ಅಗತ್ಯ ವೈದ್ಯಕೀಯ ನೆರವು ನೀಡಬೇಕು. ಅಪಘಾತದ ಕುರಿತು ತನಿಖೆ ನಡೆಸಬೇಕು ಎಂದು ನಿರ್ದೇಶನ ನೀಡಿದ್ದಾರೆ.

ಆಂಧ್ರಪ್ರದೇಶದ ರಾಯವರಂ ಸಮೀಪ ಗುರುವಾರ ಖಾಸಗಿ ಬಸ್ ಹಾಗೂ ಟಿಪ್ಪರ್ ಬೆಂಕಿಗಾಹುತಿಯಾಗಿವೆ —ಪಿಟಿಐ ಚಿತ್ರ

### ಅಪಘಾತಕ್ಕೆ ತಾಂತ್ರಿಕ ದೋಷ ಕಾರಣ?

ಅಪಘಾತಕ್ಕೂ ಒಂದು ಗಂಟೆ ಮೊದಲು ಬಸ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿತ್ತು ಎನ್ನಲಾಗಿದೆ.

‘ತೆಲಂಗಾಣದ ಜಗಿತ್ಯಾಲದಿಂದ ಬುಧವಾರ ಸಂಜೆ ಹೊರಟ ಬಸ್ ತಾಂತ್ರಿಕ ದೋಷದಿಂದಾಗಿ ಯೆರ್ರಗೊಂಡಪಾಲಂನಲ್ಲಿ ನಿಂತಿತ್ತು. ವಾಹನದ ಸೆನ್ಸಾರ್‌ಗಳು ಜಾಮ್ ಆಗಿದ್ದವು. ಅದನ್ನು ಸರಿಪಡಿಸಲು ಚಾಲಕ ಪ್ರಯತ್ನಿಸಿದರು. ಒಂದು ಗಂಟೆಯ ಬಳಿಕ, ಚಾಲಕ ಕಡಿಮೆ ವೇಗದಲ್ಲಿ ವಾಹನ ಚಲಾಯಿಸಿದರು. ರಾಯವರಂ ಬಳಿ ಘಾಟ್ ರಸ್ತೆಯಲ್ಲಿ ಬಸ್ ಏರುತ್ತಿದ್ದಾಗ, ಸ್ಟೀರಿಂಗ್ ವೀಲ್ ಲಾಕ್ ಆಗಿ ಬಸ್ ಬಲಗಡೆಗೆ ತಿರುಗಿ ವಿರುದ್ಧ ದಿಕ್ಕಿನಲ್ಲಿ ಸಾಗತೊಡಗಿತು. ಜಲ್ಲಿಕಲ್ಲು ತುಂಬಿಕೊಂಡು ಬರುತ್ತಿದ್ದ ಟಿಪ್ಪರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೆಂಕಿ ಹೊತ್ತಿಕೊಂಡಿತು’ ಎಂದು ಬಸ್ ಕ್ಲೀನರ್ ತಿಳಿಸಿದ್ದಾರೆ.

### ತಲಾ ₹7 ಲಕ್ಷ ಪರಿಹಾರ

ಆಂಧ್ರಪ್ರದೇಶ ಸರ್ಕಾರವು ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ಘೋಷಿಸಿದೆ.

ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಡಿ ತಲಾ ₹2 ಲಕ್ಷ ಹಾಗೂ ಗಾಯಾಳುಗಳಿಗೆ ತಲಾ ₹50 ಸಾವಿರ ಪರಿಹಾರ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿದ್ದಾರೆ. ಅಲ್ಲದೆ ಘಟನೆಗೆ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ.

### ಪ್ರಾಣ ಉಳಿಸಿಕೊಳ್ಳಲು ಹೋರಾಟ

ರಾಯವರಂ (ಪಿಟಿಐ): ಧಗಧಗನೆ ಹೊತ್ತಿ ಉರಿಯುತ್ತಿದ್ದ ಬಸ್, ಅದರೊಳಗೆ ಆವರಿಸಿದ್ದ ದಟ್ಟ ಹೊಗೆ, ಬೆಂಕಿ ಹಾಗೂ ಉಸಿರುಗಟ್ಟಿಸುವ ಹೊಗೆಯಿಂದ ಪಾರಾಗಲು ಪ್ರಯತ್ನಿಸುತ್ತಿದ್ದ ಪ್ರಯಾಣಿಕರು, ಏನಾಗುತ್ತಿದೆ ಎಂದು ಅರಿವಾಗುವಷ್ಟರಲ್ಲೇ ಜೀವ ಕಳೆದುಕೊಂಡ ಪ್ರಯಾಣಿಕರು.

ರಾಯವರಂ ಗ್ರಾಮದ ಬಳಿ ಗುರುವಾರ ಬೆಳಿಗ್ಗೆ ಸಂಭವಿಸಿದ ಬಸ್ ಅಗ್ನಿ ಅವಘಡದ ದಾರುಣ ದೃಶ್ಯಗಳಿವು.

ಸುಟ್ಟು ಕರಕಲಾಗಿದ್ದ ಅನೇಕ ಶವಗಳು ರಸ್ತೆಯಲ್ಲಿ ಬಿದ್ದಿದ್ದವು. ನಂತರ, ಅವುಗಳನ್ನು ಆಂಬುಲೆನ್ಸ್‌ಗಳೊಳಗೆ ಇರಿಸಲಾಯಿತು. ಒಂದು ಶವದ ಪಕ್ಕೆಲುಬು ಕೂಡ ಗೋಚರಿಸಿದ್ದು, ಬೆಂಕಿಯ ತೀವ್ರತೆಯನ್ನು ಸೂಚಿಸುತ್ತಿತ್ತು.

‘ನಾವು ಮೂವರು ಬಸ್‌ನಲ್ಲಿ ಹಿಂದಿನಿಂದ ಐದನೇ ಸಾಲಿನಲ್ಲಿ ಕುಳಿತು ನಿದ್ದೆ ಮಾಡುತ್ತಿದ್ದೆವು. ಇದ್ದಕ್ಕಿದ್ದಂತೆ ಆಸನಗಳಿಂದ ಬಿದ್ದೆವು. ನಮ್ಮೊಂದಿಗಿದ್ದ ಹುಡುಗ, ‘ಚಿಕ್ಕಮ್ಮ ನಾವು ಸಾಯುತ್ತೇವೆ’ ಎಂದ. ಆ ಬಳಿಕ, ಆತ ಏನಾದ ಎಂಬುದು ಗೊತ್ತಾಗಲಿಲ್ಲ’ ಎಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮಹಿಳೆಯೊಬ್ಬರು ತಾವು ಅನುಭವಿಸಿದ ಭಯಾನಕ ಕ್ಷಣಗಳನ್ನು ವಿವರಿಸಿದರು.

‘ಬಸ್‌ನೊಳಗೆ ದಟ್ಟ ಹೊಗೆ ಆವರಿಸಿದ್ದರಿಂದ ಉಸಿರಾಡಲು ಕಷ್ಟವಾಯಿತು. ಎಲ್ಲೆಡೆ ಕತ್ತಲೆ ಆವರಿಸಿತ್ತು. ಬೆಂಕಿಯನ್ನು ಕಂಡಾಕ್ಷಣ ಬಸ್‌ನಿಂದ ಹೊರಗೆ ಜಿಗಿದೆ’ ಎಂದು ಬಸ್‌ನ ಮೊದಲ ಆಸನದಲ್ಲಿ ಕುಳಿತಿದ್ದ ಯುವಕನೊಬ್ಬ ತಿಳಿಸಿದ. ‘ನಾನು ಫೋನ್ ನೋಡುತ್ತಿದ್ದೆ. ಅಪಘಾತದ ಸಮಯದಲ್ಲಿ ತುರ್ತು ನಿರ್ಗಮನ ಬಾಗಿಲು ತೆರೆದು ಒಬ್ಬ ಮಹಿಳೆಯು ಹೊರಗೆ ಹೋಗಲು ಸಹಾಯ ಮಾಡಿದೆ’ ಎಂದು ವ್ಯಕ್ತಿಯೊಬ್ಬರು ತಿಳಿಸಿದ್ದಾರೆ.

## ಬಾಹ್ಯಾಕಾಶ ಕಾರ್ಯಕ್ರಮಗಳು ವಿಳಂಬ ಸಾಧ್ಯತೆ: ಸಂಸದೀಯ ಸಮಿತಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬಿಡುಗಡೆಯಾದ ಅನುದಾನದ ಬಳಕೆ ಹಾಗೂ ಯೋಜನೆ ಅನುಷ್ಠಾನ ನಿರೀಕ್ಷಿತ ಮಟ್ಟದಲ್ಲಿ ಆಗದಿರುವ ಕಾರಣ, ಇಸ್ರೊದ ಮಹತ್ವಾಕಾಂಕ್ಷೆಯ ಬಾಹ್ಯಾಕಾಶ ಕಾರ್ಯಕ್ರಮಗಳು ನಿಗದಿತ ಕಾಲಮಿತಿಯಲ್ಲಿ ಕೈಗೂಡುವುದಿಲ್ಲ ಎಂದು ಸಂಸದೀಯ ಸಮಿತಿಯೊಂದು ತನ್ನ ವರದಿಯಲ್ಲಿ ಕಳವಳ ವ್ಯಕ್ತಪಡಿಸಿದೆ.

‘ಯೋಜನೆ ಅನುಷ್ಠಾನದಲ್ಲಿನ ಈ ವಿಳಂಬದಿಂದಾಗಿ ಉದ್ದೇಶಿತ ಬಾಹ್ಯಾಕಾಶ ಕಾರ್ಯಕ್ರಮಗಳು ಇಸ್ರೊಗೆ ಸವಾಲುಗಳಾಗಿ ಪರಿಣಮಿಸುವ ಸಾಧ್ಯತೆ ಇದೆ’ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಕುರಿತ ಸಂಸದೀಯ ಸ್ಥಾಯಿ ಸಮಿತಿ ಹೇಳಿದೆ.

ಚಂದ್ರಯಾನ–4, ಚಂದ್ರಯಾನ–5 ಹಾಗೂ ಶುಕ್ರ ಗ್ರಹ ಕಕ್ಷೆಗಾಮಿ ಬಾಹ್ಯಾಕಾಶ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಅನುದಾನ, ಈ ವರೆಗೆ ಆಗಿರುವ ವೆಚ್ಚ, ಯೋಜನೆಗಾಗಿ ಸಾಧನಗಳ ಖರೀದಿ ಕುರಿತಂತೆ ಬಾಹ್ಯಾಕಾಶ ಇಲಾಖೆ ಅಧಿಕಾರಿಗಳು ನೀಡಿದ ಮಾಹಿತಿ ಆಧರಿಸಿ, ಸಮಿತಿ ಈ ವರದಿ ಸಿದ್ಧಪಡಿಸಿದೆ.

ಈ ಬಾಹ್ಯಾಕಾಶ ಕಾರ್ಯಕ್ರಮಗಳಿಗೆ ಬಳಸುವ ಗಗನನೌಕೆಯ ವಿನ್ಯಾಸದಲ್ಲಿ ಮಾಡಿರುವ ಬದಲಾವಣೆಗಳು, ಕಚ್ಚಾ ವಸ್ತುಗಳ ಖರೀದಿ ಮುಂದೂಡಿರುವುದು ಸೇರಿ ವಿವಿಧ ಕಾರಣಗಳಿಂದಾಗಿ ಅನುದಾನ ಬಳಕೆ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2027ರ ಅಕ್ಟೋಬರ್‌ನಲ್ಲಿ ಕಾರ್ಯಗತಗೊಳಿಸುವ ಉದ್ದೇಶದ ಚಂದ್ರಯಾನ–4, ₹2,104 ಕೋಟಿ ವೆಚ್ಚದ ಯೋಜನೆ. 2025–26ನೇ ಸಾಲಿನ ಬಜೆಟ್‌ನಲ್ಲಿ ₹129 ಕೋಟಿ ಹಂಚಿಕೆಯಾಗಿತ್ತು. ಈ ಪೈಕಿ ಜನವರಿ 31ರ ವರೆಗೆ ಇಸ್ರೊ ₹34 ಕೋಟಿ ಮಾತ್ರ ಖರ್ಚು ಮಾಡಿದೆ. ₹982 ಕೋಟಿ ವೆಚ್ಚದ ಚಂದ್ರಯಾನ–5 ಯೋಜನೆ ಪೈಕಿ ₹58 ಲಕ್ಷ, ₹29.5 ಕೋಟಿ ವೆಚ್ಚದ ಶುಕ್ರ ಗ್ರಹ ಕಾರ್ಯಕ್ರಮದಡಿ ₹5.12 ಕೋಟಿ ಖರ್ಚು ಮಾಡಿದೆ.

## ₹114.98 ಕೋಟಿ ವಂಚನೆ : ಸಿಬಿಐ ದಾಳಿ

**ನವದೆಹಲಿ (ಪಿಟಿಐ):** ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ ₹114.98 ಕೋಟಿ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿ ಎಫ್‌ಐಆರ್ ದಾಖಲಿಸಿಕೊಂಡಿದ್ದ ಕೇಂದ್ರೀಯ ತನಿಖಾ ಸಂಸ್ಥೆ (ಸಿಬಿಐ), ರಿಲಯನ್ಸ್ ಟೆಲಿಕಾಂನ ಇಬ್ಬರು ಮಾಜಿ ನಿರ್ದೇಶಕರ ನಿವಾಸ ಮತ್ತು ಕಂಪನಿಯ ಕಚೇರಿ ಮೇಲೆ ಗುರುವಾರ ದಾಳಿ ನಡೆಸಿದೆ.

‘ರಿಲಯನ್ಸ್ ಟೆಲಿಕಾಂನಲ್ಲಿ ನಿರ್ದೇಶಕರಾಗಿದ್ದ ಸತೀಶ್ ಸೇಠ್, ಗೌತಮ್ ಬಿ ದೋಶಿ ಸೇರಿದಂತೆ ಹಲವರ ವಿರುದ್ಧ ವಂಚನೆ ಮತ್ತು ಒಳಸಂಚು ಆರೋಪದ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಅಡಿ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಲಾಗುತ್ತಿದೆ’ ಎಂದು ಸಿಬಿಐ ವಕ್ತಾರ ತಿಳಿಸಿದ್ದಾರೆ.

₹114.98 ಕೋಟಿ ನಷ್ಟ ಉಂಟು ಮಾಡಿರುವ ಕುರಿತು ಎಸ್‌ಬಿಐ ದೂರು ನೀಡಿತ್ತು. ರಿಲಯನ್ಸ್ ಟೆಲಿಕಾಂ ಲಿಮಿಟೆಡ್‌ಗೆ ₹ 735 ಕೋಟಿ ಅವಧಿ ಸಾಲ (ಟರ್ಮ್ ಲೋನ್) ನೀಡಿದ್ದ 11 ಬ್ಯಾಂಕ್‌ಗಳ ಒಕ್ಕೂಟದಲ್ಲಿ ಎಸ್‌ಬಿಐ ಕೂಡಾ ಒಂದಾಗಿತ್ತು. ಸತೀಶ್ ಸೇಠ್ ಮತ್ತು ಗೌತಮ್ ಬಿ.ದೋಶಿ ಅವರ ಮುಂಬೈನಲ್ಲಿರುವ ನಿವಾಸಗಳು ಮತ್ತು ರಿಲಯನ್ಸ್ ಟೆಲಿಕಾಂನ ಕಚೇರಿಯಲ್ಲಿ ಪರಿಶೀಲನೆ ನಡೆದಿದೆ.

## ‘ಏಪ್ರಿಲ್ 9ರ ಬಳಿಕ ಒಳಮೀಸಲಾತಿ ಚರ್ಚೆ’

ಒಂದನೇ ಪುಟದಿಂದ...

ಜಲಸಂಪನ್ಮೂಲ ಇಲಾಖೆಯಲ್ಲಿ 2003ರಲ್ಲಿ ನೇಮಕಾತಿ ಹೊಂದಿ ಇಲಾಖಾ ಬೇರ್ಪಡಿಸುವಿಕೆಯ ಸಂದರ್ಭದಲ್ಲಿ, ಯಾವ ಇಲಾಖೆಗೆ ಸೇರುತ್ತೇವೆಂದು ಅಭಿಮತ ಸಲ್ಲಿಸದೇ ಜಲಸಂಪನ್ಮೂಲ ಇಲಾಖೆ ಯಲ್ಲಿಯೇ ಮುಂದುವರೆದಿರುವ 379 ಅಧಿಕಾರಿ, ನೌಕರರನ್ನು ಜಲಸಂಪನ್ಮೂಲ ಇಲಾಖೆಯ ಆಯಾ ವೃಂದದ ಜ್ಯೇಷ್ಠತಾ ಪಟ್ಟಿಯಲ್ಲಿ ಪರಿಗಣಿಸುವ ಪ್ರಸ್ತಾವಕ್ಕೆ ಸಂಪುಟ ಒಪ್ಪಿಗೆ ನೀಡಿದೆ ಎಂದು ತಿಳಿಸಿದರು.

‘ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ (ಆರ್‌ಬಿಎಸ್‌ಕೆ) ಯೋಜನೆಯಡಿ ಅನುಮತಿ ನೀಡಲಾದ 148 ಚಿಕಿತ್ಸಾ ಕಾರ್ಯವಿಧಾನಗಳಷ್ಟೇ ಅಲ್ಲದೆ, ಒಪ್ಪಂದದಲ್ಲಿ ಸೇರದೇ ಇರುವ ಹೆಚ್ಚಿನ ಚಿಕಿತ್ಸೆಗಳನ್ನು ಕೈಗೊಂಡಿದ್ದಕ್ಕಾಗಿ 2015-16 ರಿಂದ 2018-19ವರೆಗೆ ಆಗಿರುವ ವೆಚ್ಚದ ಬಾಕಿ ₹ 23.30 ಕೋಟಿಯ ಬಿಲ್ಲುಗಳನ್ನು ಸುವರ್ಣ ಆರೋಗ್ಯ ಸುರಕ್ಷತಾ ಟ್ರಸ್ಟ್ (ಎಸ್‌ಎಎಸ್‌ಟಿ) ಅನುದಾನದಿಂದ ಪಾವತಿಸಲು ಸಭೆಗೆ ಒಪ್ಪಿಗೆ ನೀಡಿದೆ’ ಎಂದರು.

‘ವಿಧಾನ ಸಭೆಯಲ್ಲಿ ಅಂಗೀಕಾರಗೊಂಡಿರುವ ಶಿಕ್ಷಣ ಸಂಸ್ಥೆಗಳ ಭೂಮಿಯನ್ನು ಸಂರಕ್ಷಿಸುವ ಉದ್ದೇಶದ ‘ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳ ಭೂಮಿ ರಕ್ಷಣೆ ಮತ್ತು ಸಕ್ರಮಾತಿ) ಮಸೂದೆ ಮತ್ತು ಶಿಕ್ಷಕರ ವರ್ಗಾವಣೆ ಸ್ವರೂಪದಲ್ಲಿ ಆಮೂಲಾಗ್ರ ಬದಲಾವಣೆ ತರುವ ಉದ್ದೇಶದ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಮಸೂದೆ ಮತ್ತು ರಾಜ್ಯದಲ್ಲಿ ಸಂಚರಿಸುವ ಬಾಡಿಗೆ ವಾಹನಗಳು ಮತ್ತು ಇತರ ವಾಹನಗಳ ತೆರಿಗೆ ಪರಿಷ್ಕರಣೆಗೆ ಅವಕಾಶ ಕಲ್ಪಿಸುವ ‘ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ಮಸೂದೆಗೆ ಸಭೆ ಘಟನೋತ್ತರ ಅನುಮೋದನೆ ನೀಡಿದೆ’ ಎಂದು ತಿಳಿಸಿದರು.

**ವಿಶೇಷ ಸಂಪುಟ ಸಭೆ ಮುಂದಕ್ಕೆ:** ಒಳಮೀಸಲಾತಿ ಜಾರಿಗೊಳಿಸುವ ಕುರಿತಂತೆ ಚರ್ಚಿಸಲು ಶುಕ್ರವಾರ (ಮಾ. 27) ನಿಗದಿಯಾಗಿದ್ದ ವಿಶೇಷ ಸಚಿವ ಸಂಪುಟ ಸಭೆಯನ್ನು ಮುಂದೂಡಲಾಗಿದೆ.

ಬಾಗಲಕೋಟೆ ಮತ್ತು ದಾವಣಗೆರೆ ವಿಧಾನಸಭಾ ಕ್ಷೇತ್ರಗಳಿಗೆ ನಡೆಯಲಿರುವ ಉಪ ಚುನಾವಣೆಯ ಕಾರಣಕ್ಕೆ ಚುನಾವಣಾ ಆಯೋಗ ಮಾದರಿ ನೀತಿ ಸಂಹಿತೆ ಜಾರಿ ಗೊಳಿಸಿದೆ. ಈ ಕಾರಣ ನೀಡಿ ಸಭೆ ಮುಂದೂಡಲಾಗಿದೆ.

ಮಾರ್ಚ್ 5ರಂದು ನಡೆದಿದ್ದ ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಹಂಚಿಕೆ ಕುರಿತು ಸಂಪುಟ ಸದಸ್ಯರ ನಡುವೆ ಒಮ್ಮತ ಮೂಡದ ಕಾರಣ ಯಾವುದೇ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗಿರಲಿಲ್ಲ. ಪರಿಶಿಷ್ಟ ಜಾತಿ ಸಚಿವರು ಮತ್ತು ಶಾಸಕರು ಮಾ. 10ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿಧಾನಸೌಧದಲ್ಲಿ ಭೇಟಿ ಮಾಡಿ ತ್ವರಿತವಾಗಿ ಒಳ ಮೀಸಲಾತಿ ಜಾರಿ ಮಾಡುವಂತೆ ಒತ್ತಾಯಿಸಿದ್ದರು. ಇದಕ್ಕಾಗಿ ವಿಶೇಷ ಸಭೆ ಕರೆಯಲಾಗಿತ್ತು.

ಒಂದನೇ ತರಗತಿ ಸೇರುವ ವಿದ್ಯಾರ್ಥಿಗಳಿಗೆ ವಯೋಮಿತಿ ಸಡಿಲಿಕೆ ಸರಿಯೇ?
• ಸರಿ • ತಪ್ಪು
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

## ಮಾನಹಾನಿಕರ ವಿಡಿಯೊ: ‘ಎಕ್ಸ್’ ವಿರುದ್ಧ ಕ್ರಮ

**ತಿರುವನಂತಪುರ:** ಎ.ಐ (ಕೃತಕ ಬುದ್ಧಿಮತ್ತೆ) ಮೂಲಕ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಚುನಾವಣಾ ಆಯೋಗವನ್ನು ಮಾನಹಾನಿಕರವಾಗಿ ಚಿತ್ರಿಸಿದ ವಿಡಿಯೊ ಪ್ರಸಾರ ಸಂಬಂಧ ಸಾಮಾಜಿಕ ಮಾಧ್ಯಮ ವೇದಿಕೆ ‘ಎಕ್ಸ್’ ವಿರುದ್ಧ ಕೇರಳ ಪೊಲೀಸರು ಕಾನೂನು ಕ್ರಮ ಜರುಗಿಸಿದ್ದಾರೆ.

ಬಿಜೆಪಿ ಕೇರಳ ಘಟಕದ ಮುದ್ರೆ ಇದ್ದ ದಾಖಲೆಯೊಂದನ್ನು ಕೇರಳ ಮುಖ್ಯ ಚುನಾವಣಾ ಅಧಿಕಾರಿ ಹಂಚಿಕೆ ಮಾಡಿದ್ದಾರೆ ಎಂಬ ವಿವಾದ ಸೃಷ್ಟಿಯಾಗಿತ್ತು. ಈ ಸಂಬಂಧ ವಿಡಿಯೊವೊಂದನ್ನು ಸೃಷ್ಟಿಸಿ ಸಾಮಾಜಿಕ ಮಾಧ್ಯಮದಲ್ಲಿ ಹರಡಲಾಗಿತ್ತು.

ಘಟನೆ ಕುರಿತಂತೆ ಗುರುವಾರ ಕೇರಳ ಪೊಲೀಸರು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಎ.ಐನಿಂದ ಸೃಷ್ಟಿಸಲಾದ ಕೃತಕ ವಿಡಿಯೊ ಸಾಮಾಜಿಕ ಮಾಧ್ಯಮ ವೇದಿಕೆ ‘ಎಕ್ಸ್’ನಲ್ಲಿತ್ತು.

ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿ ‘ಎಕ್ಸ್’ಗೆ ನೋಟಿಸ್ ನೀಡಿ, ಕಾನೂನು ಬಾಹಿರ ದೃಶ್ಯ ತೆಗೆಯಲು ಸೂಚಿಸಲಾಗಿದೆ. ‘ಲಕ್ಷ್ಮಿ ಎನ್ ರಾಜು’ ಎಂಬ ಎಕ್ಸ್ ಖಾತೆ ಮತ್ತು ಇತರರ ವಿರುದ್ಧ ತಿರುವನಂತಪುರ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

## ಕೌಂಟಿ ಕ್ರಿಕೆಟ್‌ಗೆ ರಾಹುಲ್ ಚಾಹರ್



**ನವದೆಹಲಿ (ಪಿಟಿಐ):** ಭಾರತದ ಲೆಗ್ ಸ್ಪಿನ್ನರ್ ರಾಹುಲ್ ಚಾಹರ್ ಅವರು ಕೌಂಟಿ ಚಾಂಪಿಯನ್‌ಷಿಪ್‌ನಲ್ಲಿ ಸರ್ರೆ ತಂಡದ ಪರ 8 ಪಂದ್ಯಗಳನ್ನು ಆಡಲಿದ್ದಾರೆ. ಜೂನ್ 7ರಂದು ಓವಲ್‌ನಲ್ಲಿ ಹ್ಯಾಂಪ್‌ಶೈರ್ ವಿರುದ್ಧದ ಪಂದ್ಯದಲ್ಲಿ ಚಾಹಲ್ ಕಣಕ್ಕಿಳಿಯಲಿದ್ದಾರೆ.

ಚಾಹಲ್ ಅವರು ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಸರ್ರೆ ಪರ ಕೌಂಟಿ ಕ್ರಿಕೆಟ್‌ಗೆ ಚೊಚ್ಚಲ ಪಂದ್ಯವಾಡಿದ್ದರು. ಹ್ಯಾಂಪ್‌ಶೈರ್ ವಿರುದ್ಧದ ಆ ಪಂದ್ಯದಲ್ಲಿ 10 ವಿಕೆಟ್‌ಗಳನ್ನು ಕಬಳಿಸುವ ಮೂಲಕ ಉತ್ತಮ ಪ್ರದರ್ಶನ ನೀಡಿದ್ದರು. ಎರಡನೇ ಇನ್ನಿಂಗ್ಸ್‌ನಲ್ಲಿ 51 ರನ್‌ಗಳಿಗೆ 8 ವಿಕೆಟ್ ಪಡೆದಿದ್ದರು.

### ಭಾರತ ಕ್ರಿಕೆಟ್ ತಂಡದ ತವರು ವೇಳಾಪಟ್ಟಿ • ಬೆಂಗಳೂರಿನಲ್ಲಿ 2 ಪಂದ್ಯ

## ಗುವಾಹಟಿಯಲ್ಲಿ ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್

**ನವದೆಹಲಿ (ಪಿಟಿಐ):** ಆಸ್ಟ್ರೇಲಿಯಾ ವಿರುದ್ಧ ಬಾರ್ಡರ್–ಗಾವಸ್ಕರ್ ಟ್ರೋಫಿಗಾಗಿ 2027ರ ಆರಂಭದಲ್ಲಿ ನಡೆಯಲಿರುವ ಟೆಸ್ಟ್ ಸರಣಿಯ ಐದು ಪಂದ್ಯಗಳಲ್ಲಿ ಒಂದು ಪಂದ್ಯವು ಗುವಾಹಟಿಯ ಬರ್ಸಾಪಾರಾ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಗುರುವಾರ ಪ್ರಕಟಿಸಿದೆ.

ಮಂಡಳಿಯು ಪುರುಷರ ತಂಡದ ತವರು ಪಂದ್ಯಗಳ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ಈ ಪಟ್ಟಿಯಲ್ಲಿ ಐದು ಟೆಸ್ಟ್‌ಗಳು, ಒಂಬತ್ತು ಏಕದಿನ ಮತ್ತು ಎಂಟು ಟಿ20 ಪಂದ್ಯಗಳು ಇವೆ. ಒಟ್ಟು 17 ತಾಣಗಳಲ್ಲಿ 22 ಪಂದ್ಯಗಳು ನಡೆಯಲಿವೆ.

ವೆಸ್ಟ್ ಇಂಡೀಸ್ ವಿರುದ್ಧ ಸೆಪ್ಟೆಂಬರ್ 27ರಂದು ತಿರುವನಂತಪುರದಲ್ಲಿ ಮೊದಲ ಏಕದಿನ ಪಂದ್ಯವನ್ನು ಆಡುವ ಮೂಲಕ ಭಾರತದ ತವರು ಋತು ಆರಂಭವಾಗಲಿದೆ. ಎಲ್ಲ ಏಕದಿನ ಪಂದ್ಯಗಳಲ್ಲಿ ದಿಗ್ಗಜರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಆಡುವ ನಿರೀಕ್ಷೆಯಿದೆ.

**ಮುಖ್ಯಾಂಶಗಳು**

- ಬೆಂಗಳೂರಿನಲ್ಲಿ ಅ.17ರಂದು ವಿಂಡೀಸ್ ವಿರುದ್ಧ ಟಿ20 ಪಂದ್ಯ
- ಡಿ.16ಕ್ಕೆ ಶ್ರೀಲಂಕಾ ವಿರುದ್ಧ ಏಕದಿನ ಪಂದ್ಯ

ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಸರಣಿಯು ಪ್ರಧಾನ ಆಕರ್ಷಣೆಯಾಗಿದೆ. ಭಾರತ ಅದಕ್ಕಿಂತ ಮೊದಲು ವೆಸ್ಟ್ ಇಂಡೀಸ್, ಶ್ರೀಲಂಕಾ ಮತ್ತು ಜಿಂಬಾಬ್ವೆ ತಂಡಗಳಿಗೆ ಆತಿಥ್ಯ ವಹಿಸಲಿದೆ.

ಮುಂದಿನ ವರ್ಷದ ಆರಂಭದಲ್ಲಿ ಜಿಂಬಾಬ್ವೆ ತಂಡವು ಮೂರು ಏಕದಿನ ಪಂದ್ಯಗಳ ಸರಣಿಯನ್ನು ಆಡಲು ಭಾರತಕ್ಕೆ ಬರಲಿದೆ. ಜಿಂಬಾಬ್ವೆ ತಂಡವು 2002ರ ನಂತರ ಇದೇ ಮೊದಲ ಬಾರಿ ಭಾರತದಲ್ಲಿ ದ್ವಿಪಕ್ಷೀಯ ಸರಣಿಯನ್ನು ಆಡಲಿದೆ. ಈ ಹಿಂದೆ ಆತಿಥ್ಯ ವಹಿಸಿದ್ದಾಗ ಸೌರವ್ ಗಂಗೂಲಿ ಅವರು ಭಾರತ ತಂಡದ ನಾಯಕರಾಗಿದ್ದರು.

ಟೆಸ್ಟ್ ಸರಣಿಯ ಮೊದಲ ಪಂದ್ಯ ಜನವರಿ 21 ರಂದು ನಾಗ್ಪುರದಲ್ಲಿ ಆರಂಭವಾಗಲಿದೆ. ಎರಡನೇ ಟೆಸ್ಟ್ ಚೆನ್ನೈನಲ್ಲಿ (ಜ.29ರಿಂದ ಫೆ.2ರವರೆಗೆ) ನಡೆಯಲಿದ್ದು, ಎಂಟು ದಿನಗಳ ಅಂತರದ ಬಳಿಕ ಮೂರನೇ ಟೆಸ್ಟ್ ಗುವಾಹಟಿಯಲ್ಲಿ ನಡೆಯಲಿದೆ. ರಾಂಚಿ ಮತ್ತು ಅಹಮದಾಬಾದಿನಲ್ಲಿ ಕ್ರಮವಾಗಿ ನಾಲ್ಕು ಮತ್ತು ಐದನೇ ಟೆಸ್ಟ್ ನಿಗದಿಯಾಗಿವೆ.

ಗುವಾಹಟಿಯ ಕ್ರೀಡಾಂಗಣವು ನವೆಂಬರ್‌ನಲ್ಲಷ್ಟೇ ದಕ್ಷಿಣ ಆಫ್ರಿಕಾ ವಿರುದ್ಧ ಕೊನೆಯ ತವರು ಟೆಸ್ಟ್ ಸರಣಿಯ ಪಂದ್ಯಕ್ಕೆ ಆತಿಥ್ಯ ವಹಿಸಿತ್ತು. ಗುವಾಹಟಿಯನ್ನು ಉಳಿದು ಉಳಿದೆಲ್ಲಾ ಟೆಸ್ಟ್ ತಾಣಗಳು ಸರದಿಯ (ರೊಟೇಷನ್) ಆಧಾರದಲ್ಲಿ ಆತಿಥ್ಯದ ಅವಕಾಶ ಪಡೆದಿವೆ.

## ಬ್ಯಾಡ್ಮಿಂಟನ್ ತಾರೆ ಕ್ಯಾರೊಲಿನಾ ನಿವೃತ್ತಿ



**ನವದೆಹಲಿ (ಪಿಟಿಐ):** ಬ್ಯಾಡ್ಮಿಂಟನ್ ಕ್ರೀಡೆಯ ದಂತಕಥೆ, ಒಲಿಂಪಿಯನ್ ಕ್ಯಾರೊಲಿನಾ ಮರೀನ್ ಅವರು ವೃತ್ತಿಜೀವನಕ್ಕೆ ಗುರುವಾರ ನಿವೃತ್ತಿ ಘೋಷಿಸಿದರು.

2016ರ ರಿಯೊ ಡಿ ಜನೈರೊ ಒಲಿಂಪಿಕ್ ಕೂಟದ ಮಹಿಳೆಯರ ಬ್ಯಾಡ್ಮಿಂಟನ್ ಸಿಂಗಲ್ಸ್ ಫೈನಲ್‌ನಲ್ಲಿ ಭಾರತದ ಪಿ.ವಿ. ಸಿಂಧು ಅವರನ್ನು ಮಣಿಸಿದ್ದ ಮರೀನ್ ಅವರು ಚಿನ್ನದ ಪದಕ ಜಯಿಸಿದ್ದರು. ಮೂರು ಬಾರಿ ವಿಶ್ವ ಚಾಂಪಿಯನ್‌ಷಿಪ್ ಜಯಿಸಿದ ಆಟಗಾರ್ತಿ ಅವರಾಗಿದ್ದಾರೆ. 2018ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿಯೂ ಮರೀನ್ ಅವರು ಸಿಂಧು ವಿರುದ್ಧ ಗೆದ್ದಿದ್ದರು.

ಎಡೆಬಿಡದೇ ಕಾಡುತ್ತಿರುವ ಮಂಡಿನೋವಿನ ಕಾರಣದಿಂದ ಅವರು ನಿವೃತ್ತಿ ನಿರ್ಧಾರ ತೆಗೆದುಕೊಂಡಿದ್ದಾರೆ. ಸ್ಪೇನ್ ದೇಶದವರಾದ ಮರೀನ್ ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಹಿಂದೊಮ್ಮೆ ಅಗ್ರಸ್ಥಾನ ಗಳಿಸಿದ್ದರು.

‘ವೃತ್ತಿಪರ ಬ್ಯಾಡ್ಮಿಂಟನ್‌ನಲ್ಲಿ ನನ್ನ ಪಯಣಕ್ಕೆ ಈಗ ತೆರೆ ಬಿದ್ದಿದೆ. ಅದರಿಂದಾಗಿ ಮುಂಬರುವ ಯೂರೋಪಿಯನ್ ಚಾಂಪಿಯನ್‌ಷಿಪ್‌ನಲ್ಲಿ ನಾನು ಸ್ಪರ್ಧಿಸುವುದಿಲ್ಲ’ ಎಂದು ಮರೀನ್ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಾಕಿದ್ದಾರೆ.

‘ನಾನು ವಿಭಿನ್ನ ರೀತಿಯಲ್ಲಿ ವೃತ್ತಿಜೀವನಕ್ಕೆ ನಿವೃತ್ತಿ ಘೋಷಿಸುವ ಆಸೆ ಇತ್ತು. ಜೀವನದಲ್ಲಿ ಎಲ್ಲವೂ ನಾವಂದುಕೊಂಡಂತೆ ಆಗುವುದಿಲ್ಲ. ಬಂದಿದ್ದನ್ನು ಸ್ವೀಕರಿಸಬೇಕು’ ಎಂದು ಮರೀನ್ ಹೇಳಿದ್ದಾರೆ. 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಅವರು ಕೊನೆಯ ಬಾರಿಗೆ ಆಡಿದ್ದರು.

## 29ರಂದು ವಿಶ್ವ 10ಕೆ ಓಟ: ಗುಲ್ವೀರ್ ಕಣಕ್ಕೆ

**ಬೆಂಗಳೂರು:** ಹಾಲಿ ಏಷ್ಯನ್ ಚಾಂಪಿಯನ್, ರಾಷ್ಟ್ರೀಯ ದಾಖಲೆ ಹೊಂದಿರುವ ದೂರ ಅಂತರದ ಓಟಗಾರ ಗುಲ್ವೀರ್ ಸಿಂಗ್ ಅವರು ಭಾನುವಾರ (ಇದೇ 29ರಂದು) ಇಲ್ಲಿ ನಡೆಯಲಿರುವ ‘ಟಿಸಿಎಸ್ ವಿಶ್ವ 10ಕೆ ಬೆಂಗಳೂರು’ ಓಟದಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಉತ್ತಮ ಲಯದಲ್ಲಿರುವ ಗುಲ್ವೀರ್ ಅವರು ಈ ತಿಂಗಳ ಆರಂಭದಲ್ಲಿ ನಡೆದ ‘ನ್ಯೂಯಾರ್ಕ್ ಸಿಟಿ ಹಾಫ್ ಮ್ಯಾರಥಾನ್’ನಲ್ಲಿ ಮೂರನೇ ಸ್ಥಾನ ಗಳಿಸಿದ್ದರು. ಅಲ್ಲಿ ಅವರು 59 ನಿಮಿಷ 42 ಸೆಕೆಂಡುಗಳಲ್ಲಿ ಗುರಿ ತಲುಪಿದ್ದರು. ಇದು ಭಾರತದ ಯಾವುದೇ ಅಥ್ಲೀಟ್‌ನ ಅತ್ಯುತ್ತಮ ಸಾಧನೆಯಾಗಿದೆ.

ಗುಲ್ವೀರ್ ಸಿಂಗ್

ವಿಶ್ವ ಅಥ್ಲೆಟಿಕ್ಸ್‌ನಿಂದ ‘ಗೋಲ್ಡ್ ಲೇಬಲ್ ರೇಸ್’ ಮಾನ್ಯತೆ ಪಡೆದಿರುವ 18ನೇ ಆವೃತ್ತಿಯ ಓಟದ ಸ್ಪರ್ಧೆಯು ಒಟ್ಟು ₹1.97 ಕೋಟಿ ಬಹುಮಾನ ಮೊತ್ತವನ್ನು ಒಳಗೊಂಡಿದೆ. ಪುರುಷರ ಮತ್ತು ಮಹಿಳೆಯರ ವಿಭಾಗದ ವಿಜೇತರು ತಲಾ ₹24.44 ಲಕ್ಷ ಬಹುಮಾನ ಪಡೆಯುವರು.

10 ಸಾವಿರ ಮೀಟರ್ (27:00.22) ಮತ್ತು 5000 ಮೀಟರ್ (12:59.77) ಎರಡರಲ್ಲೂ ರಾಷ್ಟ್ರೀಯ ದಾಖಲೆ ಹೊಂದಿರುವ ಗುಲ್ವೀರ್ 2025ರ ಋತುವಿನಲ್ಲಿ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಎರಡೂ ಸ್ಪರ್ಧೆಗಳಲ್ಲೂ ಪಾರಮ್ಯ ಮೆರೆದಿದ್ದರು. ಕೋಲ್ಕತ್ತದಲ್ಲಿ ನಡೆದ 2025ರ ಟಾಟಾ ಸ್ಟೀಲ್ ವಿಶ್ವ 25ಕೆ ಓಟವನ್ನು (1:12:06) ಕೂಟ ದಾಖಲೆಯೊಂದಿಗೆ ಮುಗಿಸಿದ್ದರು.

## ರಾಷ್ಟ್ರೀಯ ನೆಟ್‌ಬಾಲ್: ಸೆಮಿಗೆ ರಾಜ್ಯದ ಬಾಲಕರು

**ಬೆಂಗಳೂರು:** ನಾಯಕ ಮನೋಜ್ ಗೌಡ ಟಿ.ಎನ್. ಮತ್ತು ಉಪನಾಯಕ ಸಂತೋಷ್ ಕುಮಾರ್ ಬಿ. ಅವರ ಅಮೋಘ ಆಟದ ನೆರವಿನಿಂದ ಕರ್ನಾಟಕದ ಬಾಲಕರ ತಂಡವು ಉತ್ತರ ಪ್ರದೇಶದ ಮೀರತ್‌ನಲ್ಲಿ ನಡೆಯುತ್ತಿರುವ 38ನೇ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದೆ.

ಗುರುವಾರ ನಡೆದ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಕರ್ನಾಟಕ ತಂಡವು 40-37ರಿಂದ ಮಹಾರಾಷ್ಟ್ರ ತಂಡವನ್ನು ಮಣಿಸಿತು. ಮನೋಜ್ ಗೌಡ ಮತ್ತು ಸಂತೋಷ್ ಕ್ರಮವಾಗಿ 22 ಮತ್ತು 18 ಅಂಕ ಗಳಿಸಿದರು. ಮೈಸೂರು ಜಿಲ್ಲೆಯ ನೂತನ್ ಅತ್ಯುತ್ತಮ ಪಾಸ್ ನೀಡುವ ಮೂಲಕ ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿದರು. ನಾಲ್ಕರ ಘಟ್ಟದ ಪಂದ್ಯದಲ್ಲಿ ಕರ್ನಾಟಕ ತಂಡವು ಹರಿಯಾಣ ವಿರುದ್ಧ ಆಡಲಿದೆ.

ರಾಜ್ಯದ ಬಾಲಕಿಯರ ತಂಡವು ಕ್ವಾರ್ಟರ್ ಫೈನಲ್‌ನಲ್ಲಿ 19-32ರಿಂದ ಬಿಹಾರ ವಿರುದ್ಧ ಸೋತು, ಟೂರ್ನಿಯಿಂದ ಹೊರಬಿತ್ತು.

## ಈಜು ಸ್ಪರ್ಧೆ: ಮೂರನೇ ಚಿನ್ನ ಗೆದ್ದ ಮಣಿಕಂಠ

ಮಣಿಕಂಠ ಎಲ್

**ರಾಯಪುರ (ಪಿಟಿಐ):** ಕರ್ನಾಟಕದ ಮಣಿಕಂಠ ಎಲ್. ಅವರು ಮೊತ್ತಮೊದಲ ಖೇಲೊ ಇಂಡಿಯಾ ಆದಿವಾಸಿ ಕ್ರೀಡೆಗಳ ಈಜು ಸ್ಪರ್ಧೆಯಲ್ಲಿ ಗುರುವಾರ ಮೂರನೇ ಚಿನ್ನದ ಪದಕ ಗೆದ್ದುಕೊಂಡರು. ಕರ್ನಾಟಕಕ್ಕೆ ಸ್ಪರ್ಧೆ ಒಡ್ಡುತ್ತಿರುವ ಒಡಿಶಾದ ಅಂಜಲಿ ಮುಂಡಾ ಈಜುಕೊಳದಲ್ಲಿ ಎರಡನೇ ಚಿನ್ನ ಹೆಕ್ಕಿದರು.

ಆತಿಥೇಯ ಛತ್ತೀಸಗಢದ ಅನುಷ್ಕಾ ಭಗತ್ ಎರಡನೇ ಬೆಳ್ಳಿ ಗೆದ್ದು ತವರು ರಾಜ್ಯಕ್ಕೆ ಸಮಾಧಾನ ಮೂಡಿಸಿದರು. ಕೂಟದ ಮೊದಲ ದಿನವಾದ ಬುಧವಾರ 100 ಮೀ. ಬ್ರೆಸ್ಟ್ ಸ್ಟ್ರೋಕ್ ಮತ್ತು 50 ಮೀ. ಬಟರ್‌ಫ್ಲೈ ಸ್ಪರ್ಧೆಗಳಲ್ಲಿ ಮೊದಲ ಸ್ಥಾನ ಪಡೆದಿದ್ದ ಮಣಿಕಂಠ ಅವರು 200 ಮೀ. ವೈಯಕ್ತಿಕ ಮೆಡ್ಲೆ ರೇಸ್‌ಅನ್ನು 2ನಿ.25.93 ಸೆ.ಗಳಲ್ಲಿ ಪೂರೈಸಿ ಚಿನ್ನದ ಪದಕಗಳ ಹ್ಯಾಟ್ರಿಕ್ ಸಾಧಿಸಿದರು. ಈ ಸ್ಪರ್ಧೆಯನ್ನು ಅವರು ಅಧಿಕಾರಯುತವಾಗಿ ಗೆದ್ದರು. ತ್ರಿಪುರದ ರಿಯಾಜ್ (2:34.04 ಸೆ.) ಮತ್ತು ಕಾನ್ನು ಸೊರೆನ್ (2:36.21 ಸೆ.) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಅಂಜುಲಿ ಮುಂಡಾ ಮಹಿಳೆಯರ 200 ಮೀ. ವೈಯಕ್ತಿಕ ಮೆಡ್ಲೆ (2:53.82 ಸೆ.) ಸ್ಪರ್ಧೆಯಲ್ಲಿ ಚಿನ್ನ ಗೆದ್ದರು. ಮೊದಲ ದಿನ ಅವರು 200 ಮೀ. ಫ್ರೀಸ್ಟೈಲ್‌ನಲ್ಲಿ ಜಯಶಾಲಿಯಾಗಿದ್ದರು. ಕರ್ನಾಟಕ ಈಜಿನಲ್ಲಿ ಆರು ಚಿನ್ನ, ಎರಡು ಬೆಳ್ಳಿ ಗೆದ್ದಂತಾಗಿದೆ. ಒಡಿಶಾ (3 ಚಿನ್ನ, 1 ಬೆಳ್ಳಿ, 4 ಕಂಚು) ಎರಡನೇ ಸ್ಥಾನದಲ್ಲಿದೆ.

## ಜಾಗತಿಕ ಮಟ್ಟದಲ್ಲಿ ವಿಐಟಿ ರ‍್ಯಾಂಕಿಂಗ್ ಸಾಧನೆ

**ಬೆಂಗಳೂರು :** ಕ್ಯೂಎಸ್ ವರ್ಲ್ಡ್ ಯೂನಿವರ್ಸಿಟಿ ರ‍್ಯಾಂಕಿಂಗ್ಸ್ ಬೈ ಸಬ್ಜೆಕ್ಟ್ 2026ರಲ್ಲಿ ವೆಲ್ಲೂರು ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿ-ಐಟಿ) ಮೈಲಿಗಲ್ಲನ್ನು ಸಾಧಿಸಿದೆ. ಈ ವರ್ಷದ ರ‍್ಯಾಂಕಿಂಗ್‌ನಲ್ಲಿ ಸಂಸ್ಥೆಯ ದಾಖಲೆ ಸಂಖ್ಯೆಯ ವಿಷಯಗಳು ವಿಶ್ವದ ಅಗ್ರ 200ರ ಪಟ್ಟಿಯಲ್ಲಿ ಸ್ಥಾನ ಪಡೆಯುವ ಮೂಲಕ ಜಾಗತಿಕ ಮಟ್ಟದಲ್ಲಿ ತನ್ನ ಛಾಪನ್ನು ಮೂಡಿಸಿವೆ. ಒಟ್ಟು 17 ವಿಷಯಗಳಲ್ಲಿ ಜಾಗತಿಕ ರ‍್ಯಾಂಕ್ ಹೊಂದಿರುವ ವಿಐಟಿ, ಎಂಜಿನಿಯರಿಂಗ್, ತಂತ್ರಜ್ಞಾನ, ವಿಜ್ಞಾನ, ಮ್ಯಾನೇಜ್‌ಮೆಂಟ್, ಕೃಷಿ ಮತ್ತು ವಿನ್ಯಾಸ ಕ್ಷೇತ್ರಗಳಲ್ಲಿ ಪ್ರಮುಖ ಸುಧಾರಣೆಗಳನ್ನು ಕಾಣುವ ಮೂಲಕ ಜಾಗತಿಕ ಶಿಕ್ಷಣದ ಮುಂಚೂಣಿ ಸಂಸ್ಥೆಗಳೊಂದಿಗೆ ಪೈಪೋಟಿ ನೀಡುತ್ತಿದೆ.

ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಭಾಗವು ವಿಐಟಿಯ ಪ್ರಬಲ ವಿಭಾಗವಾಗಿ ಮುಂದುವರಿದಿದ್ದು, ಜಾಗತಿಕವಾಗಿ 119ನೇ ಸ್ಥಾನವನ್ನು ಪಡೆದುಕೊಂಡಿದೆ.

ಕಳೆದ ವರ್ಷ 142ನೇ ಸ್ಥಾನದಲ್ಲಿದ್ದ ಸಂಸ್ಥೆಯು ಈ ಬಾರಿ 23 ಸ್ಥಾನಗಳ ಗಮನಾರ್ಹ ಏರಿಕೆ ಕಂಡಿರುವುದು ವಿಶೇಷ. ರಾಷ್ಟ್ರ ಮಟ್ಟದಲ್ಲಿ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ವಿಐಟಿ 6ನೇ ರ‍್ಯಾಂಕಿಂಗ್ ಪಡೆದಿದ್ದರೆ, ಗಣಿತ ವಿಷಯದಲ್ಲಿ 5ನೇ ಸ್ಥಾನವನ್ನು ಗಿಟ್ಟಿಸಿಕೊಂಡಿದೆ. ಕಂಪ್ಯೂಟರ್ ಸೈನ್ಸ್ ಮತ್ತು ಇನ್ಫರ್ಮೇಷನ್ ಸಿಸ್ಟಮ್ಸ್ (6ನೇ ರ‍್ಯಾಂಕ್), ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ (7ನೇ ರ‍್ಯಾಂಕ್) ಹಾಗೂ ಡೇಟಾ ಸೈನ್ಸ್ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಸೇರಿದಂತೆ ಮೆಕ್ಯಾನಿಕಲ್, ಏರೋನಾಟಿಕಲ್ ಮತ್ತು ಮ್ಯಾನುಫ್ಯಾಕ್ಚರಿಂಗ್ ವಿಭಾಗಗಳು ಭಾರತದಲ್ಲಿ 8ನೇ ಸ್ಥಾನವನ್ನು ಅಲಂಕರಿಸಿವೆ.

| ವಿಐಟಿ ಐತಿಹಾಸಿಕ ರ‍್ಯಾಂಕಿಂಗ್ ವಿವರಗಳು | | |
|---|---|---|
| ವಿಷಯ | ವಿಶ್ವ ರ‍್ಯಾಂಕ್ | ರಾಷ್ಟ್ರೀಯ ರ‍್ಯಾಂಕ್ |
| ಕಂಪ್ಯೂಟರ್ ಸೈನ್ಸ್ ಮತ್ತು ಇನ್ಫಾರ್ಮೇಶನ್ ಸಿಸ್ಟಮ್ | 86 | 6 |
| ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 87 | 6 |
| ಡೇಟಾ ಸೈನ್ಸ್ | 101-200 | 7 |
| ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ | 6 | 119 |

ಸಂಸ್ಥೆಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ (86ನೇ ಸ್ಥಾನ) ಮತ್ತು ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ (87ನೇ ಸ್ಥಾನ) ಎಂಬ ಎರಡು ಪ್ರಮುಖ ವಿಷಯಗಳು ವಿಶ್ವದ ಅಗ್ರ 100 ರ‍್ಯಾಂಕಿಂಗ್ ಪಟ್ಟಿಗೆ ಸೇರ್ಪಡೆಗೊಂಡಿವೆ. ಇವುಗಳ ಜತೆಗೆ ಡೇಟಾ ಸೈನ್ಸ್ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (101-200), ಮೆಕ್ಯಾನಿಕಲ್ ಎಂಜಿನಿಯರಿಂಗ್ (148), ಗಣಿತ (104) ಮತ್ತು ಮೆಟೀರಿಯಲ್ ಸೈನ್ಸ್ (137) ವಿಷಯಗಳು ಅಗ್ರ 200ರಲ್ಲಿ ಸ್ಥಾನ ಪಡೆದಿವೆ. ಈ ವರ್ಷ ಹೊಸದಾಗಿ ಕಲೆ ಮತ್ತು ವಿನ್ಯಾಸ (201-300) ಹಾಗೂ ಸಿವಿಲ್ ಎಂಜಿನಿಯರಿಂಗ್ (201-275) ವಿಭಾಗಗಳು ಜಾಗತಿಕ ರ‍್ಯಾಂಕ್ ಪಟ್ಟಿಗೆ ಪ್ರವೇಶ ಪಡೆದಿವೆ.

ವಿಐಟಿಯ ಇತರ ಪ್ರಮುಖ ವಿಭಾಗಗಳಾದ ಕೆಮಿಕಲ್ ಎಂಜಿನಿಯರಿಂಗ್ (201-250), ಕೆಮಿಸ್ಟ್ರಿ (251-300), ಫಿಸಿಕ್ಸ್ (251-300), ಸ್ಟ್ಯಾಟಿಸ್ಟಿಕ್ಸ್ ಮತ್ತು ಆಪರೇಷನಲ್ ರಿಸರ್ಚ್ (251-275), ಬಯೋಲಾಜಿಕಲ್ ಸೈನ್ಸಸ್ (301-350), ಕೃಷಿ (401-475) ಮತ್ತು ಬಿಸಿನೆಸ್ ಮ್ಯಾನೇಜ್‌ಮೆಂಟ್ (451-500) ಕೂಡ ರ‍್ಯಾಂಕ್ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಈ ಸಾಧನೆಯ ಬಗ್ಗೆ ಸಂತಸ ವ್ಯಕ್ತಪಡಿಸಿದ ವಿಐಟಿ ಚಾನ್ಸಲರ್ ಡಾ.ಜಿ.ವಿಶ್ವನಾಥನ್, 'ಈ ರ‍್ಯಾಂಕಿಂಗ್ ಸುಧಾರಣೆಯು ಬೋಧನೆ ಮತ್ತು ಸಂಶೋಧನೆಯಲ್ಲಿ ನಾವು ಹೊಂದಿರುವ ಶ್ರೇಷ್ಠತೆಯನ್ನು ಪ್ರತಿಬಿಂಬಿಸುತ್ತದೆ. ಇದು ನಮ್ಮ ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಹಳೆಯ ವಿದ್ಯಾರ್ಥಿಗಳ ಸಾಮೂಹಿಕ ಪ್ರಯತ್ನದ ಫಲವಾಗಿದೆ' ಎಂದು ತಿಳಿಸಿದ್ದಾರೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

# ಕ್ರೀಡಾಂಗಣ ಪ್ರವೇಶಕ್ಕೆ ಕೋಚ್, ಆಟಗಾರರಿಗೆ ತಡೆ

ನವದೆಹಲಿ (ಪಿಟಿಐ): ಭಾರತ ಫುಟ್ ಬಾಲ್ ತಂಡದ ಮೂವರು ಆಟಗಾರರು ಮತ್ತು ಮುಖ್ಯ ಕೋಚ್ ಅವರಿಗೆ ಪತ್ರಿಕಾಗೋಷ್ಠಿ ನಡೆಸಲು ಗುರುವಾರ ಕೊಚ್ಚಿಯ ಜವಾಹರಲಾಲ್ ನೆಹರೂ ಕ್ರೀಡಾಂಗಣಕ್ಕೆ ಬಂದಾಗ ಪ್ರವೇಶ ನಿರಾಕರಿಸಲಾಯಿತು.

ಕ್ರೀಡಾಂಗಣದ ಮಾಲೀಕರಿಗೆ ಕೇರಳ ಫುಟ್‌ಬಾಲ್ ಸಂಸ್ಥೆಯು (ಕೆಎಫ್‌ಎ) ಕಡ್ಡಾಯ ಭದ್ರತಾ ಠೇವಣಿ ಪಾವತಿಸದಿರುವುದರಿಂದ ಭದ್ರತಾ ಸಿಬ್ಬಂದಿ ಪ್ರವೇಶಕ್ಕೆ ತಡೆಯೊಡ್ಡಿದರು.

ಇದೇ 31ರಂದು ಹಾಂಗ್‌ಕಾಂಗ್ ವಿರುದ್ಧ ಎಎಫ್‌ಸಿ ಏಷ್ಯನ್ ಕಪ್ ಅರ್ಹತಾ ಸುತ್ತಿನ ಪಂದ್ಯಕ್ಕೆ ಪೂರ್ವಭಾವಿಯಾಗಿ ಪತ್ರಿಕಾಗೋಷ್ಠಿ ನಡೆಸಲು ಉದ್ದೇಶಿಸಲಾಗಿತ್ತು. ಮುಖ್ಯ ಕೋಚ್ ಖಾಲಿದ್ ಜಮೀಲ್ ಮತ್ತು ಆಟಗಾರರಾದ ಆಶಿಕ್ ಕುರುಣಿಯಾನ್, ಸಹಲ್ ಅಬ್ದುಲ್ ಸಮದ್ ಮತ್ತು ಬಿಜೊಯ್ ವರ್ಗೀಸ್ ಮಾತನಾಡಬೇಕಿತ್ತು. ಪರಿಣಾಮ ಪತ್ರಿಕಾಗೋಷ್ಠಿ ರದ್ದಾಯಿತು.

ಗ್ರೇಟರ್ ಕೊಚ್ಚಿನ್ ಅಭಿವೃದ್ಧಿ ಪ್ರಾಧಿಕಾರವು ಕ್ರೀಡಾಂಗಣದ ಮಾಲೀಕತ್ವ ಹೊಂದಿದ್ದು, ಕೇರಳ ಫುಟ್‌ಬಾಲ್ ಸಂಸ್ಥೆಯು ಭದ್ರತಾ ಠೇವಣಿ ಮೊತ್ತ ಪಾವತಿಸಿಲ್ಲ ಎಂದು ಹೇಳಿದೆ. ಪಂದ್ಯದ ದಿನ ಮತ್ತು ಮೂರು ದಿನ ಮೊದಲು ಕ್ರೀಡಾಂಗಣವನ್ನು ಕಾದಿರಿಸಲು ಕೇರಳ ಎಫ್‌ಎ ಈ ಮೊತ್ತ ಪಾವತಿಸಬೇಕಾಗಿತ್ತು.

ಮೂರು ದಿನ ಮೊದಲೇ ಠೇವಣಿ ಮೊತ್ತ ಪಾವತಿಸಲಿರುವ ಕಾರಣ ಪಂದ್ಯ ನಿಗದಿಯಂತೆ ನಡೆಸಲಿದೆ ಎಂದು ಮೂಲವು ತಿಳಿಸಿದೆ.

ಭಾರತದ ಆಟಗಾರರ ಸಂಭ್ರಮ

# ಸ್ಯಾಫ್: ಸೆಮಿಗೆ ಭಾರತ

ಮಾಲೆ (ಪಿಟಿಐ): ದ್ವಿತೀಯಾರ್ಧದಲ್ಲಿ ಓಮಂಗ್ ದೋಡಮ್ ಗಳಿಸಿದ ಅವಳಿ ಗೋಲುಗಳ ನೆರವಿನಿಂದ ಭಾರತ ಫುಟ್‌ಬಾಲ್ ತಂಡವು ಸ್ಯಾಫ್ 20 ವರ್ಷದೊಳಗಿನ ಪುರುಷರ ಚಾಂಪಿಯನ್‌ಷಿಪ್‌ನಲ್ಲಿ 3–0ಯಿಂದ ಪಾಕಿಸ್ತಾನ ತಂಡವನ್ನು ಮಣಿಸಿ ಸೆಮಿಫೈನಲ್‌ಗೆ ಅರ್ಹತೆ ಪಡೆಯಿತು.

ಗುರುವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ಭಾರತ ಪರ ವಿಶಾಲ್ ಯಾದವ್ 3ನೇ ನಿಮಿಷದಲ್ಲಿ ಮತ್ತು ಓಮಂಗ್ ಅವರು 64ನೇ ಮತ್ತು 88ನೇ ನಿಮಿಷದಲ್ಲಿ ಗೋಲು ದಾಖಲಿಸಿದರು. ಶನಿವಾರ ಭಾರತ ಮತ್ತು ಬಾಂಗ್ಲಾದೇಶ ತಂಡಗಳು ಮುಖಾಮುಖಿಯಾಗಲಿದ್ದು, ವಿಜೇತ ತಂಡವು ಗುಂಪಿನಲ್ಲಿ ಅಗ್ರಸ್ಥಾನ ಪಡೆಯಲಿದೆ.

ಹರ್ಮುಜ್ ಜಲಸಂಧಿಗೆ ಸಂಬಂಧಿಸಿದ ವಿವಾದ!

# ಮೇ 31ರಂದು ಐಪಿಎಲ್ ಫೈನಲ್

## ಎರಡನೇ ಹಂತದ ವೇಳಾಪಟ್ಟಿ ಬಿಡುಗಡೆ

## ● ಆರ್‌ಸಿಬಿ ತಂಡಕ್ಕೆ ಒಟ್ಟು 14 ಪಂದ್ಯಗಳು

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯವು ಬೆಂಗಳೂರಿನಲ್ಲಿ ಮೇ 31ರಂದು ನಡೆಯಲಿದೆ.

ಐಪಿಎಲ್ ಸಮಿತಿಯು ಗುರುವಾರ ಎರಡನೇ ಹಂತದ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ಅದರ ಪ್ರಕಾರ ಲೀಗ್ ಹಂತದ ಪಂದ್ಯಗಳು ಮೇ 24ರಂದು ಕೊನೆಗೊಳ್ಳಲಿವೆ.

ಹೋದ ವಾರ ಬಿಡುಗಡೆ ಮಾಡಿದ್ದ ವೇಳಾಪಟ್ಟಿಯಲ್ಲಿ ಮೊದಲ ಹಂತದಲ್ಲಿ ಮಾರ್ಚ್ 28ರಿಂದ ಏಪ್ರಿಲ್ 12ರವರೆಗಿನ ಪಂದ್ಯಗಳ ಮಾಹಿತಿ ನೀಡಲಾಗಿತ್ತು. ಮೊದಲ ಪಂದ್ಯವು ಬೆಂಗಳೂರಿನಲ್ಲಿ 'ಹಾಲಿ ಚಾಂಪಿಯನ್' ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸನ್‌ರೈಸರ್ಸ್ ಹೈದರಾಬಾದ್ ನಡುವಣ ನಡೆಯಲಿದೆ.

'ಏಪ್ರಿಲ್ 13 ರಿಂದ ಮೇ 24ರವರೆಗಿನ ಪಂದ್ಯಗಳ ಎರಡನೇ ಹಂತದ ವೇಳಾಪಟ್ಟಿಯನ್ನು ಈಗ ಬಿಡುಗಡೆ ಮಾಡಲಾಗಿದೆ. ಭಾರತದ 12 ತಾಣಗಳಲ್ಲಿ ಪಂದ್ಯಗಳು ನಡೆಯಲಿವೆ. ಬೆಂಗಳೂರು, ಮುಂಬೈ, ಚೆನ್ನೈ, ಕೋಲ್ಕತ್ತ, ದೆಹಲಿ, ಅಹಮದಾಬಾದ್, ಹೈದರಾಬಾದ್, ಲಖನೌ, ಜೈಪುರ, ಧರ್ಮಶಾಲಾ, ರಾಯಪುರ ಮತ್ತು ಮುಲ್ಲನಪುರದಲ್ಲಿ ಪಂದ್ಯಗಳು ನಡೆಯಲಿವೆ' ಎಂದು ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ ಹೇಳಿದ್ದಾರೆ.

ಎರಡನೇ ಹಂತದ ವೇಳಾಪಟ್ಟಿಯಲ್ಲಿ ಎಂಟು ಡಬಲ್ ಹೆಡರ್ ಪಂದ್ಯಗಳಿವೆ. ಪಂಜಾಬ್ ಕಿಂಗ್ಸ್ ತಂಡವು ತನ್ನ ತವರಿನ ಪಂದ್ಯಗಳನ್ನು ಮುಲ್ಲನಪುರ ಮತ್ತು ಧರ್ಮಶಾಲಾದಲ್ಲಿ ಆಡಲಿದೆ. ರಾಜಸ್ಥಾನ ರಾಯಲ್ಸ್ ತಂಡವು ತನ್ನ ತವರಿನ ನಾಲ್ಕು ಪಂದ್ಯಗಳನ್ನು ಜೈಪುರದಲ್ಲಿ ಆಡಲಿದೆ. ಆರ್‌ಸಿಬಿ ತಂಡವು ಬೆಂಗಳೂರಿನಲ್ಲಿ ಮೂರು ಮತ್ತು ರಾಯಪುರದಲ್ಲಿ ಎರಡು ಪಂದ್ಯಗಳನ್ನು ಆಡಲಿದೆ.

ಪ್ಲೇಆಫ್ ಪಂದ್ಯಗಳ ದಿನಾಂಕಗಳನ್ನು ಮುಂದಿನ ಹಂತದಲ್ಲಿ ಪ್ರಕಟಿಸಲಾಗುವುದು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ಅಭ್ಯಾಸ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ ಮತ್ತು ಫಿಲ್ ಸಾಲ್ಟ್ ಪಿಟಿಐ ಚಿತ್ರ

ಐಪಿಎಲ್ 2026ರ ವೇಳಾಪಟ್ಟಿ (ಆರ್‌ಸಿಬಿ ಮಾತ್ರ)

| ದಿನಾಂಕ | ತಂಡಗಳು | ತಾಣ | ಸಮಯ |
|---|---|---|---|
| ಮಾರ್ಚ್ 28 | ಆರ್‌ಸಿಬಿ–ಎಸ್‌ಆರ್‌ಎಚ್ | ಬೆಂಗಳೂರು | ರಾತ್ರಿ 7.30 |
| ಏ.5 | ಆರ್‌ಸಿಬಿ–ಸಿಎಸ್‌ಕೆ | ಬೆಂಗಳೂರು | ರಾತ್ರಿ 7.30 |
| ಏ.10 | ಆರ್‌ಆರ್–ಆರ್‌ಸಿಬಿ | ಗುವಾಹಟಿ | ರಾತ್ರಿ 7.30 |
| ಏ.12 | ಎಂಐ–ಆರ್‌ಸಿಬಿ | ಮುಂಬೈ | ರಾತ್ರಿ 7.30 |
| ಏ.15 | ಆರ್‌ಸಿಬಿ–ಎಲ್‌ಎಸ್‌ಜಿ | ಬೆಂಗಳೂರು | ರಾತ್ರಿ 7.30 |
| ಏ.18 | ಆರ್‌ಸಿಬಿ–ಡಿಸಿ | ಬೆಂಗಳೂರು | ಮಧ್ಯಾಹ್ನ 3.30 |
| ಏ.24 | ಆರ್‌ಸಿಬಿ–ಜಿಟಿ | ಬೆಂಗಳೂರು | ರಾತ್ರಿ 7.30 |
| ಏ.27 | ಡಿಸಿ–ಆರ್‌ಸಿಬಿ | ದೆಹಲಿ | ರಾತ್ರಿ 7.30 |
| ಏ.30 | ಜಿಟಿ–ಆರ್‌ಸಿಬಿ | ಅಹಮದಾಬಾದ್ | ರಾತ್ರಿ 7.30 |
| ಮೇ 7 | ಎಲ್‌ಎಸ್‌ಜಿ–ಆರ್‌ಸಿಬಿ | ಲಖನೌ | ರಾತ್ರಿ 7.30 |
| ಮೇ 10 | ಆರ್‌ಸಿಬಿ–ಎಂಐ | ರಾಯಪುರ | ರಾತ್ರಿ 7.30 |
| ಮೇ 13 | ಆರ್‌ಸಿಬಿ–ಕೆಕೆಆರ್ | ರಾಯಪುರ | ರಾತ್ರಿ 7.30 |
| ಮೇ 17 | ಪಿಬಿಕೆಎಸ್–ಆರ್‌ಸಿಬಿ | ಧರ್ಮಶಾಲಾ | ಮಧ್ಯಾಹ್ನ 3.30 |
| ಮೇ 22 | ಎಸ್‌ಆರ್‌ಎಚ್–ಆರ್‌ಸಿಬಿ | ಹೈದರಾಬಾದ್ | ರಾತ್ರಿ 7.30 |

# 'ಇಂಪ್ಯಾಕ್ಟ್' ನಿಯಮಕ್ಕೆ ಗಿಲ್ ಅಸಮಾಧಾನ

ಅಹಮದಾಬಾದ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿರುವ ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಗುಜರಾತ್ ಟೈಟನ್ಸ್ ತಂಡದ ನಾಯಕ ಶುಭಮನ್ ಗಿಲ್ ಅವರು ಟೀಕಿಸಿದ್ದಾರೆ. 'ಈ ನಿಯಮದಿಂದ ಆಟದಲ್ಲಿ ಕೌಶಲ ಕುಂಠಿತವಾಗುತ್ತಿದೆ' ಎಂದಿದ್ದಾರೆ.

ಈ ನಿಯಮದ ಕುರಿತು ಈಗಾಗಲೇ ಐಪಿಎಲ್ ಟೂರ್ನಿಯ ಕೆಲವು ತಂಡಗಳ ನಾಯಕರು ಮತ್ತು ಆಟಗಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈಚೆಗೆ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ಅಕ್ಷರ್ ಪಟೇಲ್, ಮುಂಬೈ ಇಂಡಿಯನ್ಸ್ ನಾಯಕ ಹಾರ್ದಿಕ್ ಪಾಂಡ್ಯ, ಅನುಭವಿ ಆಟಗಾರ ರೋಹಿತ್ ಶರ್ಮಾ ಅವರು ಟೀಕಿಸಿದ್ದರು. ಅವರ ಸಾಲಿಗೆ ಈಗ ಗಿಲ್ ಕೂಡ ಸೇರಿದ್ದಾರೆ.

# ಐಪಿಎಲ್: ಭದ್ರತೆಗೆ 2 ಸಾವಿರ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇದೇ 28ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸನ್‌ರೈಸರ್ಸ್ ಹೈದರಾಬಾದ್ ತಂಡಗಳ ನಡುವೆ ಐಪಿಎಲ್ ಪಂದ್ಯ ನಡೆಯಲಿದ್ದು, ಭದ್ರತೆಗೆ ಎರಡು ಸಾವಿರ ಪೊಲೀಸರನ್ನು ನಿಯೋಜಿಸಲಾಗಿದೆ.

ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಕ್ರೀಡಾಂಗಣಕ್ಕೆ ಗುರುವಾರ ಭೇಟಿ ನೀಡಿ ಭದ್ರತಾ ವ್ಯವಸ್ಥೆ ಪರಿಶೀಲಿಸಿದರು.

ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, ಪ್ರೇಕ್ಷಕರ ನಿರ್ವಹಣೆ ಹಾಗೂ ಕಾನೂನು- ಸುವ್ಯವಸ್ಥೆ ಪಾಲನೆಗೆ 6 ಡಿಸಿಪಿಗಳು, 15ಕ್ಕೂ ಹೆಚ್ಚು ಎಸಿಪಿಗಳು, 50 ಪಿ.ಐ, 80 ಪಿಎಸ್‌ಐ ಹಾಗೂ ಹೆಡ್‌ಕಾನ್‌ಸ್ಟೆಬಲ್, ಕಾನ್‌ಸ್ಟೆಬಲ್, ಗೃಹ ರಕ್ಷಕ ದಳದ ಸಿಬ್ಬಂದಿ ಸೇರಿದಂತೆ 2 ಸಾವಿರ ಮಂದಿಯನ್ನು ನಿಯೋಜಿಸಲಾಗಿದೆ ಎಂದು ಹೇಳಿದರು.

'ಪಂದ್ಯ ಆರಂಭಕ್ಕೂ ನಾಲ್ಕು ತಾಸು ಮೊದಲು ಟಿಕೆಟ್ ಇದ್ದವರಿಗೆ ಕ್ರೀಡಾಂಗಣಕ್ಕೆ ಪ್ರವೇಶ ನೀಡಲಾಗುವುದು. ಈ ಹಿಂದೆ ಕ್ರೀಡಾಂಗಣದ 20 ಗೇಟ್ ತೆರೆದು ಪ್ರೇಕ್ಷಕರಿಗೆ ಪ್ರವೇಶ ಕಲ್ಪಿಸಲಾಗುತ್ತಿತ್ತು. ಆದರೆ, ಈ ಬಾರಿ 45 ಗೇಟ್‌ಗಳ ಮೂಲಕ ಪ್ರವೇಶ ಕಲ್ಪಿಸಲಾಗುತ್ತಿದೆ. ಮೈದಾನದ ಒಳಗೆ ಮತ್ತು ಹೊರಗೆ ಸೇರಿ 500 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ' ಎಂದು ಹೇಳಿದರು.

'ಕ್ರೀಡಾಂಗಣದ ಬಳಿ ಒಟ್ಟು 9 ಆಂಬುಲೆನ್ಸ್‌ಗಳನ್ನು ನಿಲುಗಡೆ ಮಾಡಲಾಗುತ್ತಿದೆ. ಪಂದ್ಯ ವೀಕ್ಷಿಸಲು ಬರುವ ಪ್ರೇಕ್ಷಕರಿಗೆ 'ನಮ್ಮ ಮೆಟ್ರೊ'ದಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಪ್ರೇಕ್ಷಕರು ಮೆಟ್ರೊ ಸೇವೆ ಬಳಸಿಕೊಳ್ಳಬೇಕು' ಎಂದು ಮನವಿ ಮಾಡಿದರು.

ಟಿಕೆಟ್ ಇಲ್ಲದವರು ಮೈದಾನದ ಸುತ್ತಲು ಜಮಾವಣೆ ಆಗದಂತೆ ನೋಡಿಕೊಳ್ಳಲು ಏಳು ತಂಡಗಳನ್ನು ರಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿನ ಭದ್ರತಾ ವ್ಯವಸ್ಥೆಯನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್, ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ ಗುರುವಾರ ಪರಿಶೀಲಿಸಿದರು ಚಿತ್ರ: ವಿ.ಪುಷ್ಕರ್

## ವಿಶೇಷ ಮಾಹಿತಿ

ಪ್ರವೇಶ ದ್ವಾರಗಳು ಬದಲಾಗಿದೆ,
ಹೆಚ್ಚಿನ ಮಾಹಿತಿಗಾಗಿ ನಕ್ಷೆಯನ್ನು ವೀಕ್ಷಿಸಿ

STAND INDEX

| | | |
|---|---|---|
| A STAND<br>ENTRY GATE: E1<br>INSIDE GATE: G6 | B STAND<br>ENTRY GATE: E23<br>INSIDE GATE: G7 | C STAND<br>ENTRY GATE: E19<br>INSIDE GATE: G9 |
| D CORPORATE<br>ENTRY GATE: E2 OR E3<br>INSIDE GATE: G5 | D LOFT<br>ENTRY GATE: E2 OR E3<br>INSIDE GATE: G5 | DIAMOND BOX<br>ENTRY GATE: E8<br>INSIDE GATE: G1 |
| E EXECUTIVE LOUNGE<br>ENTRY GATE: E2 OR E3<br>INSIDE GATE: G5 | E STAND<br>ENTRY GATE: E17<br>INSIDE GATE: G11 | F - BLOCK 1<br>ENTRY GATE: E16<br>INSIDE GATE: G13 |
| F - BLOCK 2<br>ENTRY GATE: E16<br>INSIDE GATE: G13 | GRAND TERRACE<br>ENTRY GATE: E18<br>INSIDE GATE: G10 | H UPPER<br>ENTRY GATE: E17<br>INSIDE GATE: G12 |
| M1<br>ENTRY GATE: E11 OR E12<br>INSIDE GATE: G15 | M2<br>ENTRY GATE: E11 OR E12<br>INSIDE GATE: G15 | M2 ANNEXE<br>ENTRY GATE: E13<br>INSIDE GATE: G14 |
| M3<br>ENTRY GATE: E13<br>INSIDE GATE: G14 | M4<br>ENTRY GATE: E13<br>INSIDE GATE: G14 | MEDIA<br>ENTRY GATE: E11<br>INSIDE GATE: G15 |
| P1<br>ENTRY GATE: E8<br>INSIDE GATE: G3A | P1 ANNEXE<br>ENTRY GATE: E5<br>INSIDE GATE: G3 | P2<br>ENTRY GATE: E8<br>INSIDE GATE: G2 |
| P3 - BLOCK 1<br>ENTRY GATE: E2 OR E3<br>INSIDE GATE: G4 | P3 - BLOCK 2<br>ENTRY GATE: E2 OR E3<br>INSIDE GATE: G4 | P CORPORATE<br>ENTRY GATE: E8<br>INSIDE GATE: G2 |
| P LOFT<br>ENTRY GATE: E8<br>INSIDE GATE: G3A | P TERRACE<br>ENTRY GATE: E8<br>INSIDE GATE: G2 | PLATINUM LOUNGE<br>ENTRY GATE: E22<br>INSIDE GATE: G8 |

LEGEND
E ENTRY / EXIT GATE
G INSIDE GATE
MEDICAL TRIAGE
AMBULANCE
POLICE WATCH TOWER




RCB ROYAL CHALLENGERS BENGALURU

BENGALURU CITY POLICE
ಬೆಂಗಳೂರು ನಗರ ಪೊಲೀಸ್
ರಕ್ಷಣೆ ಸಂವೇದನೆ ಶೌರ್ಯ

ನಿಮ್ಮೊಂದಿಗೆ 24x7
https://bcp.karnataka.gov.in
ತುರ್ತು ಸಂದರ್ಭದಲ್ಲಿ
ಕರೆ ಮಾಡಿ – 112
9480801000
/blrcitypolice

ನಿಮ್ಮ ಸುರಕ್ಷತೆಗೆ ನಮ್ಮೊಡನೆ ಸಹಕರಿಸಿ ಐಪಿಎಲ್ – 2026

### ಕ್ರೀಡಾಂಗಣದಲ್ಲಿ ಕಟ್ಟುನಿಟ್ಟಾಗಿ ನಿಷೇಧಿಸಲಾಗಿರುವ ವಸ್ತುಗಳು

ನಿಮಗೆ ಯಾವುದೇ ಅನುಮಾನಾಸ್ಪದ ವಸ್ತುಗಳು ಕಂಡರೆ ಕೂಡಲೇ ಹತ್ತಿರದ ಭದ್ರತಾ ಸಿಬ್ಬಂದಿಗೆ ಮಾಹಿತಿ ತಿಳಿಸಿ.

### ಸಾರ್ವಜನಿಕ ಸುರಕ್ಷತಾ ಮಾಹಿತಿ

- ನೂಕು ನುಗ್ಗಲು ತಪ್ಪಿಸಲು 3 ಗಂಟೆಗಳ ಮುಂಚಿತವಾಗಿ ಕ್ರೀಡಾಂಗಣಕ್ಕೆ ಬನ್ನಿ.
- ನಿಮ್ಮ ಟಿಕೆಟ್‌ನ ಗೇಟ್ ನಂ. / ಪ್ರವೇಶ ದ್ವಾರ ಖಚಿತಪಡಿಸಿಕೊಳ್ಳಿ.
- ಭದ್ರತಾ ಸಿಬ್ಬಂದಿ/ಪೊಲೀಸರೊಂದಿಗೆ ತಪಾಸಣೆಗೆ ಸಹಕರಿಸಿ.
- ಅಧಿಕೃತ ಟಿಕೆಟ್/ಪಾಸ್ ಹೊಂದಿದವರಿಗೆ ಮಾತ್ರ ಪ್ರವೇಶ.
- ಗೇಟ್‌ಗಳ ಹಾಗೂ ಕ್ರೀಡಾಂಗಣದ ಬಳಿ ಗುಂಪುಗಾರಿಕೆ ನಿಷೇಧಿಸಿದೆ.
- ಸುಗಮ ಪ್ರವೇಶಕ್ಕೆ ಸಾಲಾಗಿ ಬನ್ನಿ.
- ನಿಮ್ಮ ಸುತ್ತಮುತ್ತಲಿನ ಸನ್ನಿವೇಶದ ಬಗ್ಗೆ ಎಚ್ಚರದಿಂದಿರಿ.

ಕ್ರೀಡಾಂಗಣದ ಸುತ್ತಮುತ್ತ ವಾಹನ ನಿಲುಗಡೆ ನಿಷೇಧಿಸಿದೆ

ದಯವಿಟ್ಟು ಸಾರ್ವಜನಿಕ ಸಾರಿಗೆ ಹಾಗೂ ಮೆಟ್ರೋ ಬಳಸಿ

ಸಾರ್ವಜನಿಕರು ಕಬ್ಬನ್ ರಸ್ತೆ ಮತ್ತು ಎಂಜಿ ರಸ್ತೆ ಮೆಟ್ರೋ ನಿಲ್ದಾಣ ಎರಡನ್ನೂ ಬಳಸಬಹುದು

ನಕಲಿ ಟಿಕೆಟ್‌ಗಳ ಬಗ್ಗೆ ಎಚ್ಚರವಿರಲಿ.
ಕಾಳಸಂತೆಯಲ್ಲಿ ಟಿಕೆಟ್‌ಗಳನ್ನು ಖರೀದಿಸಬೇಡಿ.